# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


Scan to watch the video
Manipal Hospital Millers Road


ಆಳ-ಅಗಲ: 2023: ಭಾರತದ ಅಧ್ಯಕ್ಷತೆಯಲ್ಲಿ ಜಿ20
ಮೇಕೆದಾಟು ಯೋಜನೆ ಶೀಘ್ರ ಅನುಮೋದನೆ 4
ಗುಜರಾತ್: ಮೊದಲ ಹಂತದ ಮತದಾನ ಇಂದು 11
ಇಂದು ಸ್ಪರ್ಧಾವಾಣಿ 7


| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 63,099 ▲ | 18,758 ▲ | ₹54,350 (ಬೆಂಗಳೂರು) | ₹ 63,500 (ಬೆಂಗಳೂರು) | 81.31 ▲ |



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ವಿಶ್ವ ಏಡ್ಸ್ ದಿನ–2022
"ಸಮಾನಗೊಳಿಸು!"
ಏಡ್ಸ್ ಅಂತ್ಯವನ್ನು ತಡೆಗಟ್ಟಿ ಅಸಮಾನತೆಗಳನ್ನು ಕೊನೆಗಾಣಿಸಲು ಪ್ರತಿಯೊಬ್ಬರ ಆರೋಗ್ಯವನ್ನು ಕಾಪಾಡಲು ಹಾಗೂ ಪ್ರತಿಯೊಬ್ಬರನ್ನು ಖುಷಿಯಾಗಿಡಲು ವಿಶ್ವವು ಒಂದಾಗಬೇಕಾಗಿದೆ.

WORLD AIDS DAY-2022
"Equalize!"
The world to unite to end the inequalities holding back the end of AIDS.
To keep everyone safe, to protect everyone's health, we need to equalize

ದಿನಾಂಕ : 01.12.2022, ಸ್ಥಳ : ಹೊಸ ಜಿಲ್ಲಾ ಆಸ್ಪತ್ರೆ ಆವರಣ, ಚಿಕ್ಕಬಳ್ಳಾಪುರ ನಗರ
ನಿಮ್ಮ ಹೆಚ್‌ಐವಿ ಸ್ಥಿತಿ ತಿಳಿಯಲು ಕೂಡಲೇ ಹತ್ತಿರದ ಐಸಿಟಿಸಿ ಕೇಂದ್ರದಲ್ಲಿ ಉಚಿತ ಹೆಚ್‌ಐವಿ ಪರೀಕ್ಷೆ ಮಾಡಿಸಿಕೊಳ್ಳಿ.
Know your HIV Status, get HIV Test today at your nearest ICTC.
ಹೆಚ್ಚಿನ ಮಾಹಿತಿಗಾಗಿ ಉಚಿತ ರಾಷ್ಟ್ರೀಯ ಸಹಾಯವಾಣಿ 1097 ಕ್ಕೆ ಕರೆ ಮಾಡಿ

ಸನ್ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಕೆ. ಸುಧಾಕರ್‌ರವರು ವಿಶ್ವ ಏಡ್ಸ್ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು.

GET IT ON Google Play
Download the NACO AIDS App
www.ksaps.karnataka.gov.in
KarSAPS
KSAPS
NACO National AIDS Control Organisation
ಪ್ರಕಟಣೆ : ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು.


ಅಧಿಕಾರಿಗಳ ನಿರ್ಲಕ್ಷ್ಯ ಆರೋಪ • ನೋಡಲ್ ಏಜೆನ್ಸಿಗಳ ಸಭೆ ಇಂದು

# ದಲಿತ ಕಲ್ಯಾಣ: ಖರ್ಚಾಗದ ಹಣ

• ರಾಜೇಶ್ ರೈ ಚಟ್ಲ

**ಬೆಂಗಳೂರು:** ರಾಜ್ಯದಲ್ಲಿ ಪರಿಶಿಷ್ಟ ಸಮುದಾಯದ ಅಭಿವೃದ್ಧಿಗಾಗಿ 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ'ಯಡಿ ಈ ವರ್ಷ ಹಂಚಿಕೆಯಾದ ಒಟ್ಟು ಅನುದಾನದಲ್ಲಿ ಈವರೆಗೆ (ಅಕ್ಟೋಬರ್ ಅಂತ್ಯ) ವೆಚ್ಚ-ವಾಗಿರುವುದು ಶೇಕಡ 14.75ರಷ್ಟು ಮಾತ್ರ.

ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಎಂದು ಕರೆ ಯಲಾಗುವ ಈ ವಿಶೇಷ ಕಾರ್ಯಕ್ರಮ ಗಳಿಗೆ ವಿವಿಧ ಇಲಾಖೆ ಗಳಿಗೆ ಪ್ರಸಕ್ತ ಸಾಲಿನಲ್ಲಿ ಸರ್ಕಾರ ಒಟ್ಟು ₹ 29,165.81 ಕೋಟಿ ಹಂಚಿಕೆ ಮಾಡಿದೆ. ಈ ಮೊತ್ತದಲ್ಲಿ ಅಕ್ಟೋಬರ್ ಅಂತ್ಯದವರೆಗೆ ₹ 13,702.45 ಕೋಟಿ ಬಿಡುಗಡೆಯಾಗಿದೆ. ಬಿಡುಗಡೆ ಆಗಿರುವ ಮೊತ್ತದಲ್ಲಿ ಕೇವಲ ₹ 4,303.82 (ಶೇ 34) ಕೋಟಿ ವೆಚ್ಚವಾಗಿದೆ. ಈವರೆಗೆ ವೆಚ್ಚವಾದ ಮೊತ್ತವನ್ನು ಹಂಚಿಕೆಯಾದ ಒಟ್ಟು ಮೊತ್ತಕ್ಕೆ ಪರಿಗಣಿಸಿದರೆ ಅದರ ಅರ್ಧದಷ್ಟೂ ಇಲ್ಲ!

ಒಟ್ಟು 35 ಇಲಾಖೆಗಳಿಗೆ ಅನುದಾನ ಹಂಚಿಕೆಯಾಗಿದ್ದು, ಈ ಪೈಕಿ ಅರ್ಧಕ್ಕೂ ಹೆಚ್ಚು ಇಲಾಖೆಗಳಲ್ಲಿ ಕಡಿಮೆ ಹಣ ವೆಚ್ಚ ಆಗಿದೆ. ಅದರಲ್ಲೂ ಉನ್ನತ ಶಿಕ್ಷಣ (ಶೇ 2.20) ಮತ್ತು ಕೌಶಲಾಭಿವೃದ್ಧಿ ಇಲಾಖೆಯಲ್ಲಿ (ಶೇ 4.65) ಅತೀ ಕಡಿಮೆ ಹಣ ವಿನಿಯೋಗ ಆಗಿದೆ. ಮೀನುಗಾರಿಕೆ (ಶೇ 78.73) ಮತ್ತು ಕಾರ್ಮಿಕ ಇಲಾಖೆ (ಶೇ 75) ಅತೀ ಹೆಚ್ಚಿನ ಪ್ರಗತಿ ತೋರಿಸಿವೆ. ವೈದ್ಯಕೀಯ ಶಿಕ್ಷಣ, ಕಾರ್ಮಿಕ, ಪ್ರವಾಸೋದ್ಯಮ, ಇಂಧನ, ಲೋಕೋಪಯೋಗಿ ಮತ್ತು ಐಟಿಬಿಟಿ ಇಲಾಖೆಗಳು ಶೇ 50ಕ್ಕಿಂತ ಹೆಚ್ಚಿನ ವೆಚ್ಚ ಮಾಡಿವೆ.

**ಇಂದು ಸಭೆ:** ಬಿಡುಗಡೆ ಮಾಡಿದ ಅನುದಾನ ವನ್ನು ವೆಚ್ಚ ಮಾಡಲು ಇಲಾಖೆಗಳು ವಿಫಲವಾಗಿರುವ ಬಗ್ಗೆ ನ. 17ರಂದೇ ನೋಡಲ್ ಏಜೆನ್ಸಿಗಳ ಪ್ರಗತಿ ಪರಿ ಶೀಲನೆ ಸಭೆಯನ್ನು ನಿಗದಿಪಡಿಸ-ಲಾಗಿತ್ತು. ಆದರೆ, ಕಾರಣಾಂತರಗಳಿಂದ ಸಭೆ ಮುಂದೂಡಿಕೆ ಆಗಿತ್ತು. ಅನುದಾನ ಬಳಕೆ ಆಗದಿರುವ ಬಗ್ಗೆ ಪರಿಶೀಲನೆ ನಡೆಸಲು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅಧ್ಯಕ್ಷತೆಯಲ್ಲಿ ಗುರುವಾರ (ಡಿ.1) ಸಭೆ ನಡೆಯಲಿದೆ.

ಪ್ರಜಾವಾಣಿ ವಿಶೇಷ

'ಯೋಜನೆಯಡಿಯಲ್ಲಿ ವೈಯಕ್ತಿಕ, ಸಮುದಾಯ, ಜನವಸತಿಗೆ ಅನುದಾನ ವೆಚ್ಚ ಮಾಡಬೇಕು. ಪರಿಶಿಷ್ಟರಿಗೆ ಮೀಸಲಿಟ್ಟ ಹಣದಲ್ಲಿ ವಿಭಜಿಸಲಾಗದ ಪ್ರ-ಕರಣಗಳಲ್ಲಿ ಆಗುವ ವೆಚ್ಚದ ಒಂದು ಭಾಗವು (ಡೀಮ್ಡ್ ಮೊತ್ತ) ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ತಲುಪಿದೆ ಎಂದು ಭಾವಿಸತಕ್ಕ-ದ್ದು ಎಂದು 'ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯ್ದೆ'ಯ ಸೆಕ್ಷನ್ 7 (ಡಿ) ಅಡಿಯಲ್ಲಿದೆ. ಈವರೆಗೆ ವೆಚ್ಚವಾದ ಒಟ್ಟು ಅನುದಾನದಲ್ಲಿ ಹೆಚ್ಚಿನ ಮೊತ್ತ ಈ ಸೆಕ್ಷನ್‌ನ ಅಡಿಯ ಯೋಜನೆಗಳಿಗೆ ಬಳಕೆಯಾಗಿದೆ. ಅಲ್ಲದೆ, ಪ್ರಸಕ್ತ ಸಾಲಿನಲ್ಲಿ ಮೀಸಲಿಟ್ಟ ಸಂಪೂರ್ಣ ಅನುದಾನ ಬಳಕೆಯಾಗುವ ಬಗ್ಗೆಯೇ ಅನುಮಾನವಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿ-ಯೊಬ್ಬರು ಹೇಳಿದರು.

'ಕ್ರಿಯಾ ಯೋಜನೆ ಸಿದ್ಧಪಡಿಸು ವುದು ವಿಳಂಬದ ಜೊತೆಗೆ, ಶಾಸಕರ ಅಧ್ಯಕ್ಷತೆಯ ಸಮಿತಿಯಿಂದ ಫಲಾನುಭವಿಗಳ ಆಯ್ಕೆಯಲ್ಲೂ ತಡವಾಗುತ್ತಿದೆ. ಗಂಗಾ ಕಲ್ಯಾಣ, ವಸತಿ ಮತ್ತಿತರ ಯೋಜನೆಗಳಲ್ಲಿ ಕೆಲವು ತಾಲ್ಲೂಕುಗಳಲ್ಲಿ ಕಳೆದ ಆರ್ಥಿಕ ವರ್ಷದಲ್ಲಿ ಆಗಬೇಕಿದ್ದ ಫಲಾನು ಭವಿಗಳ ಆಯ್ಕೆಯೇ ಇನ್ನೂ ಆಗಿಲ್ಲ. ಟೆಂಡರ್ ಆಹ್ವಾನಿಸುವ ಪ್ರಕ್ರಿಯೆ-ಯಲ್ಲೂ ಭಾರಿ ವಿಳಂಬವಾಗುತ್ತಿದೆ. ಟೆಂಡರ್ ನೀಡಿ ಕಾರ್ಯಾದೇಶ ಕೊಟ್ಟ ನಂತರವೂ ಕೆಲವು ಕಾಮಗಾರಿಗಳು ಆರಂಭ ಆಗುವುದೇ ಇಲ್ಲ. ಅದರ ಜೊತೆಗೆ ಅಧಿಕಾರಿಗಳ ನಿರ್ಲಕ್ಷ್ಯ ಕೂಡಾ ಅನುದಾನ ವೆಚ್ಚ ಆಗದೇ ಇರಲು ಮುಖ್ಯ ಕಾರಣ' ಎಂದೂ ಮಾಹಿತಿ ನೀಡಿದರು.

'₹ 10 ಕೋಟಿವರೆಗಿನ ಕ್ರಿಯಾ ಯೋಜನೆಗಳಿಗೆ ಆಯಾ ಇಲಾಖೆಗಳ ಕಾರ್ಯದರ್ಶಿಗಳು ಮಂಜೂರಾತಿ ನೀಡಬಹುದು. ಅದಕ್ಕಿಂತ ಹೆಚ್ಚಿನ ಅನುದಾನ ಬಿಡುಗಡೆಗೆ ಆರ್ಥಿಕ ಇಲಾಖೆಯ ಸಹಮತಿ ಪಡೆಯಬೇಕು. ಅಲ್ಲದೆ, ಯೋಜನೆಗೆ ಮೊದಲ ಕಂತಿನಲ್ಲಿ ಬಿಡುಗಡೆಯಾದ ಹಣದಲ್ಲಿ ಶೇ 75ರಷ್ಟು ವೆಚ್ಚ ಮಾಡಿದರಷ್ಟೆ ಎರಡನೇ ಕಂತಿನ ಹಣವನ್ನು ಆರ್ಥಿಕ ಇಲಾಖೆ ಬಿಡುಗಡೆ ಮಾಡುತ್ತದೆ. ಹಲವು ಯೋಜನೆಗಳಲ್ಲಿ ಮೊದಲ ಕಂತಿನ ಹಣವೇ ಶೇ 75ರಷ್ಟು ವೆಚ್ಚ ಆಗಿಲ್ಲ. ಹೀಗಾಗಿ ಪ್ರಗತಿಯೂ ನಿರಾಶಾದಾಯಕವಾಗಿದೆ' ಎಂದೂ ಅವರು ಹೇಳಿದರು.

### 'ಯಾರಿಗೂ ಶಿಕ್ಷೆ ಆಗಿಲ್ಲ'

'ಪರಿಶಿಷ್ಟರ ಅಭಿವೃದ್ಧಿಗಾಗಿ 'ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಕಾಯ್ದೆ 2014ರ ಏಪ್ರಿಲ್ 1ರಿಂದ ಜಾರಿಯಲ್ಲಿದೆ. ಪರಿಶಿಷ್ಟ ಜನಸಂಖ್ಯೆಗೆ ಅನುಗುಣವಾಗಿ ಪ್ರತಿ ವರ್ಷ ಅನುದಾನ ಮೀಸಲಿಡಲಾಗುತ್ತಿದೆ. ಅನುದಾನ ವೆಚ್ಚ ಮಾಡದೇ ಇದ್ದರೆ, ಅಂತಹ ಇಲಾಖೆಯ ಅಧಿಕಾರಿಗಳಿಗೆ ಆರು ತಿಂಗಳಿಗೆ ಕಡಿಮೆ ಇಲ್ಲದಂತೆ ಜೈಲು ಶಿಕ್ಷೆ ವಿಧಿಸುವ ಅವಕಾಶವೂ ಕಾಯ್ದೆಯಲ್ಲಿದೆ. ಪ್ರತಿವರ್ಷ ಅನುದಾನ ವೆಚ್ಚವಾಗದ ಪ್ರಕರಣಗಳು ಸುದ್ದಿಯಾದರೂ ಒಬ್ಬನೇ ಒಬ್ಬ ಅಧಿಕಾರಿ ಮೇಲೆ ಕ್ರಮ ತೆಗೆದುಕೊಂಡ ನಿದರ್ಶನ ಇಲ್ಲ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಪರಿಶಿಷ್ಟರ ನಿಧಿ– 2022–23' (2022ರ ಅಕ್ಟೋಬರ್ ಅಂತ್ಯಕ್ಕೆ) ಪ್ರಗತಿ ವಿವರ (₹ ಕೋಟಿಗಳಲ್ಲಿ)

| ವಿಭಾಗ | ಪರಿಷ್ಕೃತ ಹಂಚಿಕೆ | ಬಿಡುಗಡೆ | ವೆಚ್ಚ | ಶೇ |
|---|---|---|---|---|
| ಎಸ್‌ಸಿಎಸ್‌ಪಿ | 20,843.03 | 10,196.75 | 3,102.83 | 36 |
| ಟಿಎಸ್‌ಪಿ | 8322.78 | 3505.71 | 1200.99 | 28 |
| ಒಟ್ಟು | 29,165.81 | 13,702.45 | 4303,82 | 34 |

'ಆಶಾ' ಪ್ರತಿಭಟನೆ

ಬಾಕಿ ಇರುವ ಗೌರವಧನ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ಬುಧವಾರ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು -ಪ್ರಜಾವಾಣಿ ಚಿತ್ರ

ಸುದ್ದಿ 6

ಅರ್ಜಿ ವಿಚಾರಣೆಗೆ ಸಿಜೆಐ ನೇತೃತ್ವದ ಪೀಠ ಸಮ್ಮತಿ

# 11 ಅತ್ಯಾಚಾರಿಗಳ ಬಿಡುಗಡೆ ಪ್ರಶ್ನಿಸಿ 'ಸುಪ್ರೀಂ'ಗೆ ಬಿಲ್ಕಿಸ್ ಮೊರೆ

**ನವದೆಹಲಿ (ಪಿಟಿಐ):** 2002ರ ಗುಜರಾತ್ ಗಲಭೆ ವೇಳೆ ಸಾಮೂಹಿಕ ಅತ್ಯಾಚಾರಕ್ಕೊಳಗಾದ ಸಂತ್ರಸ್ತೆ ಬಿಲ್ಕಿಸ್ ಬಾನು, ಈ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ 11 ಅಪರಾಧಿ ಗಳನ್ನು ಶಿಕ್ಷೆ ಪೂರ್ಣಗೊಳಿಸುವ ಮುನ್ನವೇ ಬಿಡುಗಡೆ ಮಾಡಿದ ಗುಜರಾತ್ ಸರ್ಕಾರದ ಕ್ರಮ ಪ್ರಶ್ನಿಸಿ ಬುಧವಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಬಿಲ್ಕಿಸ್ ಪರವಾಗಿ ವಕೀಲೆ ಶೋಭಾ ಗುಪ್ತಾ ಅವರು, ಈ ಅರ್ಜಿಯನ್ನು ತೆರೆದ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಬೇಕೆಂದು ಕೋರ್ಟ್‌ಗೆ ಮನವಿ ಮಾಡಿದರು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠವು, 'ಇದು ನ್ಯಾಯಾಲಯ ಮಾತ್ರವೇ ನಿರ್ಧ-ರಿಸಬಹುದಾದ ವಿಷಯ. ಈ ಅರ್ಜಿ ಯನ್ನು ವಿಚಾರಣೆಗಾಗಿ ಪಟ್ಟಿ ಮಾಡಿಸಲು ಪರಿಗಣಿಸಲಾಗಿದೆ' ಎಂದು ಹೇಳಿದೆ.

ಅಪರಾಧಿಗಳಿಗೆ ನೀಡಿದ ಕ್ಷಮಾ ದಾನ ಮತ್ತು ಬಿಡುಗಡೆ ಪ್ರಶ್ನಿಸಿರುವ ಇತರರ ಇದೇ ರೀತಿಯ ಅರ್ಜಿಗಳು ನ್ಯಾಯಮೂರ್ತಿ ಅಜಯ್ ರಸ್ತೋಗಿ ಅವರಿರುವ ಪೀಠದ ಮುಂದಿವೆ. ಈಗ ಈ ಅರ್ಜಿ ಸಾಂವಿಧಾನಿಕ ಪೀಠದ ವಿಚಾರಣೆಯ ಭಾಗವಾಗಬೇಕು ಎಂದು ವಕೀಲೆ ಶೋಭಾ ವಾದಿಸಿದರು.

'ನ್ಯಾಯಮೂರ್ತಿ ರಸ್ತೋಗಿ ಅವರ ಮುಂದೆ ಅವು ವಿಚಾರಣೆಗೆ ಬರುವ ಮೊದಲು, ಈ ಪರಿಶೀಲನಾ ಅರ್ಜಿಯನ್ನು ನಾವು ಆಲಿಸಬೇಕಿದೆ' ಎಂದು ಸಿಜೆಐ ಹೇಳಿದರು.

ಅಪರಾಧಿಗಳ ಜೀವಾವಧಿ ಶಿಕ್ಷೆಗೆ ಕ್ಷಮಾದಾನ ನೀಡುವ ಬಗ್ಗೆ ತೀರ್ಮಾನಿ ಸಲು ಗುಜರಾತ್ ಸರ್ಕಾರಕ್ಕೆ ಅವಕಾಶ ಕಲ್ಪಿಸಿ ಕಳೆದ ಮೇ 13ರಂದು ನೀಡಿದ್ದ ಸುಪ್ರೀಂ ಕೋರ್ಟ್ ತೀರ್ಪನ್ನು ಪುನರ್ ಪರಿಶೀಲಿಸುವಂತೆಯೂ ಬಿಲ್ಕಿಸ್ ಬಾನು ಪ್ರತ್ಯೇಕ ಅರ್ಜಿ ಸಲ್ಲಿಸಿದರು.

ಇದಕ್ಕೂ ಮೊದಲು ನ್ಯಾಷನಲ್ ಫೆಡ ರೇಷನ್ ಆಫ್ ಇಂಡಿಯನ್ ವುಮೆನ್ ಸಂಘಟನೆ ಹೊಸದಾಗಿ ಸಲ್ಲಿಸಿದ್ದ ಇದೇ ರೀತಿಯ ಅರ್ಜಿಯ ವಿಚಾರಣೆ ನಡೆಸುವುದಾಗಿ ನ್ಯಾಯಮೂರ್ತಿ ಗಳಾದ ಅಜಯ್ ರಸ್ತೋಗಿ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ಪೀಠ ಹೇಳಿತ್ತು.

ಉನ್ನತ ನ್ಯಾಯಾಲಯ ಮೇ ನಲ್ಲಿ ನೀಡಿದ ತೀರ್ಪು ಆಧರಿಸಿ, ಗುಜರಾತ್ ಸರ್ಕಾರ ಎಲ್ಲ 11 ಅಪರಾಧಿಗಳಿಗೆ ಸನ್ನಡತೆ ಆಧಾರದ ಮೇಲೆ ಕ್ಷಮಾದಾನ ನೀಡಲು ನಿರ್ಧರಿಸಿ, ಆಗಸ್ಟ್ 15ರಂದು ಬಿಡುಗಡೆ ಮಾಡಿತ್ತು. ಅಪರಾಧಿಗಳು 15 ವರ್ಷಗಳಿಗೂ ಹೆಚ್ಚು ಸಮಯ ಜೈಲಿನಲ್ಲಿ ಕಳೆದಿದ್ದರು.


ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ ಮತ್ತು ಕಾರು ಸಾಲ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
ಸಂಸ್ಕರಣ ಮತ್ತು ಡಾಕ್ಯುಮೆಂಟೇಷನ್ ಶುಲ್ಕ 100% ಮನ್ನಾ.
1800 425 0018


# ಪಿಯುಸಿ ಪರೀಕ್ಷೆ: ಬಹು ಆಯ್ಕೆ ಪ್ರಶ್ನೆಗಳತ್ತ ಚಿತ್ತ

• ರಶ್ಮಿ ಬೇಲೂರು

**ಬೆಂಗಳೂರು:** ಪಿಯು ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ತರಲು ಮುಂದಾಗಿರುವ ರಾಜ್ಯ ಸರ್ಕಾರ, ಪ್ರತಿ ವಿಷಯದ ಪ್ರಶ್ನೆ ಪತ್ರಿಕೆಯಲ್ಲೂ 15ರಿಂದ 20 ಅಂಕಗಳ ಬಹು ಆಯ್ಕೆ ಪ್ರಶ್ನೆಗಳನ್ನು ಅಳವಡಿಸಲು ಚಿಂತನೆ ನಡೆಸಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಅವರ ಅಧ್ಯಕ್ಷ-ತೆಯಲ್ಲಿ ನಡೆದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪರಿಶೀಲನಾ ಸಭೆಯಲ್ಲಿ ಈ ಕುರಿತು ಚರ್ಚಿಸಲಾಗಿದೆ.

'ರಾಜ್ಯದ ದ್ವಿತೀಯ ಪಿಯು ಫಲಿತಾಂಶವನ್ನು ಕೇಂದ್ರೀಯ ಮಂಡಳಿಗಳ ಫಲಿತಾಂಶಗಳೊಂದಿಗೆ ಹೋಲಿಸಿದಾಗ ರಾಜ್ಯದ ವಿದ್ಯಾರ್ಥಿಗಳ ಉತ್ತೀರ್ಣ ಪ್ರಮಾಣ ಮತ್ತು ಅಂಕಗಳ ಸಾಮರ್ಥ್ಯ ಕಡಿಮೆಯಾಗುತ್ತಿದೆ. ವೃತ್ತಿ ಪರ ಕೋರ್ಸ್‌ಗಳ ಸೀಟುಗಳಿಗಾಗಿ ಸಿಬಿಎಸ್‌ಇ ವಿದ್ಯಾರ್ಥಿಗಳ ಜತೆ ಸ್ಪರ್ಧಿಸುವ ಸವಾಲನ್ನು ಎದುರಿಸುತ್ತಿದ್ದಾರೆ. ಹಾಗಾಗಿ, ಉತ್ತೀರ್ಣತೆಯ ಶೇಕಡಾವಾರು ಪ್ರಮಾಣ ಸುಧಾರಿಸಲು ಪ್ರಥಮ ಹಾಗೂ ದ್ವಿತೀಯ ಪಿಯು ಪರೀ-ಕ್ಷೆಗಳಲ್ಲಿ ಈ ಪದ್ಧತಿ ಅಳವಡಿಸಿಕೊಳ್ಳಬ-ಹುದು' ಎಂದು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಸಲಹೆ ನೀಡಿದ್ದಾರೆ.

ಪ್ರಸ್ತುತ, ಪಿಯು ಪ್ರಶ್ನೆ ಪತ್ರಿಕೆ ವಿವರಣಾತ್ಮಕ ಉತ್ತರಗಳನ್ನು ಮಾತ್ರ ಒಳಗೊಂಡಿದೆ. ಒಂದು ಅಂಕದ ಪ್ರಶ್ನೆ ಗಳಿಗೂ ವಿವರಣಾತ್ಮಕ ಉತ್ತರಗಳ-ನ್ನು ವಿದ್ಯಾರ್ಥಿಗಳು ಬರೆಯಬೇಕಿದೆ. ಹಾಗಾಗಿ, ಹೆಚ್ಚಿನ ವಿದ್ಯಾರ್ಥಿಗಳು ಅನು-ತ್ತೀರ್ಣರಾಗುತ್ತಿದ್ದಾರೆ.

ಪ್ರಸಕ್ತ ವರ್ಷದ ಆರಂಭದಲ್ಲಿ ನಡೆದ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ 61.88ರಷ್ಟು ವಿದ್ಯಾರ್ಥಿಗಳು ಉತ್ತೀರ್ಣ ರಾಗಿದ್ದರು. ಆದರೆ ಸಿಬಿಎಸ್‌ಇ ಫಲಿತಾಂಶ ಶೇ 90ಕ್ಕಿಂತ ಹೆಚ್ಚಿದೆ.

ಪದವಿ ಕಾಲೇಜುಗಳ ಪ್ರವೇಶಕ್ಕೆ ಪಿಯು ಫಲಿತಾಂಶವೇ ಮುಖ್ಯವಾಗಿ-ರುತ್ತದೆ. ಈಚಿನ ದಿನಗಳಲ್ಲಿ ಉನ್ನತ ಶಿಕ್ಷಣದಲ್ಲಿ ದಾಖಲಾತಿ ಕಡಿಮೆಯಾಗು ತ್ತಿದೆ. ಬಹುಆಯ್ಕೆಯ ಪ್ರಶ್ನೆಗಳ ಅಳವಡಿಕೆಯಿಂದ ಪಿಯು ಫಲಿತಾಂಶ ದಲ್ಲಿ ಹೆಚ್ಚಳವಾದರೆ ಪದವಿ ಪ್ರವೇಶಕ್ಕೆ ಅನುಕೂಲವಾಗುತ್ತದೆ ಎಂಬ ನಿರೀಕ್ಷೆ ಯೂ ಈ ಆಲೋಚನೆಯ ಹಿಂದಿದೆ.

'ಅಧಿಕಾರಿಗಳ ಮಾತಿಗೆ ಸಹಮತ ವ್ಯಕ್ತಪಡಿಸಿರುವ ಸಚಿವ ನಾಗೇಶ್, ಬಹು ಆಯ್ಕೆ ಪ್ರಶ್ನೆಗಳ ಅಳವಡಿಕೆಯ ಪ್ರಸ್ತಾವಕ್ಕೆ ಒಲವು ತೋರಿದ್ದಾರೆ. ಆದರೂ, ಇನ್ನಷ್ಟು ಚರ್ಚೆಯ ನಂತರವಷ್ಟೇ ಅಂತಿಮ ನಿರ್ಧಾರ ಸಾಧ್ಯ' ಎಂದು ಇಲಾಖೆಯ ಮೂಲಗಳು ಖಚಿತ ಪಡಿಸಿವೆ.

## ಅಮೆರಿಕಕ್ಕೆ ಚೀನಾ ಎಚ್ಚರಿಕೆ

**ವಾಷಿಂಗ್ಟನ್ (ಪಿಟಿಐ):** 'ಭಾರತದ ಜೊತೆಗಿನ ತಮ್ಮ ಸಂಬಂಧದಲ್ಲಿ ಮೂಗು ತೂರಿಸದಂತೆ ಪಿಆರ್‌ಸಿ ಅಧಿಕಾರಿಗಳು (ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾ) ಅಮೆರಿಕದ ಅಧಿಕಾರಿ ಗಳಿಗೆ ಎಚ್ಚರಿಕೆ ನೀಡಿದ್ದಾರೆ' ಎಂದು ಪೆಂಟಗನ್ ವರದಿ ಹೇಳಿದೆ.

ಅಮೆರಿಕದ ಸಂಸತ್‌ಗೆ ಸಲ್ಲಿಸಿರುವ ಈ ವರದಿಯಲ್ಲಿ '2020ರ ಸಂಘರ್ಷದ ನಂತರ ಚೀನಾ ಗಡಿಯಲ್ಲಿ ನಿರಂತರವಾಗಿ ಸೇನೆ ನಿಯೋಜನೆ ಮತ್ತು ಎಲ್‌ಎಸಿ ಉದ್ದಕ್ಕೂ ಮೂಲ ಸೌಕರ್ಯ ಅಭಿವೃದ್ಧಿ ಮುಂದುವರಿಸಿದೆ. ಎಲ್‌ಎಸಿ ಉದ್ದಕ್ಕೂ ಅನೇಕ ಕಡೆ ಕಲ್ಲುಗಳು, ಲಾಠಿಗಳನ್ನು ಹಿಡಿದು ಉಭಯ ಸೇನಾ ಪಡೆಗಳು ಘರ್ಷಣೆ ನಡೆಸಿದ್ದವು. ಇದು, ಎರಡೂ ಕಡೆಯಿಂದಲೂ ಗಡಿಯಲ್ಲಿ ಸೇನಾ ನಿಯೋಜನೆಗೆ ಪ್ರಚೋದಿಸಿತ್ತು' ಎಂದು ವಿವರಿಸಿದೆ.

'ಅಮೆರಿಕ ಮತ್ತು ಭಾರತದ ಮಧ್ಯೆ ಹೆಚ್ಚು ಆಪ್ತತೆ ಬೆಳೆಯದಂತೆ ತಡೆಯಲು ಹಾಗೂ ಚೀನಾ ಗಡಿ ಸಮಸ್ಯೆಯನ್ನು ತಿಳಿಗೊಳಿಸುವತ್ತ ಗಮನ ಹರಿಸಿದೆ. ಉಭಯತ್ರರ ಮಾತು ಕತೆಯು ಕನಿಷ್ಠ ಪ್ರಗತಿ ಸಾಧಿಸಿದೆ' ಎಂದೂ ಪೆಂಟಗನ್ ತನ್ನ ವರದಿಯಲ್ಲಿ ವಿವರಿಸಿದೆ.

## ದತ್ತ ಜಯಂತಿಗೆ ಹೈಕೋರ್ಟ್ ಅಸ್ತು

**ಬೆಂಗಳೂರು:** ಚಿಕ್ಕಮಗಳೂರು ಜಿಲ್ಲೆಯ ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾದಲ್ಲಿ ಡಿಸೆಂಬರ್ 6ರಿಂದ ಮೂರು ದಿನಗಳ ಕಾಲ ದತ್ತಾತ್ರೇಯ ಜಯಂತಿ ಆಚರಿಸಲು ಹೈಕೋರ್ಟ್ ಹಸಿರು ನಿಶಾನೆ ತೋರಿದೆ. 4

## ವಿಕ್ರಮ್ ಕಿರ್ಲೋಸ್ಕರ್ ನಿಧನ

**ಬೆಂಗಳೂರು:** ಟೊಯೊಟಾ ಕಿರ್ಲೋಸ್ಕರ್ ಮೋಟಾರ್ಸ್‌ನ ಉಪಾಧ್ಯಕ್ಷ ವಿಕ್ರಮ್ ಕಿರ್ಲೋಸ್ಕರ್ (64) ಹೃದಯಾಘಾತದಿಂದ ನಿಧನ-ರಾಗಿದ್ದಾರೆ. ಮಂಗಳವಾರ ಬೆಳಿಗ್ಗೆ ತಮ್ಮ ನಿವಾಸದಲ್ಲಿ ಕುಸಿದು ಬಿದ್ದ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖ-ಲಿಸಲಾಗಿತ್ತು. 6

## ಕಲಾವಿದ ಕುಂಬ್ಳೆ ಸುಂದರ ರಾವ್ ಇನ್ನಿಲ್ಲ

**ಮಂಗಳೂರು:** ಯಕ್ಷಗಾನ ಮತ್ತು ತಾಳ ಮದ್ದಳೆಯ ಪ್ರಸಿದ್ಧ ಕಲಾವಿದ, ಮಾಜಿ ಶಾಸಕ ಕುಂಬ್ಳೆ ಸುಂದರ ರಾವ್ (88 ವರ್ಷ) ಬುಧವಾರ ಮುಂಜಾನೆ ನಿಧನರಾದರು. 6

## ವಿಚಾರಣೆಗೆ ಬಾರದ ಗಡಿ ವ್ಯಾಜ್ಯ ಅರ್ಜಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕ–ಮಹಾರಾಷ್ಟ್ರ ಗಡಿ ವ್ಯಾಜ್ಯಕ್ಕೆ ಸಂಬಂಧಿಸಿದ ಅರ್ಜಿಯು ಸುಪ್ರೀಂ ಕೋರ್ಟ್‌ನಲ್ಲಿ ಬುಧವಾರ ವಿಚಾರಣೆಗೆ ಬರಲಿಲ್ಲ.

ನ್ಯಾಯಮೂರ್ತಿ ಕೆ.ಎಂ. ಜೋಸೆಫ್ ನೇತೃತ್ವದ ಪೀಠದ ಎದುರು ಅರ್ಜಿ ವಿಚಾರಣೆಗೆ ನಿಗದಿಯಾಗಿತ್ತು. ಆದರೆ ನ್ಯಾಯಮೂರ್ತಿಗಳು ಜಲ್ಲಿ ಕಟ್ಟುಗೆ ಸಂಬಂಧಿಸಿದ ಅರ್ಜಿಯ ವಿಚಾರಣೆ ನಡೆಸುತ್ತಿದ್ದರಿಂದ, ಗಡಿ ವ್ಯಾಜ್ಯಕ್ಕೆ ಸಂಬಂಧಿಸಿದ ಅರ್ಜಿಯನ್ನು ಎತ್ತಿಕೊಳ್ಳಲು ಸಾಧ್ಯವಾಗಲಿಲ್ಲ.

ಇದು ಮತ್ತೊಂದು ದಿನ ವಿಚಾರಣೆಗೆ ಬರುವ ಸಾಧ್ಯತೆಯಿದೆ. ಕರ್ನಾಟಕದ ಕೆಲವು ಗ್ರಾಮಗಳನ್ನು ರಾಜ್ಯಕ್ಕೆ ಸೇರಿಸಬೇಕು ಎಂದು ಕೋರಿ ಮಹಾರಾಷ್ಟ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯದ ಪರ ವಾದ ಮಂಡಿ ಸಲು, ಹಿರಿಯ ವಕೀಲರಾದ ಮುಕುಲ್ ರೋಹಟಗಿ, ಶ್ಯಾಮ್ ದಿವಾನ್ ಹಾಗೂ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ ನೇತೃತ್ವದ ತಂಡವನ್ನು ಕರ್ನಾಟಕ ಸರ್ಕಾರ ರಚಿಸಿದೆ.

## ಶರತ್‌ಗೆ ಖೇಲ್ ರತ್ನ ಪ್ರಶಸ್ತಿ

ಅಚಂತ ಶರತ್ ಕಮಲ್

ಸುಮಾ ಶಿರೂರ್

**ನವದೆಹಲಿ (ಪಿಟಿಐ):** ಟೇಬಲ್ ಟೆನಿಸ್ ಆಟಗಾರ ಅಚಂತ ಶರತ್ ಕಮಲ್ ಅವರಿಗೆ ಕ್ರೀಡಾಕ್ಷೇತ್ರದ ಅತ್ಯುನ್ನತ ಗೌರವ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿ-ಯನ್ನು ಬುಧವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರದಾನ ಮಾಡಿದರು.

ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಕರ್ನಾಟಕದ ಪ್ಯಾರಾ ಶೂಟಿಂಗ್ ಕೋಚ್ ಸುಮಾ ಶಿರೂರ್ ಅವರಿಗೆ ದ್ರೋಣಾಚಾರ್ಯ, ಅಥ್ಲೀಟ್ ಅಶ್ವಿನಿ ಅಕ್ಕುಂಜಿ ಹಾಗೂ ಕಬಡ್ಡಿ ಆಟಗಾರ ಬಿ.ಸಿ. ಸುರೇಶ್ ಅವರಿಗೆ ಧ್ಯಾನಚಂದ್ ಜೀವಮಾನ ಸಾಧನೆ ಪುರಸ್ಕಾರ ನೀಡಲಾಯಿತು. ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್, ಮಹಿಳಾ ಬಾಕ್ಸಿಂಗ್ ವಿಶ್ವ ಚಾಂಪಿಯನ್ ನಿಖತ್ ಜರೀನ್ ಸೇರಿದಂತೆ 25 ಕ್ರೀಡಾಪಟು ಗಳಿಗೆ ಅರ್ಜುನ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ಪಿಎಫ್‌ಐ ನಿಷೇಧ ಪ್ರಶ್ನಿಸಿದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆ ನಿಷೇಧಿಸಿದ ಕ್ರಮವನ್ನು ಪ್ರಶ್ನಿಸಲಾಗಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿರುವ ಹೈಕೋರ್ಟ್, 'ಕೇಂದ್ರ ಸರ್ಕಾರ ಹೊರ ಡಿಸಿರುವ ಅಧಿಸೂಚನೆಯಲ್ಲಿ ನಿಷೇಧಕ್ಕೆ ಕಾರಣಗಳನ್ನು ಆಧಾರ ಸಹಿತವಾಗಿಯೇ ಕೊಡಲಾಗಿದೆ. ಹಾಗಾಗಿ, ಇದರಲ್ಲಿ ಮಧ್ಯ ಪ್ರವೇಶಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.

ನಿಷೇಧ ಕ್ರಮವನ್ನು ಪ್ರಶ್ನಿಸಿ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಪಿಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ನಾಸಿರ್ ಪಾಷ ಪರವಾಗಿ ಆತನ ಪತ್ನಿ ಅರ್ಷಿಯಾ ಫಾತಿಮಾ ಸಲ್ಲಿಸಿದ್ದ ಅರ್ಜಿ ಮೇಲಿನ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿತು.

ನಿಷೇಧವನ್ನು ತಕ್ಷಣದಿಂದ ಜಾರಿಗೆ ತಂದಿರುವ ಬಗ್ಗೆ ಅರ್ಜಿದಾರರು ಬಲ ವಾಗಿ ಆಕ್ಷೇಪಿಸಿದ್ದರು. ಆದರೆ, ಈ ವಾದವನ್ನು ಸಾರಾಸಗಟಾಗಿ ತಳ್ಳಿ ಹಾಕಿರುವ ನ್ಯಾಯಪೀಠ, 'ಇಸ್ಲಾಮಿಕ್ ರೀಸರ್ಚ್ ಫೌಂಡೇಷನ್ (ಐಆರ್‌ಎಸ್) ಪ್ರಕರಣದಲ್ಲಿ ದೆಹಲಿ ಹೈಕೋರ್ಟ್ ನೀಡಿ ರುವ ತೀರ್ಪನ್ನು ಸುಪ್ರೀಂಕೋರ್ಟ್ ಮಹಮ್ಮದ್ ಜಾಫರ್ ಪ್ರಕರಣದಲ್ಲಿ ಪರಿಗಣಿಸಿದೆ' ಎಂದು ತೀರ್ಪಿನಲ್ಲಿ ಉಲ್ಲೇ ಖಿಸಿದೆ.

'ಸಂವಿಧಾನದಡಿ ಕೊಡ ಮಾಡಲಾದ ಹಕ್ಕು ಮತ್ತು ಸ್ವಾತಂತ್ರ್ಯ-ಗಳು 19 (1) (ಸಿ) ಹಾಗೂ 19 (4) ವಿಧಿಗಳನ್ನು ಅವಲಂಬಿಸಿವೆ. ದೇಶದ ಸಮಗ್ರತೆ ಹಾಗೂ ಏಕತೆಗೆ ಧಕ್ಕೆ ಬರುವ ಸಂದರ್ಭಗಳಿದ್ದಾಗ ಕೆಲವು ನಿರ್ಬಂಧ ಗಳನ್ನು ಹೇರಬಹುದು' ಎಂದು ಹೇಳಿದೆ.

'ಪಿಎಫ್‌ಐ ಭಯೋತ್ಪಾದಕ ಸಂಘಟನೆಗಳ ಜೊತೆ ನಿಕಟ ಸಂಪರ್ಕ ಹೊಂದಿದ್ದು ಭಯೋತ್ಪಾದನಾ ಚಟು-ವಟಿಕೆಗಳಲ್ಲಿ ಭಾಗಿಯಾಗಿ ದೇಶದಲ್ಲಿ ಅಶಾಂತಿಯ ವಾತಾವರಣ ಸೃಷ್ಟಿ ಮಾಡುತ್ತಿದೆ' ಎಂಬ ಆರೋಪದಡಿ ಪಿಎಫ್‌ಐ ಸಂಘಟನೆಯನ್ನು ಕೇಂದ್ರ ಗೃಹ ಸಚಿವಾಲಯ 2022ರ ಸೆಪ್ಟೆಂಬರ್ 28ರಂದು ನಿಷೇಧಿಸಿತ್ತು. ಇದನ್ನು ಪ್ರಶ್ನಿಸಿದ್ದ ನಾಸಿರ್, 'ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ--1967ರ (ಯುಎಪಿಎ) ಕಲಂ 3ರ, ಉಪ ನಿಯಮ 3ರ ಅಡಿ ಪಿಎಫ್‌ಐ ಸಂಘಟನೆ ನಿಷೇಧಿಸಿರುವುದು ಕಾನೂನುಬಾಹಿರ' ಎಂದು ಆಕ್ಷೇಪಿಸಿ-ದ್ದರು.

11ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



## ಶ್ರವಣದೋಷ: 20 ಆಸ್ಪತ್ರೆಗಳಲ್ಲಿ ಉಚಿತ ಶಸ್ತ್ರಚಿಕಿತ್ಸೆ

ಬೆಂಗಳೂರು: ಶ್ರವಣದೋಷ ನಿವಾರಣೆಗೆ ಸಂಬಂಧಿಸಿದಂತೆ ಉಚಿತ ಶಸ್ತ್ರಚಿಕಿತ್ಸೆಗೆ ಆರೋಗ್ಯ ಇಲಾಖೆಯು 20 ಆಸ್ಪತ್ರೆಗಳನ್ನು ಗುರುತಿಸಿದೆ. ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ, ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ, ನಾರಾಯಣ ಹೃದಯಾಲಯ, ಎಂ.ಎಸ್. ರಾಮಯ್ಯ, ವೈದೇಹಿ, ಆಸ್ಟರ್ ಆರ್.ವಿ., ಅಪೋಲೊ (ಬನ್ನೇರುಘಟ್ಟ) ಆಸ್ಪತ್ರೆ ನೋಂದಣಿಯಾಗಿವೆ.

ಶಿವಮೊಗ್ಗದ ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆ, ತುಮಕೂರಿನ ಜಿಲ್ಲಾ ಆಸ್ಪತ್ರೆ, ಹುಬ್ಬಳ್ಳಿಯ ಕಿಮ್ಸ್, ರಾಯಚೂರಿನ ವೈದ್ಯಕೀಯ ವಿಜ್ಞಾನ ಸಂಸ್ಥೆ, ದಕ್ಷಿಣ ಕನ್ನಡದ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಕೆ.ಎಸ್. ಹೆಗ್ಡೆ ಆಸ್ಪತ್ರೆ, ಮಂಡ್ಯದ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿಯ ಕೆ.ಎಲ್.ಇ.ಎಸ್. ಆಸ್ಪತ್ರೆ, ಮೈಸೂರಿನ ಜೆ.ಎಸ್.ಎಸ್. ಹಾಗೂ ಚಿಕ್ಕಬಳ್ಳಾಪುರದ ಶ್ರೀ ಸತ್ಯ ಸಾಯಿ ಸರಳ ಮೆಮೋರಿಯಲ್ ಆಸ್ಪತ್ರೆಯಲ್ಲಿ ಉಚಿತ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ.

## ಕುಕ್ಕರ್ ಬಾಂಬ್ ಸ್ಫೋಟ: ಆರೋಪಿ ವಿಚಾರಣೆ ಶುರು

ಮಂಗಳೂರು: ನಗರದ ಗರೋಡಿಯಲ್ಲಿ ನ.19ರಂದು ನಡೆದ ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಮೊಹಮ್ಮದ್ ಶಾರಿಕ್ ಅವರನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ಅಧಿಕಾರಿಗಳು ಬುಧವಾರ ವಿಚಾರಣೆಗೆ ಒಳಪಡಿಸಿದ್ದಾರೆ.

ಬಾಂಬ್ ಸ್ಫೋಟದಿಂದ ಆರೋಪಿಯ ದೇಹದ ಶೇ 45ರಷ್ಟು ಭಾಗದಲ್ಲಿ ಸುಟ್ಟಗಾಯಗಳಾಗಿದ್ದವು. ನಗರದ ಫಾದರ್ ಮುಲ್ಲರ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಆರೋಪಿಯ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದು, ಆತನನ್ನು ವಿಚಾರಣೆಗೆ ಒಳಪಡಿಸಲು ವೈದ್ಯರ ತಂಡ ತನಿಖಾಧಿಕಾರಿಗಳಿಗೆ ಅನುಮತಿ ನೀಡಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಎನ್ಐಎ ಅಧಿಕಾರಿಗಳ ತಂಡವು ನಗರಕ್ಕೆ ಬಂದಿದೆ. ಆರೋಪಿಯನ್ನು ಸ್ಥಳೀಯ ಪೊಲೀಸ್ ಅಧಿಕಾರಿಗಳ ನೆರವಿನಿಂದ ಕೆಲ ಕಾಲ ವಿಚಾರಣೆಗೆ ಒಳಪಡಿಸಿದೆ’ ಎಂದು ಮೂಲಗಳು ಹೇಳಿವೆ.

# ತಾಯಂದಿರ ಮರಣ ಪ್ರಮಾಣ 69ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಆರೋಗ್ಯ ಸಚಿವಾಲಯದ ತಾಯಿ ಮತ್ತು ಮಕ್ಕಳ ವಿಭಾಗವು ಮಾದರಿ ನೋಂದಣಿ ವ್ಯವಸ್ಥೆಯ (ಎಸ್ಆರ್‌ಎಸ್) ವರದಿ ಬಿಡುಗಡೆ ಮಾಡಿದ್ದು, ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣವು 83ರಿಂದ 69ಕ್ಕೆ ಇಳಿಕೆ ಕಂಡಿದೆ.

ಹೆರಿಗೆ ವೇಳೆ ತಾಯಂದಿರ ಮರಣದ ಅನುಪಾತ ಕುರಿತಂತೆ ಪ್ರತಿ ಎರಡು ವರ್ಷಕ್ಕೊಮ್ಮೆ ಎಸ್ಆರ್‌ಎಸ್ ವರದಿ ಬಿಡುಗಡೆ ಮಾಡಲಾಗುತ್ತಿದೆ. 2017-19ರ ವರದಿಯ ಪ್ರಕಾರ ರಾಜ್ಯದಲ್ಲಿ ಪ್ರತಿ ಒಂದು ಲಕ್ಷ ಹೆರಿಗೆಗೆ 83 ತಾಯಂದಿರು ಮೃತಪಡುತ್ತಿದ್ದರು. 2018-20ರಲ್ಲಿ ಮರಣ ಪ್ರಮಾಣ ಶೇ 16.87ರಷ್ಟು ಇಳಿಕೆಯಾಗಿದೆ. ವರ್ಷಕ್ಕೆ ಒಂದು ಲಕ್ಷಕ್ಕಿಂತ ಹೆಚ್ಚು ಹೆರಿಗೆ ನಡೆಯುವ ರಾಜ್ಯಗಳನ್ನು ಮಾತ್ರ ಸಮೀಕ್ಷೆಗೆ ಪರಿಗಣಿಸಲಾಗುತ್ತಿದೆ. ದೇಶದಲ್ಲಿ ಪ್ರತಿ ಒಂದು ಲಕ್ಷ ಹೆರಿಗೆಗೆ ಸರಾಸರಿ 97 ತಾಯಂದಿರು ಮೃತಪಡುತ್ತಿದ್ದಾರೆ. 2014–16ರಲ್ಲಿ ಈ ಸಂಖ್ಯೆ 130 ರಷ್ಟಿತ್ತು.

ಕಡಿಮೆ ಮರಣ ಪ್ರಮಾಣ ಹೊಂದಿರುವ ರಾಜ್ಯಗಳಲ್ಲಿ ಕೇರಳ (19), ಮಹಾರಾಷ್ಟ್ರ (33), ತೆಲಂಗಾಣ (43), ಆಂಧ್ರಪ್ರದೇಶ (45) ಹಾಗೂ ತಮಿಳುನಾಡು (54) ಕ್ರಮವಾಗಿ ಮೊದಲ ಐದು ಸ್ಥಾನದಲ್ಲಿವೆ. ದಕ್ಷಿಣದ ಐದು ರಾಜ್ಯಗಳಿಗೆ ಹೋಲಿಕೆ ಮಾಡಿದಲ್ಲಿ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಾಯಂದಿರ ಮರಣ ವರದಿಯಾಗುತ್ತಿದೆ.

### ಮೂಲಸೌಕರ್ಯ ಹೆಚ್ಚಳ

‘ರಾಜ್ಯದಾದ್ಯಂತ ತಾಯಿ-ಮಕ್ಕಳ ಆಸ್ಪತ್ರೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಸೂತಿ ತಜ್ಞರು ಮತ್ತು ಅರವಳಿಕೆ ತಜ್ಞರ ನೇಮಕಾತಿಗೆ ಕ್ರಮ ವಹಿಸಲಾಗಿದೆ. ಹೆರಿಗೆ ಆರೈಕೆಗೆ ಸಂಬಂಧಿಸಿದ ಮೂಲಸೌಕರ್ಯವನ್ನು ಗಮನಾರ್ಹವಾಗಿ ಹೆಚ್ಚಳ ಮಾಡಲಾಗಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

‘ನಗರ ಪ್ರದೇಶದಲ್ಲಿ ಮಹಿಳಾ ಚಿಕಿತ್ಸಾಲಯಗಳು ಹಾಗೂ ನಮ್ಮ ಕ್ಲಿನಿಕ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಇದರಿಂದ ಪ್ರಸವ ಪೂರ್ವ ಹಾಗೂ ಪ್ರಸವ ನಂತರದ ಆರೈಕೆ ಇನ್ನಷ್ಟು ಸುಧಾರಿಸಲಿದೆ. ಮಹಿಳೆಯರು ಮತ್ತು ಮಕ್ಕಳ ಯೋಗಕ್ಷೇಮಕ್ಕೆ ಇವು ಸಹಕಾರಿಯಾಗಲಿವೆ’ ಎಂದು ಹೇಳಿದ್ದಾರೆ.

# ‘ಪುಸ್ತಕ ಖರೀದಿಗೆ ₹25 ಕೋಟಿ ಮೀಸಲಿಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಗಟು ಪುಸ್ತಕ ಖರೀದಿಗೆ ಪ್ರತಿವರ್ಷ ಆಯವ್ಯಯದಲ್ಲಿ ₹ 25 ಕೋಟಿ ಅನುದಾನ ಮೀಸಲಿಡಬೇಕು’ ಎಂದು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು ಸರ್ಕಾರವನ್ನು ಒತ್ತಾಯಿಸಿದೆ.

‘ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಸಗಟು ಪುಸ್ತಕ ಖರೀದಿ ಯೋಜನೆಯಡಿಯಲ್ಲಿ ಪ್ರತಿ ವರ್ಷ 3,700ರಿಂದ 4 ಸಾವಿರ ಶೀರ್ಷಿಕೆಗಳನ್ನು ಖರೀದಿಸಲಾಗುತ್ತಿದೆ. 2019ನೇ ಸಾಲಿನಲ್ಲಿ ಆಯ್ಕೆಯಾದ 3,704 ಪುಸ್ತಕಗಳನ್ನು ತಲಾ 300 ಪ್ರತಿಗಳಂತೆ ಖರೀದಿಸಿ, ಅರ್ಧದಷ್ಟು ಬಿಲ್ (₹ 8 ಕೋಟಿ) ಪಾವತಿಸಲಾಗಿದೆ. ಏಪ್ರಿಲ್ 2022ರಲ್ಲಿ ಖರೀದಿಸಿದ ಪುಸ್ತಕಗಳ ₹ 8.40 ಕೋಟಿ ಬಾಕಿ ಇದೆ. ಇದರಿಂದಾಗಿ ಲೇಖಕರು ಹಾಗೂ ಪ್ರಕಾಶಕರು ಹಣ ಪಾವತಿಗಾಗಿ ಸಾರ್ವಜನಿಕ ಗ್ರಂಥಾಲಯಕ್ಕೆ ಅಲೆದು ಸುಸ್ತಾಗಿದ್ದಾರೆ’ ಎಂದು ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಬೇಸರ ವ್ಯಕ್ತಪಡಿಸಿದ್ದಾರೆ.

‘ಇಲಾಖೆಯ ನಿರ್ದೇಶಕರು ಅನುದಾನಕ್ಕಾಗಿ ಸರ್ಕಾರಕ್ಕೆ ಪತ್ರ ಬರೆದಿರುವುದಾಗಿ ಸಬೂಬು ಹೇಳುತ್ತಾರೆ. ಸರ್ಕಾರದ ಮೇಲೆ ಹಲವು ರೀತಿಯ ಒತ್ತಡ ತಂದರೂ ಹಣ ಬಿಡುಗಡೆಯಾಗದೆ ಸಾವಿರಾರು ಲೇಖಕರು ಹಾಗೂ ಪ್ರಕಾಶಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಜ್ಞಾನವನ್ನು ಪಸರಿಸುವ, ಲಾಭದಾಯಕವಲ್ಲದ ಪುಸ್ತಕ ಖರೀದಿ ಹಣಕ್ಕಾಗಿ ಹಪಹಪಿಸುವಂತಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಬಗ್ಗೆ ಗಮನ ಹರಿಸಬೇಕು’ ಎಂದು ಹೇಳಿದ್ದಾರೆ.

‘ಮುದ್ರಣ ವೆಚ್ಚ ದುಬಾರಿಯಾಗಿರುವುದರಿಂದ ಪುಟಕ್ಕೆ 30 ಪೈಸೆ ಹೆಚ್ಚಿಸುವಂತೆ ಸಲ್ಲಿಸಿರುವ ಪ್ರಸ್ತಾವನೆಯೂ ಸರ್ಕಾರದ ಹಂತದಲ್ಲಿದೆ. ಪುಸ್ತಕೋದ್ಯಮವನ್ನು ನಿಕೃಷ್ಟವಾಗಿ ನೋಡಬಾರದು. ಲೇಖಕರು ಹಾಗೂ ಪ್ರಕಾಶಕರನ್ನು ಸಂಕಷ್ಟದಿಂದ ಪಾರು ಮಾಡಬೇಕು’ ಎಂದು ಸಂಘದ ಕಾರ್ಯದರ್ಶಿ ಆರ್. ದೊಡ್ಡೇಗೌಡ ಆಗ್ರಹಿಸಿದ್ದಾರೆ.


**IN THE HIGH COURT OF KARNATAKA AT BENGALURU**
**Notice to the Respondent**
**Vide order dated: 21.11.2022**
**R. F. A. No. 1259 /2013**

SRI T. RAMAIAH . ... APPELLANT
(By Sriyuths :P. M. Siddamallappa, P. M. Gopi and Punith.C, Advs., for appellant by Mylaraiah Assts., (VK Filed) V/S
SRI M. S. BABU ...RESPONDENT
To : Respondent: SRI. M. S. BABU
M/S BUILDERS AND DEVELOPERS, Kodihalli, No.26, 18th Cross, HAL Airport,IInd Stage, Indiranagar, Bangalore - 560038.

Appeal from the Judgement & Decree dated : 17-04-2013 passed in O.S.No.790/2007 on the file of the XXIV ADDL. City Civil & Sessions Judge, Bangalore.

Notice is hereby given to you to appear in this Court either in person or through counsel duly instructed or through someone authorised by law, to act for you in the above appeal on 12-12-2022 in case you intend to contest the appeal. if you fail to appear, the same will be dealt with, heard and decided in your absence.

Given under my hand & the seal of this court, this the 21st day of November 2022.

BY ORDER OF THE COURT
(B. R. SHASHIKUMAR), Assistant Registrar

**ನೈಋತ್ಯ ರೈಲ್ವೆ**

ಇ-ಟೆಂಡರ್ ಸೂಚನೆ ಸಂ.: CN/08/2022 ದಿನಾಂಕ: 25.11.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಐಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ-ಟೆಂಡರನ್ನು ಆಹ್ವಾನಿಸಲಾಗಿದೆ :

ಸಂಕ್ಷಿಪ್ತವಾದ ವಿವರ: 4 ಕೋರ್ x16 ಚ.ಮಿಮೀ. 1100 ವೋಲ್ಟ್ ಗ್ರೇಡ್, ಸ್ಟಾಂಡರ್ಡ್ ಅಲ್ಯುಮಿನಿಯಂ ಕಂಡಕ್ಟರ್ ಗಾಲ್ವನೈಸ್ಡ್ ಸ್ಟೀಲ್ ಸ್ಟ್ರಿಪ್ ಆರ್ಮರ್ಡ್, ಎಕ್ಸ್‌ಎಲ್‌ಪಿಇ ಕೇಬಲ್ ಇತ್ಯಾದಿ ತಯಾರಿಕೆ ಮತ್ತು ಪೂರೈಕೆ (ಪರಿಮಾಣ: 31900 ಮೀಟರ್) (ಟೆಂಡರು ಸಂ. 95225643)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.12.2022, 14:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ನಿರ್ಮಾಣ ಬೆಂಗಳೂರು ದಂಡು
PUB/521/AAD/PRB/SWR/2022-23
S.W.Railways SWRRLY SWRRLY

**ನೈಋತ್ಯ ರೈಲ್ವೆ**

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಸೂಚನೆ ಸಂ.: HE-12-2022-23

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

| ಕ್ರ.ಸಂ. | ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|---|
| 1 | ಧಾರವಾಡದ ತರಬೇತಿ ಕೇಂದ್ರದಲ್ಲಿ ತರಬೇತಿ ಸೌಲಭ್ಯಗಳನ್ನು ಹೆಚ್ಚಿಸುವದಕ್ಕೆ ಸಂಬಂಧಿಸಿದಂತೆ ವಿದ್ಯುತ್ ವ್ಯವಸ್ಥೆಗಳನ್ನು ಕಲ್ಪಿಸುವುದು. | ರೂ. 41,75,008/- |
| 2 | ಹುಬ್ಬಳ್ಳಿಯಲ್ಲಿ ಪ್ರಸ್ತಾವನೆಯ ಪ್ರಕಾರ ಜಿಆರ್‌ಪಿ ಕಚೇರಿಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿದ್ಯುತ್ ವ್ಯವಸ್ಥೆಗಳನ್ನು ಕಲ್ಪಿಸುವುದು. | ರೂ. 18,16,632/- |
| 3 | ಹುಬ್ಬಳ್ಳಿಯಲ್ಲಿ ಶಸ್ತ್ರಾಗಾರ ನಿರ್ಮಾಣಕ್ಕೆ ಬೇಕಾದ ವಿದ್ಯುತ್ ವ್ಯವಸ್ಥೆಗಳನ್ನು ಕಲ್ಪಿಸುವುದು. | ರೂ. 7,87,615/- |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.12.2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಿದ್ಯುತ್ ಇಂಜಿನಿಯರ್/ಸಾಮಾನ್ಯ ಹುಬ್ಬಳ್ಳಿ
PUB/519/AAD/PRB/SWR/2022-23
S.W.Railways SWRRLY SWRRLY

**ಸಾರ್ವಜನಿಕ ಪ್ರಕಟಣೆ**

ನಮ್ಮ ಕಕ್ಷಿದಾರರು ಈ ಕೆಳಕಂಡ ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಮತ್ತು ಇಲ್ಲಿ ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಹಾಗೂ ಇಲ್ಲಿ ಇನ್ನುಮುಂದೆ "**ಷೆಡ್ಯೂಲ್ ಪ್ರಾಪರ್ಟಿ**" ಎನ್ನಲಾಗುವ 1) ಸರ್ವೆ ನಂ. 77/6 ವಿಸ್ತೀರ್ಣ ಸುಮಾರು 3.5 ಗುಂಟಾ 2) 93/7(ಪಿ) ವಿಸ್ತೀರ್ಣ ಸುಮಾರು 12 ಗುಂಟಾ 3) ಸರ್ವೆ ನಂ. 80/4 ವಿಸ್ತೀರ್ಣ ಸುಮಾರು 4 ಗುಂಟಾ 4) ಸರ್ವೆ ನಂ. 81/1 ವಿಸ್ತೀರ್ಣ ಸುಮಾರು 13.5 ಗುಂಟಾ (1 ಗುಂಟಾ ಖರಾಬು ಹೊರತುಪಡಿಸಿ) 5) ಸರ್ವೆ ನಂ. 80/2ಎ2 ವಿಸ್ತೀರ್ಣ ಸುಮಾರು 4 ಗುಂಟಾ 6) ಸರ್ವೆ ನಂ. 93/7(ಪಿ) ವಿಸ್ತೀರ್ಣ ಸುಮಾರು 6 ಗುಂಟಾ 7) ಸರ್ವೆ ನಂ. 93/7(ಪಿ) ವಿಸ್ತೀರ್ಣ ಸುಮಾರು 6 ಗುಂಟಾ ಮತ್ತು 8) ಸರ್ವೆ ನಂ. 92/3 ವಿಸ್ತೀರ್ಣ ಸುಮಾರು 13 ಗುಂಟಾ ಕ್ಷೇತ್ರಫಲವುಳ್ಳ ಎಲ್ಲಾ ಕೃಷಿ ಜಮೀನು ಸ್ವತ್ತುಗಳನ್ನು, ಸಂಬಂಧಿತ ಸ್ವತ್ತಿನ ಎದುರು ನಮೂದಿಸಲಾಗಿರುವ ಅವುಗಳ ಮಾಲೀಕರಿಂದ (**"ಮಾಲೀಕರು"**) ಖರೀದಿಸಲು ಉತ್ಸುಕರಾಗಿರುತ್ತಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಳು ಯಾವುದೇ ರೀತಿಯ ಅಥವಾ ಸ್ವರೂಪದ ಯಾವುದೇ ಹಕ್ಕು, ಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮ್‌ಗಳನ್ನು ಹೊಂದಿದ್ದಲ್ಲಿ ಅಥವಾ ಷೆಡ್ಯೂಲ್ ಪ್ರಾಪರ್ಟಿಯ ವಿರುದ್ಧ ಅಥವಾ ಮಾಲಿಕರ ವಿರುದ್ಧ ಯಾವುದೇ ಕ್ಲೇಮ್ ಅಥವಾ ದಾಖಲಾತಿಗಳನ್ನು ಹೊಂದಿದ್ದಲ್ಲಿ ಅಥವಾ ನಮ್ಮ ಕಕ್ಷಿದಾರರ ವ್ಯವಹಾರಕ್ಕೆ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಅಂತಹವರು ಕಡ್ಡಾಯವಾಗಿ ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ **ಹದಿನೈದು ದಿನಗಳೊಳಗೆ** (15 ದಿನಗಳು) ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಭಾಗಕ್ಕೆ ಸಂಬಂಧಿತ ತಮ್ಮ ಹಕ್ಕುಗಳನ್ನು ಸಾಬೀತುಪಡಿಸುವ ಎಲ್ಲಾ ದಾಖಲಾತಿ ಆಧಾರ ಪುರಾವೆಗಳ ಸಮೇತ ಈ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು, ನಿಗದಿತ ಅವಧಿಯ ನಂತರ ನಮ್ಮ ಕಕ್ಷಿದಾರರು, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಕ್ಲೇಮ್‌ಗಳು ಇರುವುದಿಲ್ಲ ಎಂದು ಪರಿಗಣಿಸಿ ತಮ್ಮ ವಹಿವಾಟನ್ನು ಪೂರ್ಣಗೊಳಿಸಿಕೊಳ್ಳುತ್ತಾರೆ.

**ಷೆಡ್ಯೂಲ್**

ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, ಒಟ್ಟಾರೆ 1 ಗುಂಟೆ ಖರಾಬ್ ಸೇರಿದಂತೆ ಸುಮಾರು 01 ಎಕರೆ 22 ಗುಂಟೆ ವಿಸ್ತೀರ್ಣವುಳ್ಳ, ಐಟಂ ನಂ.1 ರಿಂದ 8 ರವರೆಗಿನ ಎಲ್ಲಾ ಕೃಷಿ ಜಮೀನುಗಳ ಭೂಭಾಗಗಳು ಸೇರಿರುತ್ತವೆ ಮತ್ತು ಸರ್ವೆ ನಂಬರ್ ಹಾಗೂ ಚಕ್ಕುಬಂದಿ ವಿವರ ಕೆಳಗಿನಂತಿರುತ್ತದೆ:–

| ಐಟಂ ನಂ. | ಸರ್ವೆ ನಂ. | ಮಾಲಿಕರ ಹೆಸರು | ವಾಸ್ತವ ಕ್ಷೇತ್ರಫಲ | | ಖರಾಬ್ ವಿಸ್ತೀರ್ಣ | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
|---|---|---|---|---|---|---|---|---|---|---|
| | | | ಎಕರೆ | ಗುಂಟೆ | ಎಕರೆ | ಗುಂಟೆ | | | | |
| 1. | 77/6 | ಮುನಿರಾಜ | 0 | 3.5 | 00 | 00 | ಸರ್ವೆ ನಂ. 77/4 | ಸರ್ವೆ ನಂ. 94/4 | ಸರ್ವೆ ನಂ. 77/4 | ಸರ್ವೆ ನಂ. 80/5 |
| 2. | 93/7 (ಪಿ) | ಕೃಷ್ಣಮ್ಮ | 0 | 12 | 00 | 00 | ಕಾಲುವೆ, ಸರ್ವೆ ನಂ. 83 & 84 | ಸರ್ವೆ ನಂ. 92/4 | ಸರ್ವೆ ನಂ. 93/6ಬಿ | ಸರ್ವೆ ನಂ. 93/7ರ ಉಳಿಕೆ ಭಾಗ |
| 3. | 80/4 | ಚಿಕ್ಕಮುನಿಯಪ್ಪ | 0 | 04 | 00 | 00 | ಸರ್ವೆ ನಂ. 80/2ಎ2 & 80/2ಎ1 | ಸರ್ವೆ ನಂ. 93/12 | ಸರ್ವೆ ನಂ. 80/5 | ಸರ್ವೆ ನಂ. 80/1 |
| 4. | 81/1 | ಎನ್ ನಾಗೇಶ್ | 0 | 13.5 | 00 | 01 | ಸರ್ವೆ ನಂ. 81/2ಬಿ | ಸರ್ವೆ ನಂ. 93/5 | ಸರ್ವೆ ನಂ. 80/1 & 80/2ಎ2 | ಸರ್ವೆ ನಂ. 82 & 93/6ಎ |
| 5. | 80/2ಎ2 | ಎನ್ ನಾಗೇಶ್ | 0 | 04 | 00 | 00 | ಸರ್ವೆ ನಂ. 80/2ಬಿ | ಸರ್ವೆ ನಂ. 80/4 & 80/1 | ಸರ್ವೆ ನಂ. 80/2ಎ1 | ಸರ್ವೆ ನಂ. 81/2ಬಿ & 81/1 |
| 6. | 93/7(ಪಿ) | ಬಿ ಎನ್ ಕುಮಾರ್ | 0 | 06 | 00 | 00 | ಕಾಲುವೆ, ಸರ್ವೆ ನಂ. 83 & 84 | ಸರ್ವೆ ನಂ. 92 | ಸರ್ವೆ ನಂ. 93/7ರ ಉಳಿಕೆ ಭಾಗ | ಸರ್ವೆ ನಂ. 93/7ರ ಉಳಿಕೆ ಭಾಗ |
| 7. | 93/7 (ಪಿ) | ಕೃಷ್ಣಪ್ಪ | 0 | 06 | 00 | 00 | ಕಾಲುವೆ & ಸರ್ವೆ ನಂ. 84 (ಚಿಕ್ಕದ್ಯಾವಪ್ಪನವರ ಸ್ವತ್ತು) | ಸರ್ವೆ ನಂ. 92/4 | ಸರ್ವೆ ನಂ. 93/7ರ ಉಳಿಕೆ ಭಾಗ | ಸರ್ವೆ ನಂ. 93/8ಎ & 93/8ಬಿ |
| 8. | 92/3 | ಮುನಿರಾಜು | 0 | 13 | 00 | 00 | ಸರ್ವೆ ನಂ. 92/4 | ಸರ್ವೆ ನಂ. 92/2 | ಕಾಲುವೆ ಮತ್ತು ಸರ್ವೆ ನಂ. 92/3ರ ಉಳಿಕೆ ಭಾಗ | ಸರ್ವೆ ನಂ. 92/5 |
| | | ಒಟ್ಟು | 1 | 22 | 00 | 01 | | | | |

ಸಹಿ/– (ಕೆ.ಎನ್. ಗೀತಾ)
ಇಂಡಸ್‌ಲಾ
7ನೇ ಅಡ್ಡರಸ್ತೆ, ವಸಂತನಗರ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560001, ಫೋನ್ ನಂ.: 91–80–42423000

**PUBLIC NOTICE**

This is to inform the general public that my client is intending to purchase immovable properties mentioned in schedule below belonging to **Mr. R. Chandru S/o Sri Ramappa** and in this connection my client has already entered into a sale agreement. If any person/entity has any claim relating to ownership rights, title or lien over the schedule property, they may submit the claim with copies of supportive documents to substantiate the claim **within 10 days** from the date of publication of this notice failing which, my client will be proceeding to close the deal.

**SCHEDULE PROPERTIES**

All that piece and parcel of underdeveloped converted land with an extent of 7 acre 28 gunta in lands in survey number 65 of Herohalli Village, Yeshwanthpur Hobli, Bangalore North Taluk bounded on the:

**East by : Land in Survey Number 165 & 168**
**West by : Ullal Main Road and remaining portion of Land in Sy. No.65**
**North by : Ullal Main Road and Land in Sy. No.188 & 66**
**South by : Private Property.**

**ADDRESS FOR SENDING CLAIMS:**
**S. Raghu, Advocate,**
No.101/13, 11th Cross, 8th Main,
Malleswaram, Bangalore-560003.

Date: 30-11-2022
Place: Bangalore




भारत इलेक्ट्रॉनिक्स BHARAT ELECTRONICS
QUALITY, TECHNOLOGY, INNOVATION
**ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್**
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
**(CIN: L32309KA1954GOI000787)**
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045.
ಫೋನ್: 080-25039300, 25039266 • ಫ್ಯಾಕ್ಸ್: 080-25039266
ಇ–ಮೇಲ್: secretary@bel.co.in • ವೆಬ್‌ಸೈಟ್: www.bel-india.in

**ಅಸಾಧಾರಣ ಸಾಮಾನ್ಯ ಸಭೆ (ಇಜಿಎಮ್) ಮತ್ತು ಇ–ವೋಟಿಂಗ್ ಮಾಹಿತಿಯ ಸೂಚನೆ**

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಸದಸ್ಯರ ಅಸಾಧಾರಣ ಸಾಮಾನ್ಯ ಸಭೆಯು (ಇಜಿಎಂ) ಶುಕ್ರವಾರ, 23ನೇ ಡಿಸೆಂಬರ್, 2022 ರಂದು ಬೆಳಿಗ್ಗೆ 10:00 ಗಂಟೆಗೆ (ಭಾರತೀಯ ಕಾಲಮಾನ) ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ಮಾನದಂಡಗಳನ್ನು ಮುಂದುವರಿಸುವ ದೃಷ್ಟಿಯಿಂದ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("ಎಮ್‌ಸಿಎ"), ಅದರ ಸಾಮಾನ್ಯ ಸುತ್ತೋಲೆ ಸಂಖ್ಯೆ. 14/2020 ದಿನಾಂಕ 8ನೇ ಏಪ್ರಿಲ್, 2020, 17/2020 ದಿನಾಂಕ 13ನೇ ಏಪ್ರಿಲ್, 2020, 20/2020 ದಿನಾಂಕ 5ನೇ ಮೇ, 2020, ಇತ್ತೀಚಿನದು 2/2022 ದಿನಾಂಕ 5ನೇ ಮೇ, 2022 ಮತ್ತು ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಸೆಬಿ") ಅದರ ಸುತ್ತೋಲೆ ಸಂಖ್ಯೆ SEBI/HO/CFD/CMD2/CIRP/P/2022/62 ದಿನಾಂಕ 13ನೇ ಮೇ, 2022 (ಇನ್ನು ಮುಂದೆ ಒಟ್ಟಾರೆಯಾಗಿ "ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುತ್ತದೆ), ಮತ್ತು ಈ ನಿಟ್ಟಿನಲ್ಲಿ ಹೊರಡಿಸಲಾದ ಇತರೆ ಅನ್ವಯವಾಗುವ ಸುತ್ತೋಲೆಗಳು, ಕಂಪನಿಗಳಿಗೆ ವೀಡಿಯೊ ಕಾನ್ಫರೆನ್ಸಿಂಗ್ ("ವಿಸಿ") ಅಥವಾ ಇತರೆ ಆಡಿಯೋ ವಿಷುಯಲ್ ಮೀನ್ಸ್ ("ಒಎವಿಎಮ್") 31 ಡಿಸೆಂಬರ್, 2022 ರವರೆಗೆ, ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿಯಿಲ್ಲದೆ. ಕಂಪನಿಗಳ [illegible]

ಬೆಂಗಳೂರು
ನವೆಂಬರ್ 30, 2022

‘ಹರ್ ಏಕ್ ಕಾಮ್ ದೇಶ್ ಕೆ ನಾಮ್’

ಕರ್ನಾಟಕ ಸರ್ಕಾರ
**ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ**
6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, ಜಯನಗರ 4ನೇ ಬ್ಲಾಕ್, ಬೆಂಗಳೂರು–560011.
ದೂರವಾಣಿ : 080–2663 2792/2654 2307, ಫ್ಯಾಕ್ಸ್: 080–2654 2308,
ಇ–ಮೇಲ್: md.kswdc@gmail.com

ಸಂಖ್ಯೆ: ಮಅನಿ: ಸಿಬ್ಬಂದಿ: ಬಾಮೂ: ಟೆ: 2022–23/211 ದಿನಾಂಕ: 28.11.2022

**ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, ಜಯನಗರ 4ನೇ ಬ್ಲಾಕ್, ಬೆಂಗಳೂರು–560011, ಕಛೇರಿ ಕಾರ್ಯಕ್ಕಾಗಿ ಹೊರ ಸಂಪನ್ಮೂಲ ಏಜೆನ್ಸಿಯಿಂದ 2022–23ನೇ ಸಾಲಿಗೆ ಅಗತ್ಯವಿರುವ ಸಿಬ್ಬಂದಿಗಳನ್ನು ಬಾಹ್ಯಮೂಲದಿಂದ ಪಡೆಯಲು ಇ-ಟೆಂಡರ್ ಮೂಲಕ ನಿಯಮಾನುಸಾರ ಟೆಂಡರನ್ನು ಆಹ್ವಾನಿಸಿದ್ದು, ಆಸಕ್ತಿವುಳ್ಳ ಏಜೆನ್ಸಿಯವರು **ದಿನಾಂಕ: 18.11.2022 ರಿಂದ 17.12.2022 ಸಂಜೆ 5.30 ಗಂಟೆಯೊಳಗೆ www.eproc.karnataka.gov.in** ಮೂಲಕ ಇ-ಟೆಂಡರ್ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, ಜಯನಗರ 4ನೇ ಬ್ಲಾಕ್, ಬೆಂಗಳೂರು–560011, **ದೂರವಾಣಿ: 080–26632792, 26542307** ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು,
ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು.
ವಾಸಾಸಂಇ/ವಾ.ಪ್ರ./ಶಿರಡಿ ಸಾಯಿ/3301/2022–23

**ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ**
ಹನುಮಂತನಗರ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕ್ ಫೋನ್: 7202174

ಕ್ರ.ಸಂ./ಮಂ.ಗ್ರಾ.ಪಂ. ಪಂ.ಅ.ಅ/ಪ್ರಕಟಣೆ/03/22–23 ದಿನಾಂಕ: 28.11.2022

ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿಯ ವರ್ಗ–1ರ ಅನುದಾನದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಸಿ.ಸಿ.ಟಿ.ವಿ ಮತ್ತು ಹೈಮಾಸ್ಕ್ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸಲು ದರಪಟ್ಟಿ ಪ್ರಕಟಣೆ

–: ದರಪಟ್ಟಿ ಪ್ರಕಟಣೆ :–

ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಛೇರಿ, ಬಿಡದಿ ಹೋಬಳಿ, ಮೈಸೂರು–ಬೆಂಗಳೂರು ಮುಖ್ಯರಸ್ತೆ, ರಾಮನಗರ ತಾಲ್ಲೂಕು, ರಾಮನಗರ.

| ಕ್ರ. ಸಂ. | ಸರಕು/ಸಾಮಾನು/ಸಾಧನ ಸಾಮಾಗ್ರಿಗಳ ಸಂಕ್ಷಿಪ್ತ ಹೆಸರು | A/U |
|---|---|---|
| 1. | ಸಿ.ಸಿ.ಟಿ.ವಿ | 4 MP wifi ptz cctv camera with smart tracking and motion detection etc, and 4g wifi router, with 125gb SD card |
| 2. | 9 ಮೀಟರ್ ಹೈಮಾಸ್ಕ್ ಮತ್ತು 16 ಮೀಟರ್ ಹೈಮಾಸ್ಕ್ ಬೀದಿ ದೀಪಗಳು | 9 Meter hexagonal pole with base nut and bolt and complete electrical wiring is underground 150 watt flood with Philips drivers 140 lumens/watt<br>160 Meter cotogonal pole with base nut and bolt and complete electrical wiring is underground. 200 watt flood light with Philips drivers 140 lumens/watt. |

ಮೇಲ್ಕಂಡ Specification ನ ಸಾಮಾಗ್ರಿಗಳನ್ನು ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರುವ ಅನುದಾನಗಳ ಅನುಸಾರ ಖರೀದಿ ಪ್ರಕ್ರಿಯೆ ಮಾಡಲಾಗುವುದು. ಮೇಲ್ಕಂಡ ಪಟ್ಟಿಯಲ್ಲಿರುವ 1 ಐಟಂವಾರು ಪ್ರತ್ಯೇಕವಾಗಿ ದರಪಟ್ಟಿಯನ್ನು ಸಲ್ಲಿಸುವುದು. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಸಿ.ಸಿ.ಟಿ.ವಿ ಮತ್ತು ಹೈಮಾಸ್ಕ್ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸಲು, ಒದಗಿಸಲು ಒಪ್ಪುವವರು ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿಯನ್ನು ಸಲ್ಲಿಸಲು ಸೂಚಿಸಿದೆ. ಆಸಕ್ತ ಸರಬರಾಜುದಾರರು ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಛೇರಿಗೆ ದರಪಟ್ಟಿ ಸಲ್ಲಿಸಲು ಕೋರಿದೆ. ದರಪಟ್ಟಿ ಸಲ್ಲಿಸಲು ಪ್ರಾರಂಭದ ದಿನಾಂಕ: 28.11.2022 ಅಂತಿಮ ದಿನಾಂಕ: 03.12.2022 ಮಧ್ಯಾಹ್ನ 3 ಗಂಟೆವರೆಗೆ. ಹೆಚ್ಚಿನ ವಿವರಗಳಿಗೆ ಕಛೇರಿ ಸಮಯದಲ್ಲಿ ಈ ಕೆಳಕಂಡ ಸಹಿದಾರರನ್ನು ಸಂಪರ್ಕಿಸುವುದು ದೂರವಾಣಿ ಸಂಖ್ಯೆ 9844688648.

ಸಹಿ/– ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ
ಹನುಮಂತನಗರ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕ್

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**BUSINESS**

**Business Offers**

**Finance**

**NRI'S INVESTMENT** And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

**JOB OPPORTUNITIES**

**Wanted**

**WANTED FEMALE** Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

**OTHERS**

**Yoga & Meditation**

**KNOW** YOUR self The art of breathing Life changing workshop in Bangalore By shiv swaroday shastra AdIGURU Shiva's philosophy. Life time free consultation. Pls contact 7972962130. Class is available in English, Hindi (Kannada).

**REAL ESTATE SELLING**

**Commerical**

**Out-Station**

**COMMERCIAL PLOT FOR SALE IN BELGAUM**
Amidst Hotel Marriott and upcoming ITC welcome, 20 Gunta compounded plot in KIADB Kakati, Belgaum, off Pune - Bangalore highway.
Good for any commercial venture like hotel, convention centre, hospital management institute etc.
Interested buyer contact at: 8468827909
Mail id: dsc.goa@gmail.com

**Industrial & Factory**

**Tumkur Road**

**SALE 37** Gunta Commercial Converted Land Facing National Highway, North 176 Feet Road Frontage 9141326819

**RENTAL PROPERTIES**

**Accommodation Available**

**Commercial**

**FOR RENT** in Davanagere on Old P.B. Road near Srigandha Lodge, Basement- 3900, Ground- 800, 1st floor- 3900, 2nd floor: 3900, Rooftop: 3900/ sqft. Contact: 9448028103.

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

**PERSONAL**

**Change of Name**

**CHANGE OF NAME**
I, **LATHA PRASANNA** Residing at No. 107, 18th Main, KHB Layout, Bandemutt, Kengeri Upanagar, Bengaluru-560060 declare that **LATHA PRASANNA, LOKAMMA. B, LOKAMBA. B** is one and the same person only vide affidavit dated 04.06.2022 before Notary Anitha Bai Bengaluru. Henceforth I shall be called **LATHA PRASANNA** only

**I, LAKSHMI** GANGAIAH R/o. #57 1st floor, C Cross pipeline road, Vinayakpur, Yeshwanthpur, Bengaluru- 560 022. Have changed. Changed My name to LAKSHMI. K. vide affidavit dated 30/11/2022 before notary A MANJULA, Bangalore.

**I, EERANNA** K.T., S/o. Tippeswamy, aged 39 years, Residing at Mallurahalli Village, Challakere Taluk, Chitradurga District- 577536 have changed my Name from Veeranna to EERANNA K.T. vide Affidavit dated 30-11-2022 sworn before the Notary S.P. Ravikumar, Bengaluru-40

**I,JOYES NIRMAL** NITHYA RAJ, changed-my name-to JOYES PHILIP dated: 24.11.2022 Sworn before-notary H.S.Sakalesh Aradhya, Bengaluru.

**I, N.** Gopala @ N Gopal S/o Late Narayanappa, aged about 54 years, residing at Near Indoor Stadium, Shanthi Nagara, Devanahalli Town & Taluk Bangalore Rural District. Declare that the both name belongs to me only vide affidavit dated 22.11.2022 before Notary V.M Byra reddy Sidlaghatta. Henceforth I shall be called as N Gopal only

**JC681971A, SUB/ASH,** SRI SURESH BASUMATARI, Vill- Salpara Bongaon, Pub Salpara, Lawkhowa, Nagaon, Assam changed daughter's name AAYUSHI BASUMATARY to AAYUSHI BASUMATARI, 30/11/2022, Notary K.V. Mani, Bangalore

**I, G.R.** Muktha D/o. Late. G.S. Ramaiah R/at. #29, Rayara Mane, Sai Baba Temple road, Srinivasapura, Kogilu main, Yelahanka, Bangalore- 560064 have changed my son's Name from RAGHAVENDRA. M to RAGHAVENDRA vide affidavit dated 10/11/2022 before notary H.K. Gopalagowda., Bengaluru

**Lost**

**DOCUMENT LOST**
I, Rabindra Dash Residing at # 776/3 Air Force Quarters, Power House line, Air Force Station Road, Jalahalli West. Have lost **GPA original copy dated on 04.12.2014 of book 4 vide document no HBB-4-00329/2014-15 Site No.72 Khatha No.68/72 situated at Addiganahalli Village, Hesaraghatta Hobli, Bengaluru North. Finders Please Contact : 8792692094**

**PUBLIC NOTICE**

**IN THE COURT OF THE LEARNED III ASSISTANT CITY CIVIL JUDGE, CHENNAI**
**O.S.No. 2599 of 2019**
**M/s. Prasad Corporation Pvt. Limited,** No. 28, (Old No.27) Arunachalam Road, Saligramam, Chennai - 600093 represented herein by its Authorised Signatory **...Plaintiff**
**Vs.**
**Mr. Shekar Babu,** Sole Proprietor, carrying on business under the name and style of **M/s. Vivek Combines,** No. 67, 1st Floor, West of Chord Road, Mahalakshmipuram 2nd Stage, Bengaluru - 560086.
**And also at** No. 48, West of Chord Road, Mahalakshmipuram 2nd Stage, Bengaluru - 560086.
**...Defendant**

Please take notice that our Client, M/s. Prasad Corporations Private Limited, has filed the aforementioned suit O.S.No. 2599 of 2019, against the aforementioned Defendant to recover a sum of Rs. 8,67,092/- (Rupees Eight Lakhs Sixty Seven thousand and Ninety Two only) together with interest at the rate of 18% per annum on Rs. 5,63,227 /- (Rupees Five Lakhs Sixty Three thousand two hundred twenty seven only) from the date of the Plaint till the date of payment of the entire suit claim. The said Suit stands posted before the Learned IIIrd Assistant City Civil Judge, Chennai at 10.30 A.M on 09.12.2022. Kindly be present before the Said Court either in person or through your Counsel on the said date, failing which the said Suit is likely to be heard and decided in your absence.

**Dated at Chennai on this the 1st day of December, 2022**

**S.R. Raghuvir, R.Sahana & Sharanya Vaidhiyanathan**
**COUNSELS FOR THE PLAINTIFF**
5th Floor, Haji Madhar Sha & Sons Building, No.148, Second line beach, Chennai – 600001, India.

DH DECCAN HERALD ಪ್ರಜಾವಾಣಿ
**REAL ESTATE**
BOOK YOUR PROPERTY AD IN DECCAN HERALD ALL KARNATAKA + PRAJAVANI BENGALURU
ON FRIDAY + SATURDAY + SUNDAY
@ 1070/-* Per Sqcm Single Column
conditions apply*
**For More Details Contact:**
9845114560 | 9731810277
9901641752 | 9886213331
080- 45557163 | 45557164

‘ಆರ್– ಎಪಿಡಿಆರ್‌ಪಿ’ ವೆಬ್ ಅಪ್ಲಿಕೇಷನ್‌ನಿಂದ ಹಲವು ಕಾರ್ಯಗಳು ವಿಳಂಬ: ಕ್ರಮಕ್ಕೆ ಹಿಂದೇಟು

# ಎಸ್ಕಾಂ ಪೋರ್ಟಲ್ ಸಮಸ್ಯೆ: ಗ್ರಾಹಕರ ಪರದಾಟ

• ಸಚ್ಚಿದಾನಂದ ಕುರಗುಂದ

**ಬೆಂಗಳೂರು:** ಹೊಸ ವಿದ್ಯುತ್ ಸಂಪರ್ಕಕ್ಕೆ ನೋಂದಣಿ, ಖಾತೆ ಹೆಸರು ಬದಲಾವಣೆ, ಕಡತಗಳ ನಿರ್ವಹಣೆ ಇತ್ಯಾದಿ ಕಾರ್ಯಗಳಿಗೆ ರೂಪಿಸಿದ್ದ ‘ಆರ್–ಎಪಿಡಿಆರ್‌ಪಿ’ ವೆಬ್ ಅಪ್ಲಿಕೇಷನ್ ಸಮಸ್ಯೆಯಿಂದಾಗಿ ಗ್ರಾಹಕರು ಪರದಾಡುವಂತಾಗಿದೆ.

ಗ್ರಾಹಕರಿಗೆ ಸಕಾಲದಲ್ಲಿ ಸೇವೆಗಳು ಲಭ್ಯವಾಗುತ್ತಿಲ್ಲ. ಒಂದೆರಡು ಗಂಟೆಗಳಲ್ಲಿ ನಡೆಯುತ್ತಿದ್ದ ಕಾರ್ಯ ಈಗ ಹತ್ತಾರು ದಿನಗಳಷ್ಟು ಸಮಯಾವಕಾಶವನ್ನು ತೆಗೆದುಕೊಳ್ಳುತ್ತಿದೆ. ಹಲವು ಬಾರಿ ಸರ್ವರ್ ಗಂಟೆಗಟ್ಟಲೆ ಕೈಕೊಡುತ್ತಿದೆ ಎಂದು ಗ್ರಾಹಕರು ದೂರಿದ್ದಾರೆ.

ರಾಜ್ಯದ ಎಲ್ಲ ಎಸ್ಕಾಂಗಳು ‘ಆರ್–ಎಪಿಡಿಆರ್‌ಪಿ’ (ಪುನರ್ ರಚಿಸಿದ ವೇಗವರ್ಧಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮ) ಅಳವಡಿಸಿಕೊಂಡಿವೆ.

’ಈ ವೆಬ್ ಅಪ್ಲಿಕೇಷನ್ ನಿಧಾನಗತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಅದು ಏರಿಳಿತವಿಲ್ಲದೆ ಕೆಲಸ ಮಾಡದ ಕಾರಣ ಎಸ್ಕಾಂ ಗ್ರಾಹಕರಿಗೆ ತೊಂದರೆಯಾಗುತ್ತಿದೆ’ ಎಂದು ಬೆಸ್ಕಾಂ ಪ್ರಧಾನ ವ್ಯವಸ್ಥಾಪಕರು ಎಲ್ಲ ಎಸ್ಕಾಂಗಳಿಗೂ ಆಗಸ್ಟ್‌ನಲ್ಲೇ ಪತ್ರ ಬರೆದಿದ್ದರು.

’ನಿರಂತರವಾಗಿ ನಿಗಾವಹಿಸಿ ಸಮಸ್ಯೆ ಇತ್ಯರ್ಥಪಡಿಸಲು ಹಲವು ಕ್ರಮಗಳನ್ನು ಕೈಗೊಂಡಿದ್ದರೂ ಶಾಶ್ವತವಾದ ಪರಿಹಾರ ದೊರೆತಿಲ್ಲ. ಇದರಿಂದ, ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಣೆಗೆ ಅಡ್ಡಿಯಾಗುತ್ತಿದೆ’ ಎಂದು ಅವರು ವಿವರಿಸಿದ್ದರು.

ಹೀಗಾಗಿ, ಯಾವುದೇ ಅಡಚಣೆಗಳಿಲ್ಲದೆಯೇ ಗ್ರಾಹಕರಿಗೆ ಸುಗಮವಾಗಿ ಸೇವೆ ಒದಗಿಸುವ ನಿಟ್ಟಿನಲ್ಲಿ ಬೆಸ್ಕಾಂ ಮತ್ತು ಇತರ ಎಸ್ಕಾಂಗಳಿಗೆ ಈ ಪೋರ್ಟಲ್ ಬಳಕೆಗೆ ವಿವಿಧ ಸಮಯವನ್ನು ಪ್ರಧಾನ ವ್ಯವಸ್ಥಾಪಕರೇ ನಿಗದಿಪಡಿಸಿದ್ದರು.

ಬೆಸ್ಕಾಂ ವ್ಯಾಪ್ತಿಯಲ್ಲಿ ಬೆಳಿಗ್ಗೆ 8ರಿಂದ ಮಧ್ಯಾಹ್ನ 1.30ರವರೆಗೆ ಹಾಗೂ ಸೆಸ್ಕಾಂ, ಗೆಸ್ಕಾಂ, ಹೆಸ್ಕಾಂ ಮತ್ತು ಮೆಸ್ಕಾಂಗಳಿಗೆ ಮಧ್ಯಾಹ್ನ 1.30ರಿಂದ ಸಂಜೆ 7ರವರೆಗೆ ಸಮಯ ನಿಗದಿಪಡಿಸಲಾಗಿತ್ತು.

ನಾಲ್ಕು ತಿಂಗಳಿಂದ ಆರಂಭವಾಗಿರುವ ಈ ಸಮಸ್ಯೆ ಇದುವರೆಗೂ ಬಗೆಹರಿದಿಲ್ಲ. ಕೆಲವೆಡೆ ಬಿಲ್ ಪಾವತಿಸಲು ಸಹ ಸಾಧ್ಯವಾಗುತ್ತಿಲ್ಲ.

‘ಇನ್‌ಫ್ಲೆಕ್ಟ್ ಕಂಪ್ಯೂಟರ್ ಸೊಲ್ಯೂಷನ್ಸ್’ ಕಂಪನಿ ಈ ಪೋರ್ಟಲ್ ನಿರ್ವಹಿಸುತ್ತಿದೆ. ಈ ಪೋರ್ಟಲ್ ಮೂಲಕ ನೀಡುತ್ತಿರುವ ಬಹುತೇಕ ಸೇವೆಗಳು ಸಕಾಲ ವ್ಯಾಪ್ತಿಯಲ್ಲಿವೆ. ಆದರೆ, ಸರ್ವರ್ ಸಮಸ್ಯೆಯಿಂದ ಸಕಾಲ ಕಾಯ್ದೆ ನಿಗದಿಪಡಿಸಿರುವ ಅವಧಿಯೊಳಗೆ ಸೇವೆ ನೀಡಲಾಗುತ್ತಿಲ್ಲ. ‘ಇದರಿಂದ, ಗ್ರಾಹಕರಿಗೆ ನಷ್ಟವಾಗುತ್ತಿದೆ. ಶುಲ್ಕ ಪಾವತಿಸಲು ವಿಳಂಬ ಮಾಡಿದರೆ ಗ್ರಾಹಕರಿಗೆ ದಂಡ ವಿಧಿಸಲು ಮುಂದಾಗುವ ಎಸ್ಕಾಂಗಳು ಸೇವೆ ನೀಡುವಲ್ಲಿ ವಿಫಲವಾದಾಗ ನಷ್ಟ ತುಂಬಿ ಕೊಡುತ್ತಿಲ್ಲ ಎಂದು ಗ್ರಾಹಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ಮುಖ್ಯ ಕಾರ್ಯದರ್ಶಿಗೆ ದೂರು ಸಲ್ಲಿಕೆ

ಪ್ರಜಾವಾಣಿ ವಿಶೇಷ

‘ಆರ್–ಎಪಿಡಿಆರ್‌ಪಿ’ ಗುತ್ತಿಗೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಆರೋಪಿಸಿದೆ. ಈ ಬಗ್ಗೆ ಮುಖ್ಯ ಕಾರ್ಯದರ್ಶಿ ಅವರಿಗೆ ಪಕ್ಷವು ದೂರು ಸಲ್ಲಿಸಿದೆ.

ಕಾರ್ಯಕ್ಷಮತೆ ಇಲ್ಲದ ಕಂಪನಿಯನ್ನು ಆಯ್ಕೆ ಮಾಡಿದ್ದರಿಂದ ಈ ಸಾಫ್ಟ್‌ವೇರ್ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಗುತ್ತಿಗೆ ನೀಡುವಲ್ಲಿ ಯಾವ ರೀತಿಯ ಭ್ರಷ್ಟಾಚಾರ ನಡೆದಿದೆ ಎನ್ನುವ ಬಗ್ಗೆ ತನಿಖೆ ನಡೆಸಲು ಲೋಕಾಯುಕ್ತಕ್ಕೆ ವಹಿಸಬೇಕು ಎಂದು ಕೆಆರ್‌ಎಸ್ ಪಕ್ಷದ ರಾಜ್ಯ ಜಂಟಿ ಕಾರ್ಯದರ್ಶಿ ರಘುಪತಿ ಭಟ್ ಒತ್ತಾಯಿಸಿದ್ದಾರೆ.

ಗ್ರಾಹಕರಿಗೆ ತೊಂದರೆಯಾಗುತ್ತಿದ್ದರೂ ಗುತ್ತಿಗೆ ಪಡೆದಿರುವ ಕಂಪನಿ ವಿರುದ್ಧ ಯಾವುದೇ ಕ್ರಮಕೈಗೊಂಡಿಲ್ಲ. ಅಧಿಕಾರಿಗಳು ಎಸಗಿರುವ ತಪ್ಪನ್ನು ಹಾಗೂ ಗುತ್ತಿಗೆ ಪಡೆದಿರುವ ಕಂಪನಿಯನ್ನು ರಕ್ಷಿಸುವ ಕಾರ್ಯ ನಡೆಯುತ್ತಿದೆ. ಈ ರೀತಿಯ ಕಳಪೆ ಸೇವೆಗೆ ಎಷ್ಟು ದಂಡ ವಿಧಿಸಲಾಗಿದೆ ಎನ್ನುವ ಮಾಹಿತಿಯನ್ನು ಸರ್ಕಾರ ಬಹಿರಂಗಪಡಿಸಬೇಕು ಮತ್ತು ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಆಗ್ರಹಿಸಿದ್ದಾರೆ.

### ಆಗಸ್ಟ್‌ನಿಂದ ಸಮಸ್ಯೆ ಬಗೆಹರಿದಿಲ್ಲ

ಆಗಸ್ಟ್ 3ರಿಂದಲೇ ಈ ಸಮಸ್ಯೆಯಾಗುತ್ತಿದೆ. ಬೆಸ್ಕಾಂ ವ್ಯಾಪ್ತಿಯಲ್ಲಿ ಬೆಳಿಗ್ಗೆ 8ರಿಂದ ಮಧ್ಯಾಹ್ನ 1.30ರವರೆಗೆ ಸಮಯ ನಿಗದಿಪಡಿಸಲಾಗಿದೆ. ಆದರೆ, ನೌಕರರು ಕಚೇರಿಗೆ ಬರುವುದೇ 10ಗಂಟೆ ನಂತರ. ಇದರಿಂದ, ತಾತ್ಕಾಲಿಕ ಬೆಳಕು, ವಿದ್ಯುತ್ ಸಂಪರ್ಕ ಪಡೆಯಲು ಮತ್ತು ಹೊಸ ಸಂಪರ್ಕ ಪಡೆಯುವವರಿಗೆ ತೊಂದರೆಯಾಗುತ್ತಿದೆ. 2-3 ದಿನಗಳಲ್ಲಾಗುವ ಕೆಲಸಕ್ಕೆ 15 ದಿನಗಳಷ್ಟು ತೆಗೆದುಕೊಳ್ಳಲಾಗುತ್ತಿದೆ. ಅಧಿಕಾರಿಗಳ ಗಮನಕ್ಕೆ ಈ ಸಮಸ್ಯೆ ತಂದಿದ್ದರೂ ಬಗೆಹರಿದಿಲ್ಲ.

– **ಆರ್. ಮಂಜುನಾಥ್,** ವಿದ್ಯುತ್ ಗುತ್ತಿಗೆದಾರ

# ಉದ್ಯಾನಗಳು ಜನಸ್ನೇಹಿಯಾಗಿರಲಿ: ಸಚಿವ ಗೋಪಾಲಯ್ಯ



**ಬೆಂಗಳೂರು:** ‘ನಗರದಲ್ಲಿ ಉತ್ತಮ ಗುಣಮಟ್ಟದ ಮತ್ತು ಜನಸ್ನೇಹಿ ಉದ್ಯಾನಗಳ ಅಗತ್ಯವಿದೆ. ಅಂತಹ ಹಲವು ಉದ್ಯಾನಗಳನ್ನು ನನ್ನ ವಿಧಾನಸಭಾ ಕ್ಷೇತ್ರದಲ್ಲಿ (ಮಹಾಲಕ್ಷ್ಮಿ) ಅಭಿವೃದ್ಧಿಪಡಿಸಿದ್ದೇನೆ’ ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ಹೇಳಿದರು.

‘ಲಾಲ್‌ಬಾಗ್‌ನಲ್ಲೂ ಇಂತಹ ಜನಸ್ನೇಹಿ ಕ್ರಮಗಳನ್ನು ಅಳವಡಿಸಿಕೊಳ್ಳಬಹುದು. ನಮ್ಮ ಕ್ಷೇತ್ರದ ಉದ್ಯಾನಗಳಲ್ಲಿ ವಿಶೇಷವಾದ ವಾಕ್ ಮಾಡುವವರಿಗೆ ಅದ್ಭುತ ನೆಲಹಾಸಿದೆ. ಶಟಲ್ ಕಾರ್ಕ್ ಆಡುವವರಿಗೆ ಕೋರ್ಟ್ ಮಾಡಲಾಗಿದೆ. ಮಕ್ಕಳಿಗೆ ಆಟದ ವಿಭಾಗವೂ ಇದೆ. ಸಾರ್ವಜನಿಕರು ಇದರ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ. ನಂದಿನಿ ಬಡಾವಣೆಯಲ್ಲಿರುವ ಸಕ್ಯುಲರ್ ಪಾರ್ಕ್ ವಿಶಿಷ್ಟವಾದುದು’ ಎಂದು ತಿಳಿಸಿದರು.

‘ಬಹಳಷ್ಟು ಜನ ಬೆಳಿಗ್ಗೆ ಮತ್ತು ಸಂಜೆ ವೇಳೆ ಉದ್ಯಾನಗಳಲ್ಲಿ ಹೆಚ್ಚು ಸಮಯ ಕಳೆಯಲು ಬಯಸುತ್ತಾರೆ. ವಿಶ್ರಾಂತಿಗೆ ಉತ್ತಮ ತಾಣವಾಗಿರುವುದರಿಂದ ಅಲ್ಲಿ ಹೆಚ್ಚು ಹೊತ್ತು ಇರಲು ಬಯಸುತ್ತಾರೆ. ನಗರದ ಎಲ್ಲ ಕಡೆಗಳಲ್ಲಿ ಇಂತಹ ಉದ್ಯಾನಗಳನ್ನು ಸ್ಥಾಪಿಸಬೇಕು. ಇದರಿಂದ ಉತ್ತಮ ಹವೆ ಮತ್ತು ಪರಿಸರ ಸೃಷ್ಟಿಯಾಗುತ್ತದೆ. ಜನರ ಆರೋಗ್ಯಕ್ಕೂ ಪೂರಕ’ ಎಂದು ಗೋಪಾಲಯ್ಯ ಹೇಳಿದರು.

**ಪ್ರಜಾವಾಣಿ 75**

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು ‘ಪ್ರಜಾವಾಣಿ’ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

**9606038256**

## ಸಂಕ್ಷಿಪ್ತ ಸುದ್ದಿ

### ಬೆಂಗಳೂರು ವಿ.ವಿ ಡಿ.6ರಿಂದ ಪ್ರವೇಶ ಪ್ರಕ್ರಿಯೆ

**ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದ ಸ್ನಾತಕೋತ್ತರ ಪದವಿ ಕೋರ್ಸ್ ಅಭ್ಯರ್ಥಿಗಳ ಪ್ರವೇಶಾತಿ ಪ್ರಕ್ರಿಯೆ ಡಿ.6ರಿಂದ ನಡೆಯಲಿದೆ.

ಸಮಾಜಕಾರ್ಯ ವಿಭಾಗದ ಅಭ್ಯರ್ಥಿಗಳಿಗೆ ಡಿ.6ರಂದು ಪ್ರವೇಶ ಪರೀಕ್ಷೆ ನಡೆಯಲಿದೆ. ಡಿ.8ರಂದು ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸಲಾಗುವುದು ಹಾಗೂ ಡಿ.10ರಂದು ಆಫ್‌ಲೈನ್ ಮೂಲಕ ವಿಭಾಗದ ಪ್ರವೇಶ ಪ್ರಕ್ರಿಯೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

### 3ಕ್ಕೆ ಶಿಕ್ಷಣ ಮೇಳ

**ಬೆಂಗಳೂರು:** ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆಯಲು ಇಚ್ಛಿಸುವವರಿಗಾಗಿ ದಕ್ಷಿಣ ಏಷ್ಯಾದ ಅತಿದೊಡ್ಡ ಶಿಕ್ಷಣ ಸೇವಾ ಸಂಸ್ಥೆ ಲೀಪ್ ಸ್ಕಾಲರ್, ನಗರದ ಎಂ.ಜಿ. ರಸ್ತೆಯ ತಾಜ್ ಹೋಟೆಲ್‌ನಲ್ಲಿ ಡಿ.3ರಂದು ವಿದೇಶಿ ಶಿಕ್ಷಣ ಮೇಳವನ್ನು ಆಯೋಜಿಸುತ್ತಿದೆ.

ಅಮೆರಿಕ, ಕೆನಡಾ, ಬ್ರಿಟನ್, ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್‌ನ ಸುಮಾರು ನೂರಕ್ಕೂ ಹೆಚ್ಚು ಹೆಸರಾಂತ ವಿಶ್ವವಿದ್ಯಾನಿಲಯಗಳು ಶಿಕ್ಷಣ ಮೇಳದಲ್ಲಿ ಭಾಗವಹಿಸಲಿವೆ. 2500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಪೋಷಕರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಪ್ರಕಟಣೆ ತಿಳಿಸಿದೆ.

### ಕೆಆರ್‌ಎಸ್ ಪ್ರವಾಸಿಗರಿಗೆ ಮುಕ್ತ

**ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ):** ಕೆಆರ್‌ಎಸ್ ಬೃಂದಾವನದಲ್ಲಿ ಚಿರತೆ ಕಾಣಿಸಿಕೊಂಡ ಕಾರಣ 26 ದಿನಗಳಿಂದ ಉದ್ಯಾನ ಪ್ರವೇಶಕ್ಕೆ ಪ್ರವಾಸಿಗರಿಗೆ ವಿಧಿಸಲಾಗಿದ್ದ ನಿರ್ಬಂಧವನ್ನು ಬುಧವಾರ ತೆರವುಗೊಳಿಸಲಾಗಿದೆ.

ಬೃಂದಾವನದಲ್ಲಿ ಚಿರತೆ ಇಲ್ಲ ಎಂಬ ಅಂಶ ಸ್ಪಷ್ಟವಾದ ನಂತರ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಪ್ರವಾಸಿಗರಿಗೆ ಪ್ರವೇಶ ನೀಡುವ ನಿರ್ಣಯ ಕೈಗೊಂಡಿದ್ದಾರೆ.

ಅ. 21ರಿಂದ ನಾಲ್ಕು ಬಾರಿ ಚಿರತೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ನ. 6ರಿಂದ ಬೃಂದಾವನಕ್ಕೆ ಪ್ರವಾಸಿಗರ ಪ್ರವೇಶವನ್ನು ನಿಷೇಧಿಸಲಾಗಿತ್ತು.

## ನಿಧನ ವಾರ್ತೆ

### ಅಂಥೋಣಿ ಕುಮಾರ್

**ಬೆಂಗಳೂರು:** ಕೆಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಮಾಜಿ ಉಪಾಧ್ಯಕ್ಷರೂ ಆಗಿದ್ದ ಕನ್ನಡ ಹೋರಾಟಗಾರ ಅಂಥೋಣಿ ಕುಮಾರ್ (66) ಅವರು ಮಂಗಳವಾರ ರಾತ್ರಿ ನಿಧನರಾದರು.

ಮೃತರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಇವರು ಚಾಮರಾಜಪೇಟೆಯಲ್ಲಿ ನೆಲೆಸಿದ್ದರು. ‘ಕನ್ನಡ ಕ್ರೈಸ್ತರ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು’ ಎಂದು ಅಂಥೋಣಿ ಕುಮಾರ್ ಅವರ ಆಪ್ತರು ನೆನಪಿಸಿಕೊಂಡರು.

ಬುಧವಾರ ಮಧ್ಯಾಹ್ನ 2.30 ರವರೆಗೆ ಸೇಂಟ್ ಜೋಸೆಫ್ ದೇವಾಲಯದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮೈಸೂರು ರಸ್ತೆಯ ಕ್ರೈಸ್ತರ ರುದ್ರಭೂಮಿಯಲ್ಲಿ ಅಂತಿಮ ಸಂಸ್ಕಾರ ಮಾಡಲಾಯಿತು ಎಂದು ಮೂಲಗಳು ತಿಳಿಸಿವೆ.

# ವೈಟ್‌ಫೀಲ್ಡ್‌ಗೆ ಮೆಟ್ರೊ: 1 ತಿಂಗಳು ವಿಳಂಬ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ ನಡುವೆ ಮೆಟ್ರೊ ರೈಲು ಸಂಚಾರಕ್ಕೆ ಇನ್ನೂ ನಾಲ್ಕು ತಿಂಗಳು ಕಾಯಬೇಕಿದ್ದು, ಮಾರ್ಚ್ ಎರಡನೇ ವಾರದಲ್ಲಿ ರೈಲುಗಳ ಸಂಚಾರ ಆರಂಭವಾಗುವ ಸಾಧ್ಯತೆ ಇದೆ.

ಜನವರಿ ಅಥವಾ ಫೆಬ್ರುವರಿಯಲ್ಲಿ ಸಂಚಾರ ಆರಂಭಿಸಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದರು. ಅ.21ರಿಂದಲೇ ಪರೀಕ್ಷಾರ್ಥ ಸಂಚಾರ ಕೂಡ ಆರಂಭವಾಗಿದೆ. ನಿಲ್ದಾಣಗಳ ನಿರ್ಮಾಣ ಕಾಮಗಾರಿಯೂ ನಡೆಯುತ್ತಿದ್ದು, ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳ್ಳುವ ಸಾಧ್ಯತೆ ಇತ್ತು. ಆದರೆ, ಮಳೆ ತೊಡಕಾಗಿದೆ. ಆದ್ದರಿಂದ ಮೆಟ್ರೊ ರೈಲು ಸಂಚಾರವೂ ಒಂದು ತಿಂಗಳು ವಿಳಂಬವಾಗಲಿದೆ.

‘ವೈಟ್‌ಫೀಲ್ಡ್ ಮಾರ್ಗದಲ್ಲಿ ಮಾರ್ಚ್ ಎರಡನೇ ವಾರದಲ್ಲಿ ಮೆಟ್ರೊ ರೈಲುಗಳ ಸಂಚಾರ ಆರಂಭಿಸಲು ಸಿದ್ಧತೆ ನಡೆಸುತ್ತಿದ್ದೇವೆ. ಮಳೆ ಇದ್ದಿದ್ದರಿಂದ ಕಾಮಗಾರಿ ಕೊಂಚ ವಿಳಂಬವಾಗಿದೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ‘ಪ್ರಜಾವಾಣಿ’ಗೆ ತಿಳಿಸಿದರು.

ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ತನಕ 15.50 ಕಿ.ಮೀ. ಉದ್ದದ ಮಾರ್ಗದಲ್ಲಿ 13 ನಿಲ್ದಾಣಗಳು ನಿರ್ಮಾಣವಾಗುತ್ತಿವೆ. ವೈಟ್‌ಫೀಲ್ಡ್ ತನಕ ರೈಲುಗಳ ಸಂಚಾರ ಆರಂಭವಾದರೆ ಐ.ಟಿ ಕಾರಿಡಾರ್‌ಗೆ ನಗರದ ವಿವಿಧೆಡೆಯಿಂದ ಸಂಪರ್ಕ ಕಲ್ಪಿಸಿದಂತೆ ಆಗಲಿದೆ ಎಂಬುದು ಬಿಎಂಆರ್‌ಸಿಎಲ್ ಅಧಿಕಾರಿಗಳ ಲೆಕ್ಕಾಚಾರ.

### ವಿಮಾನ ನಿಲ್ದಾಣ ಮಾರ್ಗ: ಮತ್ತೊಂದು ನಿಲ್ದಾಣ

ವಿಮಾನ ನಿಲ್ದಾಣ ಮಾರ್ಗದಲ್ಲಿ ಮತ್ತೊಂದು ಹೆಚ್ಚುವರಿ ನಿಲ್ದಾಣಕ್ಕೆ ಬಿಎಂಆರ್‌ಸಿಎಲ್ ರಾಜ್ಯ ಸರ್ಕಾರದಿಂದ ಅನುಮೋದನೆ ಕೋರಿದೆ.

ಈ ಮಾರ್ಗದಲ್ಲಿ ಕೆ.ಆರ್.ಪುರದಿಂದ ವಿಮಾನ ನಿಲ್ದಾಣ ತನಕ 17 ನಿಲ್ದಾಣಗಳನ್ನು ಡಿಪಿಆರ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಚಿಕ್ಕಜಾಲ ಬಳಿ ಇನ್ನೊಂದು ನಿಲ್ದಾಣ ನಿರ್ಮಾಣಕ್ಕೆ ಯೋಜನೆ ಸಿದ್ಧಪಡಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮತಿ ದೊರೆತರೆ ಈ ಹೆಚ್ಚುವರಿ ನಿಲ್ದಾಣ ನಿರ್ಮಾಣವಾಗಲಿದೆ ಎಂದು ಅಂಜುಂ ಪರ್ವೇಜ್ ತಿಳಿಸಿದರು.

ನಗರೋತ್ಥಾನ ಯೋಜನೆಯ ಅನುದಾನದ ಅಡಿಯಲ್ಲಿ ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ. 22ರ ಸಿಐಎಲ್ ಲೇಔಟ್, ಸನ್‌ರೈಸ್ ಲೇಔಟ್, ಗೋಪಾಲಪ್ಪ ಲೇಔಟ್ ಮತ್ತು ವಾರ್ಡ್ ನಂ. 46ರ ದೇವೇಗೌಡ ಮುಖ್ಯರಸ್ತೆಯ ಚರಂಡಿ ಅಭಿವೃದ್ಧಿ, ಒಳಚರಂಡಿ ಪೈಪ್‌ಲೈನ್, ಕಾಂಕ್ರೀಟ್ ರಸ್ತೆ ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಬೈರತಿ ಸುರೇಶ್ ಭೂಮಿಪೂಜೆ ನೆರವೇರಿಸಿದರು.

# ಉಪಗ್ರಹದಿಂದ ಹೊಸ ಚಿತ್ರಗಳು

**ಬೆಂಗಳೂರು:** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಇದೇ 26 ರಂದು ಉಡಾವಣೆ ಮಾಡಿದ್ದ ಭೂವೀಕ್ಷಣಾ ಉಪಗ್ರಹ–06 ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ಉಪಗ್ರಹವು ಸೆರೆ ಹಿಡಿದಿರುವ ಚಿತ್ರಗಳನ್ನು ಭೂಮಿಗೆ ಕಳುಹಿಸುತ್ತಿದೆ ಎಂದು ಇಸ್ರೊ ಹೇಳಿದೆ.

ಭಾರತದ ಹಿಮಾಲಯ ಪ್ರದೇಶ, ಗುಜರಾತ್‌ನ ಕಛ್ ಪ್ರದೇಶ ಮತ್ತು ಅರಬ್ಬಿ ಸಮುದ್ರದ ಪ್ರದೇಶಗಳ ಚಿತ್ರಗಳನ್ನು ಉಪಗ್ರಹ ಸೆರೆ ಹಿಡಿದಿದ್ದು, ತೆಲಂಗಾಣದ ರಾಷ್ಟ್ರೀಯ ದೂರ ಸಂವೇದನೆ ಕೇಂದ್ರಕ್ಕೆ ಮೊದಲ ಚಿತ್ರಗಳು ಬಂದಿವೆ.

ಓಷನ್ ಕಲರ್ ಮಾನಿಟರ್ (ಓಸಿಎಂ) ಮತ್ತು ಸೀ ಸರ್ಫೇಸ್ ಟೆಂಪರೇಚರ್ ಮಾನಿಟರ್ (ಎಸ್‌ಎಸ್‌ಟಿಎಂ) ಸೆನ್ಸರ್ (ಆನ್ ಬೋರ್ಡ್ ಇಒಎಸ್–06) ಚಿತ್ರ ಸೆರೆ ಹಿಡಿದಿವೆ. ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರು ವರ್ಚುವಲ್ ಆಗಿ ಚಿತ್ರಗಳನ್ನು ಬಿಡುಗಡೆ ಮಾಡಿದರು.

# ಶಿಕ್ಷಕರ ನೇಮಕಾತಿ: ಅಂತಿಮ ಆದೇಶಕ್ಕೆ ಒಳಪಟ್ಟಿದೆ– ಹೈಕೋರ್ಟ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ 15 ಸಾವಿರ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಸಂಬಂಧ ಅಭ್ಯರ್ಥಿಗಳ ಜಾತಿ ಹಾಗೂ ಆದಾಯ ಪ್ರಮಾಣಪತ್ರ ಸಲ್ಲಿಕೆಯಲ್ಲಿ ಉಂಟಾಗಿರುವ ಗೊಂದಲದ ಪರಿಣಾಮ, 1:1 ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿಯು ಈ ಕುರಿತ ರಿಟ್ ಅರ್ಜಿ ಮೇಲಿನ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ ಎಂದು ಹೈಕೋರ್ಟ್ ತಿಳಿಸಿದೆ.

‘ನವೆಂಬರ್ 18ರಂದು ಪ್ರಕಟಿಸಿರುವ 1:1ರ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ರದ್ದುಗೊಳಿಸಬೇಕು‘ ಎಂದು ಕೋರಿ ಶಿಕಾರಿಪುರದ ಝೀಬಾ ತರನ್ನುಮ್ ಸೇರಿ 40ಕ್ಕೂ ಹೆಚ್ಚು ಜನರು ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣದ ಪ್ರತಿವಾದಿಗಳಾದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಡಿಸೆಂಬರ್ 9ಕ್ಕೆ ಮುಂದೂಡಿದೆ.

**ಆಕ್ಷೇಪವೇನು?:** ‘ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ನವೆಂಬರ್ 18ರಂದು ಪ್ರಕಟಿಸಲಾಗಿದ್ದ 1:1ರ ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಅರ್ಜಿದಾರರಿಗಿಂತ ಕಡಿಮೆ ಅಂಕ ಪಡೆದಿರುವವರ ಅಭ್ಯರ್ಥಿಗಳ ಹೆಸರುಗಳಿವೆ. ಈ ಬಗ್ಗೆ ಡಿಡಿಪಿಐಗಳನ್ನು ವಿಚಾರಿಸಿದಾಗ ಮದುವೆಯಾಗಿರುವ ಮಹಿಳಾ ಅಭ್ಯರ್ಥಿಗಳು ಪತಿಯ ಆದಾಯ/ಜಾತಿ ಪ್ರಮಾಣಪತ್ರದ ಬದಲಾಗಿ ತಂದೆಯ ಆದಾಯ/ಜಾತಿ ಪ್ರಮಾಣಪತ್ರವನ್ನು ಸಲ್ಲಿಸಲಾಗಿದೆ ಎಂಬ ಕಾರಣಕ್ಕೆ ಅವರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂಬ ಮಾಹಿತಿ ಸಿಕ್ಕಿದೆ. ಜತೆಗೆ, ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿ ನೀಡದೆ, ಸಾಮಾನ್ಯ ಅಭ್ಯರ್ಥಿಗಳ ವರ್ಗಕ್ಕೆ ಸೇರ್ಪಡೆ ಮಾಡಲಾಗಿದೆ‘ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

# ಭದ್ರಾವತಿ: ಬೀದಿನಾಯಿ ದಾಳಿಗೆ ಬಾಲಕ ಬಲಿ

**ಶಿವಮೊಗ್ಗ:** ಭದ್ರಾವತಿ ತಾಲ್ಲೂಕಿನ ದಡಮಘಟ್ಟದಲ್ಲಿ ಬುಧವಾರ ಬೀದಿ ನಾಯಿಗಳ ದಾಳಿಗೆ ಮೂರೂವರೆ ವರ್ಷದ ಬಾಲಕ ಬಲಿಯಾಗಿದ್ದಾನೆ.

ಗ್ರಾಮದ ನಿವಾಸಿ ಸಯ್ಯದ್ ನಸ್ರುಲ್ಲಾ ಅವರ ಪುತ್ರ ಸೈಯದ್ ಹರ್ಷದ್ ಮದನಿ ಸಾವಿಗೀಡಾದ ಬಾಲಕ.

ಮನೆಯ ಮುಂದಿನ ಅಂಗಳದಲ್ಲಿ ಪೋಷಕರು ಯಂತ್ರದ ಮೂಲಕ ಭತ್ತ ಬೇರ್ಪಡಿಸುತ್ತಿದ್ದರು. ಈ ವೇಳೆ ಮದನಿಯನ್ನು ಬೈಕ್ ಮೇಲೆ ಕೂರಿಸಿದ್ದರು. ಬೈಕ್‌ನಿಂದ ಬಾಲಕ ಕೆಳಗಿಳಿದ ಸಂದರ್ಭದಲ್ಲಿ ಏಳೆಂಟು ನಾಯಿಗಳು ದಾಳಿ ನಡೆಸಿದವು. ಬಾಲಕನಿಗೆ ಸಿಕ್ಕ ಸಿಕ್ಕ ಕಡೆ ಕಚ್ಚಿದ್ದು, ಮೆದುಳನ್ನು ತಿಂದು ಹಾಕಿವೆ.

ಈ ವೇಳೆ ಅಪ್ಪ ಸೈಯದ್ ನಸ್ರುಲ್ಲಾ ನಾಯಿಗಳನ್ನು ಓಡಿಸಿ ಮಗನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯದಲ್ಲೇ ಬಾಲಕ ಮೃತಪಟ್ಟಿದ್ದಾನೆ.

ಈ ಸಂಬಂಧ ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವೈದ್ಯಕೀಯ ಸೀಟು ತಿರಸ್ಕಾರ; ಎಂಜಿನಿಯರಿಂಗ್‌ಗೆ ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವೈದ್ಯಕೀಯ ಸೀಟು ಹಂಚಿಕೆಯಾದ ವಿದ್ಯಾರ್ಥಿಗಳು ಮರಳಿ ಎಂಜಿನಿಯರಿಂಗ್ ಸೇರಲು ಇಚ್ಛಿಸಿದರೆ ಮುಂದುವರಿದ ಸೀಟು ಹಂಚಿಕೆಯಲ್ಲಿ ಪರಿಗಣಿಸಬೇಕು ಎಂದು ಹಲವು ವಿದ್ಯಾರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಆಗ್ರಹಿಸಿದ್ದಾರೆ.

‘ನೀಟ್‌ನಲ್ಲೂ ರ‍್ಯಾಂಕಿಂಗ್ ಇದ್ದ ಕಾರಣ ವೈದ್ಯಕೀಯ ಸೀಟು ದೊರೆತಿದೆ. ಕೌನ್ಸಿಲಿಂಗ್ ಮೂಲಕ ಸೀಟು ಆಯ್ಕೆ ಮಾಡಿಕೊಂಡಿದ್ದೆವು. ದುಬಾರಿ ಶುಲ್ಕದ ಕಾರಣ ಹಲವು ವಿದ್ಯಾರ್ಥಿಗಳು ವಾಪಸ್ ಎಂಜಿನಿಯರ್ ಕಾಲೇಜಿಗೆ ಪ್ರವೇಶ ಪಡೆಯಲು ನಿರ್ಧರಿಸಿದ್ದೇವೆ. ವೈದ್ಯಕೀಯ ಸೀಟು ಆಯ್ಕೆ ಮಾಡಿಕೊಳ್ಳುವ ಮೊದಲು ಎಂಜಿನಿಯರಿಂಗ್ ಶುಲ್ಕ ಪಾವತಿಸಿದ್ದೆವು. ಆದರೆ, ಕೆಇಎ ಎಂಜಿನಿಯರಿಂಗ್ ಸೀಟು ಹಂಚಿಕೆ ರದ್ದುಪಡಿಸಿದೆ. ಇದರಿಂದ ಅತಂತ್ರರಾಗಿದ್ದೇವೆ’ ಎಂದು ದೂರಿದ್ದಾರೆ.

‘ವೈದ್ಯಕೀಯ ಸೀಟು ಆಯ್ಕೆ ಮಾಡಿಕೊಳ್ಳುವಾಗ ಶುಲ್ಕದ ಅರಿವು ಇರಲಿಲ್ಲ. ದುಬಾರಿ ಶುಲ್ಕ ಪಾವತಿಸುವ ಶಕ್ತಿ ಇಲ್ಲದೇ ವಾಪಸ್ ಎಂಜಿನಿಯರಿಂಗ್ ಸೇರಲು ನಿರ್ಧರಿಸಿದ್ದೇವೆ’ ಎನ್ನುವುದು ವಿದ್ಯಾರ್ಥಿಗಳ ಸಮಜಾಯಿಷಿ.

‘ವೈದ್ಯಕೀಯ, ಎಂಜಿನಿಯರಿಂಗ್ ಸೀಟು ಒಟ್ಟಿಗೆ ಪಡೆಯಲು ಅವಕಾಶ ಇಲ್ಲ. ಮೊದಲ ಸುತ್ತಿನಲ್ಲಿ ಎಂಜಿನಿಯರಿಂಗ್ ಸೀಟು ಪಡೆದು, ಶುಲ್ಕ ಪಾವತಿಸಿದ ನಂತರ ವೈದ್ಯಕೀಯ ಸೀಟು ಪಡೆಯುವ ಅಭ್ಯರ್ಥಿಗಳು ಮತ್ತೆ ಎಂಜಿನಿಯರಿಂಗ್ ಪ್ರವೇಶಕ್ಕೆ ಮರಳಲು ನಿಯಮದಲ್ಲಿ ಅವಕಾಶವಿಲ್ಲ. ಶುಲ್ಕ ಪಾವತಿಸಲು ಶಕ್ತಿ ಇಲ್ಲದೇ ವಾಪಸ್ ಬಂದಿದ್ದೇವೆ ಎನ್ನುವ ಕಾರಣ ಒಪ್ಪಲು ಸಾಧ್ಯವಿಲ್ಲ. ವೈದ್ಯಕೀಯ ಸೀಟು ಪಡೆದಿರುವ ಎಲ್ಲ ವಿದ್ಯಾರ್ಥಿಗಳ ಎಂಜಿನಿಯರಿಂಗ್ ಶುಲ್ಕವನ್ನು ಪೂರ್ಣ ಹಿಂದಿರುಗಿಸಲಾಗಿದೆ’ ಎನ್ನುತ್ತಾರೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ.

ಆನ್‌ಲೈನ್ ಮೂಲಕ ₹7 ಲಕ್ಷ ವಂಚನೆ: ಸೈಬರ್ ಠಾಣೆಯಲ್ಲಿ ದೂರು ದಾಖಲು

# ಸಾಲ ಕೊಡಿಸಿ, ಡ್ರಾ ಮಾಡಿಕೊಂಡ ಖದೀಮರು!

ಪ್ರಜಾವಾಣಿ ವಾರ್ತೆ

**ರಾಮನಗರ:** ಮೊಬೈಲ್‌ಗೆ ಬಂದ ಲಿಂಕ್ ಒತ್ತಿ ವ್ಯಕ್ತಿಯೊಬ್ಬರು ಬರೋಬ್ಬರಿ ₹7 ಲಕ್ಷ ಕಳೆದುಕೊಂಡಿದ್ದು, ಆನ್‌ಲೈನ್ ವಂಚಕರ ವಿರುದ್ಧ ಇಲ್ಲಿನ ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಬಿಡದಿಯ ರಾಘವೇಂದ್ರ ಲೇಔಟ್ ನಿವಾಸಿ ಮಂಜುನಾಥ ಹಣ ಕಳೆದುಕೊಂಡವರು. ವಂಚಕರು ಬ್ಯಾಂಕ್ ಖಾತೆ ದುರ್ಬಳಕೆ ಮಾಡಿಕೊಂಡು ಆನ್‌ಲೈನ್‌ನಲ್ಲೇ ಸಾಲ ಕೊಡಿಸಿ, ತಾವೇ ಅದನ್ನು ಡ್ರಾ ಮಾಡಿಕೊಂಡು ವಂಚಿಸಿದ್ದಾರೆ.

**ನಡೆದಿದ್ದೇನು?:** ಖಾಸಗಿ ಕಂಪನಿಯೊಂದರ ಉದ್ಯೋಗಿ ಮಂಜುನಾಥ್ ನ. 27ರಂದು ಬೆಳಿಗ್ಗೆ ಬೆಸ್ಕಾಂ ವಿದ್ಯುತ್ ಬಿಲ್ ಪಾವತಿ ಮಾಡಿದ್ದರು. ಅದಾದ ಬಳಿಕ ಅವರ ಮೊಬೈಲ್‌ಗೆ ಮತ್ತೊಂದು ಸಂದೇಶ ಬಂದಿದ್ದು, ‘ನಿಮ್ಮ ವಿದ್ಯುತ್ ಬಿಲ್ ಪಾವತಿ ಪೂರ್ಣಗೊಂಡಿಲ್ಲ. ಇನ್ನೂ ₹15 ಬಾಕಿ ಇದ್ದು, ಅದನ್ನು ಕಟ್ಟದಿದ್ದರೆ ಸಂಪರ್ಕ ಕಡಿತಗೊಳಿಸಲಾಗುವುದು’ ಎಂಬ ನಕಲಿ ಸಂದೇಶ ಬಂದಿತ್ತು.

ಇದನ್ನೇ ಬೆಸ್ಕಾಂನ ಅಧಿಕೃತ ಸಂದೇಶ ಎಂದು ನಂಬಿದ ಮಂಜುನಾಥ್ ತಮ್ಮ ಬ್ಯಾಂಕ್ ಖಾತೆ, ಡೆಬಿಟ್ ಕಾರ್ಡ್ ಇತ್ಯಾದಿ ವಿವರಗಳೊಂದಿಗೆ ಹಣ ಪಾವತಿ ಮಾಡಿದ್ದರು. ಬ್ಯಾಂಕ್ ಖಾತೆಯಲ್ಲಿ ಇನ್ನೂ ₹200 ಮೊತ್ತವಷ್ಟೇ ಉಳಿದಿತ್ತು. ಅದೇ ದಿನ ರಾತ್ರಿ 8ರ ಸುಮಾರಿಗೆ ಅವರಿಗೆ ಇ–ಮೇಲ್ ಬಂದಿದ್ದು, ಅದರಲ್ಲಿ ₹24 ಲಕ್ಷ ಸಾಲದ ಹಣವನ್ನು ಖಾತೆಗೆ ಹಾಕಿರುವುದಾಗಿ ಸಂದೇಶ ಬಂದಿದೆ. ತಾನು ಸಾಲಕ್ಕೆ ಅರ್ಜಿ ಸಲ್ಲಿಸಿಯೇ ಇಲ್ಲ.

ಹೀಗಿರುವಾಗ ಸಾಲ ಕೊಟ್ಟವರು ಯಾರು ಎಂದು ಗೊಂದಲಕ್ಕೆ ಒಳಗಾದ ಮಂಜುನಾಥ್ ತಮ್ಮ ಖಾತೆಯಲ್ಲಿನ ಬ್ಯಾಲೆನ್ಸ್ ಪರಿಶೀಲಿಸಿದಾಗ ಹಣ ಇರುವುದು ಖಾತ್ರಿಯಾಗಿದೆ. ನಂತರದಲ್ಲಿ ಕೇವಲ 20 ನಿಮಿಷದ ಅವಧಿಯಲ್ಲಿ ತಲಾ ₹1 ಲಕ್ಷದಂತೆ ಏಳು ಬಾರಿ ಹಣ ಡ್ರಾ ಆಗಿದೆ. ಇದರಿಂದ ಗಾಬರಿಗೊಂಡ ಮಂಜುನಾಥ್ ಕೂಡಲೇ ಬ್ಯಾಂಕಿನ ಗ್ರಾಹಕ ಸಹಾಯವಾಣಿಗೆ ಕರೆ ಮಾಡಿ ತಮ್ಮ ಖಾತೆಯಲ್ಲಿನ ಹಣದ ವ್ಯವಹಾರವನ್ನು ನಿಷ್ಕ್ರಿಯಗೊಳಿಸಿದ್ದಾರೆ. ಇದರಿಂದ ಖಾತೆಯಲ್ಲಿನ ಇನ್ನೂ ₹17 ಲಕ್ಷ ಕಳ್ಳರ ಪಾಲಾಗುವುದು ತಪ್ಪಿದೆ.

ಈ ಸಂಬಂಧ ಮಂಜುನಾಥ್ ರಾಮನಗರ ಸೈಬರ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಮಾಹಿತಿ ತಂತ್ರಜ್ಞಾನ ಕಾಯ್ದೆ 2008ರ ಅಡಿ ಪ್ರಕರಣ ದಾಖಲಾಗಿದೆ.

‘ನನ್ನ ಅರಿವಿಗೆ ಬಾರದೆಯೇ ಕೇವಲ ಒಟಿಪಿ ಆಧಾರದಲ್ಲಿ ಸಾಲ ನೀಡಿದ್ದು, ಒಂದು ದಿನದೊಳಗೆ ಮಂಜೂರಾಗಿರುವುದು ಆಶ್ಚರ್ಯ ತರಿಸಿದೆ. ಈ ಸಂಬಂಧ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ನನ್ನ ಖಾತೆ ಇರುವ ಐಸಿಐಸಿಐ ಬ್ಯಾಂಕ್‌ಗೂ ದೂರು ನೀಡಿದ್ದೇನೆ’ ಎಂದು ಮಂಜುನಾಥ್ ತಿಳಿಸಿದರು.

### ಹೆಚ್ಚಾಗುತ್ತಿದೆ ಸೈಬರ್ ವಂಚನೆ

ಸೈಬರ್ ಅಪರಾಧ ಪ್ರಕರಣಗಳಲ್ಲಿನ ಜಾಲವನ್ನು ಭೇದಿಸುವುದು ಸುಲಭದ ಮಾತಲ್ಲ. ಅದಕ್ಕೆ ಸಾಕಷ್ಟು ಸಮಯವೂ ಬೇಕಾಗುತ್ತದೆ. ವಿದ್ಯಾವಂತ ಸಮುದಾಯವೇ ಸೈಬರ್ ವಂಚನೆಗೆ ಹೆಚ್ಚು ಗುರಿಯಾಗುತ್ತಿದೆ. ಹೀಗಾಗಿ, ಯಾವುದೇ ಸಂದೇಶಗಳಿಗೆ ಪ್ರತಿಕ್ರಿಯಿಸುವ ಮುನ್ನ ಯೋಚಿಸಬೇಕು. ಆನ್‌ಲೈನ್ ಲಿಂಕ್‌ಗಳ ಮೇಲೆ ಕ್ಲಿಕ್ ಮಾಡುವುದನ್ನು ಬಿಡಬೇಕು. ತಾವು ವಂಚನೆಗೆ ಒಳಗಾದ ಕೂಡಲೇ ಮಾಹಿತಿ ನೀಡಿದರೆ ವಂಚಕರ ಪತ್ತೆ ಸಾಧ್ಯ ಎನ್ನುತ್ತಾರೆ ಪೊಲೀಸರು.

**ಆನ್‌ಲೈನ್ ಮೂಲಕ ಹಣ ವಂಚನೆ ಸಂಬಂಧ ದೂರು ದಾಖಲಿಸಿಕೊಂಡಿದ್ದು, ತನಿಖೆ ನಡೆದಿದೆ. ಗ್ರಾಹಕರು ಆನ್‌ಲೈನ್ ವ್ಯವಹಾರಗಳಲ್ಲಿ ಎಚ್ಚರಿಕೆ ವಹಿಸಿದಲ್ಲಿ ಈ ರೀತಿಯ ವಂಚನೆಗಳನ್ನು ತಪ್ಪಿಸಬಹುದು**

**ಸಂತೋಷ್ ಬಾಬು,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ರಾಮನಗರ

**ಸಾಲಕ್ಕೆ ಅರ್ಜಿ ಸಲ್ಲಿಸದಿದ್ದರೂ ನನ್ನ ಖಾತೆಗೆ ಹಣ ಜಮೆ ಆಗಿದ್ದು, ಪರಿಶೀಲಿಸುವ ವೇಳೆಗಾಗಲೇ ಖದೀಮರು ₹7 ಲಕ್ಷ ಡ್ರಾ ಮಾಡಿದ್ದರು. ಖಾತೆ ವ್ಯವಹಾರ ಬ್ಲಾಕ್ ಮಾಡಿದ್ದರಿಂದ ₹17 ಲಕ್ಷ ಉಳಿಯಿತು**

**ಮಂಜುನಾಥ್,** ದೂರುದಾರ


bob World | ಬ್ಯಾಂಕ್ ಆಫ್ ಬರೋಡ बैंक ऑफ़ बड़ौदा Bank of Baroda | Azadi Ka Amrit Mahotsav

**ಚೆಕ್ ಮೂಲಕ ₹5 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ಪಾವತಿಸುತ್ತಿರುವಿರಾ?**

ಆರ್‌ಬಿಐ ನಿರ್ದೇಶನದಂತೆ, ರೂ. 5 ಲಕ್ಷಗಿಂತ ಹಾಗೂ ಅದಕ್ಕಿಂತ ಹೆಚ್ಚಿನ ಚೆಕ್‌ನ್ನು ನೀಡುವಾಗ ಪಾಸಿಟಿವ್ ಪೇ ದೃಢೀಕರಣವನ್ನು ಮಾಡಬೇಕಾಗುತ್ತದೆ.

ಈ ನಿರ್ದೇಶನದ ಮೊದಲ ಹಂತವಾಗಿ ಚೆಕ್ ಸಂಬಂಧಿಸಿದ ವಂಚನೆಗಳನ್ನು ತಡೆಗಟ್ಟಲು ದಿನಾಂಕ: 01.12.2022ರಿಂದ ರೂ. 5 ಲಕ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಚೆಕ್‌ಗಳ ಕ್ಲೀಯರಿಂಗ್‌ಗಾಗಿ ಪಾಸಿಟಿವ್ ಪೇ ದೃಢೀಕರಣ ಹೊಂದಿರದ ಚೆಕ್ಕ್‌ಗಳನ್ನು ಹಿಂದುರಿಗಿಸಲಾಗುವುದು.

ಚೆಕ್ ನೀಡಿದ ತಕ್ಷಣ ಚೆಕ್ಕ್‌ನಲ್ಲಿ ಈ ಕೆಳಗೆ ವೃತ್ತಾಕಾರ ಮಾಡಿರುವ ಮಾಹಿತಿಯನ್ನು ಕಡ್ಡಾಯವಾಗಿ ಮತ್ತು ಸರಿಯಾಗಿ ನೀವು ಮರು ದೃಢೀಕರಿಸುವಾಗ ನೀಡಬೇಕಾಗುತ್ತದೆ.

**ಪಾಸಿಟಿವ್ ಪೇ ದೃಢೀಕರಣವು ಚೆಕ್ ವಂಚನೆಗಳನ್ನು ತಡೆಗಟ್ಟಲು ಚೆಕ್ ಅನ್ನು ಖಚಿತಪಡಿಸಲು ಗ್ರಾಹಕರಿಗೆ ಅನುವು ಮಾಡಿಕೊಡುವ ಸಾಧನವಾಗಿದೆ.**

It can be done through various channels viz. Mobile/Net Banking, Branch, etc. for cheques of 5,00,000/- and above. For more details please visit website www.bankofbaroda.in announcement section- "Positive Pay".

Call Toll Free No. (24x7): 1800 258 44 55 | 1800 102 44 55

www.bankofbaroda.in | Follow us on

/eeken-life | @eeken.life | eekenlife.com

Maximum Retail Price declared are inclusive of all taxes in Indian currency for 1 pair. Data subject to change.

## ರೈಲಿನಲ್ಲಿ ಗಾಂಜಾ ಸಾಗಣೆ: ಆರೋಪಿ ಬಂಧನ

ಬೆಂಗಳೂರು: 'ಪ್ರಶಾಂತಿ ಎಕ್ಸ್‌ಪ್ರೆಸ್'ನಲ್ಲಿ ಗಾಂಜಾ ಸಾಗಣೆ ಮಾಡುತ್ತಿದ್ದ ಆರೋಪಿಯನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಒಡಿಶಾ ರಾಜ್ಯದ ಭದ್ರಾಕ್ ಜಿಲ್ಲೆಯ ಭುವನೇಶ್ವರದ ಕಾಂಕನ್ನ ಪಾಣಿಗ್ರಾಹಿ ಎಂಬಾತನನ್ನು ಬಂಧಿಸಲಾಗಿದೆ.

'ಈತ ಮೆಕ್ಯಾನಿಕ್ ಆಗಿದ್ದ. ಹಿಂದೂಪುರದಿಂದ ಬೆಂಗಳೂರಿನ ಯಶವಂತಪುರಕ್ಕೆ ಬರುತ್ತಿದ್ದ ರೈಲಿನಲ್ಲಿ ಗಾಂಜಾ ಸಾಗಣೆ ಮಾಡುತ್ತಿದ್ದ' ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

'ಬಂಧಿತ ಆರೋಪಿಯಿಂದ ₹1.27 ಲಕ್ಷ ಮೌಲ್ಯದ ಗಾಂಜಾ ಸೊಪ್ಪು ವಶಕ್ಕೆ ಪಡೆಯಲಾಗಿದೆ. ಮೊಬೈಲ್ ಕೂಡ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ಮಾಲಿನ್ಯ ನಿಯಂತ್ರಣ ಮಂಡಳಿ, ಜಲಮಂಡಳಿ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ: ಎನ್‌ಜಿಟಿ

# ಕೆರೆಗೆ ತ್ಯಾಜ್ಯ: ವರದಿ ಸಲ್ಲಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಪುರ ಕೆರೆ ಸಂರಕ್ಷಣೆಗೆ ಸಂಬಂಧಿಸಿದಂತೆ ಕೈಗೊಂಡಿರುವ ಕಾರ್ಯಗಳ ಬಗ್ಗೆ ವರದಿ ಸಲ್ಲಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ (ಬಿಡಬ್ಲ್ಯೂಎಸ್ಎಸ್‌ಬಿ) ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಚೆನ್ನೈ ಪೀಠ ಆದೇಶಿಸಿದೆ.

'ಇದೇ ವರ್ಷ ಫೆ.7ರಂದು ಎನ್‌ಜಿಟಿಗೆ ವರದಿ ಸಲ್ಲಿಸಿದ್ದ ಜಲಮಂಡಳಿ, ಮಳೆಯಿಂದ ಸಂಗ್ರಹವಾಗಿರುವ ಕೆಸರು ತೆಗೆಯುವುದು ಸೇರಿ ಇತರ ಸಂರಕ್ಷಣೆ ನೆರವಾಗುವ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿತ್ತು.

ಆದರೆ, ಈ ಬಗ್ಗೆ ಯಾವ ರೀತಿ ಕ್ರಮಗಳನ್ನು ಕೈಗೊಳ್ಳಲಾಗಿದೆ ಎನ್ನುವ ಬಗ್ಗೆ ಅನುಪಾಲನಾ ವರದಿ ಸಲ್ಲಿಸಿಲ್ಲ ಎಂದು ಪೀಠವು ನೀಡಿರುವ ಆದೇಶದಲ್ಲಿ ತಿಳಿಸಿದೆ.

'ಇದೇ ರೀತಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹ ಫೆಬ್ರುವರಿ 22ರಂದು ಪ್ರಮಾಣಪತ್ರ ಸಲ್ಲಿಸಿತ್ತು. ಕೆರೆಗೆ ಒಳಚರಂಡಿ ನೀರು ಹರಿಯುತ್ತಿರುವುದು ಮತ್ತು ಘನತ್ಯಾಜ್ಯವನ್ನು ಕೆರೆ ಅಂಗಳದಲ್ಲಿ ಸುರಿಯುತ್ತಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ನೋಟಿಸ್ ನೀಡಿರುವುದಾಗಿ ತಿಳಿಸಿತ್ತು. ಜತೆಗೆ ನೀರಿನ ಗುಣಮಟ್ಟದ ಬಗ್ಗೆಯೂ ನಿಗಾ ವಹಿಸಲಾಗಿದೆ ಮತ್ತು ಮಾಲಿನ್ಯಕ್ಕೆ ಕಾರಣರಾಗುವವರನ್ನು ಗುರುತಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿತ್ತು. ಆದರೆ, ಇದುವರೆಗೆ ವರದಿ ಸಲ್ಲಿಸಿಲ್ಲ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಕೆ.ಆರ್. ಪುರ ಕೆರೆ ರಕ್ಷಣೆಗೆ ಒಟ್ಟು ಶಿಫಾರಸುಗಳನ್ನು ಮಾಲಿನ್ಯ ನಿಯಂತ್ರಣ ಮಂಡಳಿ ಮಾಡಿತ್ತು. ಈ ಅಂಶಗಳ ಬಗ್ಗೆ ಕ್ರಮ ಕೈಗೊಂಡಿರುವ ಬಗ್ಗೆಯೂ ಯಾವುದೇ ಮಾಹಿತಿ ನೀಡಿಲ್ಲ ಎಂದು ಪೀಠವು ತಿಳಿಸಿದೆ.

ಹೀಗಾಗಿ, ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಜಲಮಂಡಳಿ ಎರಡು ವಾರಗಳಲ್ಲಿ ಕೆರೆ ಸಂರಕ್ಷಣೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿ ಸಲ್ಲಿಸಬೇಕು. ಇಲ್ಲದಿದ್ದರೆ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಆದೇಶ ನೀಡಲಾಗುವುದು ಎಂದು ಎಚ್ಚರಿಕೆ ನೀಡಿದೆ.

ಈ ಮೊದಲು ಸಲ್ಲಿಸಿದ್ದ ವರದಿಯಲ್ಲಿನ ಶಿಫಾರಸುಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಬೇಕು ಎಂದು ತಾಕೀತು ಮಾಡಿದೆ.

ಮುಂದಿನ ವಿಚಾರಣೆಯ ಒಳಗೆ ಸಂಪೂರ್ಣ ವರದಿಗಳನ್ನು ಸಲ್ಲಿಸದಿದ್ದರೆ ಸಂಬಂಧಪಟ್ಟ ಅಧಿಕಾರಿಗಳೇ ನ್ಯಾಯಮಂಡಳಿಯ ಮುಂದೆ ಹಾಜರಾಗುವಂತೆ ಸಮನ್ಸ್ ನೀಡಲಾಗುವುದು ಎಂದು ತಿಳಿಸಿದೆ.

ಸಾಮಾಜಿಕ ಕಾರ್ಯಕರ್ತ ಜೆ. ಜಗನ್ ಕುಮಾರ್ ಅವರು ಈ ಕುರಿತು ಪೀಠದಲ್ಲಿ ಅರ್ಜಿ ಸಲ್ಲಿಸಿದ್ದರು.

## ಸುದ್ದಿ 2 ನಿಮಿಷ

### ಡಿ. 4ರಂದು ಕನ್ನಡ ನುಡಿ ಸಮ್ಮೇಳನ

ಬೆಂಗಳೂರು: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆಯಿಂದ ಡಿ. 4ರಂದು 'ಕನ್ನಡ ನುಡಿ ಸಮ್ಮೇಳನ'ವನ್ನು ಜೆ.ಸಿ. ರಸ್ತೆಯಲ್ಲಿರುವ ನಯನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮ್ಮೇಳನವನ್ನು ಗೊ.ರು. ಚನ್ನಬಸಪ್ಪ ಉದ್ಘಾಟಿಸಲಿದ್ದು, ಕನ್ನಡ ನುಡಿ ಸಮ್ಮೇಳನದ ಅಧ್ಯಕ್ಷರಾದ ಟಿ. ತಿಮ್ಮೇಗೌಡ, ಪಿ. ರಾಮಯ್ಯ, ಟಿ. ಸತೀಶ್ ಜವರೇಗೌಡ, ಸೂರಿ ಮೀರಡೆ ಭಾಗವಹಿಸಲಿದ್ದಾರೆ.

ಸಾಹಿತ್ಯ ಕ್ಷೇತ್ರದ ಎಂ.ಎಸ್. ಆಶಾದೇವಿ ಮತ್ತು ಡಿ.ಸಿ. ರಾಮಚಂದ್ರ, ಮಾನವ ಸಂಪನ್ಮೂಲ ಅಭಿವೃದ್ಧಿ ಕ್ಷೇತ್ರದ ಮುಕ್ತಾ.ಬಿ. ಕಾಗಲಿ, ಸಾರ್ವಜನಿಕ ಆಡಳಿತ ಕ್ಷೇತ್ರದ ಡಿ.ಎಂ. ಸತೀಶ್‌ಕುಮಾರ್, ಎಚ್. ಸಿ. ಗಿರೀಶ್, ಪಿ. ಶಿವಕುಮಾರ್ ಮತ್ತು ಎನ್. ವಿಜಯಕುಮಾರ್, ನ್ಯಾಯಾಂಗ ಕ್ಷೇತ್ರದ ಎಂ.ವಿ. ರೇವಣಸಿದ್ದಯ್ಯ, ಸಂಘಟನಾ ಕ್ಷೇತ್ರದ ಆರ್.ಬಿ. ಶಂಕರ್ ಮತ್ತು ಸಮಾಜ ಸೇವಾ ಕ್ಷೇತ್ರದ ಸಿ.ಪಿ. ಉಮೇಶ ಅವರಿಗೆ ಕದಂಬ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಈ ಸಮ್ಮೇಳನದಲ್ಲಿ ವಿವಿಧ ಸಾಹಿತಿಕ ಗೋಷ್ಠಿಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

### ರಸ್ತೆಯಲ್ಲಿ ಸಿಕ್ಕಿತು ₹ 22 ಲಕ್ಷ ನಗದು, ಅಪಾರ ಚಿನ್ನ!

ಬೆಂಗಳೂರು: ಮದ್ಯ ಸೇವಿಸಿ ರಸ್ತೆಯಲ್ಲಿ ತೂರಾಡುತ್ತಿದ್ದ ವ್ಯಕ್ತಿಯ ಬಳಿ ಲಕ್ಷಗಟ್ಟಲೆ ಹಣ ಹಾಗೂ ಅಪಾರ ಚಿನ್ನ ಪತ್ತೆಯಾಗಿದೆ. ಹಣ ಹಾಗೂ ಚಿನ್ನವನ್ನು ಎಸ್‌ಜೆ ಪಾರ್ಕ್ ಪೊಲೀಸರು ವಶ ಪಡಿಸಿಕೊಂಡಿದ್ದಾರೆ.

ಚೆನ್ನೈನ ವಿನೋದ್ ಕುಮಾರ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಮದ್ಯದ ಅಮಲಿನಲ್ಲಿ ವ್ಯಕ್ತಿಯೊಬ್ಬ ತೂರಾಡುತ್ತಿದ್ದ ಹೋಗುತ್ತಿದ್ದ. ರಾತ್ರಿ ಗಸ್ತಿನಲ್ಲಿದ್ದ ಪೊಲೀಸರು ಆತನ ಬಳಿಗೆ ತೆರಳುತ್ತಿದ್ದಂತೆ ಬ್ಯಾಗ್ ಎಸೆದು ಆತ ಪರಾರಿಯಾಗಲು ಯತ್ನಿಸಿದ್ದ. ಅನುಮಾನಗೊಂಡ ಪೊಲೀಸರು ಬ್ಯಾಗ್ ಪರಿಶೀಲನೆ ನಡೆಸಿದಾಗ ಬ್ಯಾಗ್‌ನಲ್ಲಿ ₹ 22 ಲಕ್ಷ ಹಣ ಹಾಗೂ 1 ಕೆ.ಜಿ. 750 ಗ್ರಾಂ ಚಿನ್ನ ಸಿಕ್ಕಿದೆ. ಚಿನ್ನ ಸರ, ಬಳೆಗಳು, ಗೋಲ್ಡ್ ಬಿಸ್ಕತ್‌ಗಳು ಇದ್ದವು. ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದ್ದಾರೆ. ಹಣ ಹಾಗೂ ಚಿನ್ನಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ಇರಲಿಲ್ಲ. ಚೆನ್ನೈನ ಜ್ಯುವೆಲರಿ ಅಂಗಡಿಗೆ ಚಿನ್ನಾಭರಣ ಸೇರಿದ್ದು ಎನ್ನಲಾಗಿದೆ. ಅಲ್ಲಿನ ಮಾಲೀಕರಿಗೆ ನೋಟಿಸ್ ನೀಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಂಧಿತ ಆರೋಪಿಯ ಕೈಗೆ ಚಿನ್ನ ಹಾಗೂ ಹಣ ಹೇಗೆ ಲಭಿಸಿತು? ಹಣದ ಮೂಲ ಪತ್ತೆ ಹಚ್ಚಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ಸಿಮೆಂಟ್ ಇಟ್ಟಿಗೆ ಹೊತ್ತು ಆಕ್ರೋಶ

### 'ಫ್ರೀಡಂ ಪಾರ್ಕ್'ನಲ್ಲಿ ಕಬ್ಬು ಬೆಳೆಗಾರರಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬಿಗೆ 'ನ್ಯಾಯ ಸಮ್ಮತ ಹಾಗೂ ಪ್ರೋತ್ಸಾಹದಾಯಕ ದರ' (ಎಫ್‌ಆರ್‌ಪಿ) ನಿಗದಿಗೆ ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಪ್ರತಿಭಟನೆ 9ನೇ ದಿನಕ್ಕೆ ಕಾಲಿಟ್ಟಿದ್ದು, ರೈತರು ಬುಧವಾರ ವಿನೂತನ ರೀತಿಯಲ್ಲಿ ಪ್ರತಿಭಟಿಸಿದರು.

ನಗರದ ಫ್ರೀಡಂ ಪಾರ್ಕ್‌ನಲ್ಲಿ ಕಬ್ಬು ಬೆಳೆಗಾರರು ಬುಧವಾರ ತಲೆ ಮೇಲೆ ಸಿಮೆಂಟ್ ಇಟ್ಟಿಗೆ ಹೊತ್ತು ಪ್ರತಿಭಟನೆ ನಡೆಸಿದರು

ಅರೆಬೆತ್ತಲೆಯಾಗಿ ತಲೆಯ ಮೇಲೆ ಸಿಮೆಂಟ್ ಇಟ್ಟಿಗೆ ಹೊತ್ತು ಪ್ರತಿಭಟಿಸಿದರು. ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು. ಗುರುವಾರ ಸಂಜೆಯೊಳಗೆ ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿದರು.

ಸಂಘದ ರಾಜ್ಯ ಅಧ್ಯಕ್ಷ ಕುರುಬೂರ್ ಶಾಂತಕುಮಾರ್ ಮಾತನಾಡಿ, 'ಸರ್ಕಾರ ನಿದ್ರಾವಸ್ಥೆಯಲ್ಲಿದೆ. ಈ ಸರ್ಕಾರವನ್ನು ಎಚ್ಚರಿಸಲು ರೈತರ ಬಳಿ ಅಸ್ತ್ರಗಳಿವೆ. ಪ್ರಯೋಗಿಸಿದರೆ ಸರ್ಕಾರಕ್ಕೆ ಗಂಡಾಂತರ ಖಚಿತ' ಎಂದು ಎಚ್ಚರಿಸಿದರು.

'ಈಗಿನ ಸರ್ಕಾರವು ಉದ್ಯಮಿಗಳ ಮರ್ಜಿಯಲ್ಲಿ ಆಡಳಿತ ನಡೆಸುತ್ತಿದೆ. ರೈತ ಪರ ಎಂದು ಹೇಳುವ ಸರ್ಕಾರ ರೈತರನ್ನು ಬೀದಿಯಲ್ಲಿ ಮಲಗುವಂತೆ ಮಾಡಿರುವುದು ಏಕೆ' ಎಂದು ಪ್ರಶ್ನಿಸಿದರು.

'ಬುಧವಾರ ಸಂಜೆಯ ಒಳಗೆ ಸರ್ಕಾರದ ನಿರ್ಧಾರ ಹೊರ ಬೀಳದಿದ್ದರೆ, ರೈತರ ಹೋರಾಟದ ಕಠಿಣ ಅಸ್ತ್ರ ಪ್ರಯೋಗಿಸುತ್ತೇವೆ' ಎಂದು ಹೇಳಿದರು.

ರಾಜ್ಯ ಉಪಾಧ್ಯಕ್ಷ ಸುರೇಶ್ ಮಾ. ಪಾಟೀಲ್, ವಿ.ಅರ್.ನಾರಾಯಣ ರೆಡ್ಡಿ, ಬೆಳಗಾವಿ ಜಿಲ್ಲಾ ಅಧ್ಯಕ್ಷ ಗುರುಸಿದ್ದಪ್ಪ ಕೋಟಗಿ, ಹತ್ತಳ್ಳಿ ದೇವರಾಜ್, ಬರಡನಪುರ ನಾಗರಾಜ್, ಶಿವಮ್ಮ, ಹಾಸನದ ಮಂಜೇಗೌಡ ಹಾಜರಿದ್ದರು.

### ಪ್ರಿಯಕರನ ಜೊತೆ ಸೇರಿ ಕೊಲೆ: ಇಬ್ಬರ ಬಂಧನ

# ಪತಿ ಮೃತದೇಹ ಚರಂಡಿಗೆ ಎಸೆದಿದ್ದ ಪತ್ನಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ರಾಜೇಶ್

ಜಯಲಕ್ಷ್ಮಿ

ಬೆಂಗಳೂರು: ಪ್ರಿಯಕರನೊಂದಿಗೆ ಸೇರಿಕೊಂಡು ಪತಿಯನ್ನು ಕೊಲೆ ಮಾಡಿ ಸಿನಿಮೀಯ ಶೈಲಿಯಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿ ರಾಮನಗರದ ಬಳಿ ಚರಂಡಿಗೆ ಮೃತದೇಹ ಎಸೆದಿದ್ದ ಪತ್ನಿ ಹಾಗೂ ಪ್ರಿಯಕರನನ್ನು ಸೋಲದೇವನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ದಾಸೇಗೌಡ (48) ಕೊಲೆಯಾದ ವ್ಯಕ್ತಿ. ಅವರ ಪತ್ನಿ ಜಯಲಕ್ಷ್ಮಿ ಹಾಗೂ ಪ್ರಿಯಕರ ರಾಜೇಶ್ ಬಂಧಿತರು.

'ದಾಸೇಗೌಡ ಹಾಗೂ ಜಯಲಕ್ಷ್ಮಿ ಮದುವೆಯಾಗಿ 16 ವರ್ಷಗಳು ಕಳೆದಿದ್ದವು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಇಬ್ಬರೂ ಫಾರ್ಮ್ ಹೌಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಈ ನಡುವೆ ಜಯಲಕ್ಷ್ಮಿಗೆ ರಾಜೇಶ್ ಎಂಬಾತ ಪರಿಚಯವಾಗಿದ್ದ. ದಾಸೇಗೌಡ ಮನೆಯಲ್ಲಿ ಇಲ್ಲದಿದ್ದಾಗ ರಾಜೇಶ್ ಮನೆಗೆ ಬಂದುಹೋಗುತ್ತಿದ್ದ. ಇದೇ ವಿಷಯಕ್ಕೆ ಮನೆಯಲ್ಲಿ ದಂಪತಿ ನಡುವೆ ಗಲಾಟೆ ನಡೆಯುತ್ತಿತ್ತು. ಅನೈತಿಕ ಸಂಬಂಧಕ್ಕೆ ದಾಸೇಗೌಡ ಅಡ್ಡಿಯಾಗುತ್ತಿದ್ದಾರೆ ಎಂಬ ಕಾರಣಕ್ಕೆ ಕೊಲೆಗೆ ಇಬ್ಬರೂ ಸಂಚು ರೂಪಿಸಿದ್ದರು' ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

'ಭಾನುವಾರ ದನದ ಕೊಟ್ಟಿಗೆಯಲ್ಲಿದ್ದ ಹಗ್ಗ ತಂದು ಕತ್ತು ಬಿಗಿದು ಕೊಲೆ ಮಾಡಿದ್ದರು. ಬಳಿಕ ಮೃತದೇಹವನ್ನು ಪ್ಲಾಸ್ಟಿಕ್ ಚೀಲದಲ್ಲಿಟ್ಟು ರಾಮನಗರದ ಬಳಿ ಚರಂಡಿಗೆ ಎಸೆದಿದ್ದರು. ಹಗ್ಗ ಹಾಗೂ ಮೊಬೈಲ್ ದೂರಕ್ಕೆ ಎಸೆದು ಸಾಕ್ಷ್ಯನಾಶ ಪಡಿಸಿದ್ದರು. ಬಳಿಕ ಠಾಣೆಗೆ ಬಂದು ಪತಿ ಕಾಣೆಯಾಗಿರುವ ಕುರಿತು ದೂರು ನೀಡಿದ್ದರು. ರಾಜೇಶ್ ತನ್ನ ತಮ್ಮನೆಂದು ಸುಳ್ಳು ಹೇಳಿದ್ದಳು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದಾಸೇಗೌಡ ಅವರ ಸಹೋದರ ಇಬ್ಬರ ಸಂಬಂಧದ ಬಗ್ಗೆ ನೀಡಿದ ಮಾಹಿತಿ ಆಧರಿಸಿ ಜಯಲಕ್ಷ್ಮಿ ವಿಚಾರಣೆ ನಡೆಸಲಾಯಿತು. ಆಗ ಈ ಕೊಲೆ ಪ್ರಕರಣದ ಕುರಿತು ತಿಳಿದುಬಂತು. ರಾಜೇಶ್ ಹಾಗೂ ಜಯಲಕ್ಷ್ಮಿ ಪ್ರತಿನಿತ್ಯ ಮೊಬೈಲ್ ಫೋನ್‌ನಲ್ಲಿ ಮಾತನಾಡಿರುವುದು ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

## ಶಾಲಾ ಬಸ್ ಚಾಲಕನಿಂದ ಮಹಿಳೆ ಮೇಲೆ ಅತ್ಯಾಚಾರ

ಶಿವಕುಮಾರ್

ಬೆಂಗಳೂರು: ಮನೆಗೆ ಡ್ರಾಪ್ ಕೊಡುವ ನೆಪದಲ್ಲಿ ಮಹಿಳೆಯನ್ನು ಶಾಲಾ ಬಸ್‌ನಲ್ಲಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದ್ದ ಆರೋಪಿ ಶಾಲಾ ಬಸ್ ಚಾಲಕ ಶಿವಕುಮಾರ್ ಎಂಬಾತನನ್ನು ಚಂದ್ರಲೇಔಟ್ ಪೊಲೀಸರು ಬಂಧಿಸಿದ್ದಾರೆ. ಮಂಗಳವಾರ ಸಂಜೆ 5.30ರ ಸುಮಾರಿಗೆ ಈ ಕೃತ್ಯ ನಡೆದಿದೆ.

'ನಾಯಂಡಹಳ್ಳಿ ವೃತ್ತದ ಬಳಿ ಮಹಿಳೆ ಬಸ್‌ಗೆ ಕಾಯುತ್ತಿದ್ದರು. ಅದೇ ವೇಳೆಯಲ್ಲಿ ಶಾಲಾ ಮಕ್ಕಳನ್ನು ಮನೆಗೆ ಬಿಟ್ಟು ವಾಪಸ್ ಬರುತ್ತಿದ್ದ ಚಾಲಕ, ಮಹಿಳೆಗೆ ಡ್ರಾಪ್ ಕೊಡುವ ನೆಪದಲ್ಲಿ ಬಸ್ ಹತ್ತಿಸಿಕೊಂಡಿದ್ದ. ಬಸ್‌ನಲ್ಲಿ ಚಾಲಕ ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಬಸ್ ಅನ್ನು ಚಾಲಕ ನಾಗರಬಾವಿಯ ಸೇವಾ ರಸ್ತೆಯ ನಿರ್ಜನ ಪ್ರದೇಶಕ್ಕೆ ಮಹಿಳೆ ಎಳೆದೊಯ್ದು ಅತ್ಯಾಚಾರ ಎಸಗಿದ್ದ. ಸಂತ್ರಸ್ತ ಮಹಿಳೆ ತನ್ನ ಮೊಬೈಲ್‌ನಲ್ಲಿ ಶಾಲಾ ಬಸ್‌ನ ಫೋಟೊ ತೆಗೆದು ಪುತ್ರನಿಗೆ ಕಳುಹಿಸಿದ್ದರು. ಜೊತೆಗೆ ಮಗನಿಗೆ ಕರೆ ಮಾಡಿಯೂ ವಿಷಯ ತಿಳಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂತ್ರಸ್ತ ಮಹಿಳೆಯ ಪುತ್ರ ಆರೋಪಿಯನ್ನು ಪತ್ತೆಹಚ್ಚಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

# ಶಾಲಾ ಬ್ಯಾಗ್‌ಗಳಲ್ಲಿ ಕಾಂಡೋಮ್: ಎಚ್ಚರ ತಪ್ಪಿದರೆ ಇನ್ನಷ್ಟು ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಶಾಲಾ ಬ್ಯಾಗ್ ಪರಿಶೀಲಿಸಿದಾಗ ಅವುಗಳಲ್ಲಿ ಕಾಂಡೋಮ್‌ಗಳು, ಗರ್ಭಪಾತ ಗುಳಿಗೆ, ನೀರಿನ ಬಾಟಲ್‌ಗಳಲ್ಲಿ ನೀರು ಮಿಶ್ರಿತ ಮದ್ಯ ಸಿಕ್ಕಿರುವ ವಿಷಯ ಕುರಿತು ಕುಟುಂಬ, ಸಮಾಜ ಹಾಗೂ ಸರ್ಕಾರಗಳು ಗಂಭೀರವಾಗಿ ಯೋಚಿಸಬೇಕು ಎಂದು ಸಾಹಿತಿಗಳು, ಶಿಕ್ಷಣ ತಜ್ಞರು, ಪ್ರಗತಿಪರ ಚಿಂತಕರು ಸಲಹೆ ನೀಡಿದ್ದಾರೆ.

ಮಕ್ಕಳ ಶಿಕ್ಷಣದ ಕ್ರಮ ಹಾಗೂ ವಿಧಾನಗಳ ಕುರಿತು, ಸಮಾಜ ಹಾಗೂ ಸರ್ಕಾರ ಗಂಭೀರವಾಗಿ ಆಲೋಚಿಸಲು ಇಂತಹ ವರದಿಗಳು ಪ್ರೇರಣೆಯಾಗಬಹುದು ಎನ್ನುವುದು ನಿಜ. ಈ ವಿಷಯದಲ್ಲಿ ಮಕ್ಕಳನ್ನೇ ದೂಷಿಸುವುದು ಅಪೇಕ್ಷಣೀಯವಲ್ಲ. ಅದರಿಂದ ಮಕ್ಕಳಿಗೆ ಇನ್ನಷ್ಟು ಹಾನಿ ಆಗಬಹುದು ಎಂದು ವಿ.ಪಿ. ನಿರಂಜನಾರಾಧ್ಯ, ಡಾ.ಶ್ರೀನಿವಾಸ ಕಕ್ಕಿಲ್ಲಾಯ, ಜಿ.ರಾಮಕೃಷ್ಣ, ಕೆ.ಮರುಳಸಿದ್ದಪ್ಪ, ಎಸ್.ಜಿ.ಸಿದ್ಧರಾಮಯ್ಯ, ಕಾಳೇಗೌಡ ನಾಗವಾರ, ವಸುಂಧರಾ ಭೂಪತಿ, ವಿಜಯಾ, ಸುರೇಂದ್ರ ರಾವ್ ಎಚ್ಚರಿಸಿದ್ದಾರೆ.

ಇಂಥ ಬೆಳವಣಿಗೆಗಳಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣವಾಗಿರುವ ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳುವುದು ಎಲ್ಲಕ್ಕಿಂತ ತುರ್ತು ಅಗತ್ಯ. ಕೋವಿಡ್ ಕಾಲದಲ್ಲಿ ಒಂದೆರಡು ವರ್ಷ ಶಾಲೆಗಳನ್ನು ಅವೈಜ್ಞಾನಿಕವಾಗಿ ಮುಚ್ಚಿದ್ದರಿಂದ ಮಕ್ಕಳ ಮಾನಸಿಕ, ದೈಹಿಕ, ಬೌದ್ಧಿಕ ಆರೋಗ್ಯ ಹಾಗೂ ಬೆಳವಣಿಗೆಗಳ ಮೇಲೆ ಗಂಭೀರ ಪರಿಣಾಮಗಳಾಗಿವೆ. ಶಾಲೆಗಳಲ್ಲಿ ಮಕ್ಕಳ ಮೇಲೆ ನಿಗಾವಣೆಯಿಲ್ಲದೆ ಸಮಸ್ಯೆಗಳಾಗುತ್ತವೆ ಎಂದು ಎರಡು ವರ್ಷಗಳ ಹಿಂದೆಯೇ ಎಚ್ಚರಿಕೆ ನೀಡಿದ್ದೆವು. ಮಕ್ಕಳಿಗೆ ನೇರ ಶಿಕ್ಷಣವಷ್ಟೇ ನೀಡಬೇಕು, ಮೊಬೈಲ್ ಸಾಧನಗಳ ಮೂಲಕ ಆನ್‌ಲೈನ್ ಪಾಠಗಳು ಹಲವು ತೊಂದರೆ ಸೃಷ್ಟಿಸಲಿವೆ ಎಂದೂ ಎಚ್ಚರಿಸಿದ್ದೆವು. ಈ ಕುರಿತು ಶಾಲಾ ಆಡಳಿತ ಮಂಡಳಿ ಹೊರೆಹೊತ್ತುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಬಹಳ ವರ್ಷಗಳಿಂದಲೂ ಹಲವು ಪ್ರಗತಿಪರರು, ಶಿಕ್ಷಣ ತಜ್ಞರು, ವೈದ್ಯಕೀಯ ಕ್ಷೇತ್ರದ ಗಣ್ಯರು ಶಾಲೆಗಳಲ್ಲಿ ಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡಬೇಕು ಎಂದು ಒತ್ತಾಯಿಸುತ್ತಲೇ ಬಂದಿದ್ದಾರೆ. ಮಕ್ಕಳು ಹದಿಹರಯದಲ್ಲಿ ತಮ್ಮ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಗಳನ್ನು ವೈಜ್ಞಾನಿಕವಾಗಿ ಅರ್ಥೈಸಿಕೊಂಡರೆ ಯಾವುದೇ ಗೊಂದಲ ಹಾಗು ಆತಂಕಗಳಿಗೆ ಈಡಾಗದೆ ನಿಭಾಯಿಸಲು ಶಕ್ತರಾಗುತ್ತಾರೆ. ಆದರೆ, ನಮ್ಮ ಸರ್ಕಾರಗಳು ಲೈಂಗಿಕ ಶಿಕ್ಷಣವನ್ನು ಅವೈಜ್ಞಾನಿಕ ಹಾಗೂ ಮಡಿವಂತಿಕೆಯ ದೃಷ್ಟಿಯಿಂದ ನೋಡುವ ಮೂಲಕ ಶಾಲೆಗಳಲ್ಲಿ ಲೈಂಗಿಕ ಶಿಕ್ಷಣವನ್ನೇ ವಿರೋಧಿಸಿದವು ಎಂದೂ ದೂರಿದ್ದಾರೆ.

ಮಕ್ಕಳು ಶಾಲೆಗೆ ಮೊಬೈಲ್ ತರುತ್ತಿದ್ದಾರೆ ಎನ್ನುವ ದೂರಿನ ಕುರಿತು ಕೆಲವು ಶಾಲೆಗಳಲ್ಲಿ ತಪಾಸಣೆ ನಡೆಸಿದಾಗ ಬ್ಯಾಗ್‌ಗಳಲ್ಲಿ ಕಾಂಡೋಮ್ಸ್ ಮತ್ತಿತರ ವಸ್ತುಗಳು ದೊರೆತ ಬಗ್ಗೆ 'ಪ್ರಜಾವಾಣಿ' ಡಿ.30ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

## ಅಪಘಾತ: ಯುವತಿ ಸಾವು

ಪ್ರಜಾವಾಣಿ ವಾರ್ತೆ

ಶಾಲಿನಿ

ಬೆಂಗಳೂರು: ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹಳೆ ಮದ್ರಾಸ್ ರಸ್ತೆಯ ಸೇತುವೆ ಮೇಲೆ ಟಾಟಾ ಏಸ್ ಸರಕು ಸಾಗಣೆ ವಾಹನ ಹಾಗೂ ಬೈಕ್ ನಡುವೆ ಬುಧವಾರ ಬೆಳಿಗ್ಗೆ ನಡೆದ ಅಪಘಾತದಲ್ಲಿ ಬೈಕ್ ಸವಾರರಾದ ಬಿ.ಶಾಲಿನಿ (27) ಮೃತಪಟ್ಟಿದ್ದಾರೆ.

ಜೆ.ಪಿ.ನಗರದ ನೀರಾ ಥಾಯ್ ಸ್ಪಾದಲ್ಲಿ ಶಾಲಿನಿ ಅವರು ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡುತ್ತಿದ್ದರು. ಕೋರಮಂಗಲದ ತೆರಿಗೆ ಕಚೇರಿಯ ಎದುರಿನ ಅಂಬೇಡ್ಕರ್ ನಗರದಲ್ಲಿ ನೆಲೆಸಿದ್ದರು. ಬುಧವಾರ ಬೆಳಿಗ್ಗೆ ಈ ಅಪಘಾತ ಸಂಭವಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಟಿನ್ ಫ್ಯಾಕ್ಟರಿ ಕಡೆಯಿಂದ ಸರಕು ವಾಹನ ಬರುತ್ತಿತ್ತು. ಚಾಲಕ ಅತಿ ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದ. ಸೇತುವೆಯ ಮಸೀದಿ ಬಳಿ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದ್ದು, ಶಾಲಿನಿ ಹಾಗೂ ಹಿಂಬದಿ ಸವಾರರಾದ ಜೆ. ಅಲೆನ್ ಸ್ಮಿತ್ ಗಂಭೀರವಾಗಿ ಗಾಯಗೊಂಡಿದ್ದರು. ಇಬ್ಬರನ್ನೂ ಆಲ್ಟೋರ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಶಾಲಿನಿ ಮೃತಪಟ್ಟಿದ್ದಾರೆ. ಚಾಲಕ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ. ಸಿಸಿಟಿವಿ ದೃಶ್ಯಾವಳಿ ಆಧರಿಸಿ ಚಾಲಕನ ಪತ್ತೆ ಮಾಡಲಾಗುವುದು' ಎಂದು ಮೂಲಗಳು ತಿಳಿಸಿವೆ.

### ಐಸಿಟಿಸಿ ಕೇಂದ್ರಗಳಲ್ಲಿ ಸೋಂಕು ಪತ್ತೆ ಪರೀಕ್ಷೆ

# 7 ತಿಂಗಳಲ್ಲಿ 8 ಸಾವಿರ ಎಚ್‌ಐವಿ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ ಸಮಗ್ರ ಆಪ್ತ ಸಮಾಲೋಚನೆ ಹಾಗೂ ಪರೀಕ್ಷಾ ಕೇಂದ್ರಗಳ (ಐಸಿಟಿಸಿ) ಮೂಲಕ ಕಳೆದ ಏಳು ತಿಂಗಳಲ್ಲಿ ಹೊಸದಾಗಿ 8,023 ಎಚ್‌ಐವಿ ಸೋಂಕಿತರನ್ನು ಗುರುತಿಸಲಾಗಿದೆ.

ವಿಶ್ವ ಆರೋಗ್ಯ ಸಂಸ್ಥೆ ಪ್ರತಿ ವರ್ಷ ಡಿ.1ರಂದು ವಿಶ್ವ ಏಡ್ಸ್ ದಿನವನ್ನು ಆಚರಿಸುತ್ತಿದೆ. ರಾಜ್ಯದಲ್ಲಿ ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. 'ಸಮಾನಗೊಳಿಸು' ಈ ವರ್ಷದ ಘೋಷವಾಕ್ಯವಾಗಿದೆ. ರಾಜ್ಯದಲ್ಲಿ 470 ಐಸಿಟಿಸಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 2022–23ನೇ ಸಾಲಿನಲ್ಲಿ 18,65,141 ಜನರನ್ನು ಪರೀಕ್ಷಿಸಲಾಗಿದೆ. ಶೇ 0.41ರಷ್ಟು ಮಂದಿಯಲ್ಲಿ ಎಚ್‌ಐವಿ ಸೋಂಕು ದೃಢಪಟ್ಟಿದೆ. ಈ ಅವಧಿಯಲ್ಲಿ 8,37,709 ಗರ್ಭಿಣಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಶೇ 0.04ರಷ್ಟು ಮಂದಿ ಎಚ್‌ಐವಿ ಸೋಂಕಿತರಾಗಿದ್ದಾರೆ.

**ಅಧಿಕ ಎಚ್‌ಐವಿ ಪ್ರಕರಣ ವರದಿಯಾದ ಜಿಲ್ಲೆಗಳು**

| ಜಿಲ್ಲೆ | ಪರೀಕ್ಷೆ | ಪ್ರಕರಣ |
|---|---|---|
| ಬೆಳಗಾವಿ | 1,23,989 | 733 |
| ಬಿಬಿಎಂಪಿ | 1,20,768 | 567 |
| ಬಾಗಲಕೋಟೆ | 46,089 | 543 |
| ಮೈಸೂರು | 1,03,676 | 439 |
| ವಿಜಯಪುರ | 53,939 | 37 |

2017–18ರಲ್ಲಿ ಎಚ್‌ಐವಿ ಸೋಂಕು ದೃಢ ಪ್ರಮಾಣ ಶೇ 0.85ರಷ್ಟಿತ್ತು. ಗರ್ಭಿಣಿಯರಲ್ಲಿ ಈ ಪ್ರಮಾಣ ಶೇ 0.06ರಷ್ಟು ದೃಢಪಟ್ಟಿತ್ತು. ಈ ಪ್ರಮಾಣ ವರ್ಷದಿಂದ ವರ್ಷಕ್ಕೆ ಇಳಿಕೆಯಾಗುತ್ತಿದೆ. ಎಚ್‌ಐವಿ ಸೋಂಕಿತರಲ್ಲಿ ಸದ್ಯ 3.73 ಲಕ್ಷ ಮಂದಿ ಎಆರ್‌ಟಿ ಕೇಂದ್ರಗಳಲ್ಲಿ (ಆ್ಯಂಟಿ ರಿಟ್ರೋವಲ್ ಥೆರಪಿ) ಚಿಕಿತ್ಸೆಗಾಗಿ ನೋಂದಣಿ ಮಾಡಿಕೊಂಡಿದ್ದಾರೆ. ಅವರಲ್ಲಿ 1.76 ಲಕ್ಷ ಮಂದಿ ಎಆರ್‌ಟಿ ಕೇಂದ್ರದಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ಆರೋಗ್ಯ ಸೊಸೈಟಿ ತಿಳಿಸಿದೆ.

94,315 ಮಂದಿ ಮರಣ: ಎಆರ್‌ಟಿ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಎಚ್‌ಐವಿ ಪೀಡಿತರಲ್ಲಿ 2,841 ಮಂದಿ ಸೇರಿ 94,315 ಮಂದಿ ಮೃತಪಟ್ಟಿದ್ದಾರೆ. ಎಚ್‌ಐವಿ ತಡೆಗೆ ನ್ಯಾಕೊ ಸಂಸ್ಥೆಯ ಸಹಯೋಗದಲ್ಲಿ ಲಾರಿ ಚಾಲಕರು ಸೇರಿ ಅಪಾಯದ ಅಂಚಿನಲ್ಲಿರುವ ಸಮುದಾಯಗಳಿಗೆ ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. 3.79 ಲಕ್ಷ ಮಂದಿ ನೋಂದಣಿಯಾಗಿದ್ದು, ಅವರಿಗೆ 3 ತಿಂಗಳಿಗೊಮ್ಮೆ ವೈದ್ಯಕೀಯ ತಪಾಸಣೆ ಹಾಗೂ 6 ತಿಂಗಳಿಗೊಮ್ಮೆ ಎಚ್‌ಐವಿ ಸೋಂಕು ಪತ್ತೆ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಸೊಸೈಟಿ ಹೇಳಿದೆ.

ಎಚ್‌ಐವಿ ಸೋಂಕಿತರಿಗೆ ಅಂತ್ಯೋದಯ ಯೋಜನೆಯಡಿ 35 ಕೆ.ಜಿ. ಆಹಾರ ಧಾನ್ಯ ಒದಗಿಸಲಾಗುತ್ತಿದೆ. ಶಿಕ್ಷಣ ಹಾಗೂ ಆರೋಗ್ಯ ಸಂಬಂಧಿಸಿದಂತೆ ವಿವಿಧ ಯೋಜನೆಯಡಿ ಸೌಲಭ್ಯ ನೀಡಲಾಗುತ್ತಿದೆ ಎಂದು ಸೊಸೈಟಿ ಪ್ರಕಟಣೆಯಲ್ಲಿ ತಿಳಿಸಿದೆ.

## ಪೋಷಕರ ಮಡಿಲು ಸೇರಿದ ಇಬ್ಬರು ಮಕ್ಕಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಬಂಗಾಳದಿಂದ ಆಕಸ್ಮಿಕವಾಗಿ ತಪ್ಪಿಸಿಕೊಂಡು ಬಂಗಾರಪೇಟೆ ರೈಲು ನಿಲ್ದಾಣಕ್ಕೆ ಬಂದಿದ್ದ ಇಬ್ಬರು ಮಕ್ಕಳನ್ನು ರೈಲ್ವೆ ಪೊಲೀಸರು ರಕ್ಷಿಸಿ ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳ ನೆರವಿನಿಂದ ಆ ಮಕ್ಕಳು ಪೋಷಕರ ಮಡಿಲು ಸೇರಿದ್ದಾರೆ.

ನವೆಂಬರ್ 28ರಂದು ಬಂಗಾರಪೇಟೆ ರೈಲ್ವೆ ನಿಲ್ದಾಣಕ್ಕೆ ಮಕ್ಕಳು ಬಂದಿದ್ದರು. ಪೊಲೀಸರು ಅವರನ್ನು ವಿಚಾರಿಸಿದಾಗ ಪಶ್ಚಿಮ ಬಂಗಾಳದ ಮೂಲದವರು ಎಂಬುದು ತಿಳಿದುಬಂತು.

ಬಳಿಕ ಅವರ ತಂದೆಯ ಮೊಬೈಲ್ ಸಂಖ್ಯೆ ಪತ್ತೆ ಮಾಡಿ ವಿಡಿಯೊ ಕಾಲ್ ಮಾಡಲಾಯಿತು. ಮಕ್ಕಳು ತಂದೆ–ತಾಯಿ ಪತ್ತೆ ಮಾಡಿದರು. ಪೋಷಕರನ್ನು ಕಾಡುಗೋಡಿ ಪೊಲೀಸ್ ಠಾಣೆಗೆ ಕರೆಸಿ ಮಕ್ಕಳನ್ನು ಸುರಕ್ಷಿತವಾಗಿ ಕಳುಹಿಸಲಾಯಿತು ಎಂದು ಮೂಲಗಳು ತಿಳಿಸಿವೆ.

## ನೇಪಾಳದ ಯುವತಿ ಕೊಲೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ



ಕೃಷ್ಣಕುಮಾರಿ

ಸಂತೋಷ್

ಬೆಂಗಳೂರು: ರಾಮಮೂರ್ತಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಹೊಯ್ಸಳ ನಗರದ ಟಿ.ಸಿ ಪಾಳ್ಯದಲ್ಲಿ ನೆಲೆಸಿದ್ದ ನೇಪಾಳದ ಕೃಷ್ಣಕುಮಾರಿ ಅಮ್ಮೆ (23) ಎಂಬ ಯುವತಿಯನ್ನು ಯುವಕ ಕೊಲೆ ಮಾಡಿದ್ದಾನೆ.

ಆರೋಪಿ ನೇಪಾಳದ ಸಂತೋಷ್ ಧಮಿ (25) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಹೆವನ್ ಯೂನಿಸೆಕ್ಸ್ ಅಂಡ್ ಸ್ಪಾದಲ್ಲಿ ಕೃಷ್ಣಕುಮಾರಿ ಕೆಲಸ ಮಾಡುತ್ತಿದ್ದರು.

'ಟಿ.ಸಿ ಪಾಳ್ಯದ ಮುಖ್ಯರಸ್ತೆಯ ಬ್ಲಾಕ್ ಅಂಡ್ ವೈಟ್ ಎಂಆರ್‌ಪಿ ಶಾಪ್ 5ನೇ ಮಹಡಿಯ ಕೊಠಡಿಯಲ್ಲಿ ಇಬ್ಬರೂ ಸಹಜೀವನ ನಡೆಸುತ್ತಿದ್ದರು. ಮಂಗಳವಾರ ರಾತ್ರಿ ಇಬ್ಬರ ನಡುವೆ ಗಲಾಟೆ ನಡೆದಿದ್ದು, ಸಂತೋಷ್ ಧಮಿ ಆಕೆಯ ಮೇಲೆ ಹಲ್ಲೆ ನಡೆಸಿದ್ದರಿಂದ ಮೃತಪಟ್ಟಿದ್ದಾರೆ' ಎಂದು ಡಿಸಿಪಿ ಭೀಮಾಶಂಕರ್ ಗುಳೇದ ತಿಳಿಸಿದರು.

'ಸಹಜೀವನ ನಡೆಸುತ್ತಿದ್ದರೂ ಮತ್ತೊಬ್ಬ ಯುವಕನ ಜೊತೆಗೆ ಅನೈತಿಕ ಸಂಬಂಧ ಇರಿಸಿಕೊಂಡಿದ್ದಕ್ಕೆ ಹಲ್ಲೆ ನಡೆಸಿದ್ದೇನೆ ಎಂದು ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ. ಮಂಗಳವಾರ ರಾತ್ರಿ 9.30ರ ವೇಳೆಗೆ ಸ್ನೇಹಿತರಿಗೆ ವಿಡಿಯೊ ಕಾಲ್ ಮಾಡಿದಾಗ ಹಲ್ಲೆ ನಡೆಸುತ್ತಿರುವುದು ಕಾಣಿಸಿತ್ತು. ಇಬ್ಬರೂ ನೆಲೆಸಿದ್ದ ಸ್ಥಳಕ್ಕೆ ನಿರ್ಮಲಾ, ಸೋನು ರ್‍ಯಾಪಿಡೊ ಬೈಕ್‌ನಲ್ಲಿ ಬಂದು ನೋಡುವಷ್ಟರಲ್ಲಿ ಕೃಷ್ಣಕುಮಾರಿ ಮಂಚದ ಮೇಲೆ ರಕ್ತದಮಡುವಿನಲ್ಲಿ ಬಿದ್ದಿದ್ದರು. ಇಬ್ಬರು ಸ್ನೇಹಿತರು ಆಸ್ಪತ್ರೆಗೆ ದಾಖಲಿಸುವಷ್ಟರಲ್ಲಿಯೇ ಆಕೆ ಮೃತಪಟ್ಟಿದ್ದರು' ಎಂದರು.

'ಇಬ್ಬರೂ ಪ್ರತ್ಯೇಕ ಸ್ಪಾಗಳಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರ ನಡುವೆ ಸ್ನೇಹ ಬೆಳೆದು ಸಹ ಜೀವನ ನಡೆಸುತ್ತಿದ್ದರು. ಸಂತೋಷ್ ಮೂರು ವರ್ಷಗಳ ಹಿಂದೆ ನೇಪಾಳದಿಂದ ಬೆಂಗಳೂರಿಗೆ ಬಂದಿದ್ದ. ಈತ ಫುಟ್‌ಬಾಲ್ ಆಟಗಾರ' ಎಂದು ಮೂಲಗಳು ತಿಳಿಸಿವೆ.

## ₹ 3.50 ಲಕ್ಷ ಮೌಲ್ಯದ ಬೈಕ್‌ಗಳ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಹೆಗ್ಗನಹಳ್ಳಿ ಕ್ರಾಸ್‌ನ ಸಂಜೀವಿನಿ ಪುರದ ಸಾಗರ್ (19) ಹಾಗೂ ಅಂದ್ರಹಳ್ಳಿ ಮುಖ್ಯರಸ್ತೆಯ ಚೇತನ್ ವೃತ್ತದ ಬನಶಂಕರಿ ಜನರಲ್ ಸ್ಟೋರ್ ಬಳಿಯ ನಿವಾಸಿ ಗಣೇಶ್ (20) ಬಂಧಿತ ಆರೋಪಿಗಳು.

'ಬಂಧಿತರು ಬ್ಯಾಡರಹಳ್ಳಿ, ಕಾಮಾಕ್ಷಿಪಾಳ್ಯ, ಯಶವಂತಪುರ, ಹಾಗೂ ಕ್ಯಾತಸಂದ್ರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಕಳವು ಮಾಡಿ ಗ್ಯಾರೇಜ್‌ಗಳಿಗೆ ಮಾರಾಟ ಮಾಡುತ್ತಿದ್ದರು. ಬಂಧಿತರಿಂದ ₹ 3.50 ಲಕ್ಷದ ಬೈಕ್ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಸಂಕ್ಷಿಪ್ತ ಸುದ್ದಿ

### ಡಿಸೆಂಬರ್ 2ರಿಂದ ಯೋಗಾಸನ ವಿಶ್ವಕಪ್

ಬೆಂಗಳೂರು: ಇಂಟರ್‌ನ್ಯಾಷನಲ್ ಯೋಗ ಸ್ಪೋರ್ಟ್ಸ್ ಫೆಡರೇಷನ್ (ಐವೈಎಸ್‌ಎಫ್) ವತಿಯಿಂದ ಡಿ. 2ರಿಂದ 4ರವರೆಗೆ 'ಯೋಗಾಸನ ಕ್ರೀಡೆಗಳ ವಿಶ್ವಕಪ್–2022' ಅನ್ನು ಕೆಂಪೇಗೌಡ ನಗರದಲ್ಲಿರುವ ಎಸ್–ವ್ಯಾಸ ಡೀಮ್ಡ್ ಯುನಿವರ್ಸಿಟಿಯಲ್ಲಿ ಆಯೋಜಿಸಲಾಗಿದೆ.

'ಯೋಗಾಸನ ಕ್ರೀಡೆಗಳ ವಿಶ್ವಕಪ್‌ನಲ್ಲಿ ವಿಶ್ವದ 28 ದೇಶಗಳ 148 ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಈ ಸ್ಪರ್ಧೆಯ ಭಾಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಕಾಶ್ಮೀರ ಮತ್ತು ಕನ್ಯಾಕುಮಾರಿಯಿಂದ 150 ಮೋಟರ್ ಬೈಕ್ ಸವಾರರು ಭಾಗವಹಿಸಲಿದ್ದಾರೆ' ಎಂದು ಎಸ್–ವ್ಯಾಸ್ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಎಚ್.ಎನ್. ನಾಗೇಂದ್ರ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾರ್ಯಕ್ರಮವನ್ನು ಕೇಂದ್ರ ಯುವಜನ ಮತ್ತು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್. ಅಶೋಕ, ಶಾಸಕ ಎಂ. ಕೃಷ್ಣಪ್ಪ, ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ಭಾಗವಹಿಸಲಿದ್ದಾರೆ ಎಂದರು.

### ಕಮಾಂಡರ್ಸ್ ಸಮ್ಮೇಳನ

ಬೆಂಗಳೂರು: 2 ದಿನಗಳ 'ಟ್ರೈನಿಂಗ್ ಕಮಾಂಡರ್ಸ್' ಸಮ್ಮೇಳನ ಡಿ.1ರಿಂದ ನಗರದಲ್ಲಿ ಆರಂಭವಾಗಲಿದೆ. ವಿವಿಧ ತರಬೇತಿ ಸಂಸ್ಥೆಗಳಲ್ಲಿನ ಕಮಾಂಡರ್‌ಗಳು ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸಮ್ಮೇಳನದಲ್ಲಿ ಭಾರತೀಯ ವಾಯು ಪಡೆ ತರಬೇತಿ ವಿಭಾಗದ ಮುಖ್ಯಸ್ಥ ಏರ್ ಮಾರ್ಷಲ್ ಮಾನವೇಂದ್ರ ಸಿಂಗ್ ಪಾಲ್ಗೊಳ್ಳಲಿದ್ದಾರೆ. ಡಿ.2ರಂದು ಭಾರತೀಯ ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಕಮಾಂಡರ್ಸ್‌ಗಳನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.

### ಕಾರ್ಯಾಗಾರ

ಬೆಂಗಳೂರು: ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಹಾಗೂ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕುರಿತು ಲೋಕಾಯುಕ್ತ ಸಂಸ್ಥೆಯ ಪೊಲೀಸ್ ಅಧಿಕಾರಿಗಳಿಗೆ ಶುಕ್ರವಾರದಿಂದ ಎರಡು ದಿನಗಳ ಕಾಲ ಕಾರ್ಯಾಗಾರ ಆಯೋಜಿಸಲಾಗಿದೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲು ಮಾಡುವುದು, ತನಿಖೆ ನಡೆಸುವುದು, ಸಾಕ್ಷ್ಯ ಸಂಗ್ರಹ, ಆರೋಪಪಟ್ಟಿ ಸಲ್ಲಿಸುವುದು ಮತ್ತಿತರ ವಿಷಯಗಳ ಕುರಿತು ಚಿಂತನ–ಮಂಥನ ನಡೆಯಲಿದೆ. ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ, ನಿವೃತ್ತ ಪೊಲೀಸ್ ಮಹಾನಿರ್ದೇಶಕ ರೂಪಕ್ ಕುಮಾರ್ ದತ್ತ ಸೇರಿದಂತೆ ಹಲವು ಅಧಿಕಾರಿಗಳು ಮಾತನಾಡಲಿದ್ದಾರೆ.

## ಕುವೆಂಪು: ಯುವ ಮಂಥನ ಲೇಖನ ಸ್ಪರ್ಧೆ

ಬೆಂಗಳೂರು: ತುಮಕೂರು ವಿಶ್ವವಿದ್ಯಾಲಯದ ಕುವೆಂಪು ಅಧ್ಯಯನ ಪೀಠ ಹಾಗೂ ಬುಕ್ ಬ್ರಹ್ಮ ಸಂಸ್ಥೆ ಜಂಟಿಯಾಗಿ 'ಕುವೆಂಪು: ಯುವ ಮಂಥನ' ಲೇಖನ ಸ್ಪರ್ಧೆ ಆಯೋಜಿಸಿವೆ.

ಕುವೆಂಪು ಅವರ ನಾಡು–ನುಡಿ ಚಿಂತನೆ, ವೈಚಾರಿಕ ಪ್ರಜ್ಞೆ, ವೈಜ್ಞಾನಿಕ ದೃಷ್ಟಿ, ಆಧ್ಯಾತ್ಮಿಕ ಮನೋಧರ್ಮಗಳನ್ನು ಅರಿಯುವ ಬಗೆಗಳನ್ನು ಈ ಲೇಖನಗಳು ಒಳಗೊಂಡಿರಬೇಕು. ಲೇಖನಗಳು ವಿಮರ್ಶಾತ್ಮಕ ಒಳನೋಟಗಳನ್ನು ಹೊಂದಿರಬೇಕು. 2 ಸಾವಿರ ಪದಗಳನ್ನು ಮೀರಬಾರದು. 35 ವರ್ಷದೊಳಗಿನ ಲೇಖಕರು ಎಲ್ಲಿಯೂ ಪ್ರಕಟವಾಗದ ಲೇಖನ ಕಳುಹಿಸಬೇಕು.

ಮೊದಲ ಬಹುಮಾನ ₹5 ಸಾವಿರ ನಗದು ಮತ್ತು ₹3 ಸಾವಿರ ಮೊತ್ತದ ಪುಸ್ತಕ, ಎರಡನೇ ಬಹುಮಾನ ₹3 ಸಾವಿರ ಮತ್ತು ₹2 ಸಾವಿರ ಮೊತ್ತದ ಪುಸ್ತಕ, ಮೂರನೇ ಬಹುಮಾನ ₹2 ಸಾವಿರ ಮತ್ತು ₹1 ಸಾವಿರ ಮೊತ್ತದ ಪುಸ್ತಕ ನೀಡಲಾಗುವುದು.

ಕುವೆಂಪು ಅವರ ವಿಚಾರಕ್ರಾಂತಿಗೆ ಆಹ್ವಾನ, ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ಸಂಸ್ಕೃತಿ ಕರ್ನಾಟಕ, ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ವಿದ್ಯಾರ್ಥಿಗಳಿಗೇಕೆ ಸಾಹಿತ್ಯ, ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ, ಬಹುಜಿಹ್ವಾ ಭಾರತಿಗೆ ಏಕತೆಯ ಆರತಿ ಲೇಖನಗಳನ್ನು ಆಧರಿಸಿ ಲೇಖನ ಸಿದ್ಧಪಡಿಸಬೇಕು. ಆಯ್ದ ಅತ್ಯುತ್ತಮ ಲೇಖನಗಳನ್ನು ಮುಂದೆ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುವುದು.

ಡಿ.15ರೊಳಗೆ ಪ್ರಧಾನ ಸಂಪಾದಕರು, ಬುಕ್ ಬ್ರಹ್ಮ, ಮೂರನೇ ಮಹಡಿ, ಆರ್.ಕೆ ಕಾಂಪ್ಲೆಕ್ಸ್, ಕೆಎಸ್‌ಎಸ್‌ಐಡಿಸಿ ಕಾಂಪೌಂಡ್, ಎಲೆಕ್ಟ್ರಾನಿಕ್ಸ್ ಸಿಟಿ ಫೇಸ್-1, ಬೆಂಗಳೂರು–560100(ಮೊಬೈಲ್ ನಂಬರ್ : 7892608118, ಇಮೇಲ್ ಐಡಿ: nimagaagi@bookbrahma.com) ಲೇಖನಗಳನ್ನು ತಲುಪಿಸಬೇಕು ಎಂದು ಬುಕ್ ಬ್ರಹ್ಮ ಸಂಸ್ಥೆ ತಿಳಿಸಿದೆ.

## ಚಿತ್ರಾವಳಿ

ಬಿಬಿಎಂಪಿ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಬುಧವಾರ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮವನ್ನು ವಿಶೇಷ ಆಯುಕ್ತರಾದ ಪಿ.ಎನ್. ರವೀಂದ್ರ, ಡಾ. ದೀಪಕ್, ಜಯರಾಮ್ ರಾಯಪುರ, ಹರೀಶ್ ಕುಮಾರ್ ಉದ್ಘಾಟಿಸಿದರು

ನಗರದ ಜ್ಯೋತಿನಿವಾಸ್ ಕಾಲೇಜಿನಲ್ಲಿ ನಡೆದ ನುಡಿಹಬ್ಬ–2022ರ ಕಾರ್ಯಕ್ರಮವನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಅವರು ಬುಧವಾರ ಉದ್ಘಾಟನೆ ಮಾಡಿದರು. ನಿರ್ದೇಶಕ ಇಂದ್ರಜಿತ್ ಲಂಕೇಶ್, ಕೃಷಿ ಮಾರಾಟ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ವಸುಂಧರಾ ಕದಲೂರು, ಪ್ರಾಂಶುಪಾಲರಾದ ಲಲಿತಾ ಥಾಮಸ್ ಇದ್ದರು.

ಬೆಂಗಳೂರು ವಕೀಲರ ಸಂಘದ ಹೈಕೋರ್ಟ್ ಘಟಕಕ್ಕೆ ಸೋಮವಾರ ಅವಿರೋಧವಾಗಿ ಆಯ್ಕೆಯಾದ ಜಂಟಿ ಕಾರ್ಯದರ್ಶಿ ಎಂ.ಚಾಮರಾಜ (ಎಡದಿಂದ ಎರಡನೆಯವರು) ಮತ್ತು ಉಪಾಧ್ಯಕ್ಷ ಟಿ.ಬಾಲಕೃಷ್ಣ (ಎಡದಿಂದ ನಾಲ್ಕನೆಯವರು) ಅವರನ್ನು ಸಂಘದ ಪದಾಧಿಕಾರಿಗಳು ಪುಷ್ಪಮಾಲೆ ಹಾಕಿ ಅಭಿನಂದಿಸಿದರು.

## 1013 ನೌಕರರ ಅಂತರ ನಿಗಮ ವರ್ಗಾವಣೆ

**ಬೆಂಗಳೂರು:** ಅಂತರ ನಿಗಮ ವರ್ಗಾವಣೆಗೆ ಕೋರಿ ಅರ್ಜಿ ಸಲ್ಲಿಸಿದ್ದ 4,665 ಸಾರಿಗೆ ಸಂಸ್ಥೆಗಳ ನೌಕರರ ಪೈಕಿ 1,013 ನೌಕರರನ್ನು ವರ್ಗಾವಣೆ ಮಾಡಿ ಕೆಎಸ್‌ಆರ್‌ಟಿಸಿ ಆದೇಶ ಹೊರಡಿಸಿದೆ.

ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ- 4ರ ನೌಕರರ ವರ್ಗಾವಣೆಯ ಆದೇಶ ಪತ್ರಗಳನ್ನು ಕೆಎಸ್‌ಆರ್‌ಟಿಸಿ ವೆಬ್‌ಸೈಟ್ ksrtc. karnataka.gov.inನಲ್ಲಿ ಬುಧವಾರ ಪ್ರಕಟಿಸಿದೆ. ಸೇವಾ ಜೇಷ್ಠತೆ ಮತ್ತು ಖಾಲಿ ಹುದ್ದೆಗಳಿಗೆ ಅನುಗುಣವಾಗಿ ಕೌನ್ಸೆಲಿಂಗ್ ಮೂಲಕ ವಿಭಾಗಗಳಿಗೆ ಹಂಚಿಕೆ ಮಾಡಲಾಗುವುದು ಎಂದು ಕೆಎಸ್‌ಆರ್‌ಟಿಸಿ ನಿರ್ದೇಶಕರು(ಸಿಬ್ಬಂದಿ ಮತ್ತು ಜಾಗೃತ) ತಿಳಿಸಿದ್ದಾರೆ.

ಡಿ.5ರಿಂದ 15ರ ತನಕ ವೆಬ್‌ಸೈಟ್‌ನಲ್ಲಿ (ksrtc.org/counseling) ಕೌನ್ಸೆಲಿಂಗ್ ನಡೆಸಲಾಗುವುದು. ಈ ಪ್ರಕ್ರಿಯೆ ಸಂಪೂರ್ಣ ಆನ್‌ಲೈನ್‌ನಲ್ಲಿ ನಡೆಯುವುದರಿಂದ ಲಿಖಿತ ಅರ್ಜಿಗಳ ಆಧಾರದ ಮೇಲೆ ಯಾವುದೇ ಕ್ರಮ ವಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ: ಹೈಕೋರ್ಟ್‌ಗೆ ಸರ್ಕಾರ ಮನವಿ

# ಮತ್ತೆ 3 ತಿಂಗಳ ಕಾಲಾವಕಾಶ ಕೋರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆ ನಡೆಸಲು ಮತ್ತೆ ಮೂರು ತಿಂಗಳ ಕಾಲಾವಕಾಶ ಬೇಕು' ಎಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಮನವಿ ಮಾಡಿದೆ.

ಈ ಕುರಿತ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ ಹಾಜರಾಗಿ ನ್ಯಾಯಪೀಠಕ್ಕೆ ಈ ಮನವಿ ಸಲ್ಲಿಸಿದರು.

'ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ನ ನಿರ್ದೇಶನದ ಅನುಸಾರ ಬಿಬಿಎಂಪಿಯ 243 ವಾರ್ಡ್‌ಗಳಲ್ಲಿ ಪರಿಶಿಷ್ಟ ಜಾತಿ-ಪರಿಶಿಷ್ಟ ವರ್ಗ (ಎಸ್ಸಿ, ಎಸ್ಟಿ), ಹಿಂದುಳಿದ ವರ್ಗಗಳ ಎ ಮತ್ತು ಬಿ ಗೆ ಮೀಸಲಾತಿ ನಿಗದಿಪಡಿಸುವ ನಿಟ್ಟಿನಲ್ಲಿ ರಾಜಕೀಯ ಮೀಸಲಾತಿಗೆ ಅರ್ಹರಿರುವ ವರ್ಗಗಳ ವಿವರವಾದ ಪಟ್ಟಿಯನ್ನು ಸಲ್ಲಿಸುವಂತೆ ನ್ಯಾಯಮೂರ್ತಿ ಕೆ.ಭಕ್ತವತ್ಸಲ ನೇತೃತ್ವದ ಆಯೋಗಕ್ಕೆ ಪತ್ರ ಬರೆಯಲಾಗಿದೆ' ಎಂದರು.

'ಈ ಪತ್ರವನ್ನು ಪರಿಶೀಲಿಸಿ ಆದಷ್ಟು ಬೇಗ ಪ್ರತಿಕ್ರಿಯಿಸುವುದಾಗಿ ಆಯೋಗ ತಿಳಿಸಿದೆ. ಹೊಸದಾಗಿ ಮೀಸಲಾತಿ ನಿಗದಿಪಡಿಸುವ ಮುನ್ನ ಆಯೋಗದ ನಿಲುವು ಮುಖ್ಯ. ಆದ್ದರಿಂದ, ಚುನಾವಣೆ ನಡೆಸಲು ಮೂರು ತಿಂಗಳ ಕಾಲಾವಕಾಶ ನೀಡಬೇಕು' ಎಂದು ಕೋರಿದರು.

**ಆಯೋಗದ ಆಕ್ಷೇಪ:** ಇದೇ ವೇಳೆ ಕಾಲಾವಕಾಶ ಕೋರಿ ಸರ್ಕಾರ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸುವಂತೆ ಚುನಾವಣಾ ಆಯೋಗ ಲಿಖಿತ ಆಕ್ಷೇಪಣೆ ಸಲ್ಲಿಸಿದೆ. '2022ರ ಡಿಸೆಂಬರ್ 31ರೊಳಗೆ ಬಿಬಿಎಂಪಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ಈಗಾಗಲೇ ಆದೇಶಿಸಿದೆ. ಹಾಗಾಗಿ, ಮತ್ತಷ್ಟು ಸಮಯಾವಕಾಶ ಕೋರಿರುವ ಸರ್ಕಾರದ ಈ ಅರ್ಜಿ ವಿಚಾರಣೆಗೆ ಯೋಗ್ಯವಾಗಿಲ್ಲ. ಆದ್ದರಿಂದ ಇದನ್ನು ವಜಾಗೊಳಿಸಬೇಕು' ಎಂದು ಮನವಿ ಮಾಡಿದೆ.

ಚುನಾವಣಾ ಆಯೋಗದ ಪರ ಹಾಜರಾಗಿದ್ದ ಹಿರಿಯ ವಕೀಲ ಕೆ.ಎನ್.ಫಣೀಂದ್ರ, 'ಚುನಾವಣೆ ನಡೆಸಲು ನಿರ್ದೇಶನ ಕೋರಿ ಸುಪ್ರೀಂ ಕೋರ್ಟ್‌ನಲ್ಲೂ ಅರ್ಜಿ ಸಲ್ಲಿಕೆಯಾಗಿದೆ. ಚುನಾವಣೆ ವಿಳಂಬವಾಗುತ್ತಿರುವ ಕುರಿತಂತೆ ಆಯೋಗ ಈಗಾಗಲೇ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ. ಆ ಅರ್ಜಿ ವಿಚಾರಣೆಗೆ ನಿಗದಿಯಾಗಿಲ್ಲ. ಬಹುಶಃ ಡಿಸೆಂಬರ್ 5ರೊಳಗೆ ವಿಚಾರಣೆ ನಿಗದಿಯಾಗುವ ಸಾಧ್ಯತೆಯಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಸುಪ್ರೀಂ ಕೋರ್ಟ್ ವಿಚಾರಣೆ ಏನಾಗುತ್ತದೆ ಎಂಬುದನ್ನು ನೋಡಿಕೊಂಡು ಮುಂದಿನ ತೀರ್ಮಾನ ಕೈಗೊಳ್ಳುವುದು ಸೂಕ್ತ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ವಿಚಾರಣೆಯನ್ನು ಡಿಸೆಂಬರ್ 6ಕ್ಕೆ ಮುಂದೂಡಿತು.

### ಸರ್ಕಾರದ ನಿಲುವಿಗೆ ಚುನಾವಣಾ ಆಯೋಗ ಆಕ್ಷೇಪ

'ಸಮಯ ವಿಸ್ತರಣೆ ಕೋರಿ ಸರ್ಕಾರ ಸಲ್ಲಿಸಿರುವ ಅರ್ಜಿಯಲ್ಲಿ ಸಕಾರಣಗಳೇ ಇಲ್ಲ. ಅರ್ಜಿ ಸಂಪೂರ್ಣ ಅಸಮರ್ಥನೀಯ. ಇದು ಚುನಾವಣೆಯನ್ನು ವಿಳಂಬಿಸುವ ಸ್ಪಷ್ಟ ಉದ್ದೇಶ ಹೊಂದಿದೆ' ಎಂದು ಚುನಾವಣಾ ಆಯೋಗ ಸರ್ಕಾರದ ನಿಲುವಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಸಂಬಂಧ 2022ರ ನವೆಂಬರ್ 24ರಂದು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಆಯೋಗವು, 'ಸರ್ಕಾರದ ಇರಾದೆ 2023ರ ಮೇ ನಂತರವೇ ಚುನಾವಣೆ ನಡೆಸಬೇಕೆಂಬ ರೀತಿಯಲ್ಲಿದೆ. ವಿಧಾನಸಭೆ ಚುನಾವಣೆ 2023ರ ಮೇ ವೇಳೆಗೆ ನಡೆಯಲಿದೆ. ಒಂದೊಮ್ಮೆ ವಿಧಾನಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟಗೊಂಡರೆ, ಪಾಲಿಕೆ ಚುನಾವಣೆ ಅನಿರ್ದಿಷ್ಟಾವಧಿಗೆ ಮುಂದೂಡಲ್ಪಡಲಿದೆ. ಆಗ ಸಂವಿಧಾನದ 243-3ನೇ ವಿಧಿ ಸ್ಪಷ್ಟವಾಗಿ ಉಲ್ಲಂಘನೆಯಾಗಲಿದೆ' ಎಂಬ ಆತಂಕ ವ್ಯಕ್ತಪಡಿಸಿದೆ. ಬಿಬಿಎಂಪಿ ಚುನಾಯಿತ ಸದಸ್ಯರ ಅವಧಿ 2020ರ ಸೆಪ್ಟೆಂಬರ್‌ನಲ್ಲೇ ಮುಕ್ತಾಯಗೊಂಡಿದೆ. ಮೀಸಲು ಪಟ್ಟಿ ಪ್ರಶ್ನಿಸಲಾದ ಅರ್ಜಿ ವಿಚಾರಣೆ ನಡೆಸಿರುವ ಹೈಕೋರ್ಟ್, 'ಬಿಬಿಎಂಪಿಯ 243 ವಾರ್ಡ್‌ಗಳಿಗೆ ನವೆಂಬರ್ 30ರೊಳಗೆ ಮೀಸಲಾತಿ ನಿಗದಿಪಡಿಸಬೇಕು ಹಾಗೂ ಡಿಸೆಂಬರ್ 31ರೊಳಗೆ ಚುನಾವಣೆ ನಡೆಸಬೇಕು' ಎಂದು ಸೆಪ್ಟೆಂಬರ್ 30ರಂದು ಆದೇಶಿಸಿತ್ತು. ಈ ಆದೇಶ ಪಾಲನೆಗೆ ಮೂರು ತಿಂಗಳ ಕಾಲ ಅವಧಿ ವಿಸ್ತರಿಸುವಂತೆ ಸರ್ಕಾರ ಇತ್ತೀಚೆಗಷ್ಟೇ ಪ್ರಮಾಣಪತ್ರ ಸಲ್ಲಿಸಿತ್ತು.

## ಮತದಾರರ ಪಟ್ಟಿ ಪರಿಷ್ಕರಣೆಗೆ ವಿಶೇಷ ಆಂದೋಲನ

**ಬೆಂಗಳೂರು:** ಶಿವಾಜಿನಗರ, ಚಿಕ್ಕಪೇಟೆ ಮತ್ತು ಮಹದೇವಪುರ ಹೊರತುಪಡಿಸಿ ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ಮತಗಟ್ಟೆ ಹಂತದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆಗೆ ವಿಶೇಷ ಆಂದೋಲನ ಆರಂಭಿಸಲಾಗಿದೆ. ಈಗಾಗಲೇ ಸಿದ್ಧಪಡಿಸಿರುವ ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ನ. 9ರಂದು ಮತದಾರರ ಕರಡು ಪಟ್ಟಿ ಪ್ರಕಟಿಸಲಾಗಿತ್ತು. ಡಿ.8ರವರೆಗೂ ಆಕ್ಷೇಪಣೆ ಸಲ್ಲಿಸಲು ಅಥವಾ ಹಕ್ಕು ಮಂಡಿಸಲು ಅವಕಾಶ ನೀಡಲಾಗಿದೆ. ಮಂಗಳವಾರದಿಂದ 4 ದಿನಗಳ ವಿಶೇಷ ಆಂದೋಲನ ಆರಂಭಿಸಿದ್ದು, ಮತಗಟ್ಟೆ ಹಂತದಲ್ಲಿ ಪರಿಶೀಲನೆಗೆ ಅವಕಾಶ ಕಲ್ಪಿಸಲಾಗಿದೆ. ಗ್ರಾಮ ಲೆಕ್ಕಾಧಿಕಾರಿ, ಮತಗಟ್ಟೆ ಅಧಿಕಾರಿ, ನೋಂದಾಯಿತ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸ್ವಯಂಸೇವಕರ ಸಹಭಾಗಿತ್ವದಲ್ಲಿ ಈ ಪ್ರಕ್ರಿಯೆ ನಡೆಸಲಾಗುತ್ತಿದೆ.

ಹೆಸರು ಸೇರ್ಪಡೆ (ನಮೂನೆ-6), ಅನಿವಾಸಿ ಭಾರತೀಯ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ (ನಮೂನೆ-6ಎ), ಮತದಾರರ ಪಟ್ಟಿಯೊಂದಿಗೆ ಆಧಾರ್ ಅಥವಾ ನಮೂನೆ 6-ಬಿಯಲ್ಲಿ ನಮೂದಿಸಿದ ಇತರ 11 ದಾಖಲೆಗಳಲ್ಲಿ ಒಂದನ್ನು ಜೋಡಿಸುವುದು (ನಮೂನೆ-6ಬಿ), ಹೆಸರು ಸೇರ್ಪಡೆ ವಿರುದ್ಧ ಆಕ್ಷೇಪಣೆ/ ಹೆಸರು ಕೈಬಿಡಲು ಕೋರಿಕೆ (ನಮೂನೆ-7) ಮತ್ತು ವಿಳಾಸ ಬದಲಾವಣೆ, ಮೊಬೈಲ್ ಸಂಖ್ಯೆ ನಮೂದಿಸುವುದು, ಅಸ್ಪಷ್ಟ ಭಾವಚಿತ್ರ ಬದಲಾವಣೆಗೆ (ನಮೂನೆ-8) ಕೋರಿಕೆ ಸಲ್ಲಿಸಲು ಡಿ.8ರವರೆಗೂ ಅವಕಾಶವಿದೆ.

ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗುವ ಹಕ್ಕು ಮಂಡನೆ ಅಥವಾ ಆಕ್ಷೇಪಣೆಗಳನ್ನು ಡಿ.26ರಂದು ವಿಲೇವಾರಿ ಮಾಡಲಾಗುವುದು. 2023ರ ಜನವರಿ 5ಕ್ಕೆ ಮತದಾರರ ಪಟ್ಟಿಯ ಅಂತಿಮ ಪ್ರಕಟಣೆ ನಡೆಯಲಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಯವರ ಪ್ರಕಟಣೆ ತಿಳಿಸಿದೆ.

# ವಾಯುವಜ್ರ ಬಸ್ ಸೇವೆ ಹೆಚ್ಚಳಕ್ಕೆ ಸಿದ್ಧತೆ

## ಟರ್ಮಿನಲ್–2: ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಬಿಎಂಟಿಸಿ ಪತ್ರ; ಮೊದಲ ವಾರದಲ್ಲೇ ಸಭೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್ ಕಾರ್ಯಾರಂಭಕ್ಕೆ ಸಜ್ಜಾಗಿದ್ದು, ವಿಮಾನ ನಿಲ್ದಾಣಕ್ಕೆ ಸಾಗುವ ಪ್ರಯಾಣಿಕರ ಸಂಖ್ಯೆ ದುಪ್ಪಟ್ಟಾಗುವ ಸಾಧ್ಯತೆ ಇದೆ. ಅದಕ್ಕೆ ತಕ್ಕಂತೆ ವಾಯುವಜ್ರ ಬಸ್‌ಗಳ ಸೇವೆ ಹೆಚ್ಚಿಸಲು ಬಿಎಂಟಿಸಿ ಸಿದ್ಧತೆ ಆರಂಭಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ನ.11ರಂದು ಉದ್ಘಾಟಿಸಿದ ಟರ್ಮಿನಲ್‌-2 ಕಾರ್ಯಾರಂಭಕ್ಕೆ ಕಾದಿದೆ. ಡಿಸೆಂಬರ್ ಕೊನೆಯ ವಾರದಲ್ಲಿ ಈ ಟರ್ಮಿನಲ್‌ನಿಂದಲೇ ಪ್ರಯಾಣಿಕರು ವಿಮಾನ ಏರಲಿದ್ದಾರೆ. ಆರಂಭದಲ್ಲಿ ದೇಶೀಯ ವಿಮಾನಗಳ ಹಾರಾಟಕಷ್ಟೇ ಅವಕಾಶ ದೊರಕಲಿದೆ. ಜನವರಿಯಲ್ಲಿ ಅಂತರರಾಷ್ಟ್ರೀಯ ವಿಮಾನಗಳ ಹಾರಾಟ ಆರಂಭಿಸಲು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ(ಬಿಐಎಎಲ್) ನಿರ್ಧರಿಸಿದೆ.

ಬಿಎಂಟಿಸಿ ವಾಯುವಜ್ರ ಬಸ್

ವಿಮಾನ ನಿಲ್ದಾಣಕ್ಕೆ ನಗರದಿಂದ ತೆರಳಲು ಸದ್ಯ ಇರುವುದು ರಸ್ತೆ ಮಾರ್ಗವಷ್ಟೆ. ಮೆಟ್ರೊ ರೈಲು ವಿಮಾನ ನಿಲ್ದಾಣದ ಆವರಣ ತಲುಪಲು 2025ರ ತನಕ ಕಾಯಬೇಕು. ಉಪನಗರ ರೈಲು ಮಾರ್ಗ ಕಲ್ಪಿಸುವ ಯೋಜನೆ ಇದ್ದರೂ, ಇನ್ನೂ ಕಾಮಗಾರಿ ಆರಂಭವಾಗುವ ಲಕ್ಷಣಗಳಿಲ್ಲ. ರೈಲು ನಿಲುಗಡೆ ತಾಣವಿದ್ದರೂ, ವಿಮಾಣ ನಿಲ್ದಾಣಕ್ಕೆ ಕೊಂಚ ದೂರದಲ್ಲಿರುವುದರಿಂದ ಪ್ರಯಾಣಿಕರ ನಿರಾಸಕ್ತಿ ವಹಿಸುತ್ತಿದ್ದಾರೆ.

ಬಿಎಂಟಿಸಿ ಬಸ್ ಮತ್ತು ಟ್ಯಾಕ್ಸಿಗಳನ್ನೇ ವಿಮಾನ ಪ್ರಯಾಣಿಕರು ಅವಲಂಬಿಸಿದ್ದಾರೆ. ಬಿಎಂಟಿಸಿಯಲ್ಲಿ ಸದ್ಯ 797 ಹವಾನಿಯಂತ್ರಿತ ವೋಲ್ವೊ ಬಸ್‌ಗಳಿದ್ದು, ಈ ಪೈಕಿ 120 ಬಸ್‌ಗಳನ್ನು 800 ಟ್ರಿಪ್‌ಗಳಲ್ಲಿ ವಾಯುವಜ್ರ ಸೇವೆಯಾಗಿ ಬಿಎಂಟಿಸಿ ಕಾರ್ಯಾಚರಣೆ ಮಾಡುತ್ತಿದೆ. ಟರ್ಮಿನಲ್‌-2 ಕಾರ್ಯಾರಂಭವಾದರೆ ಅಗತ್ಯಕ್ಕೆ ಅನುಗುಣವಾಗಿ ಇನ್ನಷ್ಟು ಬಸ್‌ಗಳನ್ನು ಈ ಮಾರ್ಗಕ್ಕೆ ಇಳಿಸಲು ತಯಾರಿ ನಡೆಸಿದೆ. ಈ ಸಂಬಂಧ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳಿಗೆ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರು ಪತ್ರ ಬರೆದಿದ್ದಾರೆ.

'ನಮ್ಮ ಪತ್ರಕ್ಕೆ ಬಿಐಎಎಲ್ ಅಧಿಕಾರಿಗಳು ಪ್ರತಿಕ್ರಿಯಿಸಿದ್ದು, ಡಿಸೆಂಬರ್ ಮೊದಲ ವಾರದಲ್ಲಿ ಚರ್ಚೆಗೆ ಆಹ್ವಾನಿಸುವುದಾಗಿ ತಿಳಿಸಿದ್ದಾರೆ. ಟರ್ಮಿನಲ್‌-2ನಲ್ಲಿ ಬಸ್ ನಿಲುಗಡೆ ತಾಣ ಹೇಗಿದೆ, ಎಷ್ಟು ಬಸ್‌ಗಳನ್ನು ಏಕಕಾಲದಲ್ಲಿ ನಿಲ್ಲಿಸಲು ಸಾಧ್ಯವಿದೆ ಎಂಬುದರ ಸ್ಥಳ ಪರಿಶೀಲನೆ ನಡೆಸಲಾಗುವುದು. ಬಳಿಕ ಅಲ್ಲಿನ ಅಧಿಕಾರಿಗಳ ಜತೆ ಮಾತುಕತೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ 'ಪ್ರಜಾವಾಣಿ'ಗೆ ತಿಳಿಸಿದರು.

### ವಾಯುವಜ್ರ ಪ್ರಯಾಣಕ್ಕೆ ಆಸಕ್ತಿ

ವಾಯುವಜ್ರ ಸೇವೆಗೆ ಇತ್ತೀಚೆಗೆ ಬೇಡಿಕೆ ಹೆಚ್ಚಾಗಿದ್ದು, ತಿಂಗಳಿಗೆ ಸರಾಸರಿ 3 ಲಕ್ಷ ವಿಮಾನ ಪ್ರಯಾಣಿಕರು ಈ ಬಸ್‌ಗಳನ್ನು ಬಳಕೆ ಮಾಡುತ್ತಿದ್ದಾರೆ ಎಂದು ಬಿಎಂಟಿಸಿ ಅಧಿಕಾರಿಗಳು ವಿವರಿಸಿದ್ದಾರೆ.

2022ರ ಜನವರಿಯಲ್ಲಿ 1.2 ಲಕ್ಷ ಇದ್ದ ಪ್ರಯಾಣಿಕರ ಸಂಖ್ಯೆ ನವೆಂಬರ್ ವೇಳೆಗೆ 3 ಲಕ್ಷಕ್ಕೆ ಏರಿಕೆಯಾಗಿದೆ. ತಿಂಗಳಿಗೆ ₹8 ಕೋಟಿಯಷ್ಟು ವರಮಾನ ಈ ಸೇವೆಯಿಂದಲೇ ಬರುತ್ತಿದೆ. ಟ್ಯಾಕ್ಸಿಗಳಲ್ಲಿ ಪ್ರಯಾಣ ದರ ಹೆಚ್ಚಾಗಿರುವುದರಿಂದ ಬಸ್ ಪ್ರಯಾಣಿಕರ ಸಂಖ್ಯೆಯಲ್ಲಿ ಹೆಚ್ಚಳ ಆಗಿರಬಹುದು ಅವರು ಹೇಳುತ್ತಾರೆ.

## ಡಿ.6ರಿಂದ ಉಚಿತ ಶ್ರವಣ ಯಂತ್ರ ವಿತರಣಾ ಶಿಬಿರ

**ಬೆಂಗಳೂರು:** ಹೆಬ್ಬಾಳದಲ್ಲಿರುವ ಸಂವಾದ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್ ಉಚಿತ ಶ್ರವಣ ಯಂತ್ರ ವಿತರಣಾ ಶಿಬಿರವನ್ನು ಡಿ.6ರಿಂದ ಡಿ.8ರವರೆಗೆ ಹಮ್ಮಿಕೊಂಡಿದೆ.

ಕೇಂದ್ರ ಸರ್ಕಾರದ ಎಡಿಐಪಿ ಯೋಜನೆ ಅಡಿ ಹೆಬ್ಬಾಳದ ಆನಂದಗಿರಿ ಎಕ್ಸ್‌ಟೆನ್ಶನ್‌ನಲ್ಲಿ ಇರುವ ಸಂಸ್ಥೆಯಲ್ಲಿ ಶ್ರವಣ ಯಂತ್ರ ವಿತರಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9663388623 ಅಥವಾ 9480295004

ರಾಮಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೊದಲ ವರ್ಷದ ಎಂಜಿನಿಯರಿಂಗ್ ತರಗತಿಗಳ ಉದ್ಘಾಟನೆ ಕಾರ್ಯಕ್ರಮ ಬುಧವಾರ ನಡೆಯಿತು. (ಎಡದಿಂದ) ಗೋಕಲ್ ಶಿಕ್ಷಣ ಫೌಂಡೇಷನ್‌ನ ಉಪಾಧ್ಯಕ್ಷ ಎಂ.ಆರ್. ಸೀತಾರಾಮ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್. ಸಡಗೋಪನ್, ಗೋಕುಲ್ ಶಿಕ್ಷಣ ಫೌಂಡೇಷನ್‌ನ ಅಧ್ಯಕ್ಷ ಎಂ.ಆರ್. ಜಯರಾಮ್ ಇದ್ದಾರೆ.

## 'ಎಎಎಐ'ಗೆ ಶ್ರೀನಿವಾಸ್ ಆಯ್ಕೆ



**ಬೆಂಗಳೂರು:** ಶ್ಲೋಕ ಅಡ್ವರ್ಟೈಸಿಂಗ್ ಪ್ರೈ.ಲಿ. ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಕೆ. ಶ್ರೀನಿವಾಸ್ ಅವರು ಭಾರತೀಯ ಜಾಹೀರಾತು ಏಜೆನ್ಸಿಗಳ ಒಕ್ಕೂಟದ (ಎಎಎಐ) ಆಡಳಿತ ಮಂಡಳಿಗೆ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಶ್ರೀನಿವಾಸ್ ಅವರಿಗೆ ಜಾಹೀರಾತು ಹಾಗೂ ಮಾರುಕಟ್ಟೆ ಕ್ಷೇತ್ರದಲ್ಲಿ ಮೂವತ್ತು ವರ್ಷಗಳಿಗೂ ಹೆಚ್ಚಿನ ಅನುಭವ ಇದೆ. ಶ್ಲೋಕ ಅಡ್ವರ್ಟೈಸಿಂಗ್ ಕಂಪನಿಯ ಬೆಳವಣಿಗೆಯಲ್ಲಿ ಶ್ರೀನಿವಾಸ್ ಅವರ ಪಾತ್ರ ಮಹತ್ವದ್ದು ಎಂದು ಪ್ರಕಟಣೆ ಹೇಳಿದೆ.

# ಶಾಸಕರ ಭವನ: ಪರಿಶಿಷ್ಟ ಗುತ್ತಿಗೆದಾರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಗುತ್ತಿಗೆದಾರರಿಗೆ ₹50 ಲಕ್ಷಗಳವರೆಗಿನ ಸರ್ಕಾರಿ ಕಾಮಗಾರಿಗಳಲ್ಲಿ ಮೀಸಲಾತಿ ಮಿತಿಯನ್ನು ₹1 ಕೋಟಿಗೆ ಹೆಚ್ಚಿಸುವಂತೆ ಒತ್ತಾಯಿಸಿ ಎಸ್‌ಸಿ–ಎಸ್‌ಟಿ ಗುತ್ತಿಗೆದಾರರು ಶಾಸಕರ ಭವನದಲ್ಲಿ ಪ್ರತಿಭಟನೆ ನಡೆಸಿದರು.

ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸಭೆ ನಡೆಯುವಾಗ ಗುತ್ತಿಗೆದಾರ ಸಂಘದ ಪ್ರತಿನಿಧಿಗಳು ಧರಣಿ ನಡೆಸಿ ಸಮಿತಿಗೆ ತಮ್ಮ ಅಹವಾಲು ಸಲ್ಲಿಸಿದರು.

ಸಮಿತಿ ಅಧ್ಯಕ್ಷ ಹಾಗೂ ಶಾಸಕ ಎಂ.ಪಿ.ಕುಮಾರಸ್ವಾಮಿ ಅವರು ಮನವಿಯನ್ನು ಸ್ವೀಕರಿಸಿ, ಮುಂದಿನ ವಾರ ನಡೆಯುವ ಸಮಿತಿಯ ಸಭೆಯಲ್ಲಿ ವಿಷಯವನ್ನು ಕೈಗೆತ್ತಿಕೊಳ್ಳಲಾಗುವುದು. ಅಲ್ಲಿ ಈ ಸಂಬಂಧ ತೀರ್ಮಾನ ತೆಗೆದುಕೊಂಡು ಮುಖ್ಯಮಂತ್ರಿ ಅವರ ಬಳಿ ನಿಯೋಗ ಒಯ್ಯುವುದಾಗಿ ಭರವಸೆ ನೀಡಿದರು ಎಂದು ಸಂಘದ ರಾಜ್ಯಾಧ್ಯಕ್ಷ ಎನ್.ಮಹದೇವಸ್ವಾಮಿ ತಿಳಿಸಿದರು.

ಶಾಸಕರ ಭವನದಲ್ಲಿ ಪ್ರತಿಭಟನೆ ನಡೆಸಿದ ಗುತ್ತಿಗೆದಾರರು

ಮೀಸಲಾತಿ ಮಿತಿ ಹೆಚ್ಚಿಸುವ ಬಗ್ಗೆ ಮುಖ್ಯಮಂತ್ರಿಯವರಿಗೆ ಅನೇಕ ಬಾರಿ ಮನವಿ ಮಾಡಿದ್ದೆವು. ಈ ಸಂಬಂಧ ಸೂಕ್ತ ಕ್ರಮ ತೆಗೆದುಕೊಳ್ಳಲು ಆರ್ಥಿಕ ಇಲಾಖೆಗೆ ಮುಖ್ಯಮಂತ್ರಿಯವರು ಸೂಚಿಸಿದ್ದರು. ಆರ್ಥಿಕ ಇಲಾಖೆ ಗುತ್ತಿಗೆ ಕಾಮಗಾರಿಗಳ ಮೀಸಲಾತಿ ಮಿತಿಯನ್ನು ₹50 ಲಕ್ಷದಿಂದ ₹1 ಕೋಟಿಗೆ ಹೆಚ್ಚಿಸಲು ಮುಖ್ಯಮಂತ್ರಿಯವರಿಗೆ ಕಡತ ಮಂಡಿಸಲಾಗಿದೆ. ಆದರೆ, ಮುಖ್ಯಮಂತ್ರಿಯವರು ಈವರೆಗೂ ಅನುಮೋದನೆ ನೀಡಿಲ್ಲ ಎಂದು ಅವರು ಹೇಳಿದರು.

ಅಲ್ಲದೇ, ಜಾರಿಯಲ್ಲಿರುವ ಮೀಸಲು ಗುತ್ತಿಗೆ ಕಾಮಗಾರಿಗಳಲ್ಲಿ ಈ ಸಮುದಾಯಗಳವರು ಪಾಲ್ಗೊಳ್ಳದಂತೆ ತಡೆಯಲು ಕಳೆದ ಮೇ ತಿಂಗಳಲ್ಲಿ ಸುತ್ತೋಲೆಯೊಂದನ್ನು ಹೊರಡಿಸಲಾಗಿದೆ ಎಂದೂ ಮಹದೇವಸ್ವಾಮಿ ದೂರಿದರು.


## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-201/2065/2022–23 ದಿನಾಂಕ: 30.11.2022

### ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ (Staff Quarters and Hostels) ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ–ಗು | ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1 | ಮೆ॥ ನಿಟ್ಟೇ ಎಜುಕೇಷನ್ ಟ್ರಸ್ಟ್ 6ನೇ ಮಹಡಿ, ಯೂನಿವರ್ಸಿಟಿ ಎನ್ ಕ್ಲೇವ್ ಮೆಡಿಕಲ್ ಸೈನ್ಸ್ ಕಾಂಪ್ಲೆಕ್ಸ್, ದೇವಳಕಟ್ಟೆ ಮಂಗಳೂರು–575 018. | ಯಲಹಂಕ | ಹೆಸರಘಟ್ಟ | ಕೃಷ್ಣ ರಾಜಪುರ | 6/5, 16/1ಪಿ, 16/2ಪಿ, ಮತ್ತು 18/8ಪಿ | ಒಟ್ಟು 04 ಎಕರೆ 19.25 ಗುಂಟೆ | ವ್ಯವಸಾಯ | ವಸತಿ (Staff Quarters and Hostels) |

**ಷರಾ:** ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ (Staff Quarters and Hostels) ಉಪಯೋಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಸತಿಗೃಹ ಮತ್ತು ವಸತಿ ನಿಲಯಗಳನ್ನು ನಿರ್ಮಾಣ ಮಾಡುವುದರಿಂದ ಸದರಿ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವ / ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಮತ್ತು ಅಧಿಕಾರಿ/ನೌಕರರಿಗೆ ಯಾವುದೇ ಶುಲ್ಕವಿಲ್ಲದೇ ವಸತಿ ಸೌಕರ್ಯ ಕಲ್ಪಿಸಲು ಅನುಕೂಲವಾಗುತ್ತದೆ, ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕಕರ ಉಪಯೋಗಕ್ಕೆ ಲಭ್ಯವಾಗುತ್ತದೆ ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ (Staff Quarters and Hostels)' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/189/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು


## ನಗರದಲ್ಲಿ ಇಂದು

**ದಕ್ಷಿಣ ಭಾರತ ವಿಜ್ಞಾನ ನಾಟಕೋತ್ಸವ:** ಉದ್ಘಾಟನೆ: ಬಿ.ವಿ. ರಾಜಾರಾಮ್, ಅತಿಥಿಗಳು: ಅನ್ನಪೂರ್ಣ ಸುಬ್ರಮಣ್ಯಂ, ಆಯೋಜನೆ ಮತ್ತು ಸ್ಥಳ: ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಕಸ್ತೂರಬಾ ರಸ್ತೆ, ಬೆಳಿಗ್ಗೆ 9.30

**ಶೈಲಜಾ ಎನ್. ಗಿರಿಧರ್, ಟಿ.ಎಸ್. ಶಶಿಕಲಾ, ವಿಜಯಲಕ್ಷ್ಮಿ ಸೆಂಥಿಲ್ ಕುಮಾರ್ ಅವರ 'ವರ್ಣಚಿತ್ರ ಮತ್ತು ಛಾಯಾಚಿತ್ರಗಳ' ಪ್ರದರ್ಶನ:** ಅತಿಥಿಗಳು: ಬಿ.ಎಲ್. ಶಂಕರ್, ಎಂ.ಜೆ. ಕಮಲಾಕ್ಷಿ, ಕೆ.ಎಸ್. ಅಪ್ಪಾಜಯ್ಯ, ಎಸ್.ಎನ್. ಶ್ರೀಧರ್, ಆಯೋಜನೆ: ಆಸ್ಮಿತೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಸಂಜೆ 4.30

ಶೈಲಜಾ ಎನ್. ಗಿರಿಧರ್ ಅವರ ವರ್ಣಚಿತ್ರ

**ಎಂ.ಬಿ. ಕಟ್ಟಿ ಸಂಪಾದಿಸಿದ 'ಪ್ರೊ. ಮಲ್ಲೇಪುರಂ: ಪರಿಸ್ಪಂದನ ಕೃತಿ ಬಿಡುಗಡೆ ಹಾಗೂ ಪ್ರೊ. ಮಲ್ಲೇಪುರಂ ಪುರಸ್ಕಾರ ಪ್ರಶಸ್ತಿ ಪ್ರದಾನ:** ಕೃತಿ ಬಿಡುಗಡೆ: ಗುರುರಾಜ ಕರಜಗಿ, ಅಧ್ಯಕ್ಷತೆ: ಎಸ್.ಸಿ. ಶರ್ಮಾ, ಅತಿಥಿಗಳು: ಬಿ.ವಿ. ವಸಂತಕುಮಾರ್, ಪುರಸ್ಕೃತರು: ಜಗದೀಶ ಶಿವಯ್ಯ ಗುಡಗುಂಟಿಮಠ, ಉಪಸ್ಥಿತಿ: ಮಲ್ಲೇಪುರಂ.ಜಿ. ವೆಂಕಟೇಶ, ಆಯೋಜನೆ: ಅನ್ನಪೂರ್ಣ ಪಬ್ಲಿಕೇಷನ್ಸ್, ಸಿವಿಜಿ ಪಬ್ಲಿಕೇಷನ್ಸ್, ಉದಯ ಪ್ರಕಾಶನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಸಂಜೆ 5.30

**ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕ್ರೀಡಾಂಗಣದ ಉದ್ಘಾಟನೆ:** ಬಸವರಾಜ ಬೊಮ್ಮಾಯಿ, ಅತಿಥಿಗಳು: ಆರಗ ಜ್ಞಾನೇಂದ್ರ, ಅಧ್ಯಕ್ಷತೆ: ಉದಯ್.ಬಿ. ಗರುಡಾಚಾರ್, ಸ್ಥಳ: ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಸಂಜೆ 5

**ತಿಂಗಳ ಉಪನ್ಯಾಸ: ವಿಷಯ: ವಚನಗಳು ಹಾಗೂ ಶರಣರ ಚಿಂತನೆ,** ಉಪನ್ಯಾಸಕರು: ಆರ್.ಜಿ. ಹಳ್ಳಿ ನಾಗರಾಜ, ಅತಿಥಿಗಳು: ವಿ. ಪ್ರಭುದೇವ್, ಉಪಸ್ಥಿತಿ: ಸದಾನಂದಮೂರ್ತಿ, ಅರವಿಂದ್, ಆಯೋಜನೆ: ಎಚ್.ಎಸ್. ಆರ್ ಬಡಾವಣೆ ಲಿಂಗಾಯತ ಬಳಗ, ಸ್ಥಳ: 837, 26ನೇ ಮುಖ್ಯರಸ್ತೆ, 11ನೇ ಕ್ರಾಸ್, ಎಚ್.ಎಸ್. ಆರ್ ಬಡಾವಣೆ, ಸಂಜೆ 6.30

**ದಾಸಗಾನಾಮೃತ:** ಗಾಯನ: ಭವಾನಿ ಭುವನ್, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಭವಾನಿ ಭುವನ್


## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-248/2053/2022–23 ದಿನಾಂಕ: 30.11.2022

### ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ–2015 ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 540 ಬೆಂಆಸೇ 2004, ದಿನಾಂಕ 22/06/2007 ರಲ್ಲಿ ಅನುಮೋದನೆಯಾಗಿದ್ದು ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(2) ರಡಿಯಲ್ಲಿ ಪ್ರಶ್ನಿತ ಜಮೀನುಗಳ ಸಾರಿಗೆ ಮತ್ತು ಸಂಪರ್ಕ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ–ಗು | ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1 | ಶ್ರೀ.ಆರ್.ಶಂಕರ್ | ಬೆಂಗಳೂರು (ಪೂರ್ವ) | ಕೆ.ಆರ್.ಪುರಂ | ಕೊತ್ತನೂರು | 8/1 | 2–32.50 | ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ | ವಾಣಿಜ್ಯ |
| | | | ಬಿದರಹಳ್ಳಿ | ಬೈರತಿ | 106/1 107 | | | |

BDA/PRO/CLU/178/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು



ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (LEOS) ಪೀಣ್ಯ, ಬೆಂಗಳೂರು-560058
ಲಿಯೋಸ್ ನಿರ್ಮಾಣ ಮತ್ತು ನಿರ್ವಹಣೆ ಗುಂಪು (LCMG)
[ಫೋನ್: (080) - 22685088, 5193, 5093, 5086- Fax- (080) - 28392310 ]

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ (ಎನ್‌ಐಇಟಿ)
ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಗಳಿಗಾಗಿ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

**ಕೆಲಸದ ಹೆಸರು**: ಅಡ್ಮಿನ್ ಬ್ಲಾಕ್, ಲಿಯೋಸ್ ಪೀಣ್ಯ, ಬೆಂಗಳೂರು-58 ರಲ್ಲಿ ಉಪನ್ಯಾಸ ಸಭಾಂಗಣಕ್ಕಾಗಿ ಹೊರ ಆವರಣದ ಸಿವಿಲ್ ಕೆಲಸದೊಂದಿಗೆ 13 ಪ್ಯಾಸೆಂಜರ್ ಕ್ಯಾಪ್ಸುಲ್ ಲಿಫ್ಟ್ ಸರಬರಾಜು ಮತ್ತು ನಿರ್ಮಾಣ (ಸಿವಿಲ್ ಕೆಲಸಗಳು) ಮಾಡುವುದು. **ಎನ್‌ಐಇಟಿ ಸಂಖ್ಯೆ**: ಲಿಯೋಸ್ /ಸಿಎಂಜಿ/ ಕ್ಯಾಪ್ಸ್/ಲಿಫ್ಟ್/ಸಿಡಬ್ಲ್ಯೂ -02/ 2022-23 ದಿನಾಂಕ: 28.11.2022, **ಟೆಂಡರ್ ಮತ್ತು ಇಎಮ್‌ಡಿಗೆ ಅಂದಾಜು ವೆಚ್ಚ** : ರೂ. **41.78** ಲಕ್ಷ ಮತ್ತು ಇಎಂಡಿ ರೂ: **83,561/-** **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ**: 04 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಲು **ಪ್ರಾರಂಭದ ದಿನಾಂಕ:** 01.12.2022 **ಮುಕ್ತಾಯದ ದಿನಾಂಕ**: 14.12.2022.

**ಕೆಲಸದ ಹೆಸರು**: ಲಿಯೋಸ್ ಕ್ಯಾಂಪಸ್ ಮತ್ತು ನ್ಯೂ ಗೆಸ್ಟ್ ಹೌಸ್, ಪೀಣ್ಯ, ಬೆಂಗಳೂರು-58 ನಲ್ಲಿ ಒಂದು ವರ್ಷಕ್ಕೆ ಲೆವರಿಗಳನ್ನು ಒಗೆಯಲು ಮತ್ತು ಒತ್ತಲು ಒಪ್ಪಂದ. **ಎನ್‌ಐಇಟಿ ಸಂಖ್ಯೆ**: ಸಿಎಂಜಿ/ಲಿಯೋಸ್ /2022-23/ ಎಲ್‌ಎಂ - 15 ದಿನಾಂಕ: 28.11.2022, **ಟೆಂಡರ್ ಮತ್ತು ಇಎಮ್‌ಡಿಗೆ ಅಂದಾಜು ವೆಚ್ಚ** : ರೂ. **2.10** ಲಕ್ಷ ಮತ್ತು ಇಎಂಡಿ ರೂ: **4,199/-**, **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ**: 12 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಲು **ಪ್ರಾರಂಭದ ದಿನಾಂಕ:** 01.12.2022 **ಮುಕ್ತಾಯದ ದಿನಾಂಕ**: 12.12.2022.

**ಕೆಲಸದ ಹೆಸರು**: ಲಿಯೋಸ್ ಕ್ಯಾಂಪಸ್, ಆರ್ಯಭಟ್ಟ ಕಟ್ಟಡ ಮತ್ತು ಅತಿಥಿ ಗೃಹ, ಪೀಣ್ಯ, ಬೆಂಗಳೂರು-58 ರಲ್ಲಿ ಒಂದು ವರ್ಷಕ್ಕೆ ದಂಶಕ ಮತ್ತು ಕೀಟ ನಿಯಂತ್ರಣಕ್ಕಾಗಿ ಒಪ್ಪಂದ, **ಎನ್‌ಐಇಟಿ ಸಂಖ್ಯೆ**: ಸಿಎಂಜಿ/ಲಿಯೋಸ್ /2022-23/ ಎಲ್‌ಎಂ - 16 ದಿನಾಂಕ: 28.11.2022, **ಟೆಂಡರ್ ಮತ್ತು ಇಎಮ್‌ಡಿಗೆ ಅಂದಾಜು ವೆಚ್ಚ** : ರೂ. **5.08** ಲಕ್ಷ ಮತ್ತು ಇಎಂಡಿ ರೂ: **10,156/-**, **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ**: 12 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಲು **ಪ್ರಾರಂಭದ ದಿನಾಂಕ:** 01.12.2022 **ಮುಕ್ತಾಯದ ದಿನಾಂಕ**: 12.12.2022.

ಆಸಕ್ತ ಟೆಂಡರುದಾರರು ಇ-ಟೆಂಡರ್(ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು www.isro.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಬಹುದು. - ಸಹಿ/- ಸಮೂಹ ನಿರ್ದೇಶಕ [ನಿರ್ಮಾಣ ಮತ್ತು ನಿರ್ವಹಣಾ ಸಮೂಹ] ಯುಆರ್ ಎಸ್ ಸಿ, ಬೆಂಗಳೂರು



## ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಉ.ನಿ/67/2022–23 ದಿನಾಂಕ: 30.11.2022

### ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ಬೆಂಗಳೂರು ದಿನಾಂಕ: 03.09.2014ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರನ್ವಯ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಗಳಿಗೆ ಕಾಯ್ದಿರಿಸಿರುವ ಪ್ರದೇಶದ ಭೂ ಉಪಯೋಗವು ರದ್ದಾಗುತ್ತದೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಕ್ರ. ಸಂ | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮ | ಸ. ನಂ. | ವಿಸ್ತೀರ್ಣ ಎ/ಗುಂ | ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ | ಷರಾ |
|---|---|---|---|---|---|---|---|---|---|
| 1 | EKYAM Ventures Private Limited ಪರವಾಗಿ ನಿರ್ದೇಶಕರು ಶ್ರೀಮತಿ ಶ್ರದ್ಧಾ ಅಗರವಾಲ್ ಕೋಂ ಶ್ರೀ ಗೌತಮ್ ಅಗರವಾಲ್ | ಆನೇಕಲ್ | ಕಸಬಾ | ಸಮಂದೂರು | 439 | 01–37 | ಸಾರಿಗೆ ಮತ್ತು ಸಂಪರ್ಕ | ಕೈಗಾರಿಕಾ | |

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/3299/2022–23



ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ಕೋಲಾರ ವಿಭಾಗ, ಕೋಲಾರ-563 101.
ದೂರವಾಣಿ ಸಂಖ್ಯೆ: 08152-222022, ಫ್ಯಾಕ್ಸ್ ಸಂಖ್ಯೆ: 08152-227443
e-mail: eepwdkolar07@gmail.com website: www.kpwd.gov.in
e-Portal:http://eproc.karnataka.gov.in

ಇ–ಟೆಂಡರ್ ಪ್ರಕಟಣೆ–ಕೆಡಬ್ಲ್ಯೂ–2
ಮರು ಟೆಂಡರ್ ಪ್ರಕಟಣೆ ಸಂಖ್ಯೆ: 22/2022–23
ದಿನಾಂಕ: 24.11.2022–2ನೇ ಕರೆ
ಉಲ್ಲೇಖ: ಟೆಂಡರ್ ಅಧಿಸೂಚನೆ ಸಂಖ್ಯೆ: 15/2022–23
ದಿನಾಂಕ:20.10.2022

ಕೋಲಾರ ಜಿಲ್ಲೆ ಕೋಲಾರ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ:5054–ಜಿಲ್ಲಾ ಮತ್ತು ಇತರೆ ರಸ್ತೆ ಸುಧಾರಣೆ ಅಡಿಯಲ್ಲಿ 1 ಕಾಮಗಾರಿಗೆ ಮರು ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ: **ರೂ.48.27 ಲಕ್ಷಗಳು,** ಇ.ಎಂ.ಡಿ. ಮೊತ್ತ: **ರೂ.96540.00.** ಕಾಲಾವಧಿ: **6 ತಿಂಗಳು** ನಿರ್ವಹಿಸಲು ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯೂ–2 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (viz.,http://eproc.karnataka.gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿನಾಂಕ: 12.12.2022 ರಂದು ಸಂಜೆ 16.00 ಗಂಟೆ** ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 13.12.2022 ರಂದು ಸಂಜೆ 16.30 ಗಂಟೆಯ ನಂತರ** ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (viz.,http://eproc.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

**ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಇ–ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.**

ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರ್,
ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:393/ಎಂ.ಸಿ.ಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

# ಬಾಬಾಬುಡನ್ ಗಿರಿ: ದತ್ತ ಜಯಂತಿಗೆ ಹೈಕೋರ್ಟ್ ಅಸ್ತು

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆಯ ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದಲ್ಲಿ ಡಿಸೆಂಬರ್ 6 ರಿಂದ ಮೂರು ದಿನಗಳ ಕಾಲ ದತ್ತಾತ್ರೇಯ ಜಯಂತಿ ಆಚರಿಸಲು ಹೈಕೋರ್ಟ್ ಹಸಿರು ನಿಶಾನೆ ತೋರಿದೆ.

ಪ್ರಕರಣಕ್ಕೆ ಸಂಬಂಧಿಸಿದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ಹಾಗೂ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

| Bangalore Jalahalli | 15826800004369(2029982) | Bangalore Vijayanagar | 16436100349867(2193548) | Bangalore RT Nagar | 14726100203631(2167698) |
| Bangalore Jalahalli | 15826800003346(2140563) | Bangalore Vijayanagar | 16436100347267(2132943) | Bangalore RT Nagar | 14726800000386(2189301) |
| Bangalore Jalahalli | 15826100563338(2172640) | Bangalore Vijayanagar | 16436100343068(2176662) | Bangalore RT Nagar | 14726100208903(2135138) |
| Bangalore Jalahalli | 15826800008477(2236139) | Bangalore Vijayanagar | 16436100350741(2035238) | Bangalore RT Nagar | 14726100205248(82282) |
| Bangalore Jalahalli | 15826800004377(2124694) | Bangalore Vijayanagar | 16436100350014(2149102) | Bangalore RT Nagar | 14726800001533(2133006) |
| Bangalore Jalahalli | 15826800003502(2150926) | Bangalore Vijayanagar | 16436100347408(108933) | Bangalore RT Nagar | 14726100209315(2106565) |
| Bangalore Jalahalli | 15826100563916(2114053) | Bangalore Vijayanagar | 16436100343696(2177798) | Bangalore RT Nagar | 14726100205933(2065686) |
| Bangalore Jalahalli | 15826800013238(2253569) | Bangalore Vijayanagar | 16436100350816(2199171) | Bangalore RT Nagar | 14726800001848(2093336) |
| Bangalore Jalahalli | 15826800004393(2156494) | Bangalore Vijayanagar | 16436100350170(2195744) | Bangalore RT Nagar | 14726100209372(2142715) |
| Bangalore Jalahalli | 15826800003544(2210336) | Bangalore Vijayanagar | 16436100349164(2138374) | Bangalore RT Nagar | 14726100206725(2139375) |
| Bangalore Jalahalli | 15826100567859(2183665) | Bangalore Vijayanagar | 16436100343761(2177868) | Bangalore RT Nagar | 14726800002168(2133268) |
| Bangalore Jalahalli | 15826800024185(2120437) | Bangalore Vijayanagar | 16436100350899(2139826) | Bangalore RT Nagar | 14726100209539(2195954) |
| Bangalore Jalahalli | 15826800004401(2086973) | Bangalore Vijayanagar | 16436100350303(2131246) | Bangalore RT Nagar | 14726100207012(2048712) |
| Bangalore Jalahalli | 15826800003551(2150080) | Bangalore Vijayanagar | 16436100349750(2144376) | Bangalore RT Nagar | 14726800002515(2201526) |
| Bangalore Jalahalli | 15826100568659(2109743) | Bangalore Vijayanagar | 16436100345782(2138146) | Bangalore RT Nagar | 14726100209703(2198035) |
| Bangalore Jalahalli | 15826800003734(2124389) | Bangalore Vijayanagar | 16436100351004(2133550) | Bangalore RT Nagar | 14726100207533(2103928) |
| Bangalore Jalahalli | 15826800001944(2142877) | Bangalore Vijayanagar | 16436100350493(2144158) | Bangalore RT Nagar | 14726800002580(2142008) |
| Bangalore Jalahalli | 15826800000201(2188757) | Bangalore Vijayanagar | 16436100349818(2102258) | Bangalore RT Nagar | 14726100212863(2114753) |
| Bangalore Jalahalli | 15826100569889(87271) | Bangalore Vijayanagar | 16436100346384(2132576) | Bangalore RT Nagar | 14726100208564(2093500) |
| Bangalore Jalahalli | 15826800003833(2128426) | Bangalore Vijayanagar | 16436100351012(2125480) | Bangalore RT Nagar | 14726800002861(2142630) |
| Bangalore Jalahalli | 15826800002777(2102538) | Bangalore Vijayanagar | 16436100350667(2135027) | Bangalore RT Nagar | 14726100208663(2061929) |
| Bangalore Jalahalli | 15826800001720(2048937) | Bangalore Basavanagudi | 13186100172321(2179825) | Bangalore RT Nagar | 14726800002879(2132737) |

Bangalore 29-11-2022 For The Federal Bank Ltd Vice President & Zonal Head

## ನಾಡಧ್ವಜ ಹಿಡಿದು ಕುಣಿಯುತ್ತಿದ್ದ ವಿದ್ಯಾರ್ಥಿಗೆ ಥಳಿತ

ಬೆಳಗಾವಿ: ಇಲ್ಲಿನ ಕೆಎಲ್ಇ ಗೋಗಟೆ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಾಗಿ ಬುಧವಾರ ಆಯೋಜಿಸಿದ್ದ ಸಮ್ಮೇಳನದಲ್ಲಿ ನಾಡಧ್ವಜ ಹಿಡಿದು ಕುಣಿಯುತ್ತಿದ್ದ ವಿದ್ಯಾರ್ಥಿಯೊಬ್ಬನನ್ನು ಥಳಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸಂಜೆ ನಡೆದ ಸಮ್ಮೇಳನದ ಸಮಾರೋಪ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಂಗೀತಕ್ಕೆ ಹೆಜ್ಜೆ ಹಾಕುತ್ತಿದ್ದರು. ಈ ವೇಳೆ ವಿದ್ಯಾರ್ಥಿಯೊಬ್ಬ ನಾಡಧ್ವಜ ಪ್ರದರ್ಶಿಸುತ್ತ ಕುಣಿಯುತ್ತಿದ್ದ. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಇನ್ನೊಂದು ಗುಂಪಿನ ವಿದ್ಯಾರ್ಥಿಗಳು ಆತನನ್ನು ಥಳಿಸಿದ್ದಾರೆ.

'ಎಲ್ಲರೂ ಅಪ್ರಾಪ್ತರು. ಹಾಗಾಗಿ ಆಡಳಿತ ಮಂಡಳಿ ಯೊಂದಿಗೆ ಮಾತುಕತೆ ನಡೆಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕನಕದಾಸ ಜಯಂತಿಯಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ

# ‘ಆರ್‌ಎಸ್‌ಎಸ್‌ನವರು ಕಳ್ಳರು, ಸುಳ್ಳರು’

ಪ್ರಜಾವಾಣಿ ವಾರ್ತೆ

ಮೈಸೂರು: 'ಆರ್‌ಎಸ್‌ಎಸ್‌ನವರು ಕಳ್ಳರು, ಸುಳ್ಳು ಹೇಳುತ್ತಾರೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಕರ್ನಾಟಕ ಪ್ರದೇಶ ಕುರುಬರ ಸಂಘ ನಗರ, ತಾಲ್ಲೂಕು ಹಾಗೂ ಜಿಲ್ಲಾ ಘಟಕದಿಂದ ಕಲಾಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ಕನಕದಾಸ ಜಯಂತಿ, ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಪಟ್ಟಭದ್ರ ಹಿತಾಸಕ್ತಿಗಳು ಸಮಾಜದಲ್ಲಿ ಬದಲಾವಣೆ ಬಯಸುವುದಿಲ್ಲ. ಆರ್‌ಎಸ್‌ಎಸ್‌ನವರು ಬದಲಾವಣೆ ಬೇಡ ಎನ್ನುತ್ತಾರೆ. ಶೋಷಣೆ, ದೌರ್ಜನ್ಯ ಮಾಡುವುದಕ್ಕಾಗಿ ಅಸಮಾನತೆ ಇರಬೇಕು ಬಯಸುತ್ತಾರೆ. ಮುಸ್ಲಿಮರನ್ನು ಬೆದರಿಸುವ ಮೂಲಕ, ಚಿತಾವಣೆ ನೀಡುತ್ತಾರೆ. ಬಹಳ ನಾಜೂಕಾಗಿ ಮಾತನಾಡುವ ಸಂಘ ಪರಿವಾರದವರ ಬಗ್ಗೆ ಎಚ್ಚರ ವಹಿಸಬೇಕು. ಜಾಗೃತರಾಗಬೇಕು' ಎಂದು ಹೇಳಿದರು.

'ಆರ್‌ಎಸ್‌ಎಸ್‌ನವರು, ನಮ್ಮದು ದೇಶಭಕ್ತರನ್ನು ಹುಟ್ಟು ಹಾಕುತ್ತಿರುವ ಸಂಸ್ಥೆ ಎನ್ನುತ್ತಾರೆ. ಅವರಲ್ಲಿ ಯಾರಾದರೂಬ್ಬರು ದೇಶಕ್ಕಾಗಿ ತ್ಯಾಗ-ಬಲಿದಾನ ಮಾಡಿದ್ದಾರಾ? ಇದ್ದರೆ ಒಬ್ಬರನ್ನೂ ತಿಳಿಸಲಿ' ಎಂದು ಸವಾಲು ಹಾಕಿದರು.

ಕನಕ ಜಯಂತ್ಯುತ್ಸವದಲ್ಲಿ ಸಂಘದವರು ನೀಡಿದ ಬೆಳ್ಳಿಯ ಖಡ್ಗವನ್ನು ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪ್ರದರ್ಶಿಸಿದರು. ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಅಧ್ಯಕ್ಷ ಸುಬ್ಬಣ್ಣ ಇದ್ದಾರೆ

### ‘ಸಿದ್ದರಾಮಯ್ಯಗೆ ಸಿ.ಎಂ ಆಗುವ ಅವಕಾಶ’

ಮೈಸೂರು: 'ಸಿದ್ದರಾಮಯ್ಯ ಅವರಿಗೆ ಮತ್ತೆ ಮುಖ್ಯಮಂತ್ರಿ ಆಗುವ ಅವಕಾಶವಿದೆ' ಎಂದು ಪುತ್ರ, ವರುಣಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಬುಧವಾರ ವಿಶ್ವಾಸ ವ್ಯಕ್ತಪಡಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿ, 'ವರುಣಾ ಕ್ಷೇತ್ರವು ಅವರ ಪಾಲಿಗೆ ಅದೃಷ್ಟದ್ದು. ಅಲ್ಲಿಂದ ಗೆದ್ದಿದ್ದಾಗಲೇ ವಿರೋಧ ಪಕ್ಷದ ನಾಯಕರಾಗಿದ್ದರು. ನಂತರ ಮುಖ್ಯಮಂತ್ರಿಯೂ ಆದರು. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ವರುಣಕ್ಕೆ ಬರಲಿ ಎನ್ನುವುದು ನನ್ನ ಆಸೆಯಾಗಿದೆ' ಎಂದರು.

'ನನ್ನ ಆಸೆಯನ್ನು ಅವರ ಮುಂದೆ ಹೇಳಿದ್ದೇನೆ. ಅದು ಯಾವ ತೀರ್ಮಾನವನ್ನೂ ಮಾಡಿಲ್ಲ. ಅವರು ವರುಣಾದಿಂದ ಸ್ಪರ್ಧಿಸಿದರೆ ನಾನು ಬೇರೆ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ. ಅಪ್ಪನ ಪರವಾಗಿ ಕೆಲಸ ಮಾಡುತ್ತೇನೆ. ಕೋಲಾರ ಸೇರಿದಂತೆ ಹಲವು ಕ್ಷೇತ್ರಗಳು ಅಪ್ಪನಿಗೆ ಸುರಕ್ಷಿತವಾಗಿವೆ. ವರುಣಾ ಕ್ಷೇತ್ರಕ್ಕೆ ಬರಲಿ ಎನ್ನುವುದು ನನ್ನ ಮತ್ತು ಪಕ್ಷದ ಕಾರ್ಯಕರ್ತರ ಬಯಕೆಯಾಗಿದೆ' ಎಂದು ಹೇಳಿದರು.

ಶಿಕ್ಷಣ ಪಡೆಯಬೇಕು. ಸಾಮಾಜಿಕ ಅವ್ಯವಸ್ಥೆಗೆ ಕಾರಣವಾದವರನ್ನು ದೂರವಿಡಬೇಕು' ಎಂದು ತಿಳಿಸಿದರು.

'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ' ಎಂದು ಬರೆದಿದ್ದ ಕೇಕ್ ಕತ್ತರಿಸಿ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಶಾಖಾ ಮಠದ ಶಿವಾನಂದಪುರಿ ಸ್ವಾಮೀಜಿ ಮತ್ತು ಹಾಲುಮತ ಸಮಾಜದ ಮುಖಂಡರೊಂದಿಗೆ ಜನ್ಮದಿನ ಆಚರಿಸಿಕೊಂಡರು. ಸಂಘದವರು ಸಿದ್ದರಾಮಯ್ಯ ಅವರಿಗೆ ಬೆಳ್ಳಿ ಖಡ್ಗ ನೀಡಿ ಸನ್ಮಾನಿಸಿದರು.

ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಮಾತನಾಡಿ, 'ಈಗ ಬದಲಾಗಿಯ ಗಾಳಿ ಬೀಸಿದೆ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಮಾಡಲು ಮತದಾರರಿಗೆ ಮತ್ತೊಂದು ಅವಕಾಶ ಬಂದಿದೆ. ಅವರು ಅಧಿಕಾರಕ್ಕೆ ಬಂದಲ್ಲಿ ಭಾರತದ ಸಂತ ಸಾಹಿತ್ಯದ ಪುನರುಜ್ಜೀವನಗೊಳಿಸಲು ಸಮಿತಿ ರಚಿಸಬೇಕು. ಸಂಪ್ರದಾಯಗಳನ್ನು ಹೊರತರಬೇಕು. ಅವೇ ನಮ್ಮ ಸಂವಿಧಾನವನ್ನು ರಕ್ಷಣೆ ಮಾಡುತ್ತವೆ' ಎಂದರು.

## ಸುದ್ದಿ 2 ನಿಮಿಷ

### ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ ಇಂದು

ಕಲಬುರಗಿ: 'ಅಂಗನವಾಡಿ ಕೇಂದ್ರದಲ್ಲೇ ಪೂರ್ವ ಪ್ರಾಥಮಿಕ ಶಿಕ್ಷಣ ಆರಂಭಿಸಬೇಕು ಎಂಬುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಡಿಸೆಂಬರ್ 1ರಂದು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು' ಎಂದು ಸಿಐಟಿಯು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷೆ ಎಸ್.ವರಲಕ್ಷ್ಮಿ ಹೇಳಿದರು.

'ಮೊದಲ ಹಂತದಲ್ಲಿ ಆಯಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸಲಾಗುವುದು. ಸರ್ಕಾರ ಸ್ಪಂದಿಸದಿದ್ದರೆ, ಜನವರಿಯಲ್ಲಿ ಬೃಹತ್ ಹೋರಾಟ ಬೆಂಗಳೂರಿನಲ್ಲಿ ಕೈಗೊಳ್ಳಲಾಗುವುದು' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಅಂಗನವಾಡಿ ಕಾರ್ಯಕರ್ತೆಯರಿಗೆ ಗ್ರಾಚ್ಯುಟಿ ನೀಡುವುದರ ಜೊತೆಗೆ ಶಿಕ್ಷಕಿಯರನ್ನಾಗಿ ಪರಿಗಣಿಸಬೇಕು, ಅವರ ಜೊತೆಗೆ ಅಕ್ಷರ ಕೇಂದ್ರವಾಗಿ ಅಂಗನವಾಡಿ ಕೇಂದ್ರ ಮೇಲ್ದರ್ಜೆಗೇರಿಸಬೇಕು. ನಿಯಮಿತವಾಗಿ ವೇತನ ನೀಡುವುದರ ಜೊತೆಗೆ ನಿಗದಿತ ಕಾರ್ಯಗಳನ್ನು ಮಾತ್ರ ಕಾರ್ಯಕರ್ತೆಯರಿಗೆ ವಹಿಸಬೇಕು. ಸ್ವೀಕೃತಿ, ಭಾಗ್ಯಲಕ್ಷ್ಮಿ ಬಾಂಡ್ ವಿತರಣೆ ಸೇರಿದಂತೆ ನೇರವಾಗಿ ಸಂಬಂಧಪಡದ ಕೆಲಸಗಳನ್ನು ವಹಿಸಬಾರದು' ಎಂದರು.

### ಮೂರು ತಿಂಗಳ ಗೌರವಧನ ಬಿಡುಗಡೆಗೊಳಿಸಲು ಒತ್ತಾಯ

ಬೆಂಗಳೂರು: ಕಳೆದ 3 ತಿಂಗಳಿಂದ ಬಾಕಿ ಉಳಿಸಿಕೊಂಡಿರುವ ಗೌರವ ಧನ ತಕ್ಷಣ ಪಾವತಿಸಬೇಕು ಮತ್ತು ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾ ಘಟಕದ ನೇತೃತ್ವದಲ್ಲಿ ಆಶಾ ಕಾರ್ಯಕರ್ತೆಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

'ಆಶಾ ಕಾರ್ಯಕರ್ತೆಯರಿಗೆ ನಿಗದಿಪಡಿಸಿದ ಕೆಲಸಗಳನ್ನು ಹೊರತುಪಡಿಸಿ ಆರೋಗ್ಯ ಇಲಾಖೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಒತ್ತಾಯ ಮಾಡಲಾಗುತ್ತದೆ. ಪ್ರತಿ ತಿಂಗಳು ಎನ್‌ಸಿಡಿ ಮತ್ತು 'ಇ-ಸಂಜೀವಿನಿ ಸಮೀಕ್ಷೆ'ಗಳನ್ನು ಮಾಡಲು ಬಳಸಿಕೊಳ್ಳಲಾಗುತ್ತಿದೆ. ಈ ಕೆಲಸಗಳು ಆಶಾ ಕಾರ್ಯಕರ್ತೆಯರದ್ದಲ್ಲ ಎಂಬ ನಿರ್ದೇಶನವಿದ್ದರೂ ಅಧಿಕಾರಿಗಳು ಹೇರುತ್ತಿದ್ದಾರೆ. ಮೊಬೈಲ್ ಆ್ಯಪ್‌ಗೆ ಡಾಟಾ ನೀಡದೆ ಸಮೀಕ್ಷೆ ಮಾಡಿಸಲಾಗುತ್ತಿದೆ' ಎಂದು ಸಂಘದ ರಾಜ್ಯ ನಾಯಕಿ ರಮಾ ಟಿ.ಸಿ. ಆರೋಪಿಸಿದರು.

'ನಗರ ಪ್ರದೇಶಗಳಲ್ಲಿ ಆಶಾ ಕಾರ್ಯಕರ್ತೆಯರಿಗೆ ಬೇರೆ ಪ್ರದೇಶದ ಕೆಲಸಗಳನ್ನು ಮಾಡಲು ಒತ್ತಾಯಿಸಲಾಗುತ್ತಿದೆ. ತಿಂಗಳ ಕಾಲ ಆಡಾಗಲು ಮಾಡಿದ ಚಟುವಟಿಕೆಗಳು ಆಶಾನಿಧಿ ಅಥವಾ ಆರ್‌ಸಿಎಚ್ ಪೋರ್ಟಲ್‌ನಲ್ಲಿ ಸರಿಯಾಗಿ ನಮೂದಾಗುತ್ತಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

# ‘ವಿದ್ಯಾರ್ಥಿ ವೇತನ ರದ್ದು ಸಂವಿಧಾನಕ್ಕೆ ದ್ರೋಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು 1ರಿಂದ 8ನೇ ತರಗತಿವರೆಗಿನ ಬಡ ಮಕ್ಕಳ ವಿದ್ಯಾರ್ಥಿ ವೇತನ ರದ್ದುಗೊಳಿಸಿ ಆದೇಶ ಹೊರಡಿಸಿರುವುದು ದಲಿತ, ಆದಿವಾಸಿ, ಹಿಂದುಳಿದ, ಅಲ್ಪಸಂಖ್ಯಾತ ವಿರೋಧಿ ಸಂವಿಧಾನ ದ್ರೋಹಿ ಕೃತ್ಯ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಮೆಟ್ರಿಕ್‌ಪೂರ್ವ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವನ್ನು ರದ್ದುಗೊಳಿಸುವ ಕ್ರಮ ಖಂಡನೀಯ. ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗಗಳು, ಮಹಿಳೆಯರು ಮತ್ತು ಅಲ್ಪಸಂಖ್ಯಾತರನ್ನು ಕುರಿತು ಆಳುವವರ ಎಂಬ ಬಿಜೆಪಿಯ ಕಾರ್ಯಸೂಚಿ ನಿಧಾನಕ್ಕೆ ಕಾರ್ಯಗತವಾಗುತ್ತಿದೆ' ಎಂದು ಅವರು ಟೀಕಿಸಿದ್ದಾರೆ.

'ಮೋದಿ ಸರ್ಕಾರದ ಈ ಶೂದ್ರ ವಿರೋಧಿ ನಿಲುವನ್ನು ರಾಜ್ಯ ಸರ್ಕಾರ ಹಾಗೂ ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರದ ಸಚಿವರು, ಮುಖ್ಯವಾಗಿ ಕೇಂದ್ರದ ಸಮಾಜ ಕಲ್ಯಾಣ ಸಚಿವ ನಾರಾಯಣಸ್ವಾಮಿಯವರು ಧ್ವನಿ ಎತ್ತಿ ವಿದ್ಯಾರ್ಥಿ ವೇತನ ನಿಲುವು ತೆಗೆದುಕೊಳ್ಳುವುದಿಲ್ಲ ಎಂದು ಘೋಷಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಬಿಸಿಯೂಟ, ಸಮವಸ್ತ್ರ, ಶೂ, ಕೆನೆ ಭರಿತ ಹಾಲು, ಸೈಕಲ್ ಹೀಗೆ ಸೌಲಭ್ಯ ನೀಡಿ ಆದಿವಾಸಿ ಶಾಲೆಗೆ ಕರೆತಂದು ಶಿಕ್ಷಣ ನೀಡುವ ಬದಲಿಗೆ, ದಮನಿತರ ಮಕ್ಕಳು ಉದ್ಧಾರವಾಗಲಿ ಎಂಬ ಉದ್ದೇಶದಿಂದ ವಿದ್ಯಾರ್ಥಿ ವೇತನದ ವ್ಯವಸ್ಥೆ ರೂಪಿಸಲಾಗಿತ್ತು. ಅದಕ್ಕೆ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 75-25 ಪ್ರಮಾಣದಲ್ಲಿ ಹಂಚಿಕೊಳ್ಳುವುದು ಇಲ್ಲಿಯವರೆಗೂ ನಡೆದುಕೊಂಡು ಬಂದಿತ್ತು. ಇದೀಗ ಕೇಂದ್ರ ಸರ್ಕಾರದ ಈ ಹೊಣೆಗೇಡಿತನದ ನಿರ್ಧಾರದಿಂದಾಗಿ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿರುವ ಲಕ್ಷಾಂತರ ಮಕ್ಕಳು ಅನ್ಯಾಯಕ್ಕೆ ಒಳಗಾಗಲಿದ್ದಾರೆ' ಎಂದಿದ್ದಾರೆ.

'ಏಕಾಏಕಿ ವಿದ್ಯಾರ್ಥಿವೇತನ ನಿಲ್ಲಿಸುವುದರಿಂದ ಶಾಲೆಗಳ ದಾಖಲಾತಿ ಪ್ರಮಾಣ ಕಡಿಮೆಯಾಗಲಿದೆ. ಪೋಷಕರ ಮೇಲೆ ಅವಲಂಬಿತರಾದ ವಿದ್ಯಾರ್ಥಿವೇತನದಿಂದ ಅಗತ್ಯ ಶೈಕ್ಷಣಿಕ ಸಾಮಗ್ರಿಗಳನ್ನು ಖರೀದಿಸುತ್ತಿದ್ದ ಮಕ್ಕಳು ಈಗ ಪೋಷಕರನ್ನು ಅವಲಂಬಿಸುವ ಅನಿವಾರ್ಯ ಸೃಷ್ಟಿಯಾಗಲಿದೆ. ಈಗಾಗಲೇ ಮೋದಿ ಸರ್ಕಾರ ಪೆನ್ನು, ಪೆನ್ಸಿಲ್, ಬರವಣಿಗೆ ಪುಸ್ತಕ, ಡ್ರಾಯಿಂಗ್ ಶೀಟ್ ಸೇರಿ ಎಲ್ಲದರ ಮೇಲೂ ಜಿಎಸ್‌ಟಿ ವಿಧಿಸಿದೆ' ಎಂದೂ ಹೇಳಿದ್ದಾರೆ.

### ಏನು ಸಂಪಾದಿಸಲು ಹೊರಟಿದ್ದೀರಿ: ಮೋದಿ ಪ್ರಶ್ನಿಸಿದ ಖರ್ಗೆ

ನವದೆಹಲಿ (ಪಿಟಿಐ): ಬಡವರ ಮಕ್ಕಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನ ಕಸಿದುಕೊಂಡು ಏನು ಸಂಪಾದಿಸಲು ಹೊರಟಿದ್ದೀರಿ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬುಧವಾರ ಮೋದಿ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

'ನರೇಂದ್ರ ಮೋದಿ ಜೀ, ನಿಮ್ಮ ಸರ್ಕಾರವು ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಅಲ್ಪಸಂಖ್ಯಾತ ಸಮುದಾಯದ 1ರಿಂದ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಸ್ಥಗಿತಗೊಳಿಸಿದೆ. ಬಡ ಮಕ್ಕಳಿಗೆ ಕೊಡುತ್ತಿದ್ದ ವಿದ್ಯಾರ್ಥಿ ವೇತನ ಕಸಿದುಕೊಂಡಿರುವುದರ ಅರ್ಥವೇನು? ಬಡ ಮಕ್ಕಳಿಗೆ ಕೊಡಬೇಕಾದ ಹಣ ಕಿತ್ತುಕೊಂಡು ನಿಮ್ಮ ಸರ್ಕಾರ ಎಷ್ಟು ಸಂಪಾದಿಸಲಿದೆ ಅಥವಾ ಉಳಿಸಲಿದೆ' ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

1ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಸ್ಥಗಿತಗೊಳಿಸಿ, ಇದನ್ನು ಅಲ್ಪಸಂಖ್ಯಾತ ಸಮುದಾಯಕ್ಕೆ ಅನ್ವಯಿಸಿ ಕೇಂದ್ರ ಸರ್ಕಾರ ಮಂಗಳವಾರ ಆದೇಶ ಹೊರಡಿಸಿತ್ತು. ತನ್ನ ಈ ನಿರ್ಧಾರ ಸಮರ್ಥಿಸಿಕೊಂಡಿದ್ದ ಕೇಂದ್ರ ಸರ್ಕಾರ ಶಿಕ್ಷಣ ಹಕ್ಕು ಕಾಯ್ದೆಯು (ಆರ್‌ಟಿಇ) 1ರಿಂದ 8ನೇ ತರಗತಿವರೆಗೆ ಮಾತ್ರ ಎಲ್ಲ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡಲಾಗುತ್ತದೆ ಎಂದೂ ಪ್ರತಿಪಾದಿಸಿತ್ತು.

### ಚುಟುಕು ಸುದ್ದಿ

#### ರಾಜೀವ್‌ಗೆ ವನ್ಯಜೀವಿ ಹುದ್ದೆ ಹೆಚ್ಚುವರಿ

ಬೆಂಗಳೂರು: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ರಾಜೀವ್ ರಂಜನ್ ಅವರಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ಮತ್ತು ಮುಖ್ಯ ವನ್ಯಜೀವಿ ಪಾಲಕ) ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ವನ್ಯಜೀವಿ ಪಿಸಿಸಿಎಫ್ ಆಗಿದ್ದ ವಿಜಯಕುಮಾರ್ ಗೋಗಿ ಅವರು ವಯೋ ನಿವೃತ್ತಿಯಾಗಿದ್ದರಿಂದ ಈ ಹುದ್ದೆ ಖಾಲಿಯಾಗಿದೆ.

#### ಶಿಕ್ಷಕರ ನಿಯೋಜನೆ

ಬೆಂಗಳೂರು: ಮತಗಟ್ಟೆ ಹಂತದ ಅಧಿಕಾರಿಗಳಾಗಿ ನಿಯೋಜಿಸಲಾಗಿರುವ ಶಿಕ್ಷಕರು ಮತದಾರರ ಪಟ್ಟಿ ಪರಿಷ್ಕರಣ ಕಾರ್ಯದಲ್ಲಿ ಸಂಪೂರ್ಣ ತೊಡಗಿಸಿಕೊಳ್ಳಬೇಕು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೂಚಿಸಿದೆ.

ಧಾರವಾಡದ ಕರ್ನಾಟಕ ಕಾಲೇಜು ಮೈದಾನದಲ್ಲಿ ಬುಧವಾರ ನಡೆದ ಕರ್ನಾಟಕ ರಾಜ್ಯ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಮಟ್ಟದ ಸಮಾವೇಶವನ್ನು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿದರು. ಪೀಟರ್ ವಿನೋದಚಂದ್, ಡಾ. ಕುಬೇರಪ್ಪ, ಅರುಣ ಶಹಾಪುರ, ಕೃಷ್ಣಮೂರ್ತಿ ಬಿಳಿಗೆರೆ, ರಘು ಅಕ್ಮಂಚಿ, ಹನುಮಂತಗೌಡ ಕಲ್ಮನಿ ಇದ್ದಾರೆ.

### ಅತಿಥಿ ಉಪನ್ಯಾಸಕರ ಸಮಾವೇಶ: ಉನ್ನತ ಶಿಕ್ಷಣ ಸಚಿವ

## ‘1,200 ಹುದ್ದೆ ಭರ್ತಿಗೆ ಅಧಿಸೂಚನೆ ಶೀಘ್ರ’

ಪ್ರಜಾವಾಣಿ ವಾರ್ತೆ

ಧಾರವಾಡ: 'ಉನ್ನತ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ 1,500 ಹುದ್ದೆಗಳ ಪೈಕಿ 1,200 ಹುದ್ದೆ ಭರ್ತಿಗೆ ಪ್ರಕ್ರಿಯೆ ನಡೆಯುತ್ತಿದೆ. ಶೀಘ್ರದಲ್ಲೇ ಅಧಿಸೂಚನೆ ಹೊರಡಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ಬುಧವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು.

'ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಎರಡು ವರ್ಷಗಳಿಗೊಮ್ಮೆ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ನಡೆದಿದೆ. ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿ 6,500 ಉಪನ್ಯಾಸಕರು ಇದ್ದಾರೆ. ಹಾಗೆಯೇ 12,500 ಅತಿಥಿ ಉಪನ್ಯಾಸಕರಿದ್ದಾರೆ. ಅತಿಥಿ ಉಪನ್ಯಾಸಕರ ಬೇಡಿಕೆಗಳಲ್ಲಿ ಕೆಲವು ಈಡೇರಿಸಿದ್ದು, ಬಾಕಿ ಬೇಡಿಕೆಗಳನ್ನು ಮುಖ್ಯಮಂತ್ರಿ ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸಿ ಈಡೇರಿಸಲಾಗುವುದು' ಎಂದರು.

'ಪದವಿ ಪೂರ್ವ ಕಾಲೇಜುಗಳ ಫಲಿತಾಂಶ ಇನ್ನಷ್ಟು ಹೆಚ್ಚಿಸಬೇಕಿದೆ. ಆ ನಿಟ್ಟಿನಲ್ಲಿ ಅತಿಥಿ ಉಪನ್ಯಾಸಕರು ಕಾರ್ಯಕ್ಷಮತೆ ಹೆಚ್ಚಿಸಿಕೊಂಡು, ಭರವಸೆ ಮತ್ತು ವಿಶ್ವಾಸದಿಂದ ಕೆಲಸ ನಿರ್ವಹಿಸಬೇಕು' ಎಂದು ಸಲಹೆ ನೀಡಿದರು.

ಕಾಂಗ್ರೆಸ್ ಮುಖಂಡ ಡಾ.ಕುಬೇರಪ್ಪ ಮಾತನಾಡಿ, 'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸುವುದು ಹಾಗೂ ಹಳೆ ಪಿಂಚಣಿ ಯೋಜನೆ ಜಾರಿಗೆ ತರುವ ಕುರಿತು ಪಕ್ಷದ ನಾಯಕರು ಲಿಖಿತ ಪತ್ರ ನೀಡಿದ್ದಾರೆ. ಒಂದೊಮ್ಮೆ ಅಶ್ವತ್ಥನಾರಾಯಣ ಅವರೇ ಈ ಕೆಲಸ ಮಾಡಿದರೆ, ಕಾಂಗ್ರೆಸ್ ಪಕ್ಷದ ವಿಧಾನ ಪರಿಷತ್ ಸದಸ್ಯರು ವಿಧಾನಸಭೆಯಲ್ಲಿ ಅವರನ್ನು ಸನ್ಮಾನಿಸಲಿದ್ದಾರೆ' ಎಂದು ಸವಾಲು ಹಾಕಿದರು.

## ವಿಕ್ರಮ್ ಕಿರ್ಲೋಸ್ಕರ್ ನಿಧನ

ಬೆಂಗಳೂರು: ಟೊಯೊಟಾ ಕಿರ್ಲೋಸ್ಕರ್ ಮೋಟರ್ಸ್‌ನ ಉಪಾಧ್ಯಕ್ಷ ವಿಕ್ರಮ್ ಕಿರ್ಲೋಸ್ಕರ್ (64) ಹೃದಯಾಘಾತದಿಂದ ನಿಧನರಾದರು.

ಮಂಗಳವಾರ ಬೆಳಿಗ್ಗೆ ತಮ್ಮ ನಿವಾಸದಲ್ಲಿ ಕುಸಿದು ಬಿದ್ದ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ರಾತ್ರಿ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ ಗೀತಾಂಜಲಿ ಕಿರ್ಲೋಸ್ಕರ್ ಹಾಗೂ ಪುತ್ರಿ ಮಾನಸಿ ಕಿರ್ಲೋಸ್ಕರ್ ಇದ್ದಾರೆ. ಬುಧವಾರ ಮಧ್ಯಾಹ್ನ ಒಂದು ಗಂಟೆಗೆ ಹೆಬ್ಬಾಳದ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಷಯದಲ್ಲಿ ಪದವಿ ಪಡೆದ ವಿಕ್ರಮ್, ದೇಶದ ಕೈಗಾರಿಕೋದ್ಯಮದ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ವಿವಿಧ ಕೈಗಾರಿಕಾ ಒಕ್ಕೂಟದ ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸಿದ್ದರು. ಇವರ ಕಾರ್ಪೊರೇಟ್ ನಾಯಕತ್ವಕ್ಕೆ 2020ರಲ್ಲಿ ಜೀಆರ್‌ಡಿ ಟಾಟಾ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

## ‘ಕಾಂಗ್ರೆಸ್ ಟಿಕೆಟ್ ತ್ಯಾಗಕ್ಕೆ ₹30 ಕೋಟಿ ಆಮಿಷ!’

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ: 'ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಬಿಟ್ಟುಕೊಡಲು ಎವಿಬಿ ಟ್ರಸ್ಟ್ ಅಧ್ಯಕ್ಷ ರಾಜೀವ್ ಗೌಡ ಬೆಂಬಲಿಗರು ನನಗೆ ₹30 ಕೋಟಿ ಆಮಿಷವೊಡ್ಡಿದರು' ಎಂದು ಹಾಲಿ ಶಾಸಕ ವಿ.ಮುನಿಯಪ್ಪ ಆರೋಪ ಮಾಡಿದ್ದಾರೆ.

ಮುನಿಯಪ್ಪ ಮಾತನಾಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಶಿಡ್ಲಘಟ್ಟದಿಂದ ಆರು ಬಾರಿ ಕಾಂಗ್ರೆಸ್‌ನಿಂದ ಆಯ್ಕೆಯಾಗಿರುವ ಮುನಿಯಪ್ಪ ಅವರಿಗೆ ಈಗ 74 ವರ್ಷ. ಈ ಬಾರಿ ಎವಿಬಿ ಟ್ರಸ್ಟ್ ಅಧ್ಯಕ್ಷ ರಾಜೀವ್‌ಗೌಡ, ಎಸ್‌ಎನ್ ಕ್ರಿಯಾ ಟ್ರಸ್ಟ್ ಅಧ್ಯಕ್ಷ ಪುಟ್ಟು ಆಂಜಿನಪ್ಪ ಕೂಡ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾಗಿದ್ದು, ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ.

'ಕೋವಿಡ್ ಸಮಯದಲ್ಲಿ ಸಮಾಜ ಸೇವೆ ನಡೆದಲ್ಲಿ ಬಂದ ರಾಜೀವ್ ಗೌಡ ಜನರಿಗೆ ಕೊಟ್ಟಿದ್ದ ಚೆಕ್ ವಾಪಸಾಗಿದ್ದು, ಮೂರು ಎಫ್‌ಐಆರ್ ದಾಖಲಾಗಿವೆ. ಈ ಕುರಿತು ನಾನು ಕೆಪಿಸಿಸಿಗೂ ದೂರು ಕೊಟ್ಟಿದ್ದೇನೆ. ಅದ್ಯಾರೋ ಪುಟ್ಟು ಅಂತೆ. ಏನೇನೋ ಮಾಡುತ್ತಿದ್ದಾರೆ' ಎಂದು ಮುನಿಯಪ್ಪ ಹೇಳಿದ್ದಾರೆ. ಈ ಕುರಿತ ಪ್ರತಿಕ್ರಿಯೆ ಪಡೆಯಲು ಮುನಿಯಪ್ಪನವರನ್ನು ಸಂಪರ್ಕಿಸಲಾಯಿತು. ಆದರೆ, ಅವರು ಕರೆ ಸ್ವೀಕರಿಸಲಿಲ್ಲ.

ವಿಡಿಯೊದಲ್ಲಿರುವುದೇನು?: 'ಎವಿಬಿ ಟ್ರಸ್ಟ್ ಅಧ್ಯಕ್ಷ ರಾಜೀವ್ ಗೌಡ ಕಡೆಯವರು ನಮ್ಮ ಮನೆಗೆ ₹30 ಕೋಟಿ ತಂದಿಟ್ಟಿದ್ದರು. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಟಿಕೆಟ್ ಅನ್ನು ರಾಜೀವ್ ಗೌಡ ಅವರಿಗೆ ಬಿಟ್ಟುಕೊಡಿ ಎಂದು ಹೇಳಿದ್ದರು. ಆದರೆ, ಆ ಹಣವನ್ನು ವಾಪಸ್ ಎತ್ತಿಕೊಂಡು ಹೋಗುವಂತೆ ಬೈದು ಕಳಿಸಿದ್ದೇನೆ. ರಾಜೀವ್ ಗೌಡ ಯಾರು ಎಂಬುದು ನನಗೆ ಗೊತ್ತಿಲ್ಲ' ಎಂದಿದ್ದಾರೆ ಮುನಿಯಪ್ಪ.

## ‘ಒಡನಾಡಿ’ಗೆ ಚಿತ್ರದುರ್ಗ ಪೊಲೀಸರ ‘ಅಕ್ರಮ ಪ್ರವೇಶ’

ಮೈಸೂರು: ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಲೈಂಗಿಕ ದೌರ್ಜನ್ಯದ ದೂರು ದಾಖಲಿಸಿರುವ ಬಾಲಕಿಯರು ಹಾಗೂ ತಾಯಿಗೆ ಆಶ್ರಯ ನೀಡಿರುವ ಇಲ್ಲಿನ ಒಡನಾಡಿ ಸೇವಾ ಸಂಸ್ಥೆಗೆ ಚಿತ್ರದುರ್ಗದ ಪೊಲೀಸರ ತಂಡವೊಂದು, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಗಮನಕ್ಕೆ ತರದೆ ಅಕ್ರಮವಾಗಿ ಬುಧವಾರ ಪ್ರವೇಶಿಸಿದೆ.

'ಯಾವುದೇ ಮಕ್ಕಳ ಪಾಲನಾ ಸಂಸ್ಥೆಗೆ ಭೇಟಿ ನೀಡುವ ಮುನ್ನ ಮಕ್ಕಳ ಕಲ್ಯಾಣ ಸಮಿತಿಯ ಅನುಮತಿ ಪಡೆಯಬೇಕು ಎಂಬ ನಿಯಮವನ್ನು ಪೊಲೀಸರು ಉಲ್ಲಂಘಿಸಿದ್ದಾರೆ' ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ. ಪೊಲೀಸರು ಮಧ್ಯಾಹ್ನ 12.25ರ ವೇಳೆಗೆ ಸಂಸ್ಥೆಯೊಳಕ್ಕೆ ಪ್ರವೇಶಿಸುವ ವಿಡಿಯೊಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

'ಸಂಸ್ಥೆಗೆ ಭೇಟಿ ನೀಡುವ ಕುರಿತು ಯಾವುದೇ ಮುನ್ಸೂಚನೆ ನೀಡದೆ, ಕನಿಷ್ಠ ನೋಟಿಸ್ ಅನ್ನೂ ನೀಡದೆ ಬಂದು ತಪಾಸಣೆ ಹೆಸರಿನಲ್ಲಿ ಪೊಲೀಸ್ ಭಯೋತ್ಪಾದನೆ' ಎಂದು ಪರಶುರಾಂ ತಿಳಿಸಿದ್ದಾರೆ.

'ಚಿತ್ರದುರ್ಗದ ಮಕ್ಕಳನ್ನು ತನಿಖೆಗಾಗಿ ಕರೆಯೊಯ್ಯಲು ಬಂದಿದ್ದೇವೆ ಎಂದು ಪೊಲೀಸರು ತಿಳಿಸಿದರು. ಮಕ್ಕಳ ಕಲ್ಯಾಣ ಸಮಿತಿ ಕರೆದರೆ ಮಕ್ಕಳನ್ನು ಕಳುಹಿಸುತ್ತೇವೆ ಎಂದು ಹೇಳಿ, ಸಮರ್ಪಕ ವಿವರಣೆ ನೀಡದೆ ಗೊಂದಲ ಮೂಡಿಸಿದರು. ಸ್ಥಳೀಯ ಪೊಲೀಸರನ್ನೂ ಜೊತೆಗೆ ಕರೆತಂದಿರಲಿಲ್ಲ' ಎಂದು ದೂರಿದ್ದಾರೆ.

ಘಟನೆ ಆತಂಕವನ್ನು ಸೃಷ್ಟಿಸಿದ್ದು, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮತ್ತು ಬಾಲನ್ಯಾಯ ಮಂಡಳಿ ಗಮನಕ್ಕೆ ತರಲಾಗುವುದು

ಎಂ.ಎಲ್.ಪರಶುರಾಂ, ಒಡನಾಡಿ ಸಂಸ್ಥೆಯ ನಿರ್ದೇಶಕ

# ‘ಮದ್ಯದ ಆದಾಯ ₹30 ಸಾವಿರ ಕೋಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಇಲಾಖೆ ಈವರೆಗೆ ₹19,244 ಕೋಟಿ ಆದಾಯ ಗಳಿಸಿದ್ದು, ಮಾರ್ಚ್ ವೇಳೆಗೆ ಆ ಮೊತ್ತ ₹30 ಸಾವಿರ ಕೋಟಿಯನ್ನು ತಲುಪಲಿದೆ ಎಂದು ಅಬಕಾರಿ ಸಚಿವ ಕೆ. ಗೋಪಾಲಯ್ಯ ತಿಳಿಸಿದರು.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕಳೆದ ವರ್ಷ ಇದೇ ಅವಧಿಯಲ್ಲಿ ₹16,641 ಕೋಟಿ ಆದಾಯ ಬಂದಿತ್ತು. ಕಳೆದ ವರ್ಷಕ್ಕಿಂತ ಸುಮಾರು ₹2,603 ಕೋಟಿ ಹೆಚ್ಚು ಆದಾಯ ಬಂದಿದೆ ಎಂದು ಹೇಳಿದರು.

ಈ ಸಾಲಿಗೆ ₹29,000 ಕೋಟಿ ಸಂಗ್ರಹದ ಗುರಿ ನಿಗದಿ ಮಾಡಲಾಗಿತ್ತು. ಆ ಗುರಿಯನ್ನು ಮೀರಿ ಸುಮಾರು ₹1,000 ಕೋಟಿ ಹೆಚ್ಚುವರಿ ಗಳಿಕೆಯಾಗುವ ನಿರೀಕ್ಷೆ ಇದೆ. ಡಿಸೆಂಬರ್ ಮತ್ತು ಮಾರ್ಚ್‌ನಲ್ಲಿ ಹೆಚ್ಚು ಆದಾಯ ಬರಲಿದೆ. ಮುಂದಿನ ನಾಲ್ಕು ತಿಂಗಳಲ್ಲಿ ಸುಮಾರು ₹10,000 ಕೋಟಿ ಸಂಗ್ರಹವಾಗಲಿದೆ ಎಂದರು.

ಹೊಸ ಮದ್ಯದಂಗಡಿಗಳನ್ನು ಆರಂಭಿಸಲು ಲೈಸನ್ಸ್ ನೀಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ. ಅದರಿಂದ ಲೈಸನ್ಸ್ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಅಲ್ಲದೆ, ರಾಜ್ಯದಲ್ಲಿ ಕಳ್ಳಭಟ್ಟಿ ಮತ್ತು ಅಕ್ರಮ ಮದ್ಯ ಮಾರಾಟವನ್ನು ಮಟ್ಟ ಹಾಕಿದ್ದೇವೆ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಂಡ್ಯದಲ್ಲಿ ಬಿಜೆಪಿ ಶಕ್ತಿ ವರ್ಧನೆ: ಮಂಡ್ಯದಲ್ಲಿ ಬಿಜೆಪಿಯ ಶಕ್ತಿ ವರ್ಧನೆ ಆಗಿದ್ದು, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ಸಾಕಷ್ಟು ನಾಯಕರು ಬಿಜೆಪಿಯನ್ನು ಸೇರಲಿದ್ದಾರೆ. ಜಿಲ್ಲೆಯ ಎಲ್ಲ ಕ್ಷೇತ್ರಗಳಲ್ಲಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ತ್ರಿಕೋನ ಸ್ಪರ್ಧೆ ನಡೆಯಲಿದೆ. ಹಲವು ಕ್ಷೇತ್ರಗಳಲ್ಲಿ ಗೆಲ್ಲುವ ಅವಕಾಶ ಹೆಚ್ಚಾಗಿದೆ. ಹಾಸನ ಜಿಲ್ಲೆಯಲ್ಲೂ ಅಚ್ಚರಿದಾಯಕ ಫಲಿತಾಂಶ ಬರಲಿದೆ ಎಂದು ಗೋಪಾಲಯ್ಯ ತಿಳಿಸಿದರು.

### 24 ಹೊಸ ಚೆಕ್‌ಪೋಸ್ಟ್‌ಗಳು

ರಾಜ್ಯದ ಗಡಿ ಭಾಗದಲ್ಲಿ 24 ಹೊಸ ಚೆಕ್‌ಪೋಸ್ಟ್‌ಗಳನ್ನು ಆರಂಭಿಸಲು ಅನುಮತಿ ಸಿಕ್ಕಿದೆ. ಸದ್ಯವೇ ಹೊಸ ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗುವುದು. ಮದ್ಯವನ್ನು ನೆರೆಯ ರಾಜ್ಯಗಳಿಂದ ಅಕ್ರಮವಾಗಿ ತರುವುದನ್ನು ಕಟ್ಟುನಿಟ್ಟಾಗಿ ತಡೆಯಲು ಹಾಕಲಾಗುವುದು. ಇದರಿಂದ ರಾಜ್ಯದ ಆದಾಯವೂ ಹೆಚ್ಚಾಗಲಿದೆ ಎಂದು ಗೋಪಾಲಯ್ಯ ತಿಳಿಸಿದರು.

ಸದ್ಯ 16 ಚೆಕ್‌ಪೋಸ್ಟ್‌ಗಳಿದ್ದು 24 ಹೊಸದಾಗಿ ಆರಂಭಿಸುವುದರಿಂದ ಚೆಕ್‌ಪೋಸ್ಟ್‌ಗಳ ಸಂಖ್ಯೆ 40 ಕ್ಕೇರಲಿದೆ. ವಾಣಿಜ್ಯ ತೆರಿಗೆ ಇಲಾಖೆಯ ಚೆಕ್‌ಪೋಸ್ಟ್‌ಗಳನ್ನೇ ಅಬಕಾರಿ ಚೆಕ್‌ಪೋಸ್ಟ್‌ಗಳಾಗಿ ಪರಿವರ್ತಿಸಲಾಗುವುದು. ಹೊಸ ಚೆಕ್‌ಪೋಸ್ಟ್‌ಗಳಿಗಾಗಿ 24 ಅಬಕಾರಿ 'ಇನ್‌ಸ್ಪೆಕ್ಟರ್', 24 ಅಬಕಾರಿ ಸಬ್‌ಇನ್‌ಸ್ಪೆಕ್ಟರ್ ಮತ್ತು 163 ಪೇದೆಗಳನ್ನು ನೇಮಿಸಿಕೊಳ್ಳಲಾಗುವುದು. ಗಡಿಯಲ್ಲಿ ಕಟ್ಟುನಿಟ್ಟಿನ ಗಸ್ತು ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದರು.

# ಯಕ್ಷಗಾನದ ಮಾತಿನ ಮಾಣಿಕ್ಯ ಕುಂಬ್ಳೆ

• ಡಾ.ಎಂ.ಪ್ರಭಾಕರ ಜೋಶಿ

ಕುಂಬ್ಳೆ ಸುಂದರ ರಾವ್ (1934-2022) ಯಕ್ಷಗಾನ ರಂಗವನ್ನು ಬಹುವಾಗಿ ಪ್ರಭಾವಿಸಿದ ಶ್ರೇಷ್ಠ ಮಾತುಗಾರ, ವಾಗ್ಮಿ, ಭಾಷಣಕಾರ ಹಾಗೂ ಪ್ರವಚನಕಾರ. ಅವರ ಹಿರಿಯರು ಮಗ್ಗ ನೆಯ್ಗೆಯವರು. ಮಾತಿನ ನೆಯ್ಗೆಯೂ ಸುಂದರ ರಾವ್ ಅದ್ಭುತ ಕುಸುರಿಯನ್ನು ಮಾಡಿದ್ದಾರೆ.

ಕಲಿತಿದ್ದು 8ನೇ ತರಗತಿ. ಕಂಠವೇಲ್ಲದ ಓದುವ ಹವ್ಯಾಸ. ಕನ್ನಡ, ಮಲಯಾಳ ಹಾಗೂ ಕಷ್ಟಪಟ್ಟು ಇಂಗ್ಲಿಷ್ ಓದ ಓದುತ್ತಿದ್ದರು. ಸಿನಿಮಾ, ನಾಟಕ ನೋಡುವ ಹವ್ಯಾಸ, ಸತತ ಅಧ್ಯಯನ ಶೀಲತೆ, ಬದುಕನ್ನು ನೋಡಿ ಗ್ರಹಿಸುವ ಸಾಮರ್ಥ್ಯ, ವಿನೋದಪ್ರಿಯತೆ ಅವರನ್ನು ಕಲಾವಿದರನ್ನಾಗಿ ಬೆಳೆಸಿತು. ದೇವದಾಸ ಮಾಸ್ತರ್ ಅವರಲ್ಲಿ ಸಂಸ್ಕೃತ ಅಭ್ಯಾಸ ಮಾಡಿದ್ದು, ಬದುಕಿಗೆ ತಿರುವು ಕೊಟ್ಟಿತು. ಎರಡನೇ ತಿರುವು ಸಿಕ್ಕಿದ್ದು ಆರ್‌ಎಸ್‌ಎಸ್ ಸ್ವಯಂಸೇವಕನಾಗಿ; ಮುಂದೆ ಬಿಜೆಪಿಯಿಂದ ಶಾಸಕರೂ ಆದರು.

ಯಕ್ಷಗಾನ ರಂಗವನ್ನು ಅಪಾರವಾಗಿ ಪ್ರಭಾವಿಸಿದ ಕುಂಬ್ಳೆ ಸೀಮೆಯ ಇಬ್ಬರು ಶ್ರೇಷ್ಠ ಮಾತುಗಾರರೆಂದರೆ ಕುಂಬ್ಳೆ ಸುಂದರ ರಾವ್ ಹಾಗೂ ಶೇಣಿ ಗೋಪಾಲಕೃಷ್ಣ ಭಟ್ಟರು. ಸುಂದರ ರಾವ್ ಯಕ್ಷಗಾನದ ಸಾಂಪ್ರದಾಯಿಕ ಕಲಾವಿದ ಅಲ್ಲ. ಅವರ ಕಾಲದಲ್ಲಿ ಶ್ರೇಷ್ಠ ಮಾತುಗಾರರಾದ ಶೇಣಿ ಗೋಪಾಲಕೃಷ್ಣ ಭಟ್, ಸಾಮಗ, ಅಳಕೆ ರಾಮಯ್ಯ ರೈ, ಗೋವಿಂದ ಭಟ್ಟರು, ಚಂದ್ರಗಿರಿ ಅಂಬು, ಪ್ರಸ್ತುತ ನಾರಾಯಣ ಹೆಗ್ಡೆ, ಕರೆಮನೆ ಬಂಧುಗಳು... ಹೀಗೆ ಪ್ರಭಾವಿ ಕಲಾವಿದರ ದಂಡೇ ಇತ್ತು. ಅಂತಹವರ ನಡುವೆಯೂ ಪ್ರತ್ಯೇಕವಾಗಿ ಗುರುತಿಸಿಕೊಂಡು, ಮೇಳಕ್ಕೆ ಆಕರ್ಷಣೆಯಾಗುವ ಯೋಗ್ಯತೆ ಅವರಲ್ಲಿತ್ತು. ಅವರು ವೃತ್ತಿಜೀವನ ಆರಂಭಿಸಿದ್ದು ಕೊಂಡಾಣ ಮೇಳದಲ್ಲಿ. ಮೊದಲ ಹೆಸರು ಎನ್.ಸುಂದರ ಶೆಟ್ಟಿಗಾರ್. ಅವರಿಗೆ ಕುಂಬ್ಳೆ ಸುಂದರ್ ರಾವ್ ಎಂದು ಹೆಸರಿಟ್ಟಿದ್ದು ಕೆರೆಮನೆ ಶಂಭು ಹೆಗಡೆ. ಮಾತಿನ ಮೂಲಕ ಕಥೆ ಕಟ್ಟುತ್ತಿದ್ದರು. ಅವರು ಹೆಸರಿನಲ್ಲಷ್ಟೇ ಅಲ್ಲ, ಯಕ್ಷಗಾನದಲ್ಲೂ ಮಾತುಷ್ಟು ಪಡೆದರು. ಈ ರಂಗಕ್ಕೂ ಮಾತುಷ್ಟನ್ನು, ನುಡಿಗಟ್ಟನ್ನು ಕೊಟ್ಟರು. 'ಸುಂದರ ರಾವ್' ಶೈಲಿಯನ್ನು ನೀಡಿದರು.

'ತುಳಸಾಜ ಸಿರಿ' ಪ್ರಸಂಗದ 'ಕಾಂತ ಪೂಂಜ'ದಂತಹ ಸವಾಲಿನ ಪಾತ್ರವನ್ನೂ ಚೆನ್ನಾಗಿ ನಿಭಾಯಿಸಿದ್ದರು. ಶೇಣಿ ಗೋಪಾಲಕೃಷ್ಣ ಕೊಳ್ಯೂರು ರಾಮಚಂದ್ರರಾವ್, ಪಾತಾಳ, ನಾರಾಯಣ ಹೆಗಡೆ, ಗೋವಿಂದ ಭಟ್ ಜೊತೆಗಾರಿಕೆ ಬಹಳ ರಂಗದಲ್ಲಿ ಮೆರೆದಿದೆ. ಜೊತೆಗಾರರ ಮಧ್ಯದಲ್ಲಿ ಎಲ್ಲ ಅಣುವ ತಾಕತ್ತು ಅವರಿಗಿತ್ತು. ಮಾತನ್ನು ಸಭೆಗೆ ಪರಿಪೂರ್ಣವಾಗಿ ಮುಟ್ಟಿಸುವುದರಲ್ಲಿ ಸಮರ್ಥರು. ಮಾತು ಆರಂಭಿಸುವ ಕ್ರಮ, ನಿಲ್ಲಿಸುವ ರೀತಿ.. ಮುಂತಾದ ತಾಂತ್ರಿಕ ಅಂಶಗಳೂ ವಿಭಿನ್ನವಾಗಿದ್ದವು. ಗಂಟೆಗಟ್ಟಲೆ ರಂಗಸ್ಥಳದಲ್ಲಿದ್ದರೂ ಅವರ ಅರ್ಥಗಾರಿಕೆ ಬೋರು ಹೊಡೆಸುತ್ತಿರಲಿಲ್ಲ.

ಅವರ ಸಾಮರ್ಥ್ಯ ಎಲ್ಲ ಮಿತಿ ಅವರಿಗೆ ಗೊತ್ತಿತ್ತು. ಧ್ವನಿವರ್ಧಕ ಬಳಸುವ ರೀತಿ, ಎದುರಿನ ಕಲಾವಿದರನ್ನು ಬಳಸಿಕೊಳ್ಳುವ ಕ್ರಮ, ಭಾಗವತರ ಜೊತೆಗಿನ ಸಂವಾದ ಎಲ್ಲವೂ ವಿಶಿಷ್ಟ. ಕಡತೋಕ ಮಂಜುನಾಥ ಭಾಗವತರು, ಅಗರಿ ರಘುರಾಮರಾಯರು, ಧರ್ಮಸ್ಥಳ ಮೇಳದ ರಘುರಾಮ ಹೊಳ್ಳರು ಅವರನ್ನು ಮರೆಯಿಸಿದ ಭಾಗವತರು. ಯಕ್ಷಗಾನದ ಮಾತುಗಾರಿಕೆ ಹಾಗೂ ಪ್ರಸಂಗ ನಿರ್ವಹಣೆಯ ಸ್ವರೂಪ ಬದಲಾಯಿಸಿದವರಲ್ಲಿ ಅವರೂ ಒಬ್ಬರು.

ಹಣ, ಜಾತಿ ಬಲವಿಲ್ಲದೆಯೂ ಶಾಸಕನಾಗಬಹುದು ಎಂದು ತೋರಿಸಿಕೊಟ್ಟರು.

(ಲೇಖಕರು ಖ್ಯಾತ ವಿದ್ವಾಂಸ, ತಾಳಮದ್ದಲೆಯ ಪ್ರಸಿದ್ಧ ಅರ್ಥದಾರಿ, ಸಂಶೋಧಕ. ಕುಂಬ್ಳೆ ಅವರ ಒಡನಾಡಿ)

ನುಡಿ ನಮನ

### ಕುಂಬ್ಳೆ ಸುಂದರ ರಾವ್ ಇನ್ನಿಲ್ಲ

ಮಂಗಳೂರು: ಯಕ್ಷಗಾನ ಮತ್ತು ತಾಳ-ಮದ್ದಲೆಯ ಪ್ರಸಿದ್ಧ ಕಲಾವಿದ, ಮಾಜಿ ಶಾಸಕ ಕುಂಬ್ಳೆ ಸುಂದರ ರಾವ್ (88 ವರ್ಷ) ಬುಧವಾರ ಮುಂಜಾನೆ ನಿಧನರಾದರು.

ಕಾಸರಗೋಡು ಜಿಲ್ಲೆಯ ಕುಂಬ್ಳೆ ಸಮೀಪದ ನಾಯ್ಕಾಪು ಗ್ರಾಮದ ಇವರು, ಸುರತ್ಕಲ್, ಧರ್ಮಸ್ಥಳ ಮತ್ತು ಇತರ ಸೇರಿದಂತೆ ಅನೇಕ ಮೇಳಗಳಲ್ಲಿ ಕಲಾವಿದರಾಗಿ 50 ವರ್ಷಗಳಿಗೂ ಹೆಚ್ಚು ಕಾಲ ಯಕ್ಷಗಾನ ಸೇವೆ ಸಲ್ಲಿಸಿದ್ದರು. 1994ರಲ್ಲಿ ಸುರತ್ಕಲ್ ಕ್ಷೇತ್ರದಿಂದ ವಿಧಾನಸಭೆ ಸದಸ್ಯರಾಗಿದ್ದರು. ಕರ್ನಾಟಕ ರಾಜ್ಯ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿಯ ಅಧ್ಯಕ್ಷರಾಗಿದ್ದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ನಗರದ ಪಂಪ್‌ವೆಲ್ ಬಳಿ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಅಂತ್ಯ ಸಂಸ್ಕಾರ ಗುರುವಾರ (ಡಿ.1) ನೆರವೇರಲಿದೆ.

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

# ಗೊಟಗೋಡಿಯಲ್ಲಿ ಕನ್ನಡ ರಥಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ): 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರದ ಅಂಗವಾಗಿ ನಾಡಿನಾದ್ಯಂತ ಸಂಚರಿಸಲಿರುವ 'ಕನ್ನಡ ರಥ'ಕ್ಕೆ ತಾಲ್ಲೂಕಿನ ಗೊಟಗೋಡಿಯ ಜಾನಪದ ವಿಶ್ವವಿದ್ಯಾಲಯದ ಆವರಣದಲ್ಲಿ ಬುಧವಾರ ಚಾಲನೆ ನೀಡಲಾಯಿತು.

'ಕನ್ನಡ ರಥ'ಕ್ಕೆ ಡಿ.1ರಂದು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಭುವನಗಿರಿಯ ಭುವನೇಶ್ವರಿ ದೇವಸ್ಥಾನದಲ್ಲಿ ಬೆಳಿಗ್ಗೆ 10.30ಕ್ಕೆ ವಿಶೇಷ ಪೂಜೆಯೊಂದಿಗೆ ವಿಧ್ಯುಕ್ತ ಚಾಲನೆ ನೀಡಲಾಗುವುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನಿಲ್ ಕುಮಾರ್, ಕಾರ್ಮಿಕ ಇಲಾಖೆ ಸಚಿವ ಶಿವರಾಮ ಹೆಬ್ಬಾರ್, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಡಾ.ಮಹೇಶ ಜೋಶಿ ಭಾಗವಹಿಸಲಿದ್ದಾರೆ' ಎಂದು ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಲಿಂಗಯ್ಯ ಹಿರೇಮಠ ತಿಳಿಸಿದ್ದಾರೆ.

'ರಾಜ್ಯದ 31 ಜಿಲ್ಲೆಗಳಲ್ಲೂ ರಥ ಸಂಚರಿಸಲಿದೆ. ಭುವನೇಶ್ವರಿ ದೇಗುಲದಿಂದ ದೀಪ ತೆಗೆದುಕೊಂಡು ಕನ್ನಡ ರಥ ಹೊರಡಲಿದೆ. ಅದೇ ದೀಪದಿಂದ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟನೆ ಮಾಡಲಿರುವುದು ಈ ಬಾರಿಯ ವಿಶೇಷ' ಎಂದು ಅವರು ಹೇಳಿದ್ದಾರೆ.


86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಸಜ್ಜುಗೊಂಡಿರುವ 'ಕನ್ನಡ ರಥ'ಕ್ಕೆ ಶಿಗ್ಗಾವಿ ತಾಲ್ಲೂಕಿನ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಆವರಣದಲ್ಲಿ ಬುಧವಾರ ಶಾಸಕ ನೆಹರು ಓಲೇಕಾರ ಮತ್ತು ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಲಿಂಗಯ್ಯ ಹಿರೇಮಠ ಚಾಲನೆ ನೀಡಿದರು

### ‘ಜಿಲ್ಲಾಡಳಿತ ಹಣ ಬಿಡುಗಡೆ ಮಾಡಲಿ’

'ಎರಡು ತಿಂಗಳಿಂದ ಜಾನಪದ ವಿಶ್ವವಿದ್ಯಾಲಯದ ಸಹಾಯಕ ಕುಲಸಚಿವ ಶಹಜಾನ್ ಮುದಕವಿ, ಗದಗದ ಕಲಾವಿದ ಫಕ್ಕೀರೇಶ ಬೆಳಗಲ ಸೇರಿದಂತೆ ವಿವಿಧ ಕಲಾವಿದರು ಶ್ರಮ ವಹಿಸಿ ಕನ್ನಡಾಂಬೆ ರಥವನ್ನು ಸ್ವಂತ ಖರ್ಚಿನಲ್ಲಿ ಸಜ್ಜುಗೊಳಿಸಿದ್ದಾರೆ. ಜಿಲ್ಲಾಡಳಿತ ಕೂಡಲೇ ರಥ ನಿರ್ಮಾಣಕ್ಕೆ ತಗುಲಿರುವ ವೆಚ್ಚವನ್ನು ಬಿಡುಗಡೆ ಮಾಡಬೇಕು' ಎಂದು ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಲಿಂಗಯ್ಯ ಹಿರೇಮಠ ಒತ್ತಾಯಿಸಿದರು.

# ಸ್ಪರ್ಧಾ ವಾಣಿ

EXAM DH ಪ್ರಜಾವಾಣಿ MASTERMIND
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.exammastermind.com ಭೇಟಿ ಕೊಡಿ
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯಾವುದೇ ಸಂದರ್ಶನವಿರಲಿ ಅಲ್ಲಿ ವಿಷಯ ಪ್ರೌಢಿಮೆಯೇ ಅಭ್ಯರ್ಥಿಯ ಬಂಡವಾಳ. ಸೂಕ್ತ ಹಾವಭಾವ ಅದನ್ನು ಸಾಬೀತು ಪಡಿಸುವ ಸಾಧನ.

# ಹಾವಭಾವದತ್ತ ಗಮನವಿರಲಿ

**ಪರೀಕ್ಷೆಗಳಲ್ಲಿ ಸಂವಹನ ಕೌಶಲ ಭಾಗ–7**

ಡಾ. ನಿರಂಜನ ವಾನಳ್ಳಿ

ನಮ್ಮ ಜೀವನದಲ್ಲಿ ಗಮನಿಸದೇ ಹೋಗುವ ಹಾಗೂ ಅದಕ್ಕಾಗಿ ಗೊತ್ತಿಲ್ಲದೇ ಬೆಲೆ ತೆರುವ ಒಂದು ಅಂಶ ನಮ್ಮ ಅಶಾಬ್ದಿಕ ಸಂವಹನ. ಸಂದರ್ಶನದಲ್ಲಂತೂ ನಾವು ಗೊತ್ತಿಲ್ಲದೇ ಬಳಸುವ ಈ ಅಶಾಬ್ದಿಕ ಸಂವಹನದ ಪರಿಣಾಮವೆಂದರೆ ಸಂದರ್ಶನದಲ್ಲಿ ನಪಾಸು!

ಸಂದರ್ಶನಗಳಲ್ಲಿ ಅಂಕಗಳನ್ನು ಅಂತಿಮಗೊಳಿಸುವಾಗ ಅಥವಾ ಯಾರನ್ನು ಆಯ್ಕೆ ಮಾಡಬಹುದೆಂದು ನೋಡುವಾಗ ತಪ್ಪದೇ ಗಮನಕ್ಕೆ ಬರುವುದು ಅವರ ಅಶಾಬ್ದಿಕ ಸಂವಹನ ಅಥವಾ ಹಾವಭಾವ(Body Language). ಅವನು ಬೆರಳು ತೋರಿದ, ಮುಖ ಕಿವುಚಿಕೊಂಡ, ಧ್ವನಿ ಏರಿಸಿದ ಮುಂತಾಗಿ ಆಕ್ಷೇಪಗಳು ಬರುವುದು ಸರ್ವೇಸಾಮಾನ್ಯ. ಬೆರಳು ತೋರುವುದಂತೂ ಹೊಡೆದಾಟಗಳಿಗೆ ಕಾರಣವಾಗುವುದೂ ಇದೆ. ನಮ್ಮ ದೈನಂದಿನ ವ್ಯವಹಾರದಲ್ಲೂ ಯಾರಿಗಾದರೂ ಬೆರಳು ತೋರಿ ಮಾತಾಡಿದರೆ ಅದು ಅನಾಗರಿಕ ವೆನಿಸಿಕೊಳ್ಳುತ್ತದೆ. ಬೆರಳು ತೋರಿಸಿರುವುದು ಬಿಡಿ, ನಿಲ್ಲುವ ರೀತಿ, ಕುಳಿತು ಕೊಳ್ಳುವ ರೀತಿಯೇ ನಿಮ್ಮ ಬಗ್ಗೆ ಸಾಕ್ಷಿಹೇಳುತ್ತವೆ. ಕೆಲವರು ಮಾತನಾಡಲು ತೊಡಗಿದರೆ ಬಾಯಿಗಿಂತ ಕೈಯೇ ಹೆಚ್ಚು ಸದ್ದು ಮಾಡುತ್ತದೆ. ಇಡೀ ದೇಹ ಕುಣಿಯತೊಡಗುತ್ತದೆ. ಅದು ನೀವು ಹೇಳುವುದಕ್ಕೆ ಪೂರಕವಾಗಿದ್ದರೆ ಸರಿ. ವ್ಯತಿರಿಕ್ತವಾಗಿದ್ದರೆ ಅಥವಾ ಎದುರಿನವರಿಗೆ ನೀವು ಅತಿಯಾಗಿ ನಟಿಸುತ್ತಿದ್ದೀರಿ ಎನಿಸಿದರೆ ಅದು ನಿಮಗೆ ಕೈಕೊಡುತ್ತದೆ!

ಅಶಾಬ್ದಿಕ ಭಾಷೆಯಲ್ಲಿ ಹಲವು ವಿಧಗಳು ಅಥವಾ ಅಂಶಗಳು ನಮ್ಮ ಸಂವಹನವನ್ನು ಪ್ರತಿನಿಧಿಸುತ್ತವೆ. ಉದಾಹರಣೆಗೆ ಧ್ವನಿ ನಮ್ಮ ಅಶಾಬ್ದಿಕ ಸಂವಹನದ ಬಹುಮುಖ್ಯ ಅಂಗ. ಅನಗತ್ಯವಾಗಿ ಧ್ವನಿ ಏರಿಸಿ ಮಾತನಾಡಿದರೆ ಅಥವಾ ಅಗತ್ಯಕ್ಕಿಂತ ಸಣ್ಣದಾಗಿ ಮಾತಾಡಿದರೆ ಅದು ನಮ್ಮ ದೋಷವೆನಿಸಿಕೊಳ್ಳುತ್ತದೆ. ನಿಮ್ಮ ನಡತೆ ಅತಿ ವಿನಯವೆಂತಲೂ ಅನಿಸಬಾರದು, ಅದು ಅಹಂಕಾರವೆಂತಲೂ ಕಾಣಬಾರದು. ಅದು ಭಾಷೆಯಲ್ಲೂ, ನೀವು ಬಳಸುವ ಪದಗಳಲ್ಲೂ ಹಾಗೂ ಅದನ್ನು ಹೇಳುವ ರೀತಿಯಲ್ಲೂ ಇರುತ್ತದೆ. ನಿಮ್ಮ ಸಂವಹನ ಅತ್ಯಂತ ಸಹಜವಾಗಿರಬೇಕು.

ವಿಶೇಷವೆಂದರೆ ಅಶಾಬ್ದಿಕ ಸಂವಹನದಲ್ಲಿ ನೀವು ಏನು ಮಾಡಿದರೂ ಅದು ಎದುರಿನವರಿಗೆ ಒಂದು ಅರ್ಥವನ್ನು ಕೊಡುತ್ತದೆ ಎಂಬುದನ್ನು ನಾವು ಬಹಳಸಾರಿ ಮರೆತುಬಿಡುತ್ತೇವೆ. ಉದಾಹರಣೆಗೆ ಉಗುರು ಕಚ್ಚುವುದು, ಕೆಳಗೆ ನೋಡುವುದು, ಮೇಲೆ ನೋಡುವುದು, ತಲೆ ತುರಿಸಿಕೊಳ್ಳುವುದು, ಪದೇ ಪದೇ ಮುಖ ತಿಕ್ಕುವುದು, ಮುಂತಾಗಿ, ಅದು ಉದ್ದೇಶಪೂರ್ವಕವಾಗಿರುವುದಿಲ್ಲ, ಆದರೆ ಅದು ಎದುರಿನವರಿಗೆ ನಿಮ್ಮ ವ್ಯಕ್ತಿತ್ವದ ಬಗ್ಗೆ ಬಹಳಷ್ಟು ಸಂಗತಿಗಳನ್ನು ಹೇಳುತ್ತದೆ. ಸಂದರ್ಶನದಲ್ಲಿ ನೀವು ಗೆಲ್ಲಲಿಕ್ಕೂ, ಸೋಲಲಿಕ್ಕೂ ಕಾರಣವಾಗುತ್ತದೆ.

ಸಂದರ್ಶನಕ್ಕೆ ಹೋಗುವಾಗ ನೀವು ಹೇಗೆ ಹೋಗುತ್ತೀರಿ? ಕೆದರಿದ ತಲೆ ಕೂದಲು, ಮುದುರಿದ ಬಟ್ಟೆ, ಧರಿಸಿದ ಚಪ್ಪಲಿ, ಅವೆಲ್ಲ ಅಶಾಬ್ದಿಕ ಸಂವಹನಗಳೇ! ಈಗಿನ ಹುಡುಗರು ಒಂದೇ ಕಿವಿಗೆ ಓಲೆ ಹಾಕಿದರೆ ಅದೂ ಸಂವಹನವೇ!. ಸಂದರ್ಶನಕ್ಕೆ ಹೋಗಿ ಕೂರುವ ಅಥವಾ ನಿಲ್ಲುವ ರೀತಿಯೇ ನಿಮ್ಮ ಕುರಿತು ಮೊದಲ ಅಭಿಪ್ರಾಯ ಮೂಡಿಸುತ್ತದೆ. ನೀವು ಅಲ್ಲಿರುವವರನ್ನು ಸಂಬೋಧಿಸುವ ರೀತಿ ಗಮನಸೆಳೆಯುತ್ತದೆ. ಮುಖದಲ್ಲಿ ಒಂದು ನಸುನಗೆ ಇದ್ದರೆ ಅದು ಪರಿಸ್ಥಿತಿಯನ್ನು ತಿಳಿಗೊಳಿಸುತ್ತದೆ. ಮುಖ ಗಂಟುಹಾಕಿಕೊಂಡು ಒಳಪ್ರವೇಶಿಸಿದರೆ ವಾತಾವರಣವನ್ನು ನಾವೇ ಹದಗೆಡಿಸಿದಂತೆ ಆಗುತ್ತದೆ.

ಅಶಾಬ್ದಿಕ ಸಂವಹನದ ಒಂದು ಅಂಶ 'ಮೌನ' ಕೂಡ. ಕೆಲವು ಸಾರಿ ಮಾತಿಗಿಂತ ಮೌನ ಪ್ರಬಲ ಸಂವಹನ. ಎಲ್ಲಿ ಮೌನವಾಗಿರಬೇಕು, ಎಲ್ಲಿ ಮಾತಾಡಬೇಕು ಎಂದು ಗೊತ್ತಿರುವುದು ವ್ಯಕ್ತಿತ್ವದ ಧನಾತ್ಮಕ ಅಂಶ. ನಿಮ್ಮ ಮಾತು, ಮಾತಿನ ನಡುವಿನ ಮೌನ, ಎಲ್ಲಕ್ಕೂ ಸಂದರ್ಶನದಲ್ಲಿ ಅರ್ಥವಿದೆ. ಯಾವುದೇ ಸಂದರ್ಶನದಲ್ಲಿ ವಿಷಯ ಪ್ರೌಢಿಮೆ ಅಭ್ಯರ್ಥಿಯ ಬಂಡವಾಳ. ಆಂಗಿಕ ಅಭಿವ್ಯಕ್ತಿಯ ಬಳಕೆ ಅದನ್ನು ಸಾಬೀತು ಪಡಿಸುವ ಸಾಧನ.

(ಲೇಖಕರು: ಸಂವಹನ ಪ್ರಾಧ್ಯಾಪಕರು ಮತ್ತು ಕುಲಪತಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ)

# ಐಟಿಬಿಪಿಯಲ್ಲಿ 287 ಟ್ರೇಡ್ಸ್‌ಮನ್ ಹುದ್ದೆಗಳು

'ಇಂಡೋ ಟಿಬೆಟಿಯನ್ ಗಡಿ ಪೊಲೀಸ್ ಪಡೆ'ಯಲ್ಲಿ (ITBPF) 287 'ಕಾನ್‌ಸ್ಟೆಬಲ್ ಟ್ರೇಡ್ಸ್‌ಮನ್' ಹುದ್ದೆಗಳಿಗೆ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಹತ್ತನೇ ತರಗತಿ ಅಥವಾ ತತ್ಸಮಾನ ಪರೀಕ್ಷೆ ಪಾಸಾಗಿ, ವಿಶೇಷ ಕೌಶಲಗಳಿರುವ ಯುವಕ–ಯುವತಿಯರು ಅರ್ಜಿ ಸಲ್ಲಿಸಬಹುದು.

ಮಂಜುನಾಥ್ ಭದ್ರಶೆಟ್ಟಿ

**ಕೇಂದ್ರ ಗೃಹ** ಇಲಾಖೆಯ ಅಡಿ ಕಾರ್ಯನಿರ್ವಹಿಸುವ ಅರೆಸೇನಾಪಡೆಯಾದ 'ಇಂಡೋ ಟಿಬೆಟಿಯನ್ ಗಡಿ ಪೊಲೀಸ್ ಪಡೆ'ಯಲ್ಲಿ (ITBPF) 287 'ಕಾನ್‌ಸ್ಟೆಬಲ್ ಟ್ರೇಡ್ಸ್‌ಮನ್' ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ವಿಶೇಷ ಕೌಶಲಗಳಿರುವ ಯುವಕ–ಯುವತಿಯರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು.

| ಹುದ್ದೆಗಳು ಯಾವುವು? ಎಷ್ಟು? | |
|---|---|
| ಟೈಲರ್ | 18 |
| ಗಾರ್ಡನರ್ | 16 |
| ಕಾಬ್ಲರ್ (ಚಮ್ಮಾರ) | 31 |
| ಸಫಾಯಿ ಕರ್ಮಚಾರಿ | 78 |
| ವಾಶರ್‌ಮ್ಯಾನ್ | 89 |
| ಬಾರ್ಬರ್ (ಕ್ಷೌರಿಕ) | 55 |

## ಅರ್ಜಿ ಸಲ್ಲಿಸುವುದು ಹೇಗೆ?

ಅರ್ಹ ಅಭ್ಯರ್ಥಿಗಳು ಐಟಿಬಿಪಿಯ ಅಧಿಕೃತ ಜಾಲತಾಣ https://itbpolice.nic.in/Home/Career ಮೂಲಕ ಅರ್ಜಿ ಸಲ್ಲಿಸಬೇಕು. ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ಡಿಸೆಂಬರ್ 22 ಕೊನೆ ದಿನ

**ವೇತನ ಶ್ರೇಣಿ:** ಐಟಿಬಿಪಿಯಲ್ಲಿ 'ಸಿ' ಗ್ರೂಪ್‌ನ ಟ್ರೇಡ್ಸ್‌ಮನ್ ಹುದ್ದೆಗಳಿಗೆ ₹21,700 ರಿಂದ ₹69,100 ವರೆಗಿನ ವೇತನ ನಿಗದಿಪಡಿಸಲಾಗಿದೆ.

## ಅರ್ಹತೆ ಏನು?

ಮೇಲೆ ಸೂಚಿಸಿದ ಹುದ್ದೆಗಳಿಗೆ ಕನಿಷ್ಠ 10 ನೇ ತರಗತಿ ಅಥವಾ ತತ್ಸಮಾನ ಶೈಕ್ಷಣಿಕ ಅರ್ಹತೆ ಹೊಂದಿರಬೇಕು. ಜೊತೆಗೆ ಸಂಬಂಧಿಸಿದ ಹುದ್ದೆಗಳ ಕ್ಷೇತ್ರಗಳಲ್ಲಿ ಕನಿಷ್ಠ 2 ವರ್ಷ ಅನುಭವ ಹೊಂದಿರಬೇಕು. ಟೈಲರ್, ಗಾರ್ಡನರ್, ಕಾಬ್ಲರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು 18–23ರ ವಯೋಮಾನದವರಾಗಿರಬೇಕು. ಸಫಾಯಿ ಕರ್ಮಚಾರಿ, ವಾಶರ್‌ಮ್ಯಾನ್, ಬಾರ್ಬರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವವರು 18–25ರ ವಯೋಮಾನದವರಾಗಿರಬೇಕು. ಎಸ್.ಸಿ, ಎಸ್.ಟಿ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ.

## ಆಯ್ಕೆ ಪ್ರಕ್ರಿಯೆ ಹೇಗೆ?

ಟ್ರೇಡ್ಸ್‌ಮನ್ ಹುದ್ದೆಗಳಿಗೆ 3 ಹಂತದ ಆಯ್ಕೆ ಪ್ರಕ್ರಿಯೆ ಇರುತ್ತದೆ. ಮೊದಲು ದೈಹಿಕ ಅರ್ಹತೆ ಹಾಗೂ ದೈಹಿಕ ಸಹಿಷ್ಣುತೆ ಪರೀಕ್ಷೆ ಇರುತ್ತದೆ. ಇದರಲ್ಲಿ ಅರ್ಹತೆ ಪಡೆಯುವವರು ಲಿಖಿತ ಹಾಗೂ ಪ್ರಾಯೋಗಿಕ ಪರೀಕ್ಷೆ ಬರೆಯಬೇಕು. ಅದರಲ್ಲಿ ಅರ್ಹತೆ ಪಡೆಯುವವರು ವೈದ್ಯಕೀಯ ಪರೀಕ್ಷೆಯನ್ನು ಪೂರ್ಣಗೊಳಿಸಿದರೆ ಐಟಿಬಿಪಿಯಲ್ಲಿ ಟ್ರೇಡ್ಸ್‌ಮನ್ ಆಗಿ ಆಯ್ಕೆಯಾಗುತ್ತಾರೆ. ದೈಹಿಕ ಪರೀಕ್ಷೆ ಮಾನದಂಡಗಳಿಗಾಗಿ, ಪರೀಕ್ಷಾ ದಿನಾಂಕ ಹಾಗೂ ಇತರ ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನೇಮಕಾತಿ ಅಧಿಸೂಚನೆ ಪರಿಶೀಲಿಸಬೇಕು.

ಹೆಚ್ಚಿನ ಮಾಹಿತಿಗೆ https://itbpolice.nic.in/ ಈ ಜಾಲತಾಣ ನೋಡಿ

### ಪರೀಕ್ಷೆ ಹೇಗಿರುತ್ತದೆ?

ಐಟಿಬಿಪಿ ಟ್ರೇಡ್ಸ್‌ಮನ್ ಹುದ್ದೆಗಳಿಗೆ ದೈಹಿಕ ಪರೀಕ್ಷೆ ನಂತರ 100 ಅಂಕಗಳ ಲಿಖಿತ ಹಾಗೂ ಪ್ರಾಯೋಗಿಕ ಪರೀಕ್ಷೆ ಇರುತ್ತದೆ. 50 ಅಂಕಗಳಿಗೆ 10 ನೇ ತರಗತಿ ಮಟ್ಟದ ಸಾಮಾನ್ಯ ಜ್ಞಾನದ 50 ಪ್ರಶ್ನೆಗಳಿರುತ್ತವೆ. ನಂತರ ಸಂಬಂಧಿಸಿದ ಟ್ರೇಡ್‌ಗಳಲ್ಲಿ 50 ಅಂಕಗಳಿಗೆ ಪ್ರಾಯೋಗಿಕ ಪರೀಕ್ಷೆ ಇರುತ್ತದೆ. ಅಭ್ಯರ್ಥಿಗಳು ತಮ್ಮ ಕೌಶಲ ಪ್ರದರ್ಶಿಸಿ ಅಂಕ ಪಡೆಯಬೇಕು.

### ಐಟಿಬಿಪಿ ಬಗ್ಗೆ

ಕೇಂದ್ರ ಅರೆ ಸೇನಾಪಡೆಯಾಗಿರುವ ಐಟಿಬಿಪಿ ಪಡೆಯು, 1962ರ ಭಾರತ–ಚೀನಾ ಯುದ್ಧದ ನಂತರ ಜನ್ಮ ತಳೆಯಿತು. ಟಿಬೆಟ್ ಸನಿಹದ ಗಡಿ ಮೂಲಕ ಚೀನಾದ ಭೂ ಆಕ್ರಮಣವನ್ನು ತಡೆಯುವುದು ಹಾಗೂ ಆ ಭಾಗದ ಭಾರತೀಯರಿಗೆ ರಕ್ಷಣೆ ನೀಡುವುದು ಐಟಿಬಿಪಿಯ ಮುಖ್ಯ ಉದ್ದೇಶ ಹೊಂದಿದೆ. ಪ್ರಸ್ತುತ ಹಿರಿಯ ಐಪಿಎಸ್ ಅಧಿಕಾರಿ ಅನಿಶ್ ದಯಾಳ್ ಸಿಂಗ್ ಅವರು ಈ ಪಡೆಯ ಮಹಾ ನಿರ್ದೇಶಕರಾಗಿದ್ದಾರೆ.

ಸಾಂದರ್ಭಿಕ ಚಿತ್ರ

# ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

## ಮಾದರಿ ಪ್ರಶ್ನೋತ್ತರ

**ಸಮಾಜ ವಿಜ್ಞಾನ**

**ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯದಲ್ಲಿ ಉತ್ತರಿಸಿ**

**5)'ದ್ವಿ ಪ್ರಭುತ್ವ' ಪದ್ಧತಿ ಎಂದರೇನು?**
**ಉತ್ತರ:** ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು ಹಾಗೂ ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಇದನ್ನೇ 'ದ್ವಿ ಪ್ರಭುತ್ವ' ಎನ್ನುವರು.

**6) ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಎಷ್ಟು ಜನರಿದ್ದಾರೆ?**
ಉತ್ತರ:- ಭಾರತವು 2011ರ ಜನಗಣತಿಯ ಪ್ರಕಾರ 121 ಕೋಟಿ ಜನಸಂಖ್ಯೆಯನ್ನು ಒಳಗೊಂಡಿದೆ. ಇದು ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ 17.5 ರಷ್ಟಿದೆ.

**7) ಭಾರತವು ಯಾವ ಯಾವ ಅಕ್ಷಾಂಶ ಮತ್ತು ರೇಖಾಂಶಗಳ ನಡುವೆ ಹರಡಿಕೊಂಡಿದೆ?**
**ಉತ್ತರ:** ಭಾರತದ ಪ್ರಧಾನ ಭೂಭಾಗವು 8 0 . 4' ದಿಂದ 37 0. 6' ಉತ್ತರ ಅಕ್ಷಾಂಶ ಹಾಗೂ 68 o .7' ರಿಂದ 97 o. 25' ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ.

**8) ನೀತಿ ಆಯೋಗದ ಎಲ್ಲಾ ಚಟುವಟಿಕೆಗಳ ನಾಲ್ಕು ಮುಖ್ಯ ವಿಭಾಗಗಳನ್ನು ತಿಳಿಸಿ.**
**ಉತ್ತರ:** ನೀತಿ ಆಯೋಗದ ಎಲ್ಲಾ ಚಟುವಟಿಕೆಗಳು ಕೆಳಕಂಡಂತೆ ನಾಲ್ಕು ಮುಖ್ಯ ವಿಭಾಗಗಳಲ್ಲಿ ನೋಡಬಹುದು.
1) ನೀತಿ ಮತ್ತು ಕಾರ್ಯಕ್ರಮ ಚೌಕಟ್ಟು
2) ಸಹಕಾರಿ ಒಕ್ಕೂಟ ವ್ಯವಸ್ಥೆ
3) ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ
4) ಚಿಂತಕರ ಕೂಟ ಮತ್ತು ಜ್ಞಾನ ಮತ್ತು ನಾವೀನ್ಯ ಸಮೂಹ

**9) ಭಾರತದಲ್ಲಿ ಎಲ್ಲಿ ಅತಿಹೆಚ್ಚು ಉಷ್ಣಾಂಶ ದಾಖಲಾಗುತ್ತದೆ?**
ಉತ್ತರ: ರಾಜಸ್ತಾನದ ಗಂಗಾನಗರವು 52 0 ಸೆ. ಗಳಷ್ಟು ಉಷ್ಣಾಂಶ ದಾಖಲಾಗುತ್ತದೆ. ಇದು ದೇಶದಲ್ಲಿಯೇ ಅತಿ ಹೆಚ್ಚು ಉಷ್ಣಾಂಶವನ್ನು ದಾಖಲಿಸಿರುವ ಪ್ರದೇಶವಾಗಿದೆ

**10) ಭಾರತದಲ್ಲಿ ಅತಿಹೆಚ್ಚು ಮಳೆ ಬೀಳುವ ಪ್ರದೇಶಗಳನ್ನು ತಿಳಿಸಿ**
ಉತ್ತರ: ಪಶ್ಚಿಮ ಘಟ್ಟ ಪ್ರದೇಶಗಳಾದ ಕರಾವಳಿ ಕರ್ನಾಟಕ, ಮಹಾರಾಷ್ಟ್ರ, ಕೇರಳ ಹಾಗೂ ಈಶಾನ್ಯ ಭಾರತದ ಪ್ರದೇಶದಲ್ಲಿ ಬರುವ ಅಸ್ಸಾಂ, ಮೇಘಾಲಯ

**11) ಭಾರತದಲ್ಲಿ ಕಪ್ಪು ಮಣ್ಣು ಹೆಚ್ಚಾಗಿ ಎಲ್ಲೆಲ್ಲಿ ಕಾಣಸಿಗುತ್ತದೆ?**
ಉತ್ತರ: ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಆಂಧ್ರ ಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಪ್ಪು ಕಾಣ ಬರುತ್ತದೆ.

**12) ಭೂ ಸವೆತದ ಮುಖ್ಯ ಕರ್ತವ್ಯಗಳು ಯಾವುವು?**
ಉತ್ತರ:- ಹರಿಯುವ ನೀರು, ಗಾಳಿ, ಸಮುದ್ರದ ಅಲೆ ಮೊದಲಾದವು

**13) ಬ್ಯಾಂಕಿಂಗ್ ಕಂಪನಿಯನ್ನು ವ್ಯಾಖ್ಯಾನಿಸಿ:**
**ಉತ್ತರ:-** ಬ್ಯಾಂಕು ಹಣಕಾಸಿನ ಸಂಸ್ಥೆಯಾಗಿದ್ದು ಠೇವಣಿಗಳನ್ನು ಸ್ವೀಕರಿಸಿ, ಆ ಠೇವಣಿಗಳನ್ನು ಸಾಲಗಳ ರೂಪದಲ್ಲಿ ಬೇರೆ ಬೇರೆ ಸೇವೆಗಳಿಗಾಗಿ ಕೊಡುತ್ತದೆ. ಇದು ಯಾರು ಹಣವನ್ನು ಉಳಿತಾಯ ಮಾಡಬೇಕೆಂದು ಬಯಸುವರೋ ಅವರಿಂದ ಸ್ವೀಕರಿಸಿ ಯಾರಿಗೆ ಅವಶ್ಯವಿದೆಯೋ ಅವರಿಗೆ ಸಾಲದ ರೂಪದಲ್ಲಿ ಕೊಡುತ್ತದೆ. ಬ್ಯಾಂಕಿನಲ್ಲಿ ಸೇವೆಗಳನ್ನು ಉಪಯೋಗಿಸಿಕೊಳ್ಳುವ ಆ ವ್ಯವಹಾರಗಳನ್ನು ಬ್ಯಾಂಕಿಂಗ್ ಎನ್ನುತ್ತೇವೆ.

**14) ವಾರನ್ ಹೇಸ್ಟಿಂಗ್ಸ್ ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವು ಯಾವುವು?**
ಉತ್ತರ:- ವಾರನ್ ಹೇಸ್ಟಿಂಗ್ಸ್ ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವುಗಳೆಂದರೆ ; 'ದಿವಾನಿ ಅದಾಲತ್' ಎಂಬ ನಾಗರಿಕ ನ್ಯಾಯಾಲಯಗಳು ಮತ್ತು 'ಫೌಜದಾರಿ ಅದಾಲತ್' ಎಂಬ ಅಪರಾಧ ನ್ಯಾಯಾಲಯಗಳು.

ಎಸ್ಸೆಸ್ಸೆಲ್ಸಿ

**15) ಕೊಟ್ಟಿರುವ ಚಿತ್ರಕ್ಕೆ ಸಂಬಂಧಿಸಿದಂತೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**



1) ಚಿತ್ರದಲ್ಲಿರುವ ವ್ಯಕ್ತಿ ಯಾರು?
2) ಇವರು ಬರೆದಿರುವ ಕೃತಿಯನ್ನು ಹೆಸರಿಸಿ
**ಉತ್ತರ:** 1) ಬಾಲಗಂಗಾಧರ್ ತಿಲಕ್
2) ಗೀತಾರಹಸ್ಯ

**16) ಬ್ರಿಟಿಷ್ ಭೂಕಂದಾಯ ನೀತಿ ಬಗ್ಗೆ ಚಾರ್ಲ್ಸ್ ಮೆಟಕಾಫ್ ಏನೆಂದು ಹೇಳಿದ್ದಾನೆ?**
**ಉತ್ತರ:** ಬ್ರಿಟಿಷ್ ಭೂಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು". ಎಂದು ಚಾರ್ಲ್ಸ್ ಮೆಟಕಾಫ್ ಹೇಳಿದ್ದಾನೆ.

**ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ**

**1) ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು ಯಾವುವು?**
**ಉತ್ತರ:** ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು:
1. ನಿಜವಾದ ರೈತರನ್ನು ಶೋಷಿಸುವ ಹೊಸ ಸಾಮಾಜಿಕ ವರ್ಗವಾದ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
2. ಜಮೀನ್ದಾರರ ಶೋಷಣೆಗೆ ಒಳಗಾದ ರೈತರು ವಿವಿಧ ಬಗೆಯ ಸಂಕಷ್ಟಗಳಿಗೆ ಒಳಗಾದರು. ಕ್ರಮೇಣ ನಿರ್ಗತಿಕರಾದರು.
3. ಭೂಮಿ ಮಾರಾಟದ ವಸ್ತುವಾಯಿತು. ಇದನ್ನು ಪರಭಾರೆ (Mortgage)e) ಮಾಡಿ ಹಣವನ್ನು ಸಾಲವಾಗಿ ಪಡೆಯಬಹುದಾಗಿತ್ತು.
4. ಅನೇಕ ಜಮೀನ್ದಾರರೂ ಕೂಡ ಕಂದಾಯವನ್ನು ಸಲ್ಲಿಸುವ ಸಲುವಾಗಿ ತಮ್ಮ ಜಮೀನನ್ನು ಪರಭಾರೆ ಮಾಡಿದರು.
5. ಕೃಷಿ ಕ್ಷೇತ್ರವು ವಾಣಿಜ್ಯೀಕರಣ ಗೊಂಡು, ಇಂಗ್ಲೆಂಡಿನಲ್ಲಾದ ಕೈಗಾರಿಕೀಕರಣದಿಂದ ಅಲ್ಲಿನ ಕೈಗಾರಿಕೆಗಳಿಗೆ ಬೇಡಿದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
6. ಹಣದ ಲೇವಾದೇವಿಗಾರರು ಬಲಿಷ್ಠರಾಗ ತೊಡಗಿದರು

**2) ಭಾರತ ಸರ್ಕಾರದ ಕಾಯ್ದೆ – 1858 ಪ್ರಮುಖಾಂಶಗಳನ್ನು ಬರೆಯಿರಿ**
ಉತ್ತರ: ಈ ಕಾಯ್ದೆಯನ್ನು 1857ರ ಸೈನಿಕ ಮತ್ತು ನಾಗರಿಕ ಕ್ರಾಂತಿಯ ಹಿನ್ನಲೆಯಲ್ಲಿ ಅರ್ಥೈಸಿಕೊಳ್ಳಬೇಕು.
ಬ್ರಿಟಿಷ್ ಭಾರತವು ಬ್ರಿಟಿಷ್ ಸರ್ಕಾರದ ನೇರ ಆಳ್ವಿಕೆಗೆ ಒಳಪಡುವಂತಾಯಿತು.
ನವಂಬರ್ 1, 1858ರಂದು ಬ್ರಿಟಿಷ್ ರಾಣಿ ವಿಕ್ಟೋರಿಯಾ ಒಂದು ಘೋಷಣೆ ಹೊರಡಿಸಿ ತಮ್ಮ ಆಡಳಿತದ ಅವಧಿಯಲ್ಲಿ ಭಾರತದ ಎಲ್ಲ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಾಗುವುದೆಂದು ಘೋಷಿಸಿದರು.
ಈ ಕಾಯ್ದೆಯ ಪ್ರಮುಖ ಅಂಶಗಳೆಂದರೆ,
1. ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆ ರದ್ದುಗೊಳಿಸಿ, ಭಾರತವನ್ನು ರಾಣಿಯವರ ಆಡಳಿತಕ್ಕೆ ವರ್ಗಾಯಿಸಲಾಯಿತು.
2. ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ "ವೈಸ್‌ರಾಯ್" ಎಂಬ ಪದನಾಮವನ್ನು ನೀಡಿದರು. ವೈಸರಾಯ್ ಆಗಿ "ಲಾರ್ಡ್ ಕ್ಯಾನಿಂಗ್" ನೇಮಕಗೊಂಡರು.
3. "ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ" ಸ್ಥಾನವನ್ನು ಬ್ರಿಟಿಷ್ ಸರ್ಕಾರ ಸೃಷ್ಟಿಸಿತು. ಬ್ರಿಟಿಷ್ ಮಂತ್ರಿ ಮಂಡಲದ ಸದಸ್ಯರಾಗಿದ್ದ ಇವರು ಭಾರತದ ಆಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿ ಹೊಂದಿದರು.
4. ಇವರಿಗೆ ಸಹಾಯ ಮಾಡಲು 15 ಸದಸ್ಯರನ್ನೊಳಗೊಂಡ ಭಾರತ ಮಂಡಲಿ (ಕೌನ್ಸಿಲ್ ಆಫ್ ಇಂಡಿಯಾ) ಅಸ್ತಿತ್ವಕ್ಕೆ ಬಂದಿತು.

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಭೌತವಿಜ್ಞಾನ ವಿಷಯ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

## ಮಾದರಿ ಪ್ರಶ್ನೋತ್ತರ

**ಗಣಿತ ಶಾಸ್ತ್ರ**

**5)** $X = \{1, 2, 3, 4, 5, 6, 7, 8, 9\}$ ಎಂದಿರಲಿ. X ನ ಮೇಲೆ $R_1 = \{(x, y) : x - y$, 3ರಿಂದ ಭಾಗಿಸಲ್ಪಡುತ್ತದೆ$\}$ ಮತ್ತು ಇನ್ನೊಂದು ಸಂಬಂಧ X ನ ಮೇಲೆ $R_2 = \{(x, y) : \{x - y\} \subset \{1,4,7\}$ ಅಥವಾ $\{x, y\} \subset \{4, 5, 8\}$ ಅಥವಾ $\{x, y\} \subset \{3,6,9\}$ ಆಗಿರಲಿ. $R_1 = R_2$ ಎಂದು ತೋರಿಸಿ.

ಪರಿಹಾರ: ಗಣಗಳಾದ $\{1,4,7\}$, $\{2,5,8\}$ ಮತ್ತು $\{3,6,9\}$ಗಳ ಯಾವುದೇ ಎರಡು ಗಣಾಂಶಗಳ ವ್ಯತ್ಯಾಸವು 3 ರಿಂದ ಭಾಗಿಸಲ್ಪಡುತ್ತದೆ ಹೀಗಾಗಿ $(x, y) \in R_1 \Rightarrow x - y$ ಯು 3ರ ಗುಣಲಬ್ಧವಾಗಿದೆ. $\Rightarrow \{x, y\} \subset \{1,4,7\}$. ಅಥವಾ
$\{x, y\} \subset \{2, 5, 8\}$ ಅಥವಾ
$\{x, y\} \subset \{3, 6, 9\} \Rightarrow \{x, y\} \in R_2$
ಆದ್ದರಿಂದ $R_1 C R_2$
ಇದೇ ರೀತಿ $\{x, y\} \in R_2 \Rightarrow \{x, y\} \subset \{1,4,7\}$ ಅಥವಾ $\{x, y\} \subset \{2, 5, 8\}$ ಅಥವಾ $\{x, y\} \subset \{3, 6, 9\} \Rightarrow x - y$ ಯು 3ರಿಂದ ಭಾಗಿಸಲ್ಪಡುತ್ತದೆ $\Rightarrow \{x, y\} \in R_1 \Rightarrow R_2 \subset R_1$ ಎಂದು ತೋರಿಸುತ್ತದೆ.
ಆದ್ದರಿಂದ $R_1 = R_2$ ಆಗುತ್ತದೆ.

**6)** $-\frac{3\pi}{2} < x < \frac{\pi}{2}$ ಆದಾಗ, $\tan^{-1}\left(\frac{\cos x}{1 - \sin x}\right)$ ನ್ನು ಸರಳೀಕರಿಸಿ.

ಪರಿಹಾರ:

$$\tan^{-1}\left(\frac{\cos x}{1-\sin x}\right) = \tan^{-1}\left[\frac{\cos^2\frac{x}{2} - \sin^2\frac{x}{2}}{\cos^2\frac{x}{2} + \sin^2\frac{x}{2} - 2\sin\frac{x}{2}\cos\frac{x}{2}}\right]$$

$$= \tan^{-1}\left[\frac{\left(\cos\frac{x}{2} + \sin\frac{x}{2}\right)\left(\cos\frac{x}{2} - \sin\frac{x}{2}\right)}{\left(\cos\frac{x}{2} - \sin\frac{x}{2}\right)^2}\right]$$

$$= \tan^{-1}\left[\frac{\cos\frac{x}{2} + \sin\frac{x}{2}}{\cos\frac{x}{2} - \sin\frac{x}{2}}\right]$$

$$= \tan^{-1}\left(\frac{1 + \tan\frac{x}{2}}{1 - \tan\frac{x}{2}}\right) = \tan^{-1}\left[\tan\left(\frac{\pi}{4} + \frac{x}{2}\right)\right] = \frac{\pi}{4} + \frac{x}{2}$$

ಪಿಯುಸಿ

**7)** ಗಣ $\{1, 2, 3\}$ದ ಮೇಲೆ ಕ್ರಮಯುಗ್ಮ (1,2) ಮತ್ತು (2,1)ಗಳುಳ್ಳ ಸಮತ್ವ ಸಂಬಂಧಗಳ ಸಂಖ್ಯೆ ಎರಡು ಎಂದು ತೋರಿಸಿ.

ಪರಿಹಾರ: ಕ್ರಮಯುಗ್ಮ (1,2) ಮತ್ತು (2,1)ಗಳನ್ನೊಳಗೊಂಡ ಅತಿ ಚಿಕ್ಕ ಸಮತ್ವ ಸಂಬಂಧವು $R_1 = \{(1, 1), (2, 2), (3, 3), (1, 2), (2, 1)\}$ ಗಳನ್ನೊಳಗೊಂಡಿದೆ. ಈಗ ನಮ್ಮಲ್ಲಿ 4 ಯುಗ್ಮಗಳು ಉಳಿದಿವೆ. ಅವುಗಳೆಂದರೆ (2,3), (3,2), (1,3) ಮತ್ತು (3, 1) ನಾವು ಯಾವುದಾದರೊಂದು ಯುಗ್ಮ ಉದಾಹರಣೆಗಾಗಿ (2, 3)ಯನ್ನು $R_1$ ಗೆ ಸೇರಿಸಲು, ಸಮಾಂಗತೆಗಾಗಿ (3, 2) ಕೂಡ ಸೇರಿಸಬೇಕಾಗುತ್ತದೆ ಹಾಗೂ ಉದಾಹರಣೆಗಾಗಿ (1, 3) ಮತ್ತು (3, 1)ಗಳನ್ನು ಸೇರಿಸುವ ಒತ್ತಡಕ್ಕೆ ಒಳಗಾಗುತ್ತೇವೆ. ಆದ್ದರಿಂದ $R_1$ ಗಿಂತದೊಡ್ಡ ಸಮತ್ವ ಸಂಬಂಧವು ವಿಶ್ವ ಸಂಬಂಧವಾಗಿದೆ. ಹೀಗಾಗಿ ಇದರಿಂದ ತಿಳಿಯುವುದೇನೆಂದರೆ (1, 2) ಮತ್ತು (2, 1) ಗಳನ್ನು ಹೊಂದಿರುವ ಸಮತ್ವ ಸಂಬಂಧಗಳ ಸಂಖ್ಯೆ ಎರಡು ಆಗಿದೆ.

**8)** $\begin{vmatrix} b+c & a & a \\ b & c+a & b \\ c & c & a+b \end{vmatrix} = 4abc$ ಎಂದು ಸಾಧಿಸಿ.

ಪರಿಹಾರ:–

$$\Delta = \begin{vmatrix} b+c & a & a \\ b & c+a & b \\ c & c & a+b \end{vmatrix}$$

ಕ್ರಿಯೆ $R_1 \rightarrow R_1 - R_2 - R_3$, ಉಪಯೋಗಿಸಿದಾಗ ನಮಗೆ

$$\Delta = \begin{vmatrix} 0 & 2c & 2b \\ b & c+a & b \\ c & c & a+b \end{vmatrix}$$

$R_1$ ಮೂಲಕ ವಿಸ್ತರಿಸಿದಾಗ ನಮಗೆ

$$\Delta = 0\begin{vmatrix} c+a & b \\ c & a+b \end{vmatrix} - (-2c)\begin{vmatrix} b & b \\ c & a+b \end{vmatrix} + (-2b)\begin{vmatrix} b & c+a \\ c & c \end{vmatrix}$$

$$= 2c(ab + b^2 - bc) - 2b(bc - c^2 - ac)$$

$$= 2abc + 2cb^2 - 2bc^2 - 2b^2c + 2bc^2 + 2abc = 4abc$$

**9)** ಈ ನಿರ್ಧಾರಕದಲ್ಲಿ $\begin{vmatrix} 1 & -2 \\ 4 & 3 \end{vmatrix}$ ಲಾಘವಗಳು ಮತ್ತು ಸಹಾಪವರ್ತನಗಳನ್ನು ಕಂಡುಹಿಡಿಯಿರಿ.

ಪರಿಹಾರ: $a_{ij}$ ನ ಲಾಘವವು $M_{ij}$ ಆಗಿರಲಿ
$a_{11} = 1$. ಆದ್ದರಿಂದ $M_{11} = a_{11}$ ನ ಲಾಘವ $= 3$
$M_{12} = a_{12}$ ನ ಲಾಘವ $= 4$
$M_{21} = a_{21}$ ನ ಲಾಘವ $= -2$
$M_{22} = a_{22}$ ನ ಲಾಘವ $= 1$
(ಈಗ $a_{ij}$ ನ ಸಹಾಪವರ್ತನ $A_{ij}$ ಆಗಿರಲಿ)
ಈಗ $a_{ij}$ ನ ಸಹಾಪವರ್ತನ $A_{ij}$ ಆಗಿರಲಿ
$A_{11} = (-1)^{1+1} M_{11} = (-1)^2 (3) = 3$
$A_{12} = (-1)^{1+2} M_{12} = (-1)^3 (4) = -4$
$A_{21} = (-1)^{2+1} M_{21} = (-1)^3 (-2) = 2$
$A_{22} = (-1)^{2+2} M_{22} = (-1)^4 (1) = 1$

**10) ಪ್ರತಿಯೊಂದು ಬಹುಪದಿ ಉತ್ಪನ್ನವು ಅವಿಚ್ಛಿನ್ನವಾಗಿರುತ್ತದೆಂದು ತೋರಿಸಿ.**

**ಪರಿಹಾರ:** ಒಂದು ಉತ್ಪನ್ನ $p$ ಎಂಬುದು ಬಹುಪದಿ ಉತ್ಪನ್ನ ಎಂದು ಹೇಳಬೇಕಾದರೆ ಅದನ್ನು ಕೆಳಗಿನಂತೆ ವ್ಯಾಖ್ಯಾನಿಸಬೇಕಾಗುತ್ತದೆ.
$p(x) = a_0 + a_1 x + \ldots + a_n x^n$ ಎಂಬುದು ಸ್ವಾಭಾವಿಕ ಸಂಖ್ಯೆ $a_n \neq 0$ ಮತ್ತು $a_i \in R$ ಸ್ಪಷ್ಟವಾಗಿ ಈ ಉತ್ಪನ್ನವು ಎಲ್ಲಾ ವಾಸ್ತವ ಸಂಖ್ಯೆಗಳಲ್ಲಿ ವ್ಯಾಖ್ಯಾನಿಸಲ್ಪಟ್ಟಿದೆ $c$ ಎಂಬುದೊಂದು ನಿರ್ದಿಷ್ಟ ವಾಸ್ತವ ಸಂಖ್ಯೆಯಾದರೆ $\lim_{x \to c} p(x) = p(c)$ ವ್ಯಾಖ್ಯೆ ಪ್ರಕಾರ $p$ ಎಂಬುದು $c$ ಬಿಂದುವಿನಲ್ಲಿ ಅವಿಚ್ಛಿನ್ನವಾಗಿರುತ್ತದೆ. ಈಗ $c$ ಎಂಬುದು ಯಾವುದಾದರೂ ವಾಸ್ತವ ಸಂಖ್ಯೆಯಾಗಿರುವುದರಿಂದ $p(x)$ ಉತ್ಪನ್ನವು ಎಲ್ಲಾ ವಾಸ್ತವ ಸಂಖ್ಯೆಗಳಲ್ಲಿ ಅವಿಚ್ಛಿನ್ನವಾಗಿರುವ ಕಾರಣ $p$ ಎಂಬುದು ಅವಿಚ್ಛಿನ್ನ ಉತ್ಪನ್ನ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

## ಸುಭಾಷಿತ

ಕೆಲವರು ಎಲ್ಲಿಗೆ ಹೋದರೂ ಸಂತೋಷವನ್ನು ಉಂಟುಮಾಡುತ್ತಾರೆ, ಇನ್ನು ಕೆಲವರು ಹೊರಡುವುದೇ ಸಂತೋಷದ ಸಂಗತಿಯಾಗಿರುತ್ತದೆ.

–ಆಸ್ಕರ್ ವೈಲ್ಡ್

# ‘ದಿ ಕಾಶ್ಮೀರ್ ಫೈಲ್ಸ್’ ಸುತ್ತ ವಿವಾದ ಅನಗತ್ಯ ಚರ್ಚೆ, ರಾಜಕೀಯಕ್ಕೆ ಬಳಕೆ

**ವಾಣಿಜ್ಯ** ವಹಿವಾಟಿನ ದೃಷ್ಟಿಯಿಂದ ದೇಶದಲ್ಲಿ ದೊಡ್ಡ ಯಶಸ್ಸು ಕಂಡಿರುವ ವಿವಾದಿತ ‘ದಿ ಕಾಶ್ಮೀರ್ ಫೈಲ್ಸ್’ ಚಲನಚಿತ್ರವು ಈಗ ಮತ್ತೆ ವಿವಾದದಲ್ಲಿ ಸಿಲುಕಿದೆ. ಗೋವಾದಲ್ಲಿ ನಡೆಯುವ ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ತೀರ್ಪುಗಾರರ ಮಂಡಳಿಯ ಅಧ್ಯಕ್ಷ, ಇಸ್ರೇಲಿನ ನದಾವ್ ಲಪಿಡ್ ಅವರು ಈ ಸಿನಿಮಾ ಕುರಿತು ಕಟುವಾಗಿ, ವಿಮರ್ಶಾತ್ಮಕವಾಗಿ ಮಾತನಾಡಿದ್ದಾರೆ. ಅವರ ಮಾತಿಗೆ ಪ್ರತಿಯಾಗಿ, ಭಾರತದಲ್ಲಿ ಇಸ್ರೇಲಿನ ರಾಯಭಾರಿ ಆಗಿರುವ ನಾವೊರ್ ಗಿಲಾನ್ ಅವರು ತಮ್ಮ ದೇಶದ ಪರವಾಗಿ ಕ್ಷಮೆ ಯಾಚಿಸಿದ್ದಾರೆ. ಗೋವಾದಲ್ಲಿ ನಡೆಯುವ ಚಲನಚಿತ್ರೋತ್ಸವವು ಬಹಳ ಪ್ರತಿಷ್ಠಿತವಾದುದು. ಅದಕ್ಕೆ ಒಂದು ಕಾರಣ, ಅಲ್ಲಿ ಪ್ರದರ್ಶನಕ್ಕೆ ಪರಿಗಣಿತವಾಗುವ ಸಿನಿಮಾಗಳೂ ಬಹಳ ಒಳ್ಳೆಯ ಗುಣಮಟ್ಟದ್ದಾಗಿರುತ್ತವೆ ಎಂಬುದು. ಗುಣಮಟ್ಟವನ್ನು ಕಾಯ್ದುಕೊಂಡ ಕಾರಣಕ್ಕಾಗಿಯೇ ಗೋವಾ ಚಲನಚಿತ್ರೋತ್ಸವಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಸಿಕ್ಕಿದೆ. ಲಪಿಡ್ ಅವರು ದಿ ಕಾಶ್ಮೀರ್ ಫೈಲ್ಸ್ ಚಿತ್ರವನ್ನು ಕಠಿಣ ಪದಗಳಲ್ಲಿ ಟೀಕಿಸಿದ್ದಾರೆ. ಈ ಸಿನಿಮಾ ‘ಅಸಭ್ಯವಾದ, ನಿರ್ದಿಷ್ಟ ವಿಚಾರದ ಪ್ರಚಾರಕ್ಕೆ ರೂಪಿಸಿದ್ದು’ ಎಂದು ಅವರು ಹೇಳಿದ್ದಾರೆ. ಸ್ಪರ್ಧಾತ್ಮಕ ವಿಭಾಗಕ್ಕೆ ಆಯ್ಕೆಯಾದ 15 ಸಿನಿಮಾಗಳ ಪೈಕಿ 14 ಸಿನಿಮಾಗಳು ಆಯ್ಕೆ ಸಮಿತಿ ಸದಸ್ಯರ ನಡುವೆ ಒಳ್ಳೆಯ ಚರ್ಚೆಗೆ ಕಾರಣವಾದವು. ಆದರೆ ಹದಿನೈದನೆಯ ಸಿನಿಮಾ ಆಗಿರುವ ದಿ ಕಾಶ್ಮೀರ್ ಫೈಲ್ಸ್, ‘ನಿರ್ದಿಷ್ಟ ವಿಚಾರವೊಂದರ ಪ್ರಚಾರಕ್ಕೆ ರೂಪಿಸಿದಂತಿದೆ, ಅಸಭ್ಯ ಸಿನಿಮಾ ಇದು, ಕಲಾತ್ಮಕ ಸ್ಪರ್ಧಾ ವಿಭಾಗಕ್ಕೆ ಈ ಸಿನಿಮಾ ಸರಿಹೊಂದುವಂಥದ್ದಲ್ಲ’ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

**ಲಪಿಡ್ ಅವರ ಮಾತುಗಳು ಇರುವುದು ಕಲೆಗೆ ಸಂಬಂಧಿಸಿದಂತೆ, ಅವರ ಮಾತುಗಳನ್ನು ಕಲೆಗೆ ಮಾತ್ರ ಸೀಮಿತವಾಗಿಸಬೇಕು**

ಲಪಿಡ್ ಅವರ ಹೇಳಿಕೆ ಸುತ್ತ ವಿವಾದ ಮತ್ತು ಅವರ ಹೇಳಿಕೆಗೆ ಪ್ರತಿಯಾಗಿ ಬಂದ ವಿರೋಧ ಅನಗತ್ಯವಾಗಿತ್ತು. ತೀರ್ಪುಗಾರರ ಸಮಿತಿಯ ಅಧ್ಯಕ್ಷರಾಗಿ ಅವರಿಗೆ ಸಿನಿಮಾ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಅಧಿಕಾರ ಇದೆ. ಬಿಜೆಪಿಯ ಐ.ಟಿ. ವಿಭಾಗ ಕೂಡ ಅವರ ಹೇಳಿಕೆಗೆ ಪ್ರತಿಭಟನೆ ದಾಖಲಿಸಿದೆ. ಈ ವಿಭಾಗವು ಹಿಂದೆ ಈ ಸಿನಿಮಾ ಮೂಲಕ ರಾಜಕೀಯ ಲಾಭ ಪಡೆಯಲು ಯತ್ನಿಸಿತ್ತು. ಬಿಜೆಪಿ ಐ.ಟಿ. ವಿಭಾಗವು ಯಹೂದಿಯರ ನರಮೇಧಕ್ಕೆ ಸಂಬಂಧಿಸಿದ ‘ಶಿಂಡ್ಲರ್ಸ್ ಲಿಸ್ಟ್’ ಸಿನಿಮಾವನ್ನು ಕೂಡ, ನಿರ್ದಿಷ್ಟ ವಿಚಾರದ ಪ್ರಚಾರಕ್ಕೆ ತಯಾರಾದ ಸಿನಿಮಾ ಎಂದು ಹೇಳಿದೆ. ಕಾಶ್ಮೀರಿ ಪಂಡಿತ ಸಮುದಾಯಕ್ಕೆ ಸೇರಿದವರು 1990ರ ದಶಕದಲ್ಲಿ ಕಾಶ್ಮೀರ ಕಣಿವೆಯಿಂದ ಹೊರನಡೆದ ವಿದ್ಯಮಾನವನ್ನು ದಿ ಕಾಶ್ಮೀರ್ ಫೈಲ್ಸ್ ತೋರಿಸಿದೆ. ಆದರೆ ಈ ಚಿತ್ರದಲ್ಲಿನ ವಿವರಣೆಗಳು ಪಕ್ಷಪಾತಿಯಾಗಿವೆ ಎಂಬ ಮಾತುಗಳು ಇವೆ. ಈ ಚಿತ್ರದಲ್ಲಿ ಕಲಾತ್ಮಕ ಅಂಶಗಳ ಕೊರತೆ ಇದೆ ಎಂಬುದನ್ನು ಈ ಹಿಂದೆಯೂ ಹೇಳಲಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಹೊಂದಿರುವ ಸಿನಿಮಾ ನಿರ್ದೇಶಕ ಲಪಿಡ್ ಅವರು ಈ ಚಿತ್ರದಲ್ಲಿ ಇರುವ ಕಲಾತ್ಮಕತೆಯ ಕೊರತೆಯನ್ನು ಹೇಳಿದ್ದಾರೆ. ಈ ಅಭಿಪ್ರಾಯ ವ್ಯಕ್ತಪಡಿಸಿ ಅವರಿಗೆ ವೈಯಕ್ತಿಕವಾಗಿ ಆಗಬೇಕಿರುವುದು ಏನೂ ಇಲ್ಲ. ಅವರ ಮಾತುಗಳು, ಸೂಕ್ಷ್ಮಗ್ರಾಹಿ ವ್ಯಕ್ತಿಯೊಬ್ಬನಿಗೆ ಈ ಸಿನಿಮಾ ಒಂದು ಪ್ರಚಾರ ವಸ್ತುವಿನಂತೆ ಕಂಡಿದೆಯೇ ವಿನಾ ನೈಜ ಸಂಗತಿಯನ್ನು ಬಿಂಬಿಸುತ್ತಿರುವಂತೆ ಕಂಡಿಲ್ಲ ಎಂಬುದನ್ನು ತೋರಿಸುತ್ತಿವೆ. ಲಪಿಡ್ ಅವರು ತಮ್ಮ ಅಭಿಪ್ರಾಯಕ್ಕೆ ಬದ್ಧರಾಗಿ ನಿಂತಿದ್ದಾರೆ, ಮಾತುಗಳನ್ನು ಪುನರುಚ್ಚರಿಸಿದ್ದಾರೆ.

ದೇಶದಲ್ಲಿ ಭಿನ್ನ ನಿಲುವುಗಳನ್ನು ವ್ಯಕ್ತಪಡಿಸುವವರ ಬಗ್ಗೆ ಅಸಹಿಷ್ಣುತೆ ಪ್ರದರ್ಶಿಸುವುದು ಸಹಜವಾಗುತ್ತಿದೆ. ಲಪಿಡ್ ಅವರ ಮಾತಿಗೆ ಬಂದಿರುವ ಟೀಕೆಗಳು, ವಾಗ್ದಾಳಿಗಳು ಕೂಡ ಇದೇ ಧೋರಣೆಯನ್ನು ಮತ್ತೊಮ್ಮೆ ತೋರಿಸಿವೆ. ಭಾರತದಲ್ಲಿನ ಇಸ್ರೇಲ್ ರಾಯಭಾರಿ ಕ್ಷಮೆ ಯಾಚಿಸುವ ಅಗತ್ಯವೇ ಇಲ್ಲವಾಗಿತ್ತು. ಏಕೆಂದರೆ, ರಾಜತಾಂತ್ರಿಕವಾಗಿ ಯಾವ ಸಮಸ್ಯೆಯೂ ಸೃಷ್ಟಿಯಾಗಿರಲಿಲ್ಲ. ಅವರ ಅಭಿಪ್ರಾಯವು ಭಾರತ ಮತ್ತು ಇಸ್ರೇಲ್ ನಡುವಿನ ಸಂಬಂಧವನ್ನು ಹಾಳುಮಾಡುವಂಥದ್ದೂ ಆಗಿರಲಿಲ್ಲ. ಲಪಿಡ್ ಅವರು ಒಬ್ಬ ಸಿನಿಮಾ ನಿರ್ದೇಶಕನಾಗಿ ಮಾತನಾಡಿದ್ದಾರೆ. ಅವರ ಮಾತುಗಳಿಗೆ ಪ್ರತಿಯಾಗಿ ಒಂದು ದೇಶದ ಪರವಾಗಿ ಕ್ಷಮೆ ಯಾಚಿಸುವ ಅಗತ್ಯ ಸ್ವಲ್ಪವೂ ಇರಲಿಲ್ಲ. ಲಪಿಡ್ ಅವರ ಮಾತುಗಳು ಇರುವುದು ಕಲೆಗೆ ಸಂಬಂಧಿಸಿದಂತೆ, ಅವರ ಮಾತುಗಳನ್ನು ಕಲೆಗೆ ಮಾತ್ರ ಸೀಮಿತವಾಗಿಸಬೇಕು. ಅವರ ಮಾತನ್ನು ಅನಗತ್ಯವಾಗಿ ರಾಜಕೀಯಕ್ಕೆ ಬಳಸಿಕೊಳ್ಳಲಾಯಿತು, ಅನಗತ್ಯವಾಗಿ ಅದನ್ನು ಒಂದು ರಾಜತಾಂತ್ರಿಕ ವಿಚಾರವನ್ನಾಗಿ ಬೆಳೆಸಲಾಯಿತು.

## ದಿನದ ಟ್ವೀಟ್

### ತಕ್ಕಮಟ್ಟಿಗೆ ಫಲ

ಉತ್ತಮ ಅಧಿಕಾರಿಗಳನ್ನು ಬೆಂಗಳೂರು ಸಂಚಾರ ದಟ್ಟಣೆ ನಿಯಂತ್ರಿಸಲು ನೇಮಿಸಿದ್ದರ ಫಲವಾಗಿ ಇಂದು ತಕ್ಕಮಟ್ಟಿಗೆ ಸಂಚಾರ ಸುಗಮವಾಗಿದೆ. ಹಾಗೆಯೇ ನಿರುಪಯೋಗಿ ಸ್ಥಳಗಳಲ್ಲಿ ನಿಯೋಜನೆಯಾಗಿರುವ ದಕ್ಷ ಮತ್ತು ಸೂಕ್ಷ್ಮಮತಿಯ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಳಕ್ಕೆ ವರ್ಗಾಯಿಸಿದರೆ ಜನರಿಗೂ ಅನುಕೂಲವಾಗುತ್ತದೆ ಹಾಗೂ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ, ಅಲ್ಲವೇ?

**ರೋಹಿತ್ ಸಿಂಹ**, ಎಂಜಿನಿಯರ್

## ಕಿಡಿನುಡಿ

ಭಾರತದ ಜಿಡಿಪಿ ಬೆಳವಣಿಗೆ ದರವು ಎರಡನೇ ತ್ರೈಮಾಸಿಕದಲ್ಲಿ ಶೇ 6.3ಕ್ಕೆ ಇಳಿಕೆಯಾಗಿದೆ ಮತ್ತು ಮೂರನೇ ತ್ರೈಮಾಸಿಕದಲ್ಲಿ ಬಹುಶಃ ಇನ್ನೂ ಇಳಿಯಬಹುದು. ಅದು ಒಳ್ಳೆಯ ಸುದ್ದಿಯೇನಲ್ಲ. ಹಾಗಾದರೆ ಒಳ್ಳೆಯ ಸುದ್ದಿ ಯಾವುದು? ಬಹುತೇಕ ದೇಶಗಳ ಆರ್ಥಿಕತೆಗಳಿಗಿಂತ ನಾವು ಈಗಲೂ ಉತ್ತಮ ಸ್ಥಾನದಲ್ಲಿ ಇದ್ದೇವೆ. (ಆದರೆ ಚಿಂತೆ ಬೇಡ, ಆರ್ಥಿಕ ಸ್ಥಿತಿಯ ಬದಲಿಗೆ ನಮಗೆ ಚರ್ಚಿಸಲಿಕ್ಕೆ ಚಲನಚಿತ್ರದ ಗುಣಮಟ್ಟದ ವಿಷಯ ಇರುತ್ತದೆ!)

**ರಾಜ್‌ದೀಪ್ ಸರ್ದೇಸಾಯಿ**, ಪತ್ರಕರ್ತ

## 25 ವರ್ಷಗಳ ಹಿಂದೆ

ಸೋಮವಾರ, 1-12-1997

**• ಭಾರತದ ಜತೆ ಉತ್ತಮ ಸ್ನೇಹ ಬಾಂಧವ್ಯಕ್ಕೆ ಅಮೆರಿಕ ಆದ್ಯತೆ**

**ಬೆಂಗಳೂರು, ನ. 30–** ಭಾರತದೊಂದಿಗೆ ಉತ್ತಮ ಸಂಬಂಧ ಮತ್ತು ಬಾಂಧವ್ಯವನ್ನು ಹೊಂದುವುದು ಅಮೆರಿಕದ ಆದ್ಯತೆಗಳಲ್ಲಿ ಒಂದಾಗಿದೆ ಎಂದು ಅಮೆರಿಕದ ಆರೋಗ್ಯ ಮತ್ತು ಮಾನವ ಸೇವಾ ಕಾರ್ಯದರ್ಶಿ ಡಾ.ಡೊನ್ನಾ ಇಶಲಾಲ ಇಂದು ತಿಳಿಸಿದರು.

ಎರಡು ದಿನಗಳ ಅಧಿಕೃತ ಭೇಟಿಗಾಗಿ ಇಂದು ನಗರಕ್ಕೆ ಆಗಮಿಸಿದ್ದ ಅವರು ಪತ್ರಕರ್ತರೊಂದಿಗೆ ಮಾತನಾಡಿ, ‘ಭಾರತದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಅಮೆರಿಕ ಮತ್ತು ಭಾರತದ ಬಾಂಧವ್ಯ ವೃದ್ಧಿಸಲೆಂದೇ ಅಧ್ಯಕ್ಷ ಬಿಲ್ ಕ್ಲಿಂಟನ್ ತಮ್ಮ ಸಚಿವ ಸಂಪುಟದ ಹಿರಿಯ ಸದಸ್ಯರನ್ನು ಇಲ್ಲಿಗೆ ಕಳುಹಿಸುತ್ತಿರುವುದು’ ಎಂದರು.

**• ಸರ್ಕಾರ ರಚನೆ ಅವಕಾಶ ಕೋರಿ ಬಿಜೆಪಿ ಮನವಿ**

**ನವದೆಹಲಿ, ನ. 30–** ಕೇಂದ್ರದಲ್ಲಿ ಸರ್ಕಾರ ರಚನೆಗೆ ಅವಕಾಶ ನೀಡುವಂತೆ ಭಾರತೀಯ ಜನತಾ ಪಕ್ಷ ಮತ್ತು ಅದರ ಮಿತ್ರ ಪಕ್ಷಗಳು ಇಂದು ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರಿಗೆ ಮನವಿ ಸಲ್ಲಿಸಿದವು.

ಆದರೆ, ಈಗ ಉದ್ಭವಿಸಿರುವ ರಾಜಕೀಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಧ್ರುವೀಕರಣ ಆರಂಭವಾಗಿದ್ದು, ಅದಕ್ಕಾಗಿ ತಮಗೆ ಸರ್ಕಾರ ರಚನೆಗಾಗಿ ಕಾಲಾವಕಾಶ ನೀಡಬೇಕೆಂದು ಭಾರತೀಯ ಜನತಾ ಪಕ್ಷ ಮತ್ತು ಅದರ ಮಿತ್ರ ಪಕ್ಷಗಳ ನಾಯಕರು, ರಾಷ್ಟ್ರಪತಿ ಅವರನ್ನು ಕೋರಿದರು.

## 50 ವರ್ಷಗಳ ಹಿಂದೆ

ಶುಕ್ರವಾರ, 1-12-1972

**• ಪಾಕ್ ಜತೆ ವಿವಾದ ಇತ್ಯರ್ಥಕ್ಕೆ ಮಾತುಕತೆ ಸಾಧ್ಯತೆ ಪರಿಶೀಲನೆ**

**ನವದೆಹಲಿ, ನ. 30–** ಜಮ್ಮು-ಕಾಶ್ಮೀರದಲ್ಲಿ ಹತೋಟಿ ರೇಖೆ ಗುರುತಿಸುವ ವಿಷಯದಲ್ಲಿ ಎದ್ದಿರುವ ವಿವಾದವನ್ನು ಬಗೆಹರಿಸಲು ಪ್ರಧಾನ ದಂಡನಾಯಕರ ಮಟ್ಟದಲ್ಲಿಯಾಗಲೀ ಇಲ್ಲವೇ ಇನ್ನಾವುದೇ ಮಟ್ಟದಲ್ಲಿಯಾಗಲೀ ಪಾಕಿಸ್ತಾನದ ಜತೆ ಮಾತುಕತೆಯ ಸಾಧ್ಯತೆಯನ್ನು ಭಾರತ ಪರಿಶೀಲಿಸುತ್ತಿದೆ ಎಂದು ವಿದೇಶಾಂಗ ಸಚಿವ ಸ್ವರಣ್ ಸಿಂಗ್ ಅವರು ಇಂದು ಘೋಷಿಸಿದರು.

ವಿದೇಶಿ ವ್ಯವಹಾರಗಳನ್ನು ಕುರಿತ ಎರಡು ದಿನಗಳ ಚರ್ಚೆಗೆ ಉತ್ತರವಾಗಿ ಈ ಘೋಷಣೆ ಮಾಡಿದ ಸ್ವರಣ್ ಸಿಂಗ್ ಅವರು, ‘ಸಣ್ಣ ಪ್ರಶ್ನೆ’ಯ ಮೇಲಣ ವಿವಾದ ಎಂಬ ಪಾಕಿಸ್ತಾನದ ಅಭಿಪ್ರಾಯವನ್ನು ಭಾರತ ಗಮನಿಸಿದೆ ಎಂದು ಹೇಳಿದರು.

**• ನ್ಯಾಯಬೆಲೆಯಲ್ಲಿ ಸರ್ಕಾರಿ ನೌಕರರಿಗೆ ಶೀಘ್ರವೇ ದಿನಬಳಕೆ ಸಾಮಗ್ರಿ ಮಾರಾಟ**

**ಬೆಂಗಳೂರು, ನ. 30–** ರಾಜ್ಯ ಸರ್ಕಾರಿ ನೌಕರರಿಗೆ ನ್ಯಾಯಬೆಲೆಯಲ್ಲಿ ನಿತ್ಯೋಪಯೋಗಿ ವಸ್ತುಗಳನ್ನು ಒದಗಿಸುವ ವ್ಯವಸ್ಥೆ ಮಾಡಲು ಸರ್ಕಾರ ಸಮ್ಮತಿಸಿದೆ.

ಅಕ್ಕಿ, ಗೋಧಿ, ರಾಗಿ, ಜೋಳ, ಖಾದ್ಯತೈಲ, ವನಸ್ಪತಿ, ಸಕ್ಕರೆ ಮುಂತಾದ ನಿತ್ಯೋಪಯೋಗಿ ವಸ್ತುಗಳನ್ನು ನೌಕರರಿಗೆ ಒದಗಿಸುವುದಕ್ಕಾಗಿ ‘ಖರೀದಿ ಮತ್ತು ಮಾರಾಟ ಸಂಸ್ಥೆ’ಯೊಂದನ್ನು ರಚಿಸಬೇಕೆಂಬ ರಾಜ್ಯ ಸರ್ಕಾರಿ ನೌಕರರ ಸಂಘದ ಸಲಹೆಯನ್ನು ಅಂಗೀಕರಿಸಿದ ಹಣಕಾಸು ಸಚಿವರು, ಆ ಬಗ್ಗೆ ಯೋಜನೆಯನ್ನು ಕಾರ್ಯಗತಗೊಳಿಸಲು ವಿವರ ಸಿದ್ಧಗೊಳಿಸುವಂತೆ ಹಣಕಾಸು ಇಲಾಖೆಯ ಕಮಿಷನರ್‌ಗೆ ಸೂಚಿಸಿದ್ದಾರೆಂದು ಸಂಘದ ಅಧ್ಯಕ್ಷರು ತಿಳಿಸಿದರು.

ಏರುತ್ತಿರುವ ಭೂಉಷ್ಣತೆಗೆ ಜಗತ್ತು ಬೆಚ್ಚಿದೆ, ಪರಿಹಾರಕ್ಕೆ ಕೈಜೋಡಿಸಬೇಕಿದೆ

# ನಮ್ಮ ಭವಿಷ್ಯ ಯಾರ ಕೈಯಲ್ಲಿ?

ವಿಶ್ಲೇಷಣೆ

**ಟಿ.ಆರ್.ಅನಂತರಾಮು**

**ನೊಬೆಲ್** ಪ್ರಶಸ್ತಿ ಪ್ರಕಟವಾದಾಗ ಸಾಮಾನ್ಯವಾಗಿ ಅದು ಅಕಡೆಮಿಕ್ ವಲಯದಲ್ಲಿ ಹೆಚ್ಚು ಚರ್ಚೆಗೆ ಬರುತ್ತದೆ; ಜನಸಾಮಾನ್ಯರು ಸಂಭ್ರಮಿಸುವುದು ವಿರಳ. ಆದರೆ ಈ ವರ್ಷ ಶರೀರ ವಿಜ್ಞಾನ ವಿಭಾಗದಲ್ಲಿ ಸ್ವೀಡನ್ನಿನ ಸ್ವಾಂತೆ ಪಾಬೋ ಅವರಿಗೆ ನೊಬೆಲ್ ಪ್ರಶಸ್ತಿ ಸಂದಿದೆ ಎಂದಾಗ ಅದು ಕುತೂಹಲ ಹುಟ್ಟಿಸಿತ್ತು. ಆತನ ಅಧ್ಯಯನವು ನಿರ್ವಂಶವಾದ ಮನುಷ್ಯನ ಪ್ರಭೇದಗಳ ವಂಶವಾಹಿಗಳನ್ನು ಕುರಿತಾಗಿತ್ತು. ಹಿಂದೆ ಮನುಷ್ಯನ ಎಷ್ಟು ಪ್ರಭೇದಗಳಿದ್ದವು, ಅವೆಲ್ಲ ಏನಾದವು ಎಂದು ವಿಕಾಸದ ಎಳೆ ಹಿಡಿದು ನಡೆಸಿದ ಅಧ್ಯಯನ ಅದಾಗಿತ್ತು. ಇದರ ಹಿಂದೆಯೇ ಭೂಮಿಯಿಂದ ಈಗಿನ ಮನುಷ್ಯ ನಿರ್ವಂಶವಾಗಬಹುದೇ ಎಂಬ ಆತಂಕವೂ ಹುಟ್ಟಿತು.

ಪ್ರಭೇದ ಎಂದರೆ ಹೆಚ್ಚು ಸಂಕೀರ್ಣ ಅರ್ಥಕ್ಕೆ ಹೋಗದೆ ಚಿಟ್ಟೆಗಳನ್ನು ಗಮನಿಸಿದರಾಯಿತು. ಅವೆಷ್ಟು ವಿಧದ ಚಿಟ್ಟೆಗಳು ನಿಮ್ಮ ಕಣ್ಣಮುಂದೆ ಹಾದಿಲ್ಲ? ಈ ಒಂದೊಂದು ವಿಧವನ್ನೇ ಪ್ರಭೇದ ಎನ್ನುವುದು. ಜೀವಿ ವಿಜ್ಞಾನಿಗಳ ಲೆಕ್ಕದಲ್ಲಿ ಚಿಟ್ಟೆಗಳಲ್ಲಿ 17,500 ಪ್ರಭೇದಗಳಿವೆ. ಬನ್ನೇರುಘಟ್ಟದ ರಾಷ್ಟ್ರೀಯ ಉದ್ಯಾನದಲ್ಲಿ ಸಾವಿರಾರು ಚಿಟ್ಟೆಗಳಿದ್ದರೂ ಅವುಗಳ ಪ್ರಭೇದ ಮಾತ್ರ 48 ಅಷ್ಟೇ. ಇದೇ ತರ್ಕವನ್ನು ಮನುಷ್ಯನಿಗೆ ವಿಸ್ತರಿಸಿದರೆ ಸೋಜಿಗವಾಗುತ್ತದೆ. ಕೇವಲ ಒಂದೇ ಒಂದು ಪ್ರಭೇದ ಉಳಿದಿರುವುದು! ಅದು ಹೋಮೋಸೆಪಿಯನ್ (ಮತಿವಂತ ಮಾನವ). ಬ್ರಿಟಿಷರಂತೆ ಚೀನೀಯರು ಏಕಿಲ್ಲ? ಆಫ್ರಿಕಾದವರಂತೆ ಅಮೆರಿಕದವರು ಏಕಿಲ್ಲ? ಮೆಕ್ಸಿಕನ್ನರಂತೆ ಅರಬರು ಏಕಿಲ್ಲ? ಸ್ಪಷ್ಟವಾಗಿ ಇವರನ್ನೆಲ್ಲ ಗುರುತಿಸಬಹುದು. ಇವರ ಬಾಹ್ಯ ಚಹರೆಯಲ್ಲಿ ವ್ಯತ್ಯಾಸವಿದೆ, ಚರ್ಮದ ಬಣ್ಣದಲ್ಲಿ ವ್ಯತ್ಯಾಸವಿದೆ. ಆದರೆ ದೇಹದೊಳಗಿನ ಅಂಗಾಂಗಗಳು ಎಲ್ಲರದ್ದೂ ಒಂದೇ ಪ್ರಮಾಣ. ಏನೇ ಇದ್ದರೂ ಇವರು ಒಂದೇ ಪ್ರಭೇದಕ್ಕೆ ಸೇರಿದವರು. ಜನಾಂಗ (ರೇಸ್) ಎನ್ನುವ ಗುಂಪಿಗೆ ಸೇರುತ್ತಾರೆ. ಕವಿ ಅಡಿಗರು ಹೇಳಿದ್ದಾರಲ್ಲ, ‘ನಾವೆಲ್ಲರೂ ಒಂದೆ ಜಾತಿ, ಒಂದೆ ಮತ, ಒಂದೆ ಕುಲ; ನಾವು ಮನುಜರು’. ಇದು ವೈಜ್ಞಾನಿಕವಾಗಿಯೂ ಸತ್ಯ. ಪ್ರಶ್ನೆ ಎಂದರೆ ಮನುಷ್ಯನಲ್ಲಿ ಒಂದೇ ಒಂದು ಪ್ರಭೇದ ಉಳಿದದ್ದು ಏಕೆ?

ನಮಗಿಂತ ಹಿಂದೆ ಎಂತೆಂಥ ವಿಚಿತ್ರ ಮಾನವ ಪ್ರಭೇದಗಳಿದ್ದವು. ಹೋಮೋ ಎಂಬ ವಂಶದಲ್ಲೇ ಅಸ್ಟ್ರೋಪಿತಿಕಸ್, ಹೋಮೋಹ್ಯಾಬಿಲಸ್, ಹೋಮೋಎರಕ್ಟಸ್, ಹೈಡಲ್‌ಬರ್ಗೆನ್‌ಸಿಸ್- ಹೀಗೆ. ಹಿಂದಿನವರ ಪಳೆಯುಳಿಕೆಗಳನ್ನು ಜೋಡಿಸಿದರೆ ವೈವಿಧ್ಯ ಕಾಣಬಹುದು. ವಿಚಿತ್ರವೆಂದರೆ, ಈ ಪ್ರಭೇದಗಳು ಒಟ್ಟೊಟ್ಟಿಗೆ ಜೀವಿಸಿದಂತಿಲ್ಲ. ಕನಿಷ್ಠ ಒಂದೊಂದು ಪ್ರಭೇದ ವಿಕಾಸವಾಗಲು ಐದು ಲಕ್ಷ ವರ್ಷ ಬೇಕೆಂದು ಲೆಕ್ಕಹಾಕಿದ್ದಾರೆ. ಆಧುನಿಕ ಮನುಷ್ಯ ಭೂಮಿಯ ಮೇಲೆ ಸ್ಪಷ್ಟವಾಗಿ ರೂಪುಗೊಂಡಿದ್ದು ಮೂರು ಲಕ್ಷ ವರ್ಷಗಳಿಂದ ಐದು ಲಕ್ಷ ವರ್ಷಗಳ ಹಿಂದೆ. ಆದರೆ ಆ ಹಿಂದಿನ ಮನುಷ್ಯ ಪ್ರಭೇದಗಳು ಏಕೆ ನಾಶವಾಗಿಹೋದವು? ಒಂದೊಂದು ಪ್ರಭೇದದ ಸಂಖ್ಯೆ ಹೆಚ್ಚಾಗಿರಲಿಲ್ಲ. ನಿರ್ದಿಷ್ಟ ಪ್ರದೇಶಕ್ಕಷ್ಟೇ ಸೀಮಿತವಾಗಿದ್ದವು. ಪ್ರತಿಬಾರಿ ಹೊಸ ಪ್ರಭೇದ ಹುಟ್ಟಿದಾಗ, ಹಿಂದಿನವು ಹಿಂದಕ್ಕೆ ಸರಿದವು, ಆವಾಸಕ್ಕಾಗಿ, ಆಹಾರಕ್ಕಾಗಿ ಸ್ಪರ್ಧೆ ಇತ್ತು. ಆಧುನಿಕ ಮನುಷ್ಯ ಎಲ್ಲರನ್ನೂ ಮಟ್ಟಹಾಕಿ ಮೆಟ್ಟಿನಿಂತು ಜಗತ್ತಿನ ಎಲ್ಲ ಭಾಗದಲ್ಲೂ ತನ್ನ ಸಾಮ್ರಾಜ್ಯ ವಿಸ್ತರಿಸುತ್ತ ಹೋದ. ಸಹಾರಾದ ಮರುಭೂಮಿಯ ಶಾಖಕ್ಕೂ ಹೊಂದಿಕೊಂಡ, ಉತ್ತರಧ್ರುವದ ಅತಿಶೈತ್ಯಕ್ಕೂ ಹೊಂದಿಕೊಂಡ. ಈ ಹೊಂದಾಣಿಕೆಯೇ ಬದುಕುಳಿಯುವ ಸಾಮರ್ಥ್ಯವನ್ನು ಗಳಿಸಿಕೊಟ್ಟಿತು.

ಈಗಿನ ಮಾನವ ಮುಂದೆ ಹೇಗೆ ವಿಕಾಸವಾಗಬಹುದು ಎಂಬುದನ್ನು ಭವಿಷ್ಯವಾದಿಗಳಿಗೆ ಬಿಡೋಣ. ಬದಲಾದ ಹವಾಗುಣ, ಇಡೀ ಜೀವಿ ವಿಕಾಸದಲ್ಲಿ ಮನುಷ್ಯನೂ ಸೇರಿದಂತೆ ಬದಲಾವಣೆ ತಂದಿದೆ. ಅದರಲ್ಲೂ ಸಸ್ಯ ಸಂಪತ್ತಿನ ಬದಲಾವಣೆ ಹೊಸ ಪ್ರಭೇದಗಳಿಗೆ ಅವಕಾಶ ಕೊಟ್ಟಿದೆ. ಎಸ್ಕಿಮೋಗಳು, ಅಂಡಮಾನಿನ ದಟ್ಟ ಕಾಡಿನಲ್ಲಿ ವಾಸಿಸುತ್ತಿರುವ, ನಾಗರಿಕತೆಯನ್ನೇ ಕಾಣದ ಜರವಾ ಕಾಡುವಾಸಿಗಳಿಗೆ ಸ್ಥಳ ಬದಲಾವಣೆಯೇ ಇಲ್ಲ. ಆಹಾರ ಪದ್ಧತಿಯಲ್ಲೂ ವ್ಯತ್ಯಯವಿಲ್ಲ, ಸ್ಪರ್ಧೆಯೂ ಇಲ್ಲ. ಅವರು ವಿಕಾಸವಾಗಿ ಬೇರೆ ಪ್ರಭೇದಗಳನ್ನು ಸೃಷ್ಟಿಸುವ ಸಾಧ್ಯತೆಯೂ ಇಲ್ಲ. ಇಪ್ಪತ್ತು ಲಕ್ಷ ವರ್ಷಗಳ ಹಿಂದೆ ಮನುಷ್ಯ ಬಲು ತೀವ್ರವಾದ ಹವಾಗುಣ ಬದಲಾವಣೆ ಎದುರಿಸಬೇಕಾಯಿತು. ಪ್ರಮುಖವಾಗಿ ಸಸ್ಯ ಪ್ರಭೇದಗಳು ನಾಶವಾದವು, ಪ್ರಾಣಿಗಳನ್ನು ಕೊಲ್ಲಲು ಬೇಟೆಗೆ ಇಳಿದ, ಕಲ್ಲಿನಿಂದ ಆಯುಧ ತಯಾರಿಸಿದ. ಹಿಂದಿನ ಪ್ರಭೇದಗಳಿಗಿಂತ ಹೆಚ್ಚು ಬುದ್ಧಿಯನ್ನು ಬಳಸಬೇಕಾಯಿತು. ಮಿದುಳು ವಿಕಾಸವಾಗಿ ಹೆಚ್ಚು ಸಮರ್ಥವಾಯಿತು.

ಈಗಿನ ಸಮಸ್ಯೆ ಏನು? ಇಡೀ ಭೂಮಂಡಲದಿಂದ ಮನುಷ್ಯ ಏಕಾಏಕಿ ನಿರ್ಗಮಿಸಬಹುದೆ– ಆರೂವರೆ ಕೋಟಿ ವರ್ಷಗಳ ಹಿಂದೆ ಡೈನೊಸಾರ್‌ಗಳು ನಿರ್ಗಮಿಸಿದಂತೆ? ಜೀವಿ ವಿಜ್ಞಾನಿಗಳು ಇಂಥ ಸಾಧ್ಯತೆಯನ್ನು ಅಲ್ಲಗಳೆದಿದ್ದಾರೆ. ಒಂದುವೇಳೆ ಕ್ಷುದ್ರಗ್ರಹಗಳು ಅಪ್ಪಳಿಸುವ ಸಾಧ್ಯತೆಗಳು ಇದ್ದರೆ, ಅವುಗಳ ಕಕ್ಷೆಯನ್ನೇ ಬದಲಿಸುವ ತಾಂತ್ರಿಕ ನೈಪುಣ್ಯ ಈಗ ಸಾಧಿತವಾಗಿದೆ. ಅಂದರೆ ಆಕಾಶಕಾಯಗಳು ಅಪ್ಪಳಿಸಿ ಮನುಷ್ಯನನ್ನು ನಿರ್ವಂಶ ಮಾಡಲಾರವು. ಈಗಿನದು ಸಂಪೂರ್ಣವಾಗಿ ಬೇರೆಯದೇ ಆದ ಸಮಸ್ಯೆ. ಅದು ನಾವು ಚರಿತ್ರೆಯಿಂದ ಪಾಠ ಕಲಿಯದ ಸಮಸ್ಯೆ. ಬದಲಾದ ಹವಾಗುಣವು ಸಿಂಧೂ ಸಂಸ್ಕೃತಿಯನ್ನೇ ನಾಶ ಮಾಡಿತು ಎಂಬುದು ಒಂದು ವಾದ. ಜನಸಂಖ್ಯೆ ಹೆಚ್ಚಾದಾಗ ಆಹಾರದ ಪೂರೈಕೆಯೂ ಹೆಚ್ಚಬೇಕೆಂಬುದು ಸರಳ ತರ್ಕ. ಇಲ್ಲೇ ಬದುಕುಳಿಯುವ ತಂತ್ರಕ್ಕೆ ಪೆಟ್ಟಾಗುವುದು. ನಮ್ಮ ಸಂಪನ್ಮೂಲಗಳು ಇನ್ನೆಷ್ಟು ಕಾಲ ಬರುತ್ತವೆ ಎಂಬ ದೂರಾಲೋಚನೆ ನಮಗಿದ್ದಂತಿಲ್ಲ. ಸೋಮಾಲಿಯ ದೇಶದಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿರುವವರ ಸಂಖ್ಯೆ ನೆನೆದಾಗ ಗಾಬರಿಯಾಗುತ್ತದೆ. ಇಡೀ ದೇಶಕ್ಕೆ ದೇಶವೇ ಅಪೌಷ್ಟಿಕತೆಯಿಂದ ನರಳಿದರೆ ಅಲ್ಲಿ ಮುಂದೆ ದುರ್ಬಲ ಸಂತಾನಕ್ಕೆ ಅವಕಾಶವಾಗುತ್ತದೆ. ಅಂಥ ಸಂದರ್ಭದಲ್ಲಿ ಬದುಕುಳಿಯುವ ಸಾಧ್ಯತೆ ಎಷ್ಟು?

ಈಗ ತಂತ್ರಜ್ಞಾನ ಎಷ್ಟು ಪ್ರಬಲವಾಗಿದೆ ಎಂದರೆ, ಜೀವಿ ವಿಕಾಸವನ್ನೇ ಬದಲಿಸುವಷ್ಟು ಶಕ್ತವಾಗಿದೆ. ಜೀನ್ ಎಡಿಟಿಂಗ್ ಎಂಬ ಕಲ್ಪನೆ ಸಂಪೂರ್ಣವಾಗಿ ರಾಜಕೀಯ ಮತ್ತು ನೈತಿಕ ಬಂಧದಿಂದ ಹೊರಬರುವುದಾದರೆ, ಮುಂದಿನ ಪೀಳಿಗೆಗಳನ್ನು ಆನುವಂಶೀಯ ಕಾಯಿಲೆಗಳು ಪೀಡಿಸಲಾರವು. ಬ್ಯಾಕ್ಟೀರಿಯ ವೈರಸ್‌ಗಳ ಹಾವಳಿ ಹಿಂದೆಯೂ ಇತ್ತು, ಮುಂದೆಯೂ ಇರುತ್ತದೆ. ಹಾಗಿದ್ದೂ ಮನುಷ್ಯ ಸಂತತಿ ಸಂಪೂರ್ಣವಾಗಿ ನಾಶವಾಗಿಲ್ಲ. ಇತ್ತೀಚೆಗೆ ಲ್ಯಾನ್‌ಸೆಟ್ ವೈದ್ಯಕೀಯ ಪತ್ರಿಕೆ ವರದಿ ಮಾಡಿದಂತೆ, 2019ರಲ್ಲಿ ಭಾರತ ಒಂದರಲ್ಲೇ ಏಳು ಲಕ್ಷ ಮಂದಿಯನ್ನು ಕೊಂದದ್ದು ಕೇವಲ ಐದು ಪ್ರಭೇದದ ಬ್ಯಾಕ್ಟೀರಿಯಾಗಳು. ಆದರೆ ಇಡೀ ಜಗತ್ತಿನ ಎಲ್ಲ ಜೀವಿಗಳನ್ನೂ ಏಕಕಾಲಕ್ಕೆ ಇವು ಕೊಲ್ಲುವ ಸಾಧ್ಯತೆ ಬಿಲ್‌ಕುಲ್ ಇಲ್ಲ. ಮನುಷ್ಯನಿಗೆ ಅತಿ ದೊಡ್ಡ ಅನುಕೂಲವೆಂದರೆ, ಭೂಮಂಡಲದಲ್ಲಿ ಎಲ್ಲ ಪರಿಸರಕ್ಕೂ ಹೊಂದಿಕೊಂಡು ಸಂತಾನ ಬೆಳೆಸಿದ್ದಾನೆ. ಟಿಬೆಟಿಯನ್ನರನ್ನೇ ಗಮನಿಸಿ, ಅತಿ ಎತ್ತರದ ಭಾಗದಲ್ಲಿ ವಾಯುಗೋಳದಲ್ಲಿ ಆಕ್ಸಿಜನ್ ಪ್ರಮಾಣ ಕಡಿಮೆ. ಆದರೂ ಅದಕ್ಕೆ ಹೊಂದಿಕೊಂಡಿದ್ದಾರೆ. ಹಾಗಿಲ್ಲದಿದ್ದರೆ ಉನ್ನತ ಪ್ರದೇಶಗಳಲ್ಲಿ ಬದುಕುಳಿಯಲು ಸಾಧ್ಯವೇ ಇರುತ್ತಿರಲಿಲ್ಲ. ಆದರೆ ಈಗಿನ ಸಮಸ್ಯೆಗೆ ಬೇರೊಂದು ಕರಾಳ ಮುಖವಿದೆ. ಹವಾಗುಣ ಬದಲಾವಣೆ ಎಂದರೆ ಇಡೀ ಭೂಮಿಯ ಯಾವ ಭಾಗವನ್ನೂ ಬಿಡುವುದಿಲ್ಲ. ಸಮುದ್ರ, ಭೂಮಿ, ನದಿ, ಹಿಮನದಿ ಎಲ್ಲವೂ ಬದಲಾದ ಹವಾಗುಣಕ್ಕೆ ಸ್ಪಂದಿಸುತ್ತವೆ. ಇದೇ ಕಳವಳ ತಂದಿರುವ ಸಂಗತಿ. ಏರುತ್ತಿರುವ ಭೂಉಷ್ಣತೆಗೆ ಜಗತ್ತು ಬೆಚ್ಚಿದೆ.

ನೈಸರ್ಗಿಕ ವಿಕೋಪಗಳು ಅಂದರೆ ಜ್ವಾಲಾಮುಖಿ, ಭೂಕಂಪ, ನೆರೆ, ಚಂಡಮಾರುತ, ಅತಿವೃಷ್ಟಿ, ಅನಾವೃಷ್ಟಿಯು ಸ್ಥಳೀಯವಾಗಿ ಒಂದಷ್ಟು ಜನರನ್ನು ಹೊಸಕಿ ಹಾಕಬಹುದು. ಆದರೆ ಮನುಷ್ಯ ಇವುಗಳನ್ನೆಲ್ಲ ದಾಟಿಯೇ ಮುಂದೆ ಸಾಗಿರುವುದು. 2015ರಲ್ಲಿ ಆದ ಪ್ಯಾರಿಸ್ ಒಪ್ಪಂದ ಅದೇ ಎಚ್ಚರಿಕೆಯನ್ನು ಪುನರಾವರ್ತಿಸುತ್ತಿದೆ, ಈಗ ಇರುವುದಕ್ಕಿಂತ ಉಷ್ಣತೆ ಕೇವಲ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಿದರೂ ಸಾಕು, ಇಡೀ ಭೂಮಂಡಲದಲ್ಲಿ ಹಂತಹಂತವಾಗಿ ಜೀವಿಗಳು ಕಣ್ಮರೆಯಾಗುವ ಸಾಧ್ಯತೆಗಳಿವೆ. ಕಲ್ಲಿದ್ದಲು, ತೈಲ ಮುಂತಾದ ಇಂಧನಗಳ ದಹನವನ್ನು ಕಡಿಮೆ ಮಾಡಿ ಎಂದು ಆ ಒಪ್ಪಂದ ಹೇಳುತ್ತಿದೆ. ನಮ್ಮ ಅಳಿವು ಉಳಿವು ಯಾರ ಕೈಯಲ್ಲಿದೆ ಎಂದರೆ, ‘ನಮ್ಮ ಕೈಯಲ್ಲೇ’ ಎಂಬ ಉತ್ತರ ಸ್ಪಷ್ಟವಾಗಿದೆ.

## ಚುರುಮುರಿ



### ಸೊಳ್ಳೆಗೊಂದು ಉಂಗುರ!

• ನಾರಾಯಣ ರಾಯಚೂರ್

**‘ರೀ, ನಂಗೊಂದು** ರಿಂಗ್ ಕೊಡಸ್ತೀರಾ?’

‘ಈಗ... ಯಾವ ರಿಂಗೇ ನಿನಗೆ? ಎಂಗೇಜ್‌ಮೆಂಟ್ ರಿಂಗ್, ಮ್ಯಾರೇಜ್ ರಿಂಗ್ ಕೊಡ್ಸಿ ಆಗಿದೆಯಲ್ಲ, ನನಗ್ ಮಾತ್ರ ಸಫ‘ರಿಂಗ್’!’

‘ರೀ... ಏನಾದ್ರೂ ಕೊಡಿಸೀ ಅಂದ್ಬಿಟ್ರೆ...’

‘ಸಾರಿ... ಹೇಳು... ಯಾವ ರಿಂಗ್ ಬಿತ್ತು ನಿನ್ನ ಕಣ್ಣಿಗೆ?’

‘ತಂತ್ರಜ್ಞಾನದ ಪುಟದಲ್ಲಿ ಸೊಳ್ಳೆ ಓಡ್ಸೋ ರಿಂಗ್ ಬಗ್ಗೆ ಬಂದಿದೆ. ನೀವು ಈ ತರಹದ ನ್ಯೂಸೇ ನೋಡಲ್ಲ. ನಿಮಗೆ ಮೀಸಲಾತಿ, ಭ್ರಷ್ಟಾಚಾರ, ಪಕ್ಷಾಂತರ...’

‘ಸೊಳ್ಳೆಪರದೆ, ಕ್ರೀಮು, ಕಾಯಿಲ್, ಬ್ಯಾಟು ಆದ್ಮೇಲೆ ರಿಂಗ್ ಬಂತಾ?’

‘ಜರ್ಮನಿಯ ಯೂನಿವರ್ಸಿಟಿಯೊಂದರಲ್ಲಿ ಕಂಡು ಹಿಡಿದಿರೊ ರಾಸಾಯನಿಕ ಉಂಗುರಾ ರೀ, ಇದು. ಸುಮ್ನೆ ಬೆರಳ್ಗೆ ಹಾಕಿಕೊಂಡು ಬಿಟ್ರೆ ಆಯ್ತು ಸೊಳ್ಳೆಗಳು ಹತ್ತಿರಕ್ಕೂ ಸುಳಿಯೋಲ್ಲ’.

‘ಗೋಲ್ಡನ್ ರಿಂಗೋ, ಸಿಲ್ವರದ್ದೋ ಆದ್ರೆ ಚಂದ, ಇದೆಂಥಾ ರಿಂಗೇ?’

‘ಇಲ್ಲಿ ನೋಡ್ರಿ ಮುತ್ತಿನ ಉಂಗುರದ ತರಹಾನೇ ಅಟ್ರಾಕ್ಟಿವ್ ಆಗಿಯೇ ಮಾಡಿದಾರೆ. ದೇಹಕ್ಕೂ ಏನೂ ತೊಂದ್ರೆ ಇಲ್ಲವಂತೆ’.

‘ಹೋ... ಮುತ್ತಿನ ಉಂಗುರಾನಾ?! ಹೆಣ್ಣು ಸೊಳ್ಳೆಗಳು ಮುತ್ತಿಕೊಂಡು ಬಿಡಬಹುದು!’

‘ಯಾಕೆ ಗಂಡುಗಳಿಗೇನು ರಿಂಗಿನ ಮೋಹ ಕಡಿಮೆಯೋ? ತೊಡೋದಕ್ಕೆ ಹತ್ತು ಬೆರಳು ಸಾಕಾಗದಷ್ಟು ತೊಡೋರ್ನ ತೋರಿಸ್ಲೀನಿ ಬೇಕಾದ್ರೆ. ಇಷ್ಟಾಗಿ ಸುಂದರಿ ಶಕುಂತಲೆನಾ ಪಟಾಯಿಸಿ, ಪ್ರೀತ್ಸಿ ವಾಪಸ್ ಹೋಗೋವಾಗ ಗಂಡಸು ದುಷ್ಯಂತ ಕೊಟ್ಟಿದ್ದು ಉಂಗರಾನೇ ಅಲ್ವೇನ್ರೀ?’

‘ಅಷ್ಟಕ್ಕೂ ಜುಜುಬಿ ಸೊಳ್ಳೆ ಓಡ್ಸೋಕೆ ಜರ್ಮನ್ ಕೆಮಿಕಲ್ ಉಂಗುರಾನಾ?!’

‘ಜುಜುಬಿನಾ?!... ಕಚ್ಚಿ ಡೆಂಗಿ, ಮಲೇರಿಯಾ ಬಂದು ಕ್ಲಿನಿಕ್ಕು, ಆಸ್ಪತ್ರೆ ಅಂತ ಲಕ್ಷ, ಲಕ್ಷ ಖರ್ಚಾದ್ರೆ ಆವಾಗ ರಾಗ ಎಳೀತೀರ’

‘ರಾಗ ಅಂದ ತಕ್ಷಣ ಜ್ಞಾಪಕ ಬಂತು ಹಳೆ ಸಿನಿಮಾ ಹಾಡು- ‘ನೀರಿನಲ್ಲಿ ಅಲೆಯ ಉಂಗುರ, ಭೂಮಿ ಮೇಲೆ ಹೂವಿನುಂಗುರಾ...’

‘ಸೊಳ್ಳೆ ಓಡ್ಸೋಕೆ ಈಗ ಬಂತು, ಸೊಳ್ಳೆ ಓಡ್ಸೋಕೆ ಈಗ ಬಂತು, ಜರ್ಮನಿಯ ಕೆಮಿಕಲ್ ಉಂಗುರಾ... ಆ..ಆ...ಆ...’

## ಸಂಗತ

# ಏಡ್ಸ್: ಔಷಧಿ ಕೊರತೆಯ ಸಂಕಷ್ಟ

### 2030ಕ್ಕೆ ಏಡ್ಸ್ ಮಾರಿಯನ್ನು ಕೊನೆಗಾಣಿಸುವ ಮಹತ್ವಾಕಾಂಕ್ಷೆ ಯೋಜನೆಯ ಆಶಯ ಈಡೇರಿಕೆಗೆ ಬೇಕಿದೆ ಬದ್ಧತೆ

• ಶಿಶಿರ ವಸಿಷ್ಠ

**ನವದೆಹಲಿಯ** ನ್ಯಾಕೊ ಕಚೇರಿಯ (ನ್ಯಾಷನಲ್ ಏಡ್ಸ್ ಕಂಟ್ರೋಲ್ ಆರ್ಗನೈಸೇಷನ್) ಮುಂದೆ ಎಚ್‌ಐವಿ ಪೀಡಿತ ಐವತ್ತಕ್ಕೂ ಹೆಚ್ಚು ರೋಗಿಗಳು ಜುಲೈ ತಿಂಗಳಿಡೀ ಪ್ರತಿಭಟನೆ ನಡೆಸಿದರು. ತಾವು ಎದುರಿಸುತ್ತಿರುವ ಗಂಭೀರ ರೋಗದ ನಿಯಂತ್ರಣಕ್ಕೆ ಅತ್ಯಗತ್ಯವಾಗಿ ಬೇಕಾದ ಔಷಧಿಗಳು ಸಿಗದಿದ್ದರಿಂದ ಅವರೆಲ್ಲ ಪ್ರತಿಭಟನೆಗಿಳಿದಿದ್ದರು. ಆಸ್ಪತ್ರೆಯಲ್ಲಿ ಅಸುನೀಗಿದ ವ್ಯಕ್ತಿಯೊಬ್ಬರಿಗೆ ಸಂಬಂಧಿಸಿದ ಔಷಧಿಗಳನ್ನು ಕಸದ ರಾಶಿಯಲ್ಲಿ ಹಾಕಿದ್ದನ್ನು ಗಮನಿಸಿ, ಅಲ್ಲಿಂದಲೇ ಹೆಕ್ಕಿಕೊಂಡು ಬಂದು ತನ್ನ ಚಿಕಿತ್ಸೆ ಮುಂದುವರಿಸಿಕೊಂಡಿದ್ದ ದೆಹಲಿ ಮೂಲದ ಜಯಪ್ರಕಾಶ್ ಎಂಬಾತ, ‘ಆರು ತಿಂಗಳಿನಿಂದ ನಮಗೆ ಬೇಕಾದ ಯಾವ ಔಷಧವೂ ಸಿಗುತ್ತಿಲ್ಲ’ ಎಂದು ದುಃಖಿಸಿದ.

ನಮ್ಮಲ್ಲಿರುವ 23 ಲಕ್ಷ ಎಚ್‌ಐವಿ ಪೀಡಿತರಿಗೆ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಚೇರಿಯಿಂದ ನೀಡುವ ಉಚಿತ ಔಷಧಿ ಕೆಲವು ತಿಂಗಳುಗಳಿಂದ ಸಿಗುತ್ತಿಲ್ಲ. ಕಾರಣ ಔಷಧಿಯ ದಾಸ್ತಾನು ಇಲ್ಲದಿರುವುದು. ಏಡ್ಸ್ ಕಾಯಿಲೆಯನ್ನು ವಾಸಿ ಮಾಡುವ, ಬರದಂತೆ ತಡೆಯುವ ಲಸಿಕೆಯಾಗಲೀ ಔಷಧಿಯಾಗಲೀ ಇಲ್ಲ. ವೈರಾಣು ಹಬ್ಬಿಸುವ ಸೋಂಕನ್ನು ನಿಯಂತ್ರಣದಲ್ಲಿ ಇಡುವ ಔಷಧಿ ಮಾತ್ರ ಇದೆ. ವಿಶ್ವದಾದ್ಯಂತ 4 ಕೋಟಿ ಎಚ್‌ಐವಿ ಪೀಡಿತರಿದ್ದಾರೆ. ರೋಗ ನಿಯಂತ್ರಣಕ್ಕೆ ವೈದ್ಯರು ನೀಡುವ ಔಷಧಿಗಳ ಮಿಶ್ರಣವನ್ನು ಎಆರ್‌ಟಿ (ಆ್ಯಂಟಿ ರಿಟ್ರೋ ವೈರಲ್ ಥೆರಪಿ) ಎನ್ನುತ್ತಾರೆ.

ಏಡ್ಸ್ ಬಾಧಿತರಿಗೆ ಕೇಂದ್ರ ಸರ್ಕಾರವು 2004ರಿಂದ ಉಚಿತ ಔಷಧಿ ನೀಡುತ್ತಿದೆ. ಏಡ್ಸ್ ನಿಯಂತ್ರಣಕ್ಕೆ ಅಬಕವಿರ್ (abacavir), ಲಮಿವುಡಿನ್ (lamivudine) ಮತ್ತು ಡೌಲುಟೆಗ್ರವಿರ್(doultegravir) ಎಂಬ ಮೂರು ಔಷಧಿಗಳಿವೆ. ಅವುಗಳಲ್ಲಿ ಮೂರನೆಯದು ತುಂಬಾ ಪರಿಣಾಮಕಾರಿ. ಇದು ಹಿಂದಿನ ವರ್ಷದ ನವೆಂಬರ್‌ನಿಂದಲೂ ರೋಗಿಗಳಿಗೆ ದೊರಕುತ್ತಿಲ್ಲ ಎಂಬ ದೂರುಗಳಿವೆ.

‘ನ್ಯಾಕೊ’ ಅಡಿಯಲ್ಲಿ ಕೆಲಸ ಮಾಡುವ 680 ಎಆರ್‌ಟಿ ಕೇಂದ್ರಗಳು ದೇಶದಲ್ಲಿವೆ. ಇವು 14 ಲಕ್ಷ ಎಚ್‌ಐವಿ ಪೀಡಿತರಿಗೆ ಉಚಿತ ಔಷಧಿ ನೀಡುತ್ತವೆ. ಎಆರ್‌ಟಿಗಳು ತೀರಾ ಇತ್ತೀಚಿನವರೆಗೂ ಎರಡು ತಿಂಗಳಿಗಾಗುವಷ್ಟು ಔಷಧಿಗಳನ್ನು ರೋಗಿಗಳಿಗೆ ನೀಡುತ್ತಿದ್ದವು. ಇತ್ತೀಚೆಗೆ ಒಂದು ವಾರಕ್ಕಾಗುವಷ್ಟು ಔಷಧಿಯೂ ಸಿಗುತ್ತಿಲ್ಲ ಮತ್ತು ಕೆಲವು ಕಡೆ ಮಕ್ಕಳಿಗೆ ನೀಡುವ ಔಷಧಿಗಳನ್ನೇ ವಯಸ್ಕರಿಗೆ ನೀಡಿದ್ದಾರೆ ಎಂಬುದು ಜಯಪ್ರಕಾಶ್ ಮತ್ತು ಸಂಗಡಿಗರ ದೂರು.

ಏಡ್ಸ್ ರೋಗಿಗಳ ಕ್ಷೇಮಕ್ಕಾಗಿ ದುಡಿಯುತ್ತಿರುವ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಔಷಧಿಯ ಕೊರತೆಯು ರೋಗಿಗಳನ್ನು ತೀವ್ರವಾಗಿ ಬಾಧಿಸುತ್ತಿದೆ ಎಂಬುದನ್ನು ದೃಢಪಡಿಸಿವೆ. ಆದರೆ ಕೇಂದ್ರ ಆರೋಗ್ಯ ಇಲಾಖೆ ಮತ್ತು ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ ‘ಸ್ಯಾಕ್ಸ್’ (SACS – State Aids Control Societies) ರೋಗಿಗಳ ಮಾತನ್ನು ಸಾರಾಸಗಟಾಗಿ ನಿರಾಕರಿಸಿ, ಅಂಥ ಕೊರತೆ ಏನೂ ಇಲ್ಲ ಎಂದಿವೆ.

ಏಡ್ಸ್ ನಿಯಂತ್ರಣ ಔಷಧಿಯ ಕೊರತೆ ಇದೇ ಮೊದಲೇನಲ್ಲ. 2014 ಮತ್ತು 2017-18ರಲ್ಲೂ ಹೀಗೇ ಆಗಿತ್ತು. ಆಗ ಏಡ್ಸ್ ನಿಯಂತ್ರಿಸುವ ಔಷಧ ತಯಾರಿಸುವ ಕಂಪನಿಗಳಿಗೆ ಗುತ್ತಿಗೆ ನೀಡುವುದು ತಡವಾಗಿತ್ತು. ಈಗಲೂ ಹಾಗೆಯೇ ಆಗಿರಬಹುದು ಎಂಬುದು ಎಚ್‌ಐವಿ ಪೀಡಿತರ ಪರವಾಗಿ ಕೆಲಸ ಮಾಡುತ್ತಿರುವ ವಕೀಲೆ ಲೀನಾ ಮಹಗನಿ ಅವರ ಅಭಿಪ್ರಾಯ.

ಹಿಂದಿನ ಡಿಸೆಂಬರ್‌ನಲ್ಲಿ ಕರೆದ ಟೆಂಡರ್ ಪ್ರಕ್ರಿಯೆ ಜನವರಿ ತಿಂಗಳಲ್ಲಿ ರದ್ದಾಗಿತ್ತು. ಮಾರ್ಚ್ ತಿಂಗಳಿನಲ್ಲಿ ಕರೆದಿದ್ದ ಟೆಂಡರ್ ಪ್ರಕ್ರಿಯೆ ಶುರುವಾಗಿತ್ತಾದರೂ ಇದುವರೆಗೂ ಯಾವ ಕಂಪನಿಗೂ ಕೆಲಸದ ಪರವಾನಗಿ ಸಿಕ್ಕಿಲ್ಲ ಎಂಬ ಮಾಹಿತಿ ಇದೆ. ಹೀಗಾದಲ್ಲಿ ಔಷಧಿಯು ಎಆರ್‌ಟಿಗಳನ್ನು ತಲುಪಿ ಅಲ್ಲಿಂದ ಜನರಿಗೆ ತಲುಪುವುದು ಇನ್ನೂ ತಡವಾಗುತ್ತದೆ. ಅಲ್ಲಿಗೆ ರೋಗಿಗಳಿಗೆ ಮತ್ತಷ್ಟು ತೊಂದರೆಯಾಗಿರುತ್ತದೆ.

ಮೇ 30ರಂದು ‘ನ್ಯಾಕೊ’ದ ಡೆಪ್ಯುಟಿ ಡೈರೆಕ್ಟರ್ ಜನರಲ್ ಅನೂಪ್‌ಕುಮಾರ್ ಪುರಿ ಅವರು ರಾಜ್ಯಗಳಿಗೆ ಪತ್ರ ಬರೆದು, ‘ಈಗಿನ ಬಿಕ್ಕಟ್ಟನ್ನು ಎದುರಿಸಲು ಸದ್ಯಕ್ಕೆ ನೀವೆಲ್ಲ ಪರ್ಯಾಯ ಚಿಕಿತ್ಸಾ ಪದ್ಧತಿಗೆ ಬದಲಾಗಿ’ ಎಂದು ತಿಳಿಸಿದ್ದರು. ‘ನಿಮ್ಮ ಔಷಧಿಯನ್ನು ನೀವೇ ಸಂಪಾದಿಸಿಕೊಳ್ಳಿ ಎಂದು ನ್ಯಾಕೊ ಹೇಳಿದ್ದರಿಂದ ನಾವು ಬೇರೆ ರಾಜ್ಯಗಳಿಂದ ಡೊನೇಷನ್ ರೂಪದಲ್ಲಿ ತರಿಸಿಕೊಂಡೆವು’ ಎಂದಿರುವ ಮಹಾರಾಷ್ಟ್ರ ಮತ್ತು ಮಣಿಪುರದ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿಯ ಅಧಿಕಾರಿಗಳು, ವಯಸ್ಕರ ಔಷಧಿಗಳನ್ನು ಮಕ್ಕಳಿಗೆ ನೀಡಿದ್ದೂ ಇದೆ ಎಂದು ಆತಂಕ ವ್ಯಕ್ತಪಡಿಸುತ್ತಾರೆ. ಸೆಪ್ಟೆಂಬರ್ ವೇಳೆಗೆ ಹೊಸ ಸ್ಟಾಕ್ ಕಳಿಸುತ್ತೇವೆ ಎಂದು ನ್ಯಾಕೊ ಹೇಳಿತ್ತು. ಅದರಂತೆ ನಡೆದುಕೊಂಡ ನ್ಯಾಕೊ, ಒಂದು ತಿಂಗಳ ಅವಧಿಗೆ ಔಷಧಿ ನೀಡಿ ರೋಗಿಗಳನ್ನು ಸಮಾಧಾನಪಡಿಸಿದೆ.

ಈಗ ಸ್ವಲ್ಪ ಎಚ್ಚರ ತಪ್ಪಿದರೂ ನಾವು ಏಡ್ಸ್ ನಿಯಂತ್ರಣಕ್ಕೆ ಮಾಡಿರುವ ಇದುವರೆಗಿನ ಕಠಿಣ ಶ್ರಮ ಮಣ್ಣುಪಾಲಾಗುತ್ತದೆ ಎಂದಿರುವ ಪಬ್ಲಿಕ್ ಹೆಲ್ತ್ ಫೌಂಡೇಶನ್ ಆಫ್ ಇಂಡಿಯಾದ ಉಪಾಧ್ಯಕ್ಷೆ ಪ್ರೀತಿ ಕುಮಾರ್, 2030ಕ್ಕೆ ಏಡ್ಸ್ ಮಾರಿಯನ್ನು ಕೊನೆಗಾಣಿಸುವ ನಮ್ಮ ಮಹತ್ವಾಕಾಂಕ್ಷೆ ಯೋಜನೆ ಹಳ್ಳ ಹಿಡಿಯದಿರಲಿ ಎಂಬ ಆಶಯ ವ್ಯಕ್ತಪಡಿಸುತ್ತಾರೆ.

## ವಾಚಕರ ವಾಣಿ

### ಶಾಲೆಗಳಲ್ಲಿ ಮೊಬೈಲ್ ಫೋನ್ ನಿಷೇಧ ಸ್ತುತ್ಯರ್ಹ

ಶಾಲೆಗಳಲ್ಲಿ ಮೊಬೈಲ್ ಫೋನ್ ಬಳಕೆಗೆ ನಿಷೇಧ ಹೇರಿರುವುದು ಸ್ತುತ್ಯರ್ಹ. ಮೊಬೈಲ್ ಬಳಕೆಯಿಂದ ಮಕ್ಕಳಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ. ಓದು- ಅಭ್ಯಾಸದ ಕಡೆ ಗಮನ ಕೇಂದ್ರೀಕರಿಸಲು ತೊಡಕಾಗಿಯೂ ಪರಿಣಮಿಸಿದೆ.

ಕೊರೊನಾ ಕಾಲದಲ್ಲಿ ಮಕ್ಕಳು ವಿಪರೀತ ಮೊಬೈಲ್ ಬಳಸುತ್ತಿದ್ದುದರಿಂದ ಅದೊಂದು ಗೀಳಾಗಿ ಪರಿಣಮಿಸಿದೆ. ಅದು ಆಗ ಅವಶ್ಯವೂ ಆಗಿತ್ತು. ಈಗ ಇದಕ್ಕೆ ಕಡಿವಾಣ ಹಾಕಬೇಕಾಗಿದೆ. ಶಾಲೆಗಳು, ಪೋಷಕರು ಕೂಡಿ ಪ್ರಯತ್ನಪಟ್ಟರೆ ಇದು ಸಾಧ್ಯವಾಗುತ್ತದೆ. ಮಕ್ಕಳ ಮನವೊಲಿಸಿ ಈ ಕೆಲಸ ಸಾಧಿಸಬೇಕಾಗಿದೆ.

**ಎಚ್.ಎಸ್.ಟಿ.ಸ್ವಾಮಿ**, ಚಿತ್ರದುರ್ಗ

### ಹೋಲಿಕೆಯ ಚಾಳಿ ಸರಿಯಲ್ಲ

‘ಕಾಂಗ್ರೆಸ್‌ನಲ್ಲಿ ಎಷ್ಟು ಜನ ರೌಡಿ ಶೀಟರ್‌ಗಳಿದ್ದಾರೆ ಎಂದು ಲೆಕ್ಕ ಹಾಕಲಿ’ ಎಂದಿದ್ದಾರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ (ಪ್ರ.ವಾ., ನ. 30). ಅಂದರೆ ರೌಡಿ ಶೀಟರ್‌ಗಳನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ವಿಚಾರದಲ್ಲಾಗಲಿ ಅಥವಾ ಅವರೊಂದಿಗೆ ಸಂಪರ್ಕ ಇಟ್ಟುಕೊಳ್ಳುವ ವಿಚಾರದಲ್ಲಾಗಲಿ ಮುಖ್ಯಮಂತ್ರಿಯವರು ಕಾಂಗ್ರೆಸ್ ಪಕ್ಷದ ಜೊತೆಗೆ ಸ್ಪರ್ಧೆಗೆ ಇಳಿದಿದ್ದಾರೆಯೇ? ಅಥವಾ ಅವರಿಗೆ ಕಾಂಗ್ರೆಸ್ ಪಕ್ಷ ಆದರ್ಶವೇ? ಮುಖ್ಯಮಂತ್ರಿ ಅನುಸರಿಸುವುದು ಕಾಂಗ್ರೆಸ್ ಪಕ್ಷದ ಸಂಸ್ಕೃತಿಯನ್ನೋ ಅಥವಾ ಬಿಜೆಪಿ ಸಂಸ್ಕೃತಿಯನ್ನೋ? ಸರ್ಕಾರದ ಬೇರೆ ಬೇರೆ ತಪ್ಪುಗಳ ಬಗ್ಗೆ ಕಾಂಗ್ರೆಸ್ ಅಥವಾ ಜೆಡಿಎಸ್ ಪಕ್ಷದ ಮುಖಂಡರು ಏನಾದರೂ ಪ್ರಶ್ನೆ ಹಾಕಿದಾಗಲೂ ಇದೇ ರೀತಿ ಉತ್ತರ ನೀಡುವ ವರಸೆಯನ್ನು ಬಿಜೆಪಿ ಅನುಸರಿಸುತ್ತಿದೆ. ಕಾಂಗ್ರೆಸ್ ಅಥವಾ ಜೆಡಿಎಸ್ ಆಳ್ವಿಕೆ ಸರಿಯಿಲ್ಲ ಎಂಬ ಕಾರಣದಿಂದಲೇ ಅಲ್ಲವೆ ಬಿಜೆಪಿಗೆ ಹೆಚ್ಚು ಸ್ಥಾನ ಕೊಟ್ಟಿರುವುದು?

ತನ್ನ ಆಳ್ವಿಕೆ ಬಗ್ಗೆ ಎದುರಾಗುವ ಪ್ರಶ್ನೆಗಳಿಗೆ ಸಮರ್ಥ ಉತ್ತರ ನೀಡಬೇಕೆ ವಿನಾ ಕಾಂಗ್ರೆಸ್ ಅಥವಾ ಜೆಡಿಎಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ಘಟಿಸಿದ ತಪ್ಪುಗಳ ಕಡೆ ಬೆರಳು ತೋರಿಸುವ ಮೂಲಕ ಜಾರಿಕೊಳ್ಳುವ ಪ್ರಯತ್ನ ತರವಲ್ಲ. ಪಕ್ಷ ಯಾವುದೇ ಇರಲಿ ಅದು ಅಧಿಕಾರದಲ್ಲಿದ್ದಾಗ ತನ್ನ ನೀತಿ–ನಿಲುವುಗಳ ಬಗ್ಗೆ ಸಮರ್ಥನೆ ಒದಗಿಸಬೇಕು. ತಪ್ಪುಗಳಾಗಿದ್ದರೆ ತಿದ್ದಿಕೊಳ್ಳಬೇಕು. ಅದನ್ನು ಬಿಟ್ಟು ಹಿಂದಿನವರ ಆಳ್ವಿಕೆಯಲ್ಲಿ ಆಗಿರುವ ತಪ್ಪುಗಳಿಗೆ ಹೋಲಿಸಿಕೊಂಡು ತಮ್ಮ ತಪ್ಪುಗಳನ್ನು ಸಮರ್ಥಿಸುವ ಚಾಳಿ ಸರಿಯಲ್ಲ. ಅದು ಜವಾಬ್ದಾರಿಯುತ ನಡೆಯೂ ಅಲ್ಲ.

**ಹುರುಕಡ್ಲಿ ಶಿವಕುಮಾರ**, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

### ತೃತೀಯ ಲಿಂಗಿಗಳ ಪ್ರೇರಕ ನಡೆ

ಇತ್ತೀಚೆಗೆ ಪ್ರಕಟಗೊಂಡ ಸರ್ಕಾರಿ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ತೃತೀಯ ಲಿಂಗಿ ಕೋಟಾದಡಿ ಮೂವರು ಸರ್ಕಾರಿ ಹುದ್ದೆ ಪಡೆಯುವಲ್ಲಿ ಯಶಸ್ವಿಯಾಗಿದ್ದು, ಇವರ ಸಾಧನೆ ಹರ್ಷವೆನಿಸಿದೆ. ತಮ್ಮದಲ್ಲದ ತಪ್ಪಿಗೆ ಹೆತ್ತವರು, ಬಂಧುಬಳಗ ಹಾಗೂ ಸಮಾಜದಲ್ಲಿ ಶೋಷಣೆಗೆ ಒಳಗಾಗಿ ತೀರಾ ಮುಜುಗರಕ್ಕೆ ಈಡಾಗುತ್ತಾರೆ ಇವರು. ಕೆಲವರು ಬೀದಿ ಬೀದಿಯಲ್ಲಿ ಭಿಕ್ಷಾಟನೆ ಮಾಡುತ್ತಾ ಜೀವನ ಸಾಗಿಸುವುದು ಸಾಮಾನ್ಯ. ಸರ್ಕಾರಿ ಉದ್ಯೋಗಕ್ಕೆ ಸಿದ್ಧತೆ ನಡೆಸುವ ಅಪಾರ ಆಕಾಂಕ್ಷಿಗಳಿಗೆ, ಇತರ ಯುವ ಸಮೂಹಕ್ಕೆ ಈ ತೃತೀಯ ಲಿಂಗಿಗಳು ನಿಜಕ್ಕೂ ಪ್ರೇರಣೆ.

ಸಾಮಾಜಿಕವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿ ಭೇದಭಾವಕ್ಕೆ ಒಳಗಾಗುತ್ತ, ನಕಾರಾತ್ಮಕ ದೃಷ್ಟಿಕೋನಗಳಿಂದ ನೋಡುವ ಸಮೂಹದ ನಡುವೆ ಮೀಸಲಾತಿಯ ವರದಾನದಿಂದ ಹಾಗೂ ನ್ಯಾಯಯುತವಾದ ನೈತಿಕ ಹಕ್ಕಿನ ಅರಿವಿನಿಂದ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಇವರು ಮುನ್ನೆಲೆಗೆ ಬರುತ್ತಿರುವುದು ಸಕಾರಾತ್ಮಕ ಅಂಶ.

**ಅನಿಲ್ ಕುಮಾರ್**, ನಂಜನಗೂಡು

### ಪ್ರತಿಕ್ರಿಯೆ ತೋರದಿದ್ದುದೇಕೆ?

ಮಣಿಪಾಲ ತಾಂತ್ರಿಕ ಮಹಾವಿದ್ಯಾಲಯ ಪ್ರಕರಣದ ದೃಶ್ಯಾವಳಿ ವೀಕ್ಷಿಸಿದಾಗ, ನನಗೆ ಆಶ್ಚರ್ಯ ಹಾಗೂ ವಿಷಾದ ಎರಡೂ ಉಂಟಾಯಿತು. ಮುಸ್ಲಿಂ ಸಹಪಾಠಿಯೊಬ್ಬನನ್ನು ಶಿಕ್ಷಕರು ಭಯೋತ್ಪಾದಕನಿಗೆ ಹೋಲಿಸಿದಾಗ, ಮುಂದಿನ ಸಾಲಿನಲ್ಲಿ ಕೂತವರಿಂದಾಗಲಿ, ಪಕ್ಕದಲ್ಲಿದ್ದ ಯುವತಿಯಿಂದಾಗಲಿ ಯಾವುದೇ ರೀತಿಯ ಪ್ರತಿಕ್ರಿಯೆ ಕಾಣಿಸಲಿಲ್ಲ. ತತ್‌ಕ್ಷಣ ಉಳಿದ ಹುಡುಗರು ವಿರೋಧ ವ್ಯಕ್ತಪಡಿಸದಿದ್ದುದು ಯಾವ ಕಾರಣಕ್ಕಾಗಿ? ಸರ್ವ ಮತ, ಜಾತಿಯವರು ಕೂಡಿ ಕಲಿಯುವ ಶಿಕ್ಷಣ ಸಂಸ್ಥೆಗಳಲ್ಲಿ, ಜೊತೆಯಲ್ಲಿ ಕಲಿಯುವ ಒಬ್ಬರಿಗೆ, ಕಲಿಸುವ ಗುರುಗಳೇ ಹೀಗೆ ನಿಂದನೆ ಮಾಡಿದಾಗ, ವಿದ್ಯಾರ್ಥಿ ಸಮೂಹದ ವಿವೇಚನೆ ಎಲ್ಲಿ ಮಾಯವಾಯಿತು?

ಕಲಿತ ಆದರ್ಶಗಳನ್ನು ಎಷ್ಟು ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆ? ನಮ್ಮದು ಪ್ರಜಾಪ್ರಭುತ್ವ ದೇಶ ಎಂದು ಕರೆದುಕೊಳ್ಳುತ್ತೇವೆ. ಶಿಕ್ಷಣ ಕ್ಷೇತ್ರ ಎಷ್ಟರಮಟ್ಟಿಗೆ ಅದನ್ನು ಆಚರಿಸಲು ಆಸ್ಪದ ನೀಡುತ್ತಿದೆ? ಎಷ್ಟು ಮಂದಿ ವಿದ್ಯಾರ್ಥಿಗಳು ತಮ್ಮ ಹಕ್ಕು, ಜವಾಬ್ದಾರಿಯನ್ನು ಪ್ರದರ್ಶಿಸುತ್ತಾರೆ?

**ಶ್ಯಾಮಲ ಗುರುಪ್ರಸಾದ್**, ಹುಬ್ಬಳ್ಳಿ

### ಹಗುರ ಮಾತು ತಂದ ಹಾನಿ

‘ಮಹಿಳೆಯರು ಸೀರೆ ಉಟ್ಟರೆ ಸುಂದರವಾಗಿ ಕಾಣಿಸುತ್ತಾರೆ, ಸಲ್ವಾರ್ ಕಮೀಜ್ ಧರಿಸಿದರೂ ಚೆನ್ನಾಗಿ ಕಾಣುತ್ತಾರೆ, ಏನೂ ಧರಿಸದಿದ್ದರೂ ಚೆಂದ ಕಾಣುತ್ತಾರೆ’ ಎನ್ನುವ ಯೋಗ ಗುರು ಬಾಬಾ ರಾಮದೇವ್ ಅವರ ಹೇಳಿಕೆ ಪ್ರಜ್ಞಾವಂತರನ್ನು ದಿಗಿಲುಗೊಳಿಸಿದೆ. ಇಂತಹ ನುಡಿಮುತ್ತುಗಳು ಕಾಲೇಜು ರೋಮಿಯೊಗಳಿಂದಲೋ ಪಡ್ಡೆ ಹುಡುಗರಿಂದಲೋ ಬಂದಿದ್ದರೆ ಅದನ್ನು ಹುಚ್ಚು ಕೋಡಿ ಮನಸ್ಸಿನ ಅಪ್ರಬುದ್ಧ ಪ್ರಲಾಪ ಎನ್ನಬಹುದಿತ್ತು. ಅಂತೆಯೇ ಅದನ್ನು ನಿರ್ಲಕ್ಷಿಸಬಹುದಿತ್ತು. ಕೋಟ್ಯಂತರ ಅನುಯಾಯಿಗಳನ್ನು ಹೊಂದಿರುವ, ಆಳುವ ಪಕ್ಷಕ್ಕೆ ಅತಿ ಹತ್ತಿರ ಇರುವ ಧಾರ್ಮಿಕ ಮತ್ತು ಆಧ್ಯಾತ್ಮಿಕ ವ್ಯಕ್ತಿಯೊಬ್ಬರಿಂದ ಇಂತಹ ಮಾತುಗಳು ಬಂದಿವೆ. ಅವರು ಇದನ್ನು ಮಾತಿನ ಭರದಲ್ಲಿ ಹೇಳಿದ್ದು ಎನ್ನಬಹುದು ಅಥವಾ ತಮ್ಮ ಹೇಳಿಕೆಯನ್ನು ತಿರುಚಲಾಗಿದೆ ಎನ್ನಬಹುದು. ಅದರೆ, ‘ಮುತ್ತು ಒಡೆದರೆ ಮತ್ತು ಮಾತು ಆಡಿದರೆ ಮುಗಿಯಿತು’ ಎಂಬ ಮಾತಿನ ಅಡಿಯಲ್ಲಿ, ಇವರ ಈ ಹಗುರ ಮಾತು ಮಾಡಿದ ಹಾನಿ ಗಮನಾರ್ಹ ಎನ್ನಬಹುದು.

**ರಮಾನಂದ ಶರ್ಮಾ**, ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# 2023: ಭಾರತದ ಅಧ್ಯಕ್ಷತೆಯಲ್ಲಿ ಜಿ20

ಜಿ20ಯ 2023ನೇ ಸಾಲಿನ ಅಧ್ಯಕ್ಷತೆ ಭಾರತಕ್ಕೆ ಒದಗಿಬಂದಿದೆ. ಈ ವರ್ಷ ನಡೆಯಲಿರುವ ಜಿ20ಯ ಎಲ್ಲಾ ಸಭೆಗಳನ್ನು ದೇಶದ ವಿವಿಧ ನಗರಗಳಲ್ಲಿ ಆಯೋಜಿಸಲಾಗುತ್ತದೆ. ವರ್ಷಾಂತ್ಯಕ್ಕೆ ನಡೆಯಲಿರುವ ಜಿ20 ಶೃಂಗಸಭೆಯೂ ಭಾರತದಲ್ಲೇ ನಡೆಯಲಿದೆ. ದೇಶಕ್ಕೆ ದೊರೆತಿರುವ ಈ ಜಾಗತಿಕ ಮಟ್ಟದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳಲು ಎಲ್ಲಾ ಸ್ವರೂಪದ ಸಿದ್ಧತೆ ನಡೆದಿದೆ

ಪ್ರಜಾವಾಣಿ ವಾರ್ತೆ

ಇಪ್ಪತ್ತನೇ ಶತಮಾನದ ಕೊನೆಯ ದಶಕದಲ್ಲಿ ಏಷ್ಯಾದಲ್ಲಿ ತಲೆದೋರಿದ್ದ ಆರ್ಥಿಕ ಬಿಕ್ಕಟ್ಟಿನ ನಂತರ, ಮತ್ತೆ ಅಂತಹ ಪರಿಸ್ಥಿತಿ ಎದುರಾಗದಂತೆ ಪರಿಹಾರ ಕಂಡುಕೊಳ್ಳಲು ವಿಶ್ವದ 20 ದೇಶಗಳು (19 + ಐರೋಪ್ಯ ಒಕ್ಕೂಟ) ಸೇರಿ ರಚಿಸಿಕೊಂಡ ಒಕ್ಕೂಟವೇ ಜಿ20. 1999ರಲ್ಲಿ ಇದು ರಚನೆಯಾದಾಗ, ಜಾಗತಿಕ ಆರ್ಥಿಕ ಸ್ಥಿತಿ ಮತ್ತು ಆರ್ಥಿಕ ಬಿಕ್ಕಟ್ಟನ್ನು ಕುರಿತು ಚರ್ಚಿಸುವುದು ಹಾಗೂ ಅದಕ್ಕೆ ಪರಿಹಾರ ಕಂಡುಕೊಳ್ಳುವುದು ಈ ಒಕ್ಕೂಟದ ಪ್ರಮುಖ ಉದ್ದೇಶವಾಗಿತ್ತು. ಆರಂಭದ ವರ್ಷಗಳಲ್ಲಿ ಹಣಕಾಸು ಸಚಿವರ ಮಧ್ಯೆ ಸಭೆ ನಡೆಸಿ, ಒಪ್ಪಂದಗಳನ್ನು ಮಾಡಿಕೊಳ್ಳಲಷ್ಟೇ ಜಿ20 ಸೀಮಿತವಾಗಿತ್ತು. ಈಗ ಇದು ಜಗತ್ತಿನ ಅತ್ಯಂತ ಶ್ರೀಮಂತ ಮತ್ತು ದೊಡ್ಡ ಒಕ್ಕೂಟವಾಗಿದೆ.

ಜಿ20ರ ಸ್ವರೂಪ, ಅದರ ಕಾರ್ಯವಿಧಾನ ಬದಲಾಗಿದ್ದು ನಂತರದ ಮತ್ತೊಂದು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲೇ. 2008ರ ವಿಶ್ವ ಆರ್ಥಿಕ ಹಿಂಜರಿತ ಸಂದರ್ಭದಲ್ಲಿ ಜಿ20 ದೇಶಗಳೆಲ್ಲವೂ ಸೇರಿ, ಆರ್ಥಿಕ ಹಿಂಜರಿತವನ್ನು ಎದುರಿಸುವುದು ಹೇಗೆ ಎಂಬುದರ ಬಗ್ಗೆ ಚರ್ಚೆ ನಡೆಸಿದವು. ಅವರೆಗೆ ಹಣಕಾಸು ಸಚಿವರ ಮಟ್ಟದಲ್ಲಿ ಸಭೆ ನಡೆಸುವ ಒಕ್ಕೂಟ ಮಾತ್ರವಾಗಿದ್ದ ಜಿ20ಕ್ಕೆ, 2009ರಲ್ಲಿ ಸದಸ್ಯ ದೇಶಗಳ ಮುಖ್ಯಸ್ಥರ ಸಭೆಯ ಮಾನ್ಯತೆ ನೀಡಲಾಯಿತು. ಅಂದರೆ ಸದಸ್ಯ ದೇಶಗಳ ಪ್ರಧಾನಿ ಅಥವಾ ಅಧ್ಯಕ್ಷರು ಒಕ್ಕೂಟದ ಸಭೆಗಳಲ್ಲಿ ಭಾಗಿಯಾಗುತ್ತಿದ್ದರು. ಆಯಾ ವರ್ಷದ ಆರ್ಥಿಕ ಮುನ್ನೋಟ ಏನಾಗಿರಬೇಕು ಎಂಬುದನ್ನು ಚರ್ಚಿಸಲು ಒಂದೆರಡು ತಿಂಗಳಿಗೊಮ್ಮೆ ಜಿ20 ಸಭೆಗಳನ್ನು ನಡೆಸಲಾಗುತ್ತದೆ. ವರ್ಷದ ಕೊನೆಯಲ್ಲಿ ಶೃಂಗಸಭೆ ನಡೆಸಲಾಗುತ್ತದೆ.

ಈ ಸಭೆಗಳ ಸಂದರ್ಭದಲ್ಲಿ ಸದಸ್ಯ ರಾಷ್ಟ್ರಗಳು ಪರಸ್ಪರ ವಾಣಿಜ್ಯ ಸಹಕಾರ ಒಪ್ಪಂದಗಳನ್ನು ಮಾಡಿಕೊಳ್ಳುತ್ತವೆ. ಇಂತಹ ಒಪ್ಪಂದಗಳನ್ನು ಸದಸ್ಯ ದೇಶಗಳೆಲ್ಲವೂ ಬೆಂಬಲಿಸುತ್ತವೆ. ಹೀಗಾಗಿ ಇಲ್ಲಿ ನಡೆಯುವ ಒಪ್ಪಂದಕ್ಕೆ ಬಹಳ ಮಹತ್ವವಿದೆ. ಆರಂಭದ ವರ್ಷಗಳಲ್ಲಿ ಈ ಸ್ವರೂಪದ ಆರ್ಥಿಕ ಮತ್ತು ಜಾಗತಿಕ ವಾಣಿಜ್ಯ ಚಟುವಟಿಕೆಗಳಿಗಷ್ಟೇ ಜಿ20 ಸೀಮಿತವಾಗಿತ್ತು. ಆದರೆ, ಈಚಿನ ವರ್ಷಗಳಲ್ಲಿ ಜಿ20ಯು ಜಾಗತಿಕ ಹವಾಮಾನ ವೈಪರೀತ್ಯ, ಮುಕ್ತ ಮತ್ತು ಸ್ವತಂತ್ರ ಸಮುದ್ರಯಾನ, ಭಯೋತ್ಪಾದನೆ, ಪ್ರಾದೇಶಿಕ ಶಾಂತಿ ಮತ್ತು ಯುದ್ಧಗಳನ್ನೂ ತಮ್ಮ ಚರ್ಚೆಗಳಲ್ಲಿ ಒಳಗೊಳ್ಳುತ್ತಿದೆ. 2022ರ ಜಿ20 ಶೃಂಗಸಭೆಯಲ್ಲಿ, ಉಕ್ರೇನ್ ಮೇಲೆ ರಷ್ಯಾದ ಅತಿಕ್ರಮಣವನ್ನು ಖಂಡಿಸಲಾಗಿತ್ತು. ಇದು ಜಿ20ಯ ವ್ಯಾಪಕತೆಗೆ ಉತ್ತಮ ನಿದರ್ಶನವಾಗಿದೆ.

## ಸಾಮೂಹಿಕ ನಾಯಕತ್ವ

ಜಿ20ಗೆ ಯಾವುದೇ ಒಂದು ಶಾಶ್ವತ ಮುಂದಾಳು ದೇಶವಿಲ್ಲ. ಎಲ್ಲಾ ಸದಸ್ಯ ದೇಶಗಳೂ ತಮ್ಮ ಸರದಿಯಂತೆ ಒಂದು ವರ್ಷದ ಅವಧಿಗೆ ಅಧ್ಯಕ್ಷತೆ ವಹಿಸಿಕೊಳ್ಳುತ್ತವೆ. 2023ನೇ ಸಾಲಿನ ಅಧ್ಯಕ್ಷತೆ ಭಾರತಕ್ಕೆ ಒದಗಿಬಂದಿದೆ. ಇದೊಂದು ರೀತಿಯ ಸಾಮೂಹಿಕ ನಾಯಕತ್ವವಿದ್ದಂತೆ.

ವರ್ಷದ ಅವಧಿಗೆ ದೊರೆಯುವ ಅಧ್ಯಕ್ಷತೆಯೂ ಪರಿಪೂರ್ಣವಾದುದಲ್ಲ. ಈ ಹಿಂದಿನ ವರ್ಷದಲ್ಲಿ ಅಧ್ಯಕ್ಷತೆ ವಹಿಸಿದ ಮತ್ತು ನಂತರದ ವರ್ಷದಲ್ಲಿ ಅಧ್ಯಕ್ಷತೆ ವಹಿಸಲಿರುವ ದೇಶವೂ ಸೇರಿ ಒಟ್ಟು ಮೂರು ದೇಶಗಳ ಗುಂಪು ಆ ಜವಾಬ್ದಾರಿಯನ್ನು ಹೊರಬೇಕು. ಈ ಮೂರು ದೇಶಗಳ ಗುಂಪನ್ನು ಟ್ರಯೋಕಾ (ಇದು ರಷ್ಯಾದ ಪೌರಾಣಿಕ ಪದ. ಇದನ್ನು ತ್ರಿಮೂರ್ತಿ ಎಂದು ಅರ್ಥೈಸಬಹುದು) ಎಂದು ಕರೆಯಲಾಗುತ್ತದೆ. 2022ರಲ್ಲಿ ಇಂಡೊನೇಷ್ಯಾ ಅಧ್ಯಕ್ಷತೆ ವಹಿಸಿತ್ತು. 2023ರ ಅಧ್ಯಕ್ಷತೆ ಭಾರತ ವಹಿಸಿಕೊಂಡಿದೆ. 2024ರಲ್ಲಿ ಬ್ರೆಜಿಲ್ ಅಧ್ಯಕ್ಷತೆ ವಹಿಸಿಕೊಳ್ಳಲಿದೆ. ಈ ಮೂರೂ ದೇಶಗಳ ಗುಂಪು ಈ ಬಾರಿಯ ಟ್ರಯೋಕಾ ಆಗಿದೆ.

ಆಯಾ ವರ್ಷದಲ್ಲಿ ಅಧ್ಯಕ್ಷತೆ ವಹಿಸಿಕೊಳ್ಳಲಿರುವ ದೇಶವು, ಆ ವರ್ಷದಲ್ಲಿ ನಡೆಯುವ ಎಲ್ಲಾ ಜಿ20 ಸಭೆಗಳನ್ನು ಆಯೋಜಿಸಬೇಕಾಗುತ್ತದೆ. ಜಿ20ಯ ಅಧ್ಯಕ್ಷತೆಯ ಕ್ಯಾಲೆಂಡರ್ ಡಿಸೆಂಬರ್‌ನಿಂದ ಆರಂಭವಾಗಿ ನಂತರದ ವರ್ಷದ ನವೆಂಬರ್‌ನಲ್ಲಿ ಅಂತ್ಯವಾಗಲಿದೆ. ಈ ಅವಧಿಯಲ್ಲಿ ಹತ್ತಾರು ಸಭೆಗಳು ನಡೆಯುತ್ತದೆ. ಸಾಮಾನ್ಯವಾಗಿ ಸೆಪ್ಟೆಂಬರ್‌ನಲ್ಲಿ ಶೃಂಗಸಭೆ ನಡೆಯುತ್ತದೆ. ಆ ಶೃಂಗಸಭೆಯಲ್ಲಿ, ನಂತರದ ವರ್ಷದ ಅಧ್ಯಕ್ಷ ದೇಶವನ್ನು ಹೆಸರಿಸಲಾಗುತ್ತದೆ ಮತ್ತು ಅಧ್ಯಕ್ಷನ ಅಧಿಕಾರದ ಸುತ್ತಿಗೆಯನ್ನು ಹಸ್ತಾಂತರಿಸಲಾಗುತ್ತದೆ.

ಈ ಬಾರಿ ಅಧ್ಯಕ್ಷನಾಗಿರುವ ಭಾರತವು ದೇಶದಲ್ಲಿ ಒಟ್ಟು 15 ಜಿ20 ಸಭೆಗಳನ್ನು ಆಯೋಜಿಸಲಿದೆ. ಬೆಂಗಳೂರು, ಚೆನ್ನೈ, ಮುಂಬೈ, ಕೋಲ್ಕತ್ತ, ಕಛ್, ಸೂರತ್ ಸೇರಿ 15 ನಗರಗಳಲ್ಲಿ ಈ ಸಭೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಶೃಂಗಸಭೆಯನ್ನು ದೆಹಲಿಯಲ್ಲಿ ಆಯೋಜಿಸಲಾಗುತ್ತದೆ. ಜಿ20 ಶೃಂಗಸಭೆಗೆಂದೇ ದೆಹಲಿಯಲ್ಲಿ ವಿಶೇಷ ಸಭಾಂಗಣವನ್ನು ರೂಪಿಸಲಾಗುತ್ತಿದೆ. ಅದರ ಮಾದರಿಯನ್ನು ಈಚೆಗೆ ಅನಾವರಣ ಮಾಡಲಾಗಿದೆ.

ಜಿ20 ಶೃಂಗಸಭೆ ನಡೆಯಲಿರುವ ಸಭಾಂಗಣದ ಮಾದರಿ

ಆಧಾರ: ಜಿ20 ಜಾಲತಾಣ, ಪಿಟಿಐ, ಪಿಐಬಿ

## ಸದಸ್ಯ ರಾಷ್ಟ್ರಗಳು

ಹೆಸರೇ ಹೇಳುತ್ತಿರುವಂತೆ 20 ದೇಶಗಳ ಒಕ್ಕೂಟ ಇದಾದರೂ, ಈ ಒಕ್ಕೂಟದಲ್ಲಿ ಇರುವುದು 19 ದೇಶಗಳು ಮತ್ತು ಮತ್ತೊಂದು ಐರೋಪ್ಯ ಒಕ್ಕೂಟ. ಐರೋಪ್ಯ ಒಕ್ಕೂಟದಲ್ಲಿ 27 ದೇಶಗಳಿದ್ದು, ಒಟ್ಟಾರೆಯಾಗಿ ಜಿ20 ಸದಸ್ಯ ದೇಶಗಳ ಸಂಖ್ಯೆ 46ರಷ್ಟಿದೆ




## ‘ವಸುಧೈವ ಕುಟುಂಬಕಂ’

‘ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ’ ಎಂಬುದನ್ನು ಭಾರತದ ಅಧ್ಯಕ್ಷತೆಯ ಜಿ20 ವರ್ಷದ ಥೀಂ ಆಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದನ್ನು ಭಾರತವು ‘ವಸುಧೈವ ಕುಟುಂಬಕಂ’ ಎಂದು ಕರೆದಿದೆ. ಈ ಬಾರಿಯ ಎಲ್ಲಾ ಜಿ20 ಸಭೆಗಳನ್ನು ಇದೇ ಥೀಂ ಅಡಿಯಲ್ಲಿ ಆಯೋಜಿಸಲಾಗುತ್ತದೆ.

ಭಾರತದ ಅಧ್ಯಕ್ಷತೆ ಜಿ20ಯ ನೂತನ ಚಿಹ್ನೆಯನ್ನು ಮತ್ತು ಈ ವರ್ಷದ ಥೀಂನ ಚಿಹ್ನೆಯನ್ನು ಈಚೆಗೆ ಬಿಡುಗಡೆ ಮಾಡಲಾಗಿದೆ.

ಜಿ20 ಚಿಹ್ನೆ ಮತ್ತು ಈ ವರ್ಷದ ಥೀಂ

## ಜಾಗತಿಕ ಸ್ವಾಸ್ಥ್ಯ ಸಾಧಿಸೋಣ...

**ಈ ಹಿಂದೆ** ವಿವಿಧ ದೇಶಗಳ ನೇತೃತ್ವದಲ್ಲಿ ನಡೆದಿರುವ 17 ಜಿ–20 ಶೃಂಗಸಭೆಗಳು, ಆರ್ಥಿಕ ಸ್ಥಿರತೆ, ಸಾಲದ ಹೊರೆ ತಗ್ಗಿಸುವ, ಅಂತರರಾಷ್ಟ್ರೀಯ ತೆರಿಗೆಯಲ್ಲಿ ಸುಧಾರಣೆ ತರುವಂತಹ ಮಹತ್ವದ ಫಲಿತಾಂಶಗಳಿಗೆ ಕಾರಣವಾಗಿವೆ. ಭಾರತವು ಮಹತ್ವದ 18ನೇ ಶೃಂಗಸಭೆಯ ನೇತೃತ್ವ ವಹಿಸಿಕೊಳ್ಳುತ್ತಿದ್ದು, ಈಗ ಆಗಿರುವ ಸಾಧನೆಗಳನ್ನು ಮತ್ತೊಂದು ಎತ್ತರಕ್ಕೆ ಕೊಂಡೊಯ್ಯಲು ಹಾಗೂ ಮಾನವತ್ವಕ್ಕೆ ಲಾಭವಾಗುವ ನಿಟ್ಟಿನಲ್ಲಿ ಪರಿವರ್ತಿಸಲು ಸಾಧ್ಯವೇ ಎಂಬ ಪ್ರಶ್ನೆಯನ್ನು ನನಗೆ ನಾನೇ ಕೇಳಿಕೊಳ್ಳುತ್ತೇನೆ. ಹೌದು, ನಮ್ಮಿಂದ ಇದನ್ನು ಮಾಡಲು ಸಾಧ್ಯವಿದೆ.

ನಮ್ಮೆಲ್ಲರ ಮನಸ್ಥಿತಿಯು ಪರಿಸ್ಥಿತಿಯನ್ನು ಅವಲಂಬಿಸಿದೆ. ಸಂಪನ್ಮೂಲಗಳನ್ನು ಹಂಚಿಕೊಳ್ಳುವ ಮನಸ್ಥಿತಿ ಇಲ್ಲ. ಚಿಂತನೆಗಳು, ಸಿದ್ಧಾಂತಗಳು ಯುದ್ಧ ಮತ್ತು ಪೈಪೋಟಿಗೆ ಕಾರಣವಾಗಿವೆ. ದುರದೃಷ್ಟವಶಾತ್, ಈಗಲೂ ಇಂತಹ ಶೂನ್ಯ ಮನಸ್ಥಿತಿಯ ತಂತ್ರದಲ್ಲಿ ನಾವು ಸಿಲುಕಿಕೊಂಡಿದ್ದೇವೆ. ಕೋಟ್ಯಂತರ ಜನರಿಗೆ ಬೇಕಾಗಿರುವ ಲಸಿಕೆಗಳು ಕೆಲವರ ಸ್ವಾಧೀನದಲ್ಲಿವೆ. ಭೂಭಾಗ ಮತ್ತು ಸಂಪನ್ಮೂಲಗಳಿಗಾಗಿ ದೇಶಗಳು ಯುದ್ಧದಲ್ಲಿ ತೊಡಗಿವೆ.

ಜೀವಿಗಳು ಹಾಗೂ ವಸ್ತುಗಳು ಪಂಚತತ್ವ ಆಧರಿಸಿವೆ. ಇದು ನಮ್ಮ ಪರಿಸರ, ದೈಹಿಕ, ಸಾಮಾಜಿಕ ಯೋಗಕ್ಷೇಮಕ್ಕೆ ಅಗತ್ಯ. ಭಾರತದ ನೇತೃತ್ವದಲ್ಲಿ ನಡೆಯಲಿರುವ ಶೃಂಗಸಭೆಯು ಏಕತ್ವ ಪ್ರಜ್ಞೆಯನ್ನು ಉತ್ತೇಜಿಸಲು ಯತ್ನಿಸುತ್ತದೆ. ‘ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ’ ಎಂಬುದು ನಮ್ಮ ಧ್ಯೇಯವಾಗಿದೆ.

ಹವಾಮಾನ ಬದಲಾವಣೆ, ಭಯೋತ್ಪಾದನೆ, ಸಾಂಕ್ರಾಮಿಕದಂತಹ ದೊಡ್ಡ ಸವಾಲುಗಳನ್ನು ಸಂಘರ್ಷದಿಂದ ಎದುರಿಸಲಾಗದು. ನಮ್ಮ ಯುಗ ಯುದ್ಧದಿಂದ ಹೊರತಾಗಿರಬೇಕು. ಇಂತಹ ಜಾಗತಿಕ ಸಮಸ್ಯೆಗಳ ಪರಿಹಾರಕ್ಕೆ ಭಾರತದ ಅನುಭವಗಳು ಒಳನೋಟ ನೀಡಲಿವೆ. ಈ ಶೃಂಗಸಭೆಯಲ್ಲಿ ನಮ್ಮ ದೃಷ್ಟಿಕೋನ, ಮಾದರಿಗಳು ಹಾಗೂ ಪಾಲಿಸಬೇಕಾದ ಕ್ರಮಗಳನ್ನು ಅಭಿವೃದ್ಧಿಶೀಲ ದೇಶಗಳ ಜೊತೆ ಭಾರತ ಹಂಚಿಕೊಳ್ಳಲಿದೆ. ಎಲ್ಲರನ್ನೂ ಒಳಗೊಳ್ಳುವ, ಮಹತ್ವಾಕಾಂಕ್ಷಿ, ಕ್ರಮ ಆಧರಿತ ನಿರ್ಣಯಗಳು ಭಾರತದ ಜಿ–20 ನಾಯಕತ್ವದ ಕಾರ್ಯಸೂಚಿಗಳಾಗಿವೆ. ಸಾಮರಸ್ಯ, ಭರವಸೆ ಹಾಗೂ ಸ್ವಾಸ್ಥ್ಯ ಸಾಧಿಸುವ ನಿಟ್ಟಿನಲ್ಲಿ ಭಾರತದ ನೇತೃತ್ವದ ನಾಯಕತ್ವದ ಜೊತೆ ಎಲ್ಲರೂ ಕೈಜೋಡಿಸಿ

**–ನರೇಂದ್ರ ಮೋದಿ,** ಪ್ರಧಾನಿ



### ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ




ರೌಡಿ ಸೈಲೆಂಟ್ ಸುನೀಲ್‌ನೊಂದಿಗೆ ಬಿಜೆಪಿಯ ಕೆಲ ನಾಯಕರು ವೇದಿಕೆ ಹಂಚಿಕೊಂಡಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

### ಗುಜರಾತ್: ಎಡಿಆರ್ ವಿಶ್ಲೇಷಣೆ

## ಕಾರ್ಪೊರೇಟ್ ದೇಣಿಗೆ ಬಿಜೆಪಿಗೆ ಸಿಂಹಪಾಲು

**ಕಾರ್ಪೊರೇಟ್** ದೇಣಿಗೆ ಸ್ವೀಕರಿಸುವ ವಿಚಾರದಲ್ಲಿ ಗುಜರಾತ್‌ನ ಆಡಳಿತಾರೂಢ ಬಿಜೆಪಿ ಪಾರಮ್ಯ ಸಾಧಿಸಿದೆ. ರಾಜ್ಯದಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ ಸಲ್ಲಿಕೆಯಾದ ಕಾರ್ಪೊರೇಟ್ ದೇಣಿಗೆಯಲ್ಲಿ ಶೇ 94ರಷ್ಟು ಪಾಲು ಬಿಜೆಪಿಗೆ ಹೋಗಿದೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ತಿಳಿಸಿದೆ.

2016ರಿಂದ 2021ರ ಅವಧಿಯಲ್ಲಿ ಗುಜರಾತ್‌ನ ವಿವಿಧ ಪಕ್ಷಗಳು ಪಡೆದಿರುವ ಕಾರ್ಪೊರೇಟ್ ದೇಣಿಗೆಯ ದತ್ತಾಂಶವನ್ನು ಎಡಿಆರ್ ವಿಶ್ಲೇಷಣೆಗೆ ಒಳಪಡಿಸಿದೆ. ಐದು ವರ್ಷಗಳಲ್ಲಿ ಒಟ್ಟಾರೆ 1,571 ದೇಣಿಗೆದಾರರು ₹174.06 ಕೋಟಿ ಹಣವನ್ನು ವಿವಿಧ ಪಕ್ಷಗಳಿಗೆ ಪಾವತಿಸಿದ್ದಾರೆ. ಈ ಪೈಕಿ 1,519 ದೇಣಿಗೆದಾರರು ಬಿಜೆಪಿಗೆ ₹163.54 ಕೋಟಿ ಸಲ್ಲಿಸಿದ್ದಾರೆ. ಅಂದರೆ ಒಟ್ಟಾರೆ ದೇಣಿಗೆಯಲ್ಲಿ ಬಿಜೆಪಿ ಸಿಂಹಪಾಲು ಪಡೆದಿದೆ.

ಚುನಾವಣಾ ಆಯೋಗಕ್ಕೆ ಪಕ್ಷಗಳು ಸಲ್ಲಿಸಿದ್ದ ವರದಿಗಳನ್ನು ವಿಶ್ಲೇಷಿಸಿ ಎಡಿಆರ್ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ. ಬಿಜೆಪಿ, ಕಾಂಗ್ರೆಸ್, ಎಎಪಿ ಹಾಗೂ ಸಂಯುಕ್ತ ಕಿಸಾನ್ ಮೋರ್ಚಾ ಪಕ್ಷಗಳಿಗೆ ಕಾರ್ಪೊರೇಟ್ ದೇಣಿಗೆ ಸಲ್ಲಿಕೆಯಾಗಿದೆ. ದೇಣಿಗೆ ಸ್ವೀಕರಿಸಿದ ವಿಚಾರದಲ್ಲಿ ಬಿಜೆಪಿ ನಂತರದ ಎರಡನೇ ಸ್ಥಾನದಲ್ಲಿ ಕಾಂಗ್ರೆಸ್ ಇದ್ದು, ಪಕ್ಷಕ್ಕೆ 47 ದೇಣಿಗೆದಾರರು ₹10.46 ಕೋಟಿ ನೀಡಿದ್ದಾರೆ.

ಲೋಕಸಭೆಗೆ ಚುನಾವಣೆ ನಿಗದಿಯಾಗಿದ್ದ ವರ್ಷದಲ್ಲಿ ಅತ್ಯಧಿಕ ಕಾರ್ಪೊರೇಟ್ ದೇಣಿಗೆ ಸಂಗ್ರಹವಾಗಿದೆ. 2018–19ರ ಹಣಕಾಸು ವರ್ಷದಲ್ಲಿ ಗುಜರಾತ್‌ನಲ್ಲಿ 532 ದೇಣಿಗೆದಾರರು ₹48.83 ಕೋಟಿ ಹಣ ನೀಡಿದ್ದಾರೆ. ಈಗ ಗುಜರಾತ್ ವಿಧಾನಸಭೆಗೆ ಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಎಡಿಆರ್ ಐದು ವರ್ಷಗಳ ದತ್ತಾಂಶಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದೆ.

ಐದು ವರ್ಷಗಳ ಅವಧಿಯಲ್ಲಿ ಗುಜರಾತ್ ಸೇರಿದಂತೆ ಎಲ್ಲ ರಾಜ್ಯಗಳಲ್ಲಿ ವಿವಿಧ ರಾಜಕೀಯ ಪಕ್ಷಗಳಿಗೆ ₹4,014.58 ಕೋಟಿ ಕಾರ್ಪೊರೇಟ್ ದೇಣಿಗೆ ಪಾವತಿಯಾಗಿದೆ. ಇದರಲ್ಲಿ ಗುಜರಾತ್ ಪಾಲು ₹174.06 ಕೋಟಿ (ಶೇ 4.34).

**₹343 ಕೋಟಿ ಬಾಂಡ್:** 2018 ಮಾರ್ಚ್‌ನಿಂದ 2022 ಅಕ್ಟೋಬರ್ ನಡುವಿನ ಅವಧಿಯಲ್ಲಿ ₹343 ಕೋಟಿ ಮೌಲ್ಯದ 595 ಚುನಾವಣಾ ಬಾಂಡ್‌ಗಳನ್ನು ಗುಜರಾತ್‌ನ ಗಾಂಧಿನಗರದ ಭಾರತೀಯ ಸ್ಟೇಟ್ ಬ್ಯಾಂಕ್ ಮುಖ್ಯ ಕಚೇರಿಯಲ್ಲಿ ಖರೀದಿಸಲಾಗಿದೆ ಎಂದು ವರದಿ ತಿಳಿಸಿದೆ.

ಆಧಾರ: ಎಡಿಆರ್

### ಚುನಾವಣೆ ವರ್ಷದಲ್ಲಿ ಭಾರಿ ಆದಾಯ

ಗುಜರಾತ್‌ನ ವಿವಿಧ ರಾಜಕೀಯ ಪಕ್ಷಗಳು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ವಾರ್ಷಿಕ ಆದಾಯ ವರದಿಯಲ್ಲಿ ಕಳೆದ ಐದು ವರ್ಷಗಳಲ್ಲಿ ಗಳಿಸಿದ ಆದಾಯದ ಮಾಹಿತಿಯನ್ನು ನೀಡಿವೆ. ಈ ಮಾಹಿತಿ ಆಯೋಗದ ವೆಬ್‌ಸೈಟ್‌ನಲ್ಲಿದೆ. ಈ ವರದಿ ಪ್ರಕಾರ, ಐದು ವರ್ಷಗಳಲ್ಲಿ ರಾಜ್ಯದ ರಾಜಕೀಯ ಪಕ್ಷಗಳು ಒಟ್ಟಾರೆ ₹16,071 ಕೋಟಿ ಆದಾಯ ಗಳಿಸಿವೆ.

ಈ ಪೈಕಿ, ರಾಜ್ಯದ 8 ರಾಷ್ಟ್ರೀಯ ಪಕ್ಷಗಳು ₹12,842 ಕೋಟಿ (ಶೇ 79.91) ಹಾಗೂ ಉಳಿದ ಪ್ರಾದೇಶಿಕ ಪಕ್ಷಗಳು ₹3,229 ಕೋಟಿ (ಶೇ 20.09) ಆದಾಯ ಘೋಷಿಸಿವೆ. ಲೋಕಸಭೆಗೆ ಚುನಾವಣೆ ನಡೆದಿದ್ದ 2019–20ರ ಹಣಕಾಸು ವರ್ಷದಲ್ಲಿ ಅತಿಹೆಚ್ಚು ಅಂದರೆ, ₹4,760 ಕೋಟಿ ಹಣವನ್ನು ರಾಷ್ಟ್ರೀಯ ಪಕ್ಷಗಳು ಸಂಗ್ರಹಿಸಿವೆ. ಇದೇ ಅವಧಿಯಲ್ಲಿ ರಾಜ್ಯದ ಪ್ರಾದೇಶಿಕ ಪಕ್ಷಗಳು ₹1,089 ಕೋಟಿ ಸಂಗ್ರಹಿಸಿವೆ ಎಂದು ವರದಿ ತಿಳಿಸಿದೆ.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ಕಾಂಗ್ರೆಸ್ ನಾಯಕ** ರಾಹುಲ್ ಗಾಂಧಿಗೆ ಆರತಿ ಮಾಡಲು ಬರುವುದಿಲ್ಲ ಎಂದು ಬಿಜೆಪಿಯ ಹಲವು ನಾಯಕರು ಟೀಕಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಬಿಜೆಪಿಯ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ, ‘ಚುನಾವಣೆಗಾಗಿ ಹಿಂದೂ ಆದರೆ, ಹೀಗೇ ಆಗುತ್ತದೆ. ಎಡದಿಂದ ಬಲಕ್ಕೆ (ಕ್ಲಾಕ್‌ವೈಸ್) ಆರತಿ ಮಾಡುವುದು ಸಂಪ್ರದಾಯ. ಭೂಮಿಯೂ ಎಡದಿಂದ ಬಲಕ್ಕೆ ತಿರುಗುತ್ತದೆ. ಆದರೆ ರಾಹುಲ್ ಗಾಂಧಿ ಬಲದಿಂದ ಎಡಕ್ಕೆ (ಆ್ಯಂಟಿ ಕ್ಲಾಕ್‌ವೈಸ್) ಆರತಿ ಮಾಡಿದ್ದಾರೆ’ ಎಂದು ಲೇವಡಿ ಮಾಡಿದ್ದಾರೆ. ರಾಹುಲ್ ಅವರು ಆರತಿ ಮಾಡುತ್ತಿರುವ ವಿಡಿಯೊವನ್ನೂ ಅವರು ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್ ಭಾರಿ ಸಂಖ್ಯೆಯಲ್ಲಿ ಹಂಚಿಕೆಯಾಗಿದೆ. ಆದರೆ, ಟ್ವೀಟ್‌ನಲ್ಲಿರುವ ಮಾಹಿತಿ ಸುಳ್ಳು.

**ಇದು ತಪ್ಪು ಮಾಹಿತಿ** ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ಭಾರತ್ ಜೋಡೊ ಯಾತ್ರೆಯಲ್ಲಿರುವ ರಾಹುಲ್ ಗಾಂಧಿ ಅವರು ಈಚೆಗೆ ಮಧ್ಯಪ್ರದೇಶದಲ್ಲಿ ನರ್ಮದಾ ಆರತಿ ಮಾಡಿದ್ದರು. ಆ ವಿಡಿಯೊವನ್ನು ಕಾಂಗ್ರೆಸ್ ಟ್ವೀಟ್ ಮಾಡಿತ್ತು. ರಾಹುಲ್ ಗಾಂಧಿ ಅವರು ಅದರಲ್ಲಿ ಎಡದಿಂದ ಬಲಕ್ಕೆ ಆರತಿ ಮಾಡಿದ್ದಾರೆ. ಅವರ ಪಕ್ಕದಲ್ಲಿದ್ದ ಪುರೋಹಿತರೂ ಸಹ ಎಡದಿಂದ ಬಲಕ್ಕೆ ಆರತಿ ಮಾಡಿದ್ದಾರೆ. ಈ ಹಿಂದೆ ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರೂ ಸಹ ಗಂಗಾ ಆರತಿ ಸಂದರ್ಭದಲ್ಲಿ ಎಡದಿಂದ ಬಲಕ್ಕೇ ಆರತಿ ಮಾಡಿದ್ದಾರೆ. ಆದರೆ, ಅಮಿತ್ ಮಾಳವೀಯ ಅವರು ತಪ್ಪು ಮಾಹಿತಿ ಹಂಚಿಕೊಂಡು ಜನರ ಹಾದಿ ತಪ್ಪಿಸಿದ್ದಾರೆ. ಭೂಮಿ ಪಶ್ಚಿಮದಿಂದ ಪೂರ್ವಕ್ಕೆ ತಿರುಗುತ್ತದೆ. ಇದನ್ನು ಪ್ರಾಥಮಿಕ ಶಾಲೆಯಲ್ಲಿಯೇ ಹೇಳಿಕೊಡಲಾಗುತ್ತದೆ. ಈ ಮಾಹಿತಿಯನ್ನೂ ಮಾಳವೀಯ ಅವರು ತಪ್ಪಾಗಿ ಹಂಚಿಕೊಂಡಿದ್ದಾರೆ’ ಎಂದು ಆಲ್ಟ್ ನ್ಯೂಸ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

## ಗುಂಡಣ್ಣ

## ಬೆರಗಿನ ಬೆಳಕು

ಗುರುರಾಜ ಕರಜಗಿ

### ಮುಕ್ತಿಯ ಮಾರ್ಗ

**ಗತಿಯೇನು ಎನಗೆನುತ ಕೇಳ್ವವರೆ ಎಲ್ಲರುಂ |**
**ಹಿತವೆಂತು ಜಗಕೆಂದು ಕೇಳುವವರಾರು ? ||**
**ಮತಿಯ ವಿಶ್ವದಿ ಬೆರಸಿ ಜೀವಿತವ ವಿಸ್ತರಿಸೆ |**
**ಪಥ ಮುಕ್ತಿಗಾಗಳೇ – ಮಂಕುತಿಮ್ಮ || 768 ||**

**ಪದ-ಅರ್ಥ:** ಎನಗೆನುತ = ಎನಗೆ + ಎನುತ, ಕೇಳ್ವವರೆ = ಕೇಳುವವರೆ, ಹಿತವೆಂತು = ಹಿತವು+ ಎಂತು,ಪಥ = ದಾರಿ, ಮುಕ್ತಿಗಾಗಳೇ = ಮುಕ್ತಿಗೆ + ಆಗಳೇ.

**ವಾಚ್ಯಾರ್ಥ:** ಎಲ್ಲರೂ ನನಗೆ ಗತಿಯೇನು ಎಂದು ಕೇಳುವವರೇ. ಜಗತ್ತಿಗೆ ಯಾವುದು ಹಿತ ಎಂದು ಕೇಳುವವರಾರು? ತಮ್ಮ ಬುದ್ಧಿಯನ್ನು ಪ್ರಪಂಚದಲ್ಲಿ ಬಳಸಿ, ಜೀವನವನ್ನು ವಿಸ್ತರಿಸಿದರೆ ಅದೇ ಮುಕ್ತಿಗೆ ದಾರಿ.

**ವಿವರಣೆ:** ‘ನಾನು’ ಕೇಂದ್ರಿತವಾದ ಬದುಕಿಗೆ ಬರುವ ಪ್ರಶ್ನೆಗಳೆಂದರೆ, ಇದರಿಂದ ನನಗೇನು ಪ್ರಯೋಜನ? ನನಗೆ ಇದರಿಂದ ತೊಂದರೆಯಾದೀತೇ? ನನ್ನ ಗತಿಯೇನು? ಇಂಥವುಗಳೇ. ಎಲ್ಲರೂ ಹಾಗೆಯೇ ನಾನು, ನನ್ನದು ಎಂದು ಕೇಳುತ್ತ ಹೋದರೆ ಜಗತ್ತಿಗೆ ಯಾವುದು ಒಳ್ಳೆಯದು ಎಂದು ಕೇಳುವವರು ಯಾರು? ನನ್ನ ಮನೆಯ ಕಸವನ್ನು ರಸ್ತೆಗೆ ಹಾಕಿದರಾಯಿತು. ನನ್ನ ಮನೆ ಸ್ವಚ್ಛವಾಯಿತಲ್ಲ, ರಸ್ತೆ ಕೊಳಕಾದರೆ ಆಗಲಿ, ಅದರಿಂದ ನನಗೇನು? ಹೀಗೆ ಎಲ್ಲರೂ ಮಾಡಿದರೆ ಜಗತ್ತು ಕಸದ ಗುಂಡಿಯಾಗುತ್ತದೆ. ‘ನಾನು’ ಎನ್ನುವುದು ವಿಸ್ತರಿಸುತ್ತ ಹೋಗಿ ‘ನಾವು’ ಆದಾಗ ‘ನನ್ನತನ’ ಕರಗುತ್ತದೆ. ಇದು ಕಗ್ಗದ ಆಶಯ. ಸದಾ ಕೊರಗುವ ಶಿಷ್ಯ. ಗುರುಗಳು ಅದನ್ನು ಕಂಡರು. ಅವನನ್ನು ಕರೆದರು. ಅವನಿಂದ ಲೋಟ ನೀರಿನಲ್ಲಿ ಒಂದು ಮುಷ್ಠಿ ಉಪ್ಪು ಹಾಕಿಸಿದರು. ಅದನ್ನು ಕುಡಿ ಎಂದರು. ಒಂದು ಹನಿ ರುಚಿ ನೋಡಿದ ಶಿಷ್ಯ ಮುಖ ಮುರಿದ. “ಗುರುಗಳೇ ನೀರು ತುಂಬ ಉಪ್ಪಾಗಿದೆ. ಕುಡಿಯುವುದು ಅಸಾಧ್ಯ” ಎಂದ. “ಹೌದೇ? ಹಾಗಾದರೆ ನನ್ನೊಡನೆ ಬಾ. ಆದರೆ ಇನ್ನೊಂದು ಮುಷ್ಠಿ ಉಪ್ಪನ್ನು ಕೈಯಲ್ಲಿ ಹಿಡಿದು ತಾ” ಎಂದರು ಗುರುಗಳು. ಅವರು ಹೇಳಿದಂತೆ ಉಪ್ಪನ್ನು ಹಿಡಿದು ಗುರುಗಳನ್ನು ಹಿಂಬಾಲಿಸಿ ನಡೆದ. ಸ್ವಲ್ಪ ದೂರ ನಡೆದ ಮೇಲೆ ಊರ ಕೆರೆ ಬಂದಿತು. ನೀರು ತುಂಬ ತಿಳಿಯಾಗಿತ್ತು. ಗುರುಗಳು ಶಿಷ್ಯನಿಗೆ ಹೇಳಿದರು, “ಮಗೂ, ನಿನ್ನ ಮುಷ್ಠಿಯಲ್ಲಿರುವ ಉಪ್ಪನ್ನು ಕೆರೆಯ ನೀರಿನಲ್ಲಿ ಹಾಕಿ ಕೊಂಚ ಕಲಕು”. ಅಂತೆಯೇ ಮಾಡಿದ. ಮತ್ತೆ ಗುರುಗಳು ಹೇಳಿದರು, “ಈಗ ಒಂದು ಬೊಗಸೆ ಕೆರೆಯ ನೀರನ್ನು ತೆಗೆದುಕೊಂಡು ಕುಡಿ”. ಆತ ಕುಡಿದ. ಗುರುಗಳು ಕೇಳಿದರು, “ನೀರು ತುಂಬ ಉಪ್ಪಾಗಿದೆಯೇ?” “ಇಲ್ಲ ಗುರುಗಳೇ ನೀರು ಸಿಹಿಯಾಗಿದೆ” ಎಂದನಾತ. “ಅಲ್ಲಪ್ಪ, ನೀನು ಒಂದು ಮುಷ್ಠಿ ಉಪ್ಪನ್ನು ಹಾಕಿದ್ದೆಯಲ್ಲ, ನೀರು ಉಪ್ಪಾಗಿರಬೇಕಲ್ಲವೇ?” ಹುಬ್ಬೇರಿಸಿ ಕೇಳಿದರು ಗುರುಗಳು. “ಉಪ್ಪು ಹಾಕಿದ್ದು ಹೌದು. ಆದರೆ ನೀರು ಸಿಹಿಯಾಗಿದೆ” ಎಂದ ಶಿಷ್ಯ ಗುರುಗಳು ಹೇಳಿದರು , “ಉಪ್ಪಿನ ತೀಕ್ಷ್ಣತೆ ಇರುವುದು ಪಾತ್ರೆಯ ಗಾತ್ರದಿಂದ. ಪಾತ್ರೆ ಚಿಕ್ಕದಾದಷ್ಟು ಉಪ್ಪಿನ ತೀವ್ರತೆ ಹೆಚ್ಚು. ಪಾತ್ರೆ ವಿಶಾಲವಾದಂತೆ ಉಪ್ಪು ತನ್ನ ಉಗ್ರತೆಯನ್ನು ಕಳೆದುಕೊಳ್ಳುತ್ತದೆ. ನೀನು ಬರೀ ನಾನು ಎಂದು ಚಿಂತಿಸಿದರೆ ನೋವಿನ, ಕಷ್ಟದ ತೀವ್ರತೆ ಹೆಚ್ಚು, ಮನಸ್ಸು ವಿಶಾಲವಾಗುತ್ತ ವಿಶ್ವವೇ ಆದರೆ ನೋವೇ ಇಲ್ಲ. ‘ನಾನು’ಎನ್ನುವುದು ನೋವನ್ನು ಕೊಡುತ್ತದೆ. ‘ನಾವೆಲ್ಲ’ ಎನ್ನುವುದು ಸಂತೋಷ ನೀಡುತ್ತದೆ, ನೋವೇ ಇಲ್ಲ. ಕಗ್ಗ ಅದನ್ನೇ ಮುಕ್ತಿಯ ಮಾರ್ಗ ಎನ್ನುತ್ತದೆ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಡಿಸೆಂಬರ್ 1, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ:** ಮಾರ್ಗಶೀರ್ಷ ಶುಕ್ಲ ಅಷ್ಟಮಿ ಗಂ. 07-22, ನವಮಿ ಗಂ. 30-15 ನಕ್ಷತ್ರ: ಪೂರ್ವಾಭಾದ್ರಾ ಗಂ. 29-44 ಯೋಗ: ಹರ್ಷಣ ಗಂ. 09-33, ಕರಣ: ಬವ ಗಂ. 07-22, ವೃಶ್ಚಿಕ ಮಾಸದ 14 ನೇ ದಿನ. ರಾಹುಕಾಲ : ಮಧ್ಯಾಹ್ನ 01-30 –03-00

**ಸೂರ್ಯೋದಯ :** 06-41 **ಸೂರ್ಯಾಸ್ತ :** 05-58

**ಮುಸ್ಲಿಂ ದಿನಾಂಕ :** 06 ಜುಮಾದುಲ್ಲಾವಲ್

**ಅದೃಷ್ಟ ಸಂಖ್ಯೆ :** 5, 8

**ಮೇಷ:** ಇಂದು ವೃತ್ತಿ ಪರವಾಗಿ ನಡೆಯುವ ಎಲ್ಲ ವಿಷಯಗಳನ್ನೂ ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಿಲ್ಲ. ಸಿಟ್ಟು ಅಥವಾ ಯೋಚನಾರಹಿತ ನಿರ್ಧಾರಗಳು ಏಕಾಂಗಿತನಕ್ಕೆ ಕಾರಣವಾಗುವುದು.

**ವೃಷಭ:** ಸದ್ಯದ ಪರಿಸ್ಥಿತಿಯಲ್ಲಿ ಹಣದ ಬಗ್ಗೆ ಯೋಚಿಸಬೇಕಾಗಿಲ್ಲ. ಜಾಹೀರಾತು ಕ್ಷೇತ್ರದ ಕೆಲಸಗಳಿಂದ ಉತ್ತಮ ಅವಕಾಶಗಳು ಸಿಗಲಿವೆ. ಗೃಹಿಣಿಯರಿಗೆ ವಿಶೇಷ ದಿನವಾಗಿದ್ದು ಆಕಸ್ಮಿಕ ಧನಲಾಭ.

**ಮಿಥುನ:** ಸಂಜೆ ಸಮಯದಲ್ಲಿ ಶುಭ ಸುದ್ದಿಯೊಂದು ಬರಲಿದೆ. ಮದುವೆಯ ವಿಷಯಕ್ಕೆ ಸಂಬಂಧಪಟ್ಟಂತೆ ತಾಯಿಯ ಮತ್ತು ಅಣ್ಣಂದಿರ ಮನಸೆಳೆಯುವಲ್ಲಿ ಯಶಸ್ವಿಯಾಗುವಿರಿ. ಸಗಟು ವ್ಯಾಪಾರಿಗಳಿಗೆ ಸಣ್ಣ ಸಮಸ್ಯೆ ಎದುರಾಗಬಹುದು.

**ಕರ್ಕಾಟಕ:** ಮನೆಯ ಹಿರಿಯರ ಮಧ್ಯಸ್ತಿಕೆಯಿಂದ ವಿವಾದಗಳು ಬಗೆ ಹರಿಯುವುದು, ಪುನಃ ಮೊದಲಿನಂತೆ ಸಂಬಂಧ ಗಟ್ಟಿಯಾಗಲಿದೆ. ಸಾಲದ ಹಣ ಹಿಂದುರಿಗಿ ಕೈಸೇರುವುದರಿಂದ ಹಣ ಖರ್ಚು ಮಾಡುವಿರಿ.

**ಸಿಂಹ:** ಜವಾಬ್ದಾರಿಯ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಿರಿ. ಮನೆಯಲ್ಲಿ ಶುಭ ಕಾರ್ಯಗಳಿಗೆ ಪ್ರಯತ್ನ ಮಾಡುವಿರಿ. ವಿದ್ಯುತ್ ಉಪಕರಣ, ಯಂತ್ರೋಪಕರಣಗಳ ಮಾರಾಟದಿಂದ ಅಧಿಕ ಲಾಭ ಸಿಗುವುದು.

**ಕನ್ಯಾ:** ಆಹಾರದ ಪದ್ಧತಿಯನ್ನು ನಿಯಂತ್ರಿಸಿಕೊಂಡು ರಕ್ತದೊತ್ತಡ ಸ್ಥಿತಿಯನ್ನು ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳಿ. ಕೃಷಿಕರಿಗೆ ಉತ್ತಮ ಫಸಲು ದೊರಕುವ ಲಕ್ಷಣಗಳಿಂದ ಮನಸ್ಸಿಗೆ ಹರ್ಷವಿರುವುದು.

**ತುಲಾ:** ಜವಾಬ್ದಾರಿಗಳತ್ತ ಹೆಚ್ಚಿನ ಗಮನ ಹರಿಸಿ, ಅದರ ಫಲವಾಗಿ ಆತಂಕವಿಲ್ಲದೆ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯುವವು. ಇಂದಿನ ಹೆಚ್ಚಿನ ಸಮಯವೆಲ್ಲವನ್ನು ನಿಶ್ಚಿತ ಗುರಿ ತಲುಪಲು ಮೀಸಲಾಗಿಡಿ.

**ವೃಶ್ಚಿಕ:** ಈ ದಿನದ ಪೂರ್ವಾರ್ಧದಲ್ಲಿ ಶುಭಫಲ ಅನುಭವಿಸುವ ನಿಮಗೆ ಉತ್ತರಾರ್ಧದಲ್ಲಿ ಸಿಹಿ-ಕಹಿಯ ಮಿಶ್ರಣವನ್ನು ಸವಿಯಬೇಕಾಗುತ್ತದೆ. ಕೋರ್ಟಿನಲ್ಲಿರುವ ಹಳೆಯ ವ್ಯಾಜ್ಯಗಳು ಮುಕ್ತಾಯಗೊಳ್ಳುವ ಸಂಭವ ಹೆಚ್ಚಾಗಿರುವುದು.

**ಧನು:** ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಇದು ಸೂಕ್ತ ಕಾಲ. ಪಾಲುದಾರಿಕೆಯಲ್ಲಿ ಲಾಭ ಗಳಿಸುವಿರಿ. ಲೇವಾದೇವಿ ವ್ಯವಹಾರದಲ್ಲಿ ಅಡ್ಡಿ ಆತಂಕ ಎದುರಾದರೆ, ದುರ್ಗಾದೇವಿಯ ಆರಾಧನೆ ಮಾಡಿ.

**ಮಕರ:** ಅಭಿವೃದ್ಧಿಯಲ್ಲಿ ಹಲವು ಅಡೆತಡೆಗಳು ಮತ್ತು ಆತಂಕಕಾರಿ ವಿಚಾರ ಎದುರಾಗುವುದು. ಸದಾಕಾಲ ಪಕ್ಕದಲ್ಲಿಯೇ ಇರುವ ಪರಿಚಿತರಿಂದ ವಂಚನಾ ಪ್ರಸಂಗ ಇರಲಿದೆ. ಗೃಹ ನಿರ್ಮಾಣದ ಯೋಜನೆಗೆ ಯೋಚಿಸಬಹುದು.

**ಕುಂಭ:** ನಿಮ್ಮನ್ನು ಪ್ರೀತಿಸುವವರ ಮಾರ್ಗದರ್ಶನ ಈ ದಿನ ದೊರೆಯಲಿದ್ದು ಹೊಸ ಚೈತನ್ಯ ತುಂಬಿಬರಲಿದೆ. ವೃತ್ತಿಪರ ಬಹಳ ಮುಖ್ಯವಾದ ಕೆಲಸವನ್ನು ಮಾತ್ರ ಈ ದಿನ ಕೈಗೆತ್ತಿಕೊಳ್ಳಿ. ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ.

**ಮೀನ:** ಸುಖ-ದುಃಖ, ಲಾಭ-ನಷ್ಟಗಳೆರಡು ಸಮಾನವಾಗಿದ್ದರೂ ಪ್ರತಿಷ್ಠಿತ ಜನರ ಸಹಕಾರದಿಂದ ಸುಧಾರಣೆ ಕಂಡು ಬರಲಿದೆ. ರೈತರಿಗೆ ಹೆಚ್ಚಿನ ಲಾಭಾಂಶ ಅದರಲ್ಲೂ ತೆಂಗಿನಕಾಯಿ ಬೆಳೆಗಾರರಿಗೆ ಅಧಿಕ ಬೆಲೆ ಸಿಗುತ್ತದೆ.

## ಪದಬಂಧ 5155

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಕುದುರೆ ಬಂಡಿಯಿದು (3)
6.ಉತ್ತರ ಕೊಟ್ಟಿದ್ದಕ್ಕೇ ಈ ಹೊಣೆಗಾರಿಕೆ! (5)
7.ನಾದಮಾಧುರ್ಯವಿದು (3)
8.ಯೌವ್ವನದಲ್ಲಿ ನೋಡಿರುವ ಕಾಡು (2)
10.ಶರೀರದಲ್ಲಿ ತೂರಿದ ಬಾಣ (2)
11.ಗಣಪತಿಯ ವಾಹನ (3)
13.ಆ ಮನೆ ಮುಂದೆ ನಿಂತಿರುವ ಗಜ (2)
14.ದಿಟ್ಟೆ ನುಡಿದ ಸತ್ಯ ಉಲ್ಟಾ ಆಗಿಬಿಟ್ಟಿದೆಯಲ್ಲಾ? (2)
18.ದನಕರುಗಳ ಮೂತ್ರ (3)
19.ಈತ ದಾರಿ ತೋರುವವನು (5)
20.ಜೀರ್ಣಾಂಗವಿಲ್ಲಿ ತಿರುವು ಮುರುವಾಗಿದೆ (3)

**ಮೇಲಿಂದ ಕೆಳಕ್ಕೆ**

1.ಗೆಲುವನ್ನು ಪಡೆದವನೀತ (4)
2.ಮಧುರವಾದ ಧ್ವನಿ (4)
3.ಅಂಜದೆ ಬೊಗಸೆ ತೋರಿಸಿ! (3)
4.ನೀರನ್ನು ಹೊತ್ತಿರುವ ಮೋಡ (4)
5.ತುರಿಯುವ ಸಾಧನ (4)
9.ಮಾದರಿ ಇಲ್ಲಿದೆ (3)
10.ಕಟ ಕಟ ಶಬ್ದ ಮಾಡುತ್ತಾ ಬರುತ್ತಿರುವ ಬಂಡಿ (3)
12.ಮಾನವಂತನ ಮೇಲೇಯೇ ಈ ಸಂದೇಹ! (4)
13.ಪಾದ ನಡುವಿಟ್ಟು ತಪ್ಪನ್ನು ಹೊರಿಸುವುದು (4)
15.ಬರ ಬಂದಿರುವಾಗಿನ ನಗ್ನತೆ (4)
16.ಮಲಯ ಪರ್ವತದಲ್ಲಿರುವ ಶ್ರೀಗಂಧ (4)
17.ಕೂದಲಿಲ್ಲದೆ ಬೋಳಾದುದು (3)



### 5154ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಪರಾಕ್ರಮ 3.ಹುಸಿನಗು
5.ನೆನಪು 6.ನಿಕ್ಷೇಪ
8.ಕುಶಲ 9.ಅಹಿತ
10.ರಥಿಕ 12.ವರ್ಜನ
14.ನಿಷ್ಕರುಣ 15.ದುರಾಚಾರ

**ಮೇಲಿಂದ ಕೆಳಕ್ಕೆ:**
1.ಪಯಸ್ವಿನಿ 2.ಮದ್ದಾನೆ
3.ಹುರುಪು 4.ಗುರುಕುಲ
7.ಪತಿತ 8.ಕುಬೇರ
9.ಅವಧಾನಿ 11.ಕಳೆವರ
12.ವರುಣ 13.ನಗದು

## ಸುಡೊಕು 5541

| | | | | | | | | |
|---|---|---|---|---|---|---|---|---|
| | 2 | | | | | 8 | | 7 |
| 4 | | 8 | | | | | | |
| | 9 | | | | | 6 | | 4 |
| | 5 | | 7 | | | | 6 | |
| | | | | 9 | | | 5 | |
| 2 | | 3 | | | 4 | | 7 | |
| 7 | | | | | | | | 6 |
| | 1 | | 2 | | 9 | | 4 | |
| 6 | | 2 | | | | 9 | 8 | 5 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5540 ಸುಡೊಕು

| | | | | | | | | |
|---|---|---|---|---|---|---|---|---|
| 7 | 6 | 3 | 5 | 9 | 2 | 4 | 1 | 8 |
| 1 | 9 | 4 | 8 | 7 | 3 | 5 | 6 | 2 |
| 8 | 5 | 2 | 1 | 6 | 4 | 3 | 9 | 7 |
| 5 | 1 | 7 | 2 | 4 | 9 | 6 | 8 | 3 |
| 4 | 2 | 8 | 6 | 3 | 1 | 7 | 5 | 9 |
| 6 | 3 | 9 | 7 | 5 | 8 | 1 | 2 | 4 |
| 2 | 8 | 5 | 4 | 1 | 7 | 9 | 3 | 6 |
| 3 | 4 | 1 | 9 | 2 | 6 | 8 | 7 | 5 |
| 9 | 7 | 6 | 3 | 8 | 5 | 2 | 4 | 1 |

**ಷೇರುಪೇಟೆ ವಹಿವಾಟು** 417

ಹಿಂದಿನ ಅಂತ್ಯ 62,681 | ಇಂದಿನ ಅಂತ್ಯ 63,099

**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 18618 |
| ಇಂದಿನ ಅಂತ್ಯ | 18758 |
| ▲ | 140 |
| ದಿನದ ಕನಿಷ್ಠ | 18816 |

**ವಿನಿಮಯ ದರ**

| | |
|---|---|
| $ ಡಾಲರ್ | 81.31 |
| £ ಪೌಂಡ್ | 97.57 |
| € ಯುರೊ | 84.26 |
| ¥ ಯೆನ್ (100ಕ್ಕೆ) | 58.37 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

ಬೆಂಗಳೂರು: 100 ಮೊಟ್ಟೆಗೆ ₹555; 12 ಮೊಟ್ಟೆಗೆ ₹72
ಮೈಸೂರು: 100 ಮೊಟ್ಟೆಗೆ ₹555

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1515(1515) |
| ಸೋಯಾ (ರಿಫೈನ್ಡ್) | ₹1300(1310) |
| ಸೂರ್ಯಕಾಂತಿ (ರಿಫೈನ್ಡ್) | ₹1420(1430) |
| ಪಾಮೋಲಿನ್ | ₹970(970) |

**ಈರುಳ್ಳಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹2000-2600 |
| ಮಧ್ಯಮ | ₹1500-2000 |
| ಸಣ್ಣ | ₹500-1000 |

**ತೆಂಗು ಧಾರಣೆ (ಸಾವಿರಕ್ಕೆ)**

ಮಂಗಳೂರು: 1ನೇ ದರ್ಜೆ ₹16000-20000; 2ನೇ ದರ್ಜೆ ₹12000-15000

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹143; ಆರ್‌ಎಸ್‌ಎಸ್-5 ₹135; ಗುಡ್ ಲಾಟ್ ₹128

**ಮುಂಬೈ ಧಾರಣೆ**

**ಶೇಂಗಾ** 30-11-2022

| | |
|---|---|
| ಜಾವಾ 70/80(ಹೊಸ) | 11750-11800 |
| ಜಾವಾ 80/90(ಹೊಸ) | 10850-10900 |
| ದಪ್ಪ ಮಧ್ಯಪ್ರದೇಶ(ಹೊಸ) | 9300-9400 |
| ದಪ್ಪ ಗುಜರಾತ್(ಹೊಸ) | 9950-10050 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1525(1525) |
| ಒಂದು ವಾರದ ಡೆಲಿವರಿ | 1520(1520) |
| ಸೋಯಾ ಕಚ್ಚಾ | 1270(1285) |
| ಪಾಮ್ ವಾರದ ಡೆಲಿವರಿ | 968(968) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | - (-) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ 52625(52500)
ಬೆಳ್ಳಿ ಕೆ.ಜಿ 62100(61650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

**ರಾಮನಗರ ರೇಷ್ಮೆಗೂಡು ಧಾರಣೆ**

ಮಿಶ್ರತಳಿ (ಸಿ.ಬಿ) ₹323-688
ದ್ವಿತಳಿ (ಬಿ.ವಿ) ₹421-850

**ಕೊಬ್ಬರಿ ಧಾರಣೆ**

ಕೆ.ಆರ್.ಪೇಟೆ (ಇತರ) ₹8308-8342
ಪುತ್ತೂರು (ಇತರ) ₹4500-9000

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ವೇಗದ ಬೆಳವಣಿಗೆ ಕಾಣುತ್ತಿರುವ ಆರ್ಥಿಕತೆ ಎಂಬ ಹೆಗ್ಗಳಿಕೆ

# ಕುಸಿದ ಜಿಡಿಪಿ ಬೆಳವಣಿಗೆ ದರ

ನವದೆಹಲಿ (ಪಿಟಿಐ): ದೇಶದ ಆರ್ಥಿಕ ಬೆಳವಣಿಗೆ ದರವು ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇಕಡ 6.3ಕ್ಕೆ ಇಳಿಕೆ ಆಗಿದೆ. ತಯಾರಿಕಾ ವಲಯ ಮತ್ತು ಗಣಿಗಾರಿಕೆಯಲ್ಲಿ ಕಂಡ ಕುಸಿತವು ಒಟ್ಟು ಆರ್ಥಿಕ ಬೆಳವಣಿಗೆಯ ಮೇಲೆಯೂ ಪ್ರಭಾವ ಉಂಟುಮಾಡಿದೆ.

ಹೀಗಿದ್ದರೂ, ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಸಾಧಿಸಿರುವ ಅರ್ಥ ವ್ಯವಸ್ಥೆ ಎಂಬ ಹೆಗ್ಗಳಿಕೆಯನ್ನು ಭಾರತ ಉಳಿಸಿಕೊಂಡಿದೆ. ಚೀನಾದ ಅರ್ಥ ವ್ಯವಸ್ಥೆಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 3.9ರಷ್ಟು ಮಾತ್ರ ಬೆಳವಣಿಗೆ ಕಂಡಿದೆ.

ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ಅರ್ಥ ವ್ಯವಸ್ಥೆಯು ಶೇ 8.4ರಷ್ಟು ಬೆಳವಣಿಗೆ ಕಂಡಿತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ. ಈ ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ಅರ್ಥ ವ್ಯವಸ್ಥೆಯು ಶೇ 13.5ರಷ್ಟು ಬೆಳವಣಿಗೆ ದಾಖಲಿಸಿದೆ.

ಸೆಪ್ಟೆಂಬರ್ ತ್ರೈಮಾಸಿಕದ ಜಿಡಿಪಿ ಬೆಳವಣಿಗೆ ದರವು ಆರ್‌ಬಿಐ ಅಂದಾಜಿಸಿದ್ದಂತೆಯೇ ಇದೆ. ಜಿಡಿಪಿ ಬೆಳವಣಿಗೆ ದರವು ಶೇ 6.1ರಿಂದ ಶೇ 6.3ರಷ್ಟು ಇರಬಹುದು ಎಂದು ಆರ್‌ಬಿಐ ಈಚೆಗೆ ಅಂದಾಜು ಮಾಡಿತ್ತು.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಒಟ್ಟಾರೆಯಾಗಿ ಶೇ 6.8ರಿಂದ ಶೇ 7ರಷ್ಟು ಬೆಳವಣಿಗೆ ಸಾಧಿಸುವ ಹಾದಿಯಲ್ಲಿ ಅರ್ಥ ವ್ಯವಸ್ಥೆ ಇದೆ ಎಂದು ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ.

'ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್, ಬ್ಯಾಂಕ್‌ಗಳು ಸಾಲ ನೀಡುವು ದರಲ್ಲಿ ಕಾಣುತ್ತಿರುವ ಬೆಳವಣಿಗೆ ಮತ್ತು ವಾಹನಗಳ ಮಾರಾಟಕ್ಕೆ ಸಂಬಂಧಿಸಿದ ಅಂಕಿ–ಅಂಶಗಳು ಅರ್ಥ ವ್ಯವಸ್ಥೆಯು ಬೆಳವಣಿಗೆಯ ವೇಗವನ್ನು ಕಾಯ್ದುಕೊಂಡಿದೆ ಎಂಬುದನ್ನು ಹೇಳುತ್ತಿವೆ' ಎಂದು ಪ್ರತಿಕ್ರಿಯೆ ನೀಡಿದ್ದಾರೆ.




## ಎನ್‌ಡಿಟಿವಿ ಪ್ರವರ್ತಕ ಕಂಪನಿಗೆ ಪ್ರಣಯ್, ರಾಧಿಕಾ ರಾಜೀನಾಮೆ

ನವದೆಹಲಿ (ಪಿಟಿಐ): ಎನ್‌ಡಿಟಿವಿ ಸುದ್ದಿವಾಹಿನಿಯ ಪ್ರವರ್ತಕ ಕಂಪನಿಯಾಗಿರುವ ಆರ್‌ಆರ್‌ಪಿಆರ್ ಹೋಲ್ಡಿಂಗ್ಸ್ ಪ್ರೈ.ಲಿ. ನಿರ್ದೇಶಕ ಸ್ಥಾನಕ್ಕೆ ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ರಾಜೀನಾಮೆ ಸಲ್ಲಿಸಿದ್ದಾರೆ. ಎನ್‌ಡಿಟಿವಿ ವಾಹಿನಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅದಾನಿ ಸಮೂಹ ಮುಂದಡಿ ಇರಿಸಿರುವ ಹೊತ್ತಿನಲ್ಲಿ ಈ ಬೆಳವಣಿಗೆ ನಡೆದಿದೆ.

ಎನ್‌ಡಿಟಿವಿ ವಾಹಿನಿಯಲ್ಲಿ ಶೇಕಡ 29.18ರಷ್ಟು ಷೇರು ಹೊಂದಿರುವ ಆರ್‌ಆರ್‌ಪಿಆರ್ ಹೋಲ್ಡಿಂಗ್ಸ್ ಕಂಪನಿಯನ್ನು ಅದಾನಿ ಸಮೂಹ ಸ್ವಾಧೀನಕ್ಕೆ ತೆಗೆದುಕೊಂಡಿದೆ. ಪ್ರಣಯ್ ಮತ್ತು ರಾಧಿಕಾ ಅವರು ಎನ್‌ಡಿಟಿವಿ ವಾಹಿನಿಯಲ್ಲಿ ಈಗ ಶೇ 32.26ರಷ್ಟು ಪಾಲು ಹೊಂದಿದ್ದಾರೆ. ಅವರು ಎನ್‌ಡಿಟಿವಿ ಆಡಳಿತ ಮಂಡಳಿಯ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿಲ್ಲ.

ಪ್ರಣಯ್ ಅವರು ಎನ್‌ಡಿಟಿವಿ ಅಧ್ಯಕ್ಷ, ರಾಧಿಕಾ ಅವರು ಅದರ ಕಾರ್ಯನಿರ್ವಾಹಕ ನಿರ್ದೇಶಕಿ. ಪ್ರಣಯ್ ಮತ್ತು ರಾಧಿಕಾ ಅವರು ಆರ್‌ಆರ್‌ಪಿಆರ್ ಹೋಲ್ಡಿಂಗ್ಸ್‌ನ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿರುವ ವಿಚಾರವನ್ನು ನ್ಯೂ ಡೆಲ್ಲಿ ಟೆಲಿವಿಷನ್ ಲಿಮಿಟೆಡ್ (ಎನ್‌ಡಿಟಿವಿ ಲಿಮಿಟೆಡ್) ಷೇರುಪೇಟೆಗೆ ಮಂಗಳವಾರ ತಿಳಿಸಿದೆ.

ಆರ್‌ಆರ್‌ಪಿಆರ್ ಆಡಳಿತ ಮಂಡಳಿಯು ಸುದೀಪ್ತ ಭಟ್ಟಾಚಾರ್ಯ, ಸಂಜಯ್ ಪುಗಾಲಿಯಾ ಮತ್ತು ಸೆಂಥಿಲ್ ಸಿನ್ನಿಯ ಚೆಂಗಲ್ವರಾಯನ್ ಅವರನ್ನು ನಿರ್ದೇಶಕರನ್ನಾಗಿ ನೇಮಿಸಲು ಅನುಮೋದನೆ ನೀಡಿದೆ. ಈ ಮೂವರನ್ನು ಅದಾನಿ ಸಮೂಹ ನೇಮಕ ಮಾಡಿದೆ.

ಪ್ರಣಯ್ ಮತ್ತು ರಾಧಿಕಾ 2009ರಲ್ಲಿ ವಿಶ್ವಪ್ರಧಾನ್ ಕಮರ್ಷಿಯಲ್ ಪ್ರೈ.ಲಿ. (ವಿಸಿಪಿಎಲ್) ಕಂಪನಿಯಿಂದ ₹ 400 ಕೋಟಿಗೂ ಹೆಚ್ಚಿನ ಮೊತ್ತವನ್ನು ಬಡ್ಡಿರಹಿತ ಸಾಲವಾಗಿ ಪಡೆದಿದ್ದರು. ಸಾಲವನ್ನು ಆರ್‌ಆರ್‌ಪಿಆರ್ ಹೋಲ್ಡಿಂಗ್ಸ್ ಕಂಪನಿಯ ಷೇರುಗಳನ್ನಾಗಿ ಪರಿವರ್ತಿಸಿಕೊಳ್ಳುವ ಆಯ್ಕೆಯನ್ನು ವಿಸಿಪಿಎಲ್‌ಗೆ ನೀಡಲಾಗಿತ್ತು. ಅದಾನಿ ಸಮೂಹವು ಆಗಸ್ಟ್‌ನಲ್ಲಿ ವಿಸಿಪಿಎಲ್ ಕಂಪನಿಯನ್ನು ಖರೀದಿಸಿತು. ಅದು ಹಿಂದೆ ನೀಡಿದ್ದ ಸಾಲವನ್ನು ಷೇರುಗಳನ್ನಾಗಿ ಪರಿವರ್ತಿಸಿಕೊಳ್ಳುವ ಅವಕಾಶ ಬಳಸಿಕೊಂಡಿದೆ.

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

**ಅಡಿಕೆ**

| ಮಾರುಕಟ್ಟೆ | ವಿಧ | ಧಾರಣೆ |
|---|---|---|
| ಬಂಟ್ವಾಳ | ಕೋಕ | 12500-25000 |
| | ಹಳತು | 48000-54500 |
| ಕಾರ್ಕಳ | ಹೊಸತು | 25000-37500 |
| | ಹಳತು | 40000-54500 |
| ಕುಮಟಾ | ಚಿಪ್ಪು | 24569-32999 |
| | ಕೋಕ | 17089-29999 |
| | ಫ್ಯಾಕ್ಟರಿ | 10189-18699 |
| | ಹಳೆಚಾಲಿ | 37200-40119 |
| | ಹೊಸಚಾಲಿ | 29509-33009 |
| ಕುಂದಾಪುರ | ಹಳೆಚಾಲಿ | 53000-56000 |
| | ಹೊಸಚಾಲಿ | 40000-47500 |
| ಪುತ್ತೂರು | ಕೋಕ | 11000-26000 |
| | ಹೊಸತು | 32000-38000 |
| ಶಿವಮೊಗ್ಗ | ಬೆಟ್ಟೆ | 49410-51090 |
| | ಗೊರಬಲು | 17529-34599 |
| | ಹೊಸತು | 43539-45309 |
| | ರಾಶಿ | 43669-47209 |
| | ಸರಕು | 55599-76000 |
| ಶಿರಸಿ | ಬೆಟ್ಟೆ | 41609-45099 |
| | ಬಿಳಿಗೋಟು | 26099-34999 |
| | ಚಾಲಿ | 36501-41063 |
| | ಕೆಂಪುಗೋಟು | 24899-28699 |
| | ರಾಶಿ | 42999-45699 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| ಮುದ್ರೆಮನೆ | |
|---|---|
| ಎಪಿ | 13200 |
| ಎಸಿ | 6720 |
| ಆರ್‌ಪಿ | 8500 |
| ಆರ್‌ಸಿ | 4530 |

## ಎಎಎಐ ಅಧ್ಯಕ್ಷರಾಗಿ ಪ್ರಶಾಂತ್ ಕುಮಾರ್ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೂಪ್ ಎಂ ಮೀಡಿಯಾ (ಇಂಡಿಯಾ) ಪ್ರೈ. ಲಿ. ಕಂಪನಿಯ ದಕ್ಷಿಣ ಏಷ್ಯಾ ವಿಭಾಗದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಪ್ರಶಾಂತ್ ಕುಮಾರ್ ಅವರು ಭಾರತೀಯ ಜಾಹೀರಾತು ಏಜೆನ್ಸಿಗಳ ಒಕ್ಕೂಟದ (ಎಎಎಐ) 2022–23ನೇ ಸಾಲಿನ ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ.

ನವೆಂಬರ್ 28ರಂದು ಮುಂಬೈನಲ್ಲಿ ನಡೆದ ಒಕ್ಕೂಟದ ಮಹಾಸಭೆಯಲ್ಲಿ ಕುಮಾರ್ ಅವರ ಆಯ್ಕೆ ನಡೆದಿದೆ ಎಂದು ಪ್ರಕಟಣೆ ತಿಳಿಸಿದೆ. ಹವಸ್ ಗ್ರೂಪ್ ಇಂಡಿಯಾದ ಗ್ರೂಪ್ ಸಿಇಒ ರಾಣಾ ಬರುವಾ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

'ಒಕ್ಕೂಟದ ಅಧ್ಯಕ್ಷನಾಗಿ ಆಯ್ಕೆಯಾಗಿರುವುದು ಒಂದು ಗೌರವ' ಎಂದು ಕುಮಾರ್ ಪ್ರತಿಕ್ರಿಯೆ ನೀಡಿದ್ದಾರೆ. ಕುಮಾರ್ ಅವರು ಎಎಎಐ ಉಪಾಧ್ಯಕ್ಷರಾಗಿ 2020ರಿಂದ 2022ರವರೆಗೆ ಕರ್ತವ್ಯ ನಿಭಾಯಿಸಿದ್ದಾರೆ.

ಎಪಿಎಂಸಿಯಲ್ಲಿ 15 ಕೆ.ಜಿ ಬಾಕ್ಸ್ ಟೊಮೆಟೊ ₹ 50ರಿಂದ ₹ 200ಕ್ಕೆ ಬಿಕರಿ

# ಟೊಮೆಟೊ ಬೆಲೆ ಕುಸಿತ: ರೈತರಿಗೆ ಸಂಕಷ್ಟ

• ಕೆ.ಓಂಕಾರ ಮೂರ್ತಿ

ಕೋಲಾರ: ಜಿಲ್ಲೆಯಲ್ಲಿ ಟೊಮೆಟೊ ಧಾರಣೆ ದಿನೇ ದಿನೇ ಕುಸಿಯುತ್ತಿದ್ದು, ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಟೊಮೆಟೊ ಮಾರಾಟದಲ್ಲಿ ಏಷ್ಯಾದ ಎರಡನೇ ಅತಿದೊಡ್ಡ ಮಾರುಕಟ್ಟೆ ಎನಿಸಿರುವ ನಗರದ ಎಪಿಎಂಸಿಯಲ್ಲಿ ಎಲ್ಲೆಡೆ ಟೊಮೆಟೊ ರಾಶಿ ಕಾಣತೊಡಗಿದೆ. ಆದರೆ, ಗುಣಮಟ್ಟವಿಲ್ಲದೆ ಬೆಲೆ ಸಿಗುತ್ತಿಲ್ಲ.

ಉತ್ತಮ ಗುಣಮಟ್ಟದಿಂದ ಕೂಡಿದ 15 ಕೆ.ಜಿ.ತೂಗುವ ಬಾಕ್ಸ್ ಟೊಮೆಟೊಗೆ ಹರಾಜಿನಲ್ಲಿ ಗರಿಷ್ಠ ₹ 200 ಸಿಗುತ್ತಿದೆ. ಚುಕ್ಕಿಗಳಿಂದ ಕೂಡಿರುವ ಗುಣಮಟ್ಟವಿಲ್ಲದ ಬಾಕ್ಸ್ ಟೊಮೆಟೊ ಕನಿಷ್ಠ ₹ 50ಕ್ಕೆ ಬಿಕರಿಯಾಗುತ್ತಿದೆ. ಕಮಿಷನ್, ಸಾಗಣೆ, ಕೂಲಿ ವೆಚ್ಚ ಕಳೆದರೆ ರೈತರಿಗೆ ಹಾಕಿದ ಬಂಡವಾಳವೂ ಸಿಗುತ್ತಿಲ್ಲ. ಇತ್ತ ಬೆಲೆ ತಗ್ಗಿದ ಖುಷಿಯಲ್ಲಿ ಗ್ರಾಹಕರು ಇದ್ದಾರೆ.

ಚಿಲ್ಲರೆ ಮಾರುಕಟ್ಟೆಯಲ್ಲಿ ಟೊಮೆಟೊ ಒಂದು ಕೆ.ಜಿಗೆ ₹ 10, ₹ 15 ಕ್ಕೆ ಮಾರಾಟವಾಗುತ್ತಿದೆ. ಕೆಲವರು ಟೆಂಪೊ, ತಳ್ಳುವಗಾಡಿಯಲ್ಲಿ ಟೊಮೆಟೊ ಹಾಕಿಕೊಂಡು ನಗರ ಸುತ್ತಾಡಿ ಮಾರಾಟ ಮಾಡುತ್ತಿದ್ದಾರೆ.

ಜಿಲ್ಲೆಯಲ್ಲಿ ಸದ್ಯ ಸುಮಾರು 2,500 ಹೆಕ್ಟೇರ್‌ನಲ್ಲಿ ಮೂರೂವರೆ ಸಾವಿರಕ್ಕೂ ಅಧಿಕ ರೈತರು ಟೊಮೆಟೊ ಬೆಳೆದಿದ್ದಾರೆ. ಬುಧವಾರ ಎಪಿಎಂಸಿಯಲ್ಲಿ ಟೊಮೆಟೊ ಆವಕ ಪ್ರಮಾಣ 9,300 ಕ್ವಿಂಟಲ್ ಇತ್ತು. ಒಂದು ಎಕರೆ ಪ್ರದೇಶದಲ್ಲಿ ಟೊಮೆಟೊ ಬೆಳೆಯಲು ಅಂದಾಜು ₹ 2.5 ಲಕ್ಷ ಬಂಡವಾಳ ಬೇಕಾಗುತ್ತದೆ.

'ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ಟೊಮೆಟೊ ಆವಕವಾಗುತ್ತಿದೆ. ಮಳೆ ಕಾರಣ ಫಸಲು ಗುಣಮಟ್ಟದಿಂದ ಕೂಡಿಲ್ಲ. ಹೀಗಾಗಿ, ಬೆಲೆ ಕುಸಿದು ಬೆಳೆಗಾರರಿಗೆ ನಷ್ಟ ಉಂಟಾಗುತ್ತಿದೆ' ಎಂದು ಕೋಲಾರ ಎಪಿಎಂಸಿ ಕಾರ್ಯದರ್ಶಿ ವಿಜಯಲಕ್ಷ್ಮಿ 'ಪ್ರಜಾವಾಣಿ'ಗೆ ತಿಳಿಸಿದರು.

ಜಿಲ್ಲೆಯಲ್ಲಿ ಎರಡು ತಿಂಗಳಲ್ಲಿ ಸುರಿದ ಮಳೆಯ ಕಾರಣ ಟೊಮೆಟೊಗೆ ಅಂಗಮಾರಿ ರೋಗ ಕಾಣಿಸಿಕೊಂಡಿದೆ. ಊಜಿ ನೊಣ ಆವರಿಸಿಕೊಂಡು ಚುಕ್ಕಿ ಬೀಳುತ್ತಿದೆ. 3–4 ದಿನಗಳಲ್ಲಿ ಕೆಟ್ಟು ಹೋಗುತ್ತಿದೆ. ಚೆನ್ನೈ, ಆಂಧ್ರಪ್ರದೇಶ, ಒಡಿಶಾದಲ್ಲಿ ಮಳೆಯ ಕಾರಣ ಅಲ್ಲಿನ ಮಾರುಕಟ್ಟೆಗಳಲ್ಲೇ ಟೊಮೆಟೊ ಸಂಗ್ರಹವಿದ್ದು, ಬೇಡಿಕೆ ಕುಸಿದಿದೆ. ಹೀಗಾಗಿ, ಅಲ್ಲಿನ ವರ್ತಕರು ಇಲ್ಲಿನ ಮಾರುಕಟ್ಟೆ ಕಡೆಗೆ ಸುಳಿಯುತ್ತಿಲ್ಲ.

'ಟೊಮೆಟೊ ದರ ಏರಿಕೆ ಆಗಬಹುದೆಂಬ ಆಶಯದಿಂದ ಮತ್ತೆ ಮತ್ತೆ ಟೊಮೆಟೊ ಬೆಳೆಯುತ್ತಿದ್ದೇವೆ. ಕಳೆದ ಬಾರಿ ಈ ಅವಧಿಯಲ್ಲಿ ಉತ್ತಮ ದರವಿತ್ತು. 15 ಕೆ.ಜಿ ಬಾಕ್ಸ್‌ಗೆ ₹ 2 ಸಾವಿರದವರೆಗೆ ಬೆಲೆ ಇತ್ತು. ಈಗ, ಬೆಲೆ ಸಿಗದೆ ನಿರಾಸೆ ಉಂಟಾಗಿದೆ' ಎಂದು ತಾಲ್ಲೂಕಿನ ತೊಟ್ಲಿ ಗ್ರಾಮದ ರೈತ ರಮೇಶ್ ಅಳಲು ತೋಡಿಕೊಂಡರು.

ಕೋಲಾರದ ಎಪಿಎಂಸಿಯಲ್ಲಿ ಟೊಮೆಟೊ

**ಮುಖ್ಯಾಂಶಗಳು**

- ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿಗೆ ₹ 10, ₹ 15
- ಗ್ರಾಹಕರಿಗೆ ಲಾಭ; ರೈತರಿಗೆ ಪೆಟ್ಟು
- ಮಳೆ ಕಾರಣ ಜಿಲ್ಲೆಯ 'ಕೆಂಪು ಚಿನ್ನಕ್ಕೆ' ಹಾನಿ

**ಟೊಮೆಟೊ ಉತ್ಪಾದನೆಯ ಪ್ರಮಾಣ ಹೆಚ್ಚಿದ್ದರೂ ಗುಣಮಟ್ಟ ಇಲ್ಲವಾಗಿದೆ. ಹೊರರಾಜ್ಯದ ವರ್ತಕರಿಂದ ಬೇಡಿಕೆಯೂ ಇಲ್ಲ. ಕಳೆದ ವರ್ಷ ಇದೇ ಅವಧಿಯಲ್ಲಿ ಉತ್ತಮ ದರವಿತ್ತು**

**ವಿಜಯಲಕ್ಷ್ಮಿ**
ಕಾರ್ಯದರ್ಶಿ, ಎಪಿಎಂಸಿ, ಕೋಲಾರ

## ಇಂದಿನಿಂದ ಭಾರತಕ್ಕೆ ಭದ್ರತಾ ಮಂಡಳಿಯ ಅಧ್ಯಕ್ಷತೆ

ವಿಶ್ವಸಂಸ್ಥೆ (ಪಿಟಿಐ): ಡಿಸೆಂಬರ್ ಒಂದರಿಂದ ಭಾರತ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷತೆ ವಹಿಸುತ್ತಿರುವ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ಅವರು, ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರೆಸ್ ಮತ್ತು ಸಾಮಾನ್ಯ ಸಭೆ ಅಧ್ಯಕ್ಷ ಶಾಬಾ ಕೊರೊಶಿ ಅವರನ್ನು ಭೇಟಿ ಮಾಡಿ, ಭಾರತದ ಆದ್ಯತೆಗಳ ಕುರಿತು ಚರ್ಚೆ ನಡೆಸಿದರು.

ಭಾರತದ ಅಧ್ಯಕ್ಷೀಯ ಅವಧಿಯು ಡಿ.31ಕ್ಕೆ ಮುಕ್ತಾಯವಾಗಲಿದೆ. ಭಯೋತ್ಪಾದನೆ ನಿಗ್ರಹ ಮತ್ತು ಬಹುಪಕ್ಷೀಯ ಸಂಬಂಧಗಳ ಸುಧಾರಣೆಯು ದೇಶದ ಆದ್ಯತೆಯಾಗಿರಲಿದೆ.

## ಐಎಸ್ ಸಂಘಟನೆ ಮುಖ್ಯಸ್ಥ ಅಬು ಹಸನ್ ಅಲ್-ಹಶಿಮಿ ಸಾವು

ಬೈರೂತ್: ಜಾಗತಿಕ ಕುಖ್ಯಾತ ಉಗ್ರಗಾಮಿ ಸಂಘಟನೆ ಐಎಸ್ ಮುಖ್ಯಸ್ಥ ಅಬು ಹಸನ್ ಅಲ್-ಹಶಿಮಿ ಅಲ್-ಖುರೇಶಿ ಸತ್ತಿದ್ದಾನೆ ಎಂದು ಎಎಫ್‌ಪಿ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಸ್ವತಃ ಐಎಸ್ ವಕ್ತಾರ ಈ ಸುದ್ದಿಯನ್ನು ಖಚಿತಪಡಿಸಿದ್ದಾನೆ ಎಂಬುದು ತಿಳಿದು ಬಂದಿದೆ.

'ದೇವರ ಶತ್ರುಗಳೊಂದಿಗಿನ ಸೆಣಸಾಟದಲ್ಲಿ ಅಬು ಹಸನ್ ಅಲ್-ಹಶಿಮಿ ಅಲ್-ಖುರೇಶಿ ಸಾವನ್ನಪ್ಪಿದರು' ಎಂದು ಐಎಸ್‌ನ ವಕ್ತಾರ ಹಾಶ್ಮಿ ಆಡಿಯೊ ಸಂದೇಶದಲ್ಲಿ ಹೇಳಿದ್ದಾನೆ. ಆದರೆ, ಸಾವು ಹೇಗಾಯಿತು? ಎಲ್ಲಾಯಿತು? ಮತ್ತು ಯಾವಾಗಾಯಿತು? ಎಂಬುದನ್ನು ಖಚಿತಪಡಿಸಿಲ್ಲ.

ಇದೇ ವೇಳೆ ಐಎಸ್ ಮುಖ್ಯಸ್ಥ ಸ್ಥಾನಕ್ಕೆ ಹೊಸ ವ್ಯಕ್ತಿಯನ್ನು ಘೋಷಿಸಲಾಗಿದ್ದು, ಅವನ ಹೆಸರು ಅಬು ಅಲ್-ಹುಸೇನ್ ಅಲ್-ಹುಸೇನಿ ಅಲ್-ಖುರೇಶಿ ಎಂದು ಆಡಿಯೊ ಸಂದೇಶದಲ್ಲಿ ಹೇಳಲಾಗಿದೆ.

## 63 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಇದೇ ಮೊದಲ ಬಾರಿಗೆ 63 ಸಾವಿರದ ಗಡಿ ದಾಟಿ ವಹಿವಾಟು ಕೊನೆಗೊಳಿಸಿದೆ. ಸತತ 7ನೇ ದಿನವೂ ಏರಿಕೆ ಕಂಡ ಸೆನ್ಸೆಕ್ಸ್ ಬುಧವಾರದ ವಹಿವಾಟಿನ ಅಂತ್ಯಕ್ಕೆ 417 ಅಂಶ ಜಿಗಿದು, 63,099 ಅಂಶಗಳಿಗೆ ತಲುಪಿದೆ.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 140 ಅಂಶ ಏರಿಕೆ ಕಂಡಿದೆ. 'ವಿದೇಶಿ ಹೂಡಿಕೆಯ ಒಳಹರಿವು ಮಾರುಕಟ್ಟೆಯ ಮೇಲೆ ಒಳ್ಳೆಯ ಪರಿಣಾಮ ಉಂಟುಮಾಡಿದೆ. ಅಮೆರಿಕದ ಫೆಡರಲ್ ರಿಸರ್ವ್ ಕೈಗೊಳ್ಳುವ ತೀರ್ಮಾನಕ್ಕೆ ಮಾರುಕಟ್ಟೆ ಸ್ಪಂದಿಸಲಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸೆನ್ಸೆಕ್ಸ್ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿರುವುದರ ಜೊತೆಯಲ್ಲಿಯೇ, ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತವಾಗಿರುವ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ಇದುವರೆಗಿನ ದಾಖಲೆಯ ಮಟ್ಟವಾದ ₹ 288.50 ಲಕ್ಷ ಕೋಟಿಗೆ ಬುಧವಾರ ತಲುಪಿದೆ.

7 ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹ 7.59 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ 1.83ರಷ್ಟು ಹೆಚ್ಚಾಗಿ ಪ್ರತಿ ಬ್ಯಾರೆಲ್‌ಗೆ 84.55 ಡಾಲರ್‌ನಂತೆ ಮಾರಾಟವಾಗಿದೆ.

**ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು**

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**ಉದ್ಯೋಗಾವಕಾಶ**

**Drivers**

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

**General**

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diploma ದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

ಕರ್ನಾಟಕದ ಎಲ್ಲಾ ಜಿಲ್ಲಾದ್ಯಂತ ಆಫೀಸ್ ಗಳಲ್ಲಿ, ಫ್ಯಾಕ್ಟರಿಗಳಲ್ಲಿ,ಗಾರ್ಮೆಂಟ್ಸ್ ಗಳಲ್ಲಿ, ಆಸ್ಪತ್ರೆಗಳಲ್ಲಿ,ಶೋರೂಮ್ ಗಳಲ್ಲಿ,ಫೈನಾನ್ಸ್ ಗಳಲ್ಲಿ ಮಾಲ್ಗಳಲ್ಲಿ ಯಾವುದೇ ಕೆಲಸಕ್ಕೆ ಸೂಕ್ತ ಅಭ್ಯರ್ಥಿಗಳು ಬೇಕಾಗಿದ್ದಲ್ಲಿ ಯಾವುದೇ ಕೆಲಸಬೇಕಾಗಿದ್ದಲ್ಲಿ ಸಂಪರ್ಕಿಸಿ:9164277549, 9008062377.

**Wanted**

ಆಯುರ್ವೇದಿಕ್ ಉತ್ಪನ್ನಗಳ ನೇರ ಮಾರಾಟ 50 ಮಹಿಳಾ ಪ್ರತಿನಿಧಿಗಳು ಬೇಕಾಗಿದ್ದಾರೆ ಸಂಬಳ 30 ರಿಂದ 50 ಸಂಪರ್ಕಿಸಿ: 8892501007/ 9606701007

**Part-Time Jobs**

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611224633/ 9611225344

Book Your Classifieds Ads Online Log in to dhclassifieds.com
Contact : 9845114560 : 9731810277 9901641752 : 9886213331 080 - 45557163 / 164

**ಪ್ರವಾಸ**

**Travel**

A/C ರೂಂ ಹಾಗು A/C ಬಸ್ಸಿನಲ್ಲಿ 11.01.2023 15.02.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು 17.01.2023 08.02.2023 ದುಬೈ,ಅಬುಧಾಬಿ 5 ದಿನಗಳು. 13.12.2022 12.01.2023 ಗುಜರಾತ್ 8 ದಿನಗಳು. 13.12.2022 03.01.2023 ರಾಜಸ್ಥಾನ್ 9 ದಿನಗಳು. 17.01.2023 11.02.2023 ಕಾಶಿ,ಗಯಾ,ಅಯೋಧ್ಯ 7 ದಿನಗಳು. 04.12.2022 18.01.2023 ಕುಂಭಕೋಣಂ,ರಾಮೇಶ್ವರ 6 ದಿನಗಳು. 22.12.2022 28.12.2022 ಧರ್ಮಸ್ಥಳ ಹೊರನಾಡು 4 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು.3 9448402248 7022547922

★16.02.2023 ಶಿವರಾತ್ರಿ★ ವಿಶೇಷ 9ದಿನ ಕಾಶಿಯಲ್ಲಿ ತಂಗುವುದು, 07.02.2023 16ದಿನ 95ದಿವ್ಯದೇಶ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9945445809, 9902433500

ASTRO YATRA

ಶ್ರೀ ರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
31 ವರ್ಷದ ಸುದೀರ್ಘ ಅನುಭವುಳ್ಳ, ವಂಶಪಾರಂಪರಿಕ ಜ್ಯೋತಿಷ್ಯರು
ಗುರೂಜಿ ಮಹೇಶ್‌ಭಟ್
ಮಕ್ಕಳು ಪ್ರೀತಿಯಲ್ಲಿ ಬಿದ್ದು ಮಾತು ಕೇಳದಿದ್ದಲ್ಲಿ, ಪ್ರೀತಿಯಲ್ಲಿ ನಂಬಿ ಮೋಸ, ಪ್ರೀತಿಸಿದವರಿಂದ ತೊಂದರೆ, ಇಷ್ಟಪಟ್ಟವರು ನಿಮ್ಮಂತೆ ಬರಲು, ಮದುವೆಯಲ್ಲಿ ವಿಳಂಬ, ಗಂಡ–ಪರಸ್ತ್ರೀ ವಶದಲ್ಲಿದ್ದರೆ, ಡೈವೋರ್ಸ್ ಪ್ರಾಬ್ಲಂ, ಪುರುಷತ್ವ ಸಮಸ್ಯೆ, ಅತ್ತೆ ಕಾಟ, ಶತ್ರುಕಾಟ, ಹಣಕಾಸು, ಮಾಂತ್ರಿಕ ಸಮಸ್ಯೆಯಿಂದ ಆರೋಗ್ಯ ತೊಂದರೆ, ಇನ್ಯಾವುದೇ ಬಗೆಹರಿಯದಂತಹ ಕಠಿಣ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ಗ್ಯಾರಂಟಿ ಪರಿಹಾರ. ಸ್ತ್ರೀಯರಿಗೆ ವಿಶೇಷ ಪರಿಹಾರ.
Google, TV, FB, Insta, Youtube ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ಹಣ ಕಳೆದುಕೊಂಡಿದ್ದರೆ, ಶುದ್ಧ, ಶೀಘ್ರ ಪರಿಹಾರಕ್ಕಾಗಿ ಕರೆಮಾಡಿ
ಖಾಯಂ ವಿಳಾಸ: ನಂ. 15, 1ನೇ ಮೇನ್, 1ನೇ ಕ್ರಾಸ್, ಅಯ್ಯಣ್ಣ ಶೆಟ್ಟಿ ಲೇಔಟ್, ಪೊಲೀಸ್ ಸ್ಟೇಷನ್ ಹಿಂಭಾಗ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು.
ದೂರದ ಊರಿನವರಿಗೆ ಫೋನಿನ ಮೂಲಕ ಪರಿಹಾರ. 9686999517

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 26.01.2023 ರಿಂದ 8 ದಿನಗಳ ವಿಯಟ್ನಂ ಕಾಂಬೋಡಿಯಾ. 22.01.2023 04.02.2023 ರಿಂದ 6 ದಿನಗಳ ದುಬೈ,ಅಬುಧಾಬಿ. 22.01.2023 09.02.2023 ರಿಂದ 7/11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 24.12.2022 ರಿಂದ 8 ದಿನಗಳ ಸ್ನೋ ಸ್ಪೆಷಲ್ ಶಿಮ್ಲಾ ಮನಾಲಿ. 25.12.2022 ರಿಂದ 5 ದಿನಗಳ ಕನ್ಯಾಕುಮಾರಿ ರಾಮೇಶ್ವರ. 20.01.2023 08.02.2023 23.02.2023 ರಿಂದ 8 ದಿನಗಳ ಕಾಶಿ,ಗಯಾ,ಚಿತ್ರಕೂಟ ನೈಮಿಶಾರಣ್ಯ. 30.01.2023 04.03.2023 ರಿಂದ 8 ದಿನಗಳ ಪುರಿ,ಕೊಲ್ಕತ್ತ,ಕಾಶಿ. 20.01.2023 06.02.2023 ರಿಂದ 8/17 ದಿನಗಳ ಗುಜರಾತ್ ರಾಜಸ್ಥಾನ್. 23.02.2023 ರಿಂದ 11 ದಿನಗಳ ಮಧ್ಯಪ್ರದೇಶ. ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 8088887677 080-23385837

**ಭವಿಷ್ಯ**

**Astrology**

ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಸ್ತ್ರೀ ಪುರುಷ, ಶತ್ರುಕಾಟ, ಗಂಡಹೆಂಡತಿ ದೂರವಾಗಿದ್ದರೆ, ನಿಮ್ಮಂತೆ ಆಗಲು. 2 ದಿನದಲ್ಲಿ ಪರಿಹಾರ 9611968471

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಿರೋಧ ವ್ಯಕ್ತಪಡಿಸಿದ ಚೀನಾ: ಗಡಿ ಒಪ್ಪಂದಗಳ ಉಲ್ಲಂಘನೆಯ ಆರೋಪ

# ಭಾರತ- ಅಮೆರಿಕ ಸೇನಾ ತಾಲೀಮು

ಬೀಜಿಂಗ್/ಕೊಚ್ಚಿ (ಪಿಟಿಐ): ಭಾರತ–ಅಮೆರಿಕ ಸೇನಾ ಪಡೆಗಳು ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಸಮೀಪ ನಡೆಸುತ್ತಿರುವ ಜಂಟಿ ಸಮರಾಭ್ಯಾಸವನ್ನು ಚೀನಾ ಬುಧವಾರ ವಿರೋಧಿಸಿದೆ. 'ಇದು ನವದೆಹಲಿ ಮತ್ತು ಬೀಜಿಂಗ್ ನಡುವೆ ಉಭಯ ರಾಷ್ಟ್ರಗಳ ಗಡಿ ಸಮಸ್ಯೆ ಸಂಬಂಧ ನಡೆದಿರುವ ಒಪ್ಪಂದಗಳ ಆಶಯವನ್ನು ಉಲ್ಲಂಘಿಸುತ್ತದೆ' ಎಂದು ಚೀನಾ ಹೇಳಿದೆ.

ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಜಹೋ ಲಿಜಿಯಾನ್ ಇಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು 'ಎಲ್‌ಎಸಿ ಬಳಿ ನಡೆಯುತ್ತಿರುವ ಜಂಟಿ ಸೇನಾ ತಾಲೀಮು 1993 ಮತ್ತು 1996ರಲ್ಲಿ ಚೀನಾ– ಭಾರತದ ನಡುವೆ ಆಗಿರುವ ಒಪ್ಪಂದದ ಆಶಯಗಳನ್ನು ಉಲ್ಲಂಘಿಸುತ್ತದೆ' ಎಂದು ತಿಳಿಸಿದರು.

ಪಾಕಿಸ್ತಾನದ ವರದಿಗಾರರೊಬ್ಬರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಇದು ಚೀನಾ ಮತ್ತು ಭಾರತ ನಡುವಿನ ಪರಸ್ಪರ ನಂಬಿಕೆಯನ್ನು ಉಳಿಸುವುದಿಲ್ಲ' ಎಂದರು.

ಭಾರತ– ಅಮೆರಿಕ ಜಂಟಿ ಸೇನಾ ತಾಲೀಮಿನ 18ನೇ ಆವೃತ್ತಿ 'ಯುದ್ಧ್ ಅಭ್ಯಾಸ್' ಉತ್ತರಾಖಂಡದಿಂದ ಸುಮಾರು 100 ಕಿ.ಮೀ ದೂರದಲ್ಲಿ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಬುಧವಾರ ಆರಂಭವಾಗಿದೆ.

ಎರಡು ವಾರಗಳ ಅವಧಿಯ ಈ ತಾಲೀಮು, ಪರಸ್ಪರರ ಮಿಲಿಟರಿ ಉಪಕರಣಗಳು ಅಥವಾ ಪಡೆಗಳೊಂದಿಗೆ ಸಮನ್ವಯದಿಂದ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೆಚ್ಚಿಸುವ, ಕಾರ್ಯತಂತ್ರ ವಿನಿಯಮ ಮತ್ತು ಶಾಂತಿಪಾಲನೆ ಹಾಗೂ ಪ್ರಕೃತಿ ವಿಪತ್ತು ಪರಿಹಾರ ಕಾರ್ಯಾಚರಣೆಗಳಲ್ಲಿ ಉಭಯ ಸೇನೆಗಳ ನಡುವೆ ಪರಿಣತಿ ಹಂಚಿಕೊಳ್ಳುವ ಗುರಿ ಹೊಂದಿದೆ.

**ದೇಶದ ಹಿತರಕ್ಷಿಸಲು ಬದ್ಧ:** ಹಿಂದೂ ಮಹಾಸಾಗರ ಪ್ರದೇಶದ ಮೇಲೆ ಕಣ್ಗಾವಲು ಇಡುವ ಮೂಲಕ ಚೀನಾದ ಒಳನುಸುಳುವುದು ಸರಿಯಲ್ಲ. ಈ ಕಾರ್ಯತಂತ್ರದ ಪ್ರದೇಶದಲ್ಲಿ ದೇಶದ ಹಿತರಕ್ಷಿಸಲು ನಾವು ಬದ್ಧವಾಗಿದ್ದೇವೆ ಎಂದು ಭಾರತೀಯ ನೌಕಾಪಡೆ ಬುಧವಾರ ಹೇಳಿದೆ.

ದಕ್ಷಿಣದ ನೌಕಾ ಕಮಾಂಡ್ (ಎಸ್‌ಎನ್‌ಸಿ) ಮುಖ್ಯಸ್ಥ, ವೈಸ್ ಅಡ್ಮಿರಲ್ ಎಂ.ಎ. ಹಂಪಿಹೋಳಿ ಅವರು, ಭಾರತೀಯ ನೌಕಾಪಡೆಯು ಈ ಪ್ರದೇಶದಲ್ಲಿ ಉಪಗ್ರಹಗಳು ಮತ್ತು ಸಾಗರ ನಿಗಾ ವಿಮಾನಗಳ ಮೂಲಕ ಕಣ್ಗಾವಲು ಇಡುತ್ತದೆ ಎಂದು ಹೇಳಿದರು.

ಕಳೆದ ಕೆಲವು ತಿಂಗಳುಗಳಲ್ಲಿ ಚೀನಾದ ಗೂಢಚಾರಿಕೆ ಹಡಗು ಎರಡನೇ ಬಾರಿಗೆ ಹಿಂದೂ ಮಹಾಸಾಗರ ಪ್ರದೇಶ ಪ್ರವೇಶಿಸಿದೆ ಎಂಬ ವರದಿಗಳ ಮಧ್ಯೆ ವೈಸ್ ಅಡ್ಮಿರಲ್ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

### 2035ಕ್ಕೆ ಚೀನಾ ಬಳಿ 1,500 ಅಣ್ವಸ್ತ್ರ

ಚೀನಾ ತನ್ನ ಅಣ್ವಸ್ತ್ರ ಶಸ್ತ್ರಾಗಾರವನ್ನು ವೇಗವಾಗಿ ವಿಸ್ತರಿಸುತ್ತಿದೆ. 2035ರ ವೇಳೆಗೆ ಅದು ಸುಮಾರು 1,500 ಸಿಡಿತಲೆಗಳನ್ನು ಹೊಂದುವ ಸಾಧ್ಯತೆಯಿದೆ. 2021ರಿಂದ ತನ್ನ ಅಣ್ವಸ್ತ್ರ ವಿಸ್ತರಣೆ ವೇಗಗೊಳಿಸಿದೆ ಎಂದು ಪೆಂಟಗನ್ ವರದಿ ಹೇಳಿದೆ.

ಚೀನಾದ ಮಹತ್ವಾಕಾಂಕ್ಷೆಯ ಸೇನಾ ನಿರ್ಮಾಣದ ಕುರಿತು ಅಮೆರಿಕ ಸಂಸತ್‌ಗೆ ಮಂಗಳವಾರ ಪೆಂಟಗನ್ ಸಲ್ಲಿಸಿದ ವಾರ್ಷಿಕ ವರದಿಯಲ್ಲಿ 'ಮುಂದಿನ ದಶಕದಲ್ಲಿ ಚೀನಾ ತನ್ನ ಅಣ್ವಸ್ತ್ರ ಪಡೆಗಳನ್ನು ಆಧುನೀಕರಿಸಲು, ವೈವಿಧ್ಯಗೊಳಿಸಲು ಮತ್ತು ಇನ್ನಷ್ಟು ವಿಸ್ತರಿಸಲು ಉದ್ದೇಶಿಸಿದೆ' ಎಂದು ತಿಳಿಸಿದೆ.

'ಸದ್ಯ ಚೀನಾ 400ಕ್ಕೂ ಹೆಚ್ಚು ಅಣ್ವಸ್ತ್ರ ಸಿಡಿತಲೆಗಳಿರುವ ಅಂದಾಜಿದೆ. ಅಮೆರಿಕದ ಜಾಗತಿಕ ಪ್ರಾಬಲ್ಯ ಪ್ರಶ್ನಿಸಲು ಪ್ರಯತ್ನಿಸುತ್ತಿರುವ ಬೀಜಿಂಗ್ ಇದಕ್ಕಾಗಿ ತನ್ನ ಅಣ್ವಸ್ತ್ರಗಳ ಸಾಮರ್ಥ್ಯ ಹೆಚ್ಚಿಸುವ ಜೊತೆಗೆ 2035ರ ವೇಳೆಗೆ ತನ್ನ ರಾಷ್ಟ್ರೀಯ ರಕ್ಷಣಾ ಮತ್ತು ಸಶಸ್ತ್ರ ಪಡೆಗಳ ಆಧುನೀಕರಣ ಪೂರ್ಣಗೊಳಿಸಲು ಯೋಜಿಸಿದೆ' ಎಂದು ವರದಿಯಲ್ಲಿ ವಿವರಿಸಿದೆ.

## ಚೀನಾ ಮಾಜಿ ಅಧ್ಯಕ್ಷ ಜಿಯಾಂಗ್ ಜೆಮಿನ್ ನಿಧನ

ಬೀಜಿಂಗ್: ಚೀನಾದ ಮಾಜಿ ಅಧ್ಯಕ್ಷ ಜಿಯಾಂಗ್ ಜೆಮಿನ್ ಬುಧವಾರ ಮೃತಪಟ್ಟಿದ್ದಾರೆ. ಅವರಿಗೆ 96 ವರ್ಷ ವಯಸ್ಸಾಗಿತ್ತು.

ಜಿಯಾಂಗ್ ಅವರು ಬಹು ಅಂಗಾಂಗ ವೈಫಲ್ಯದಿಂದ ಶಾಂಘೈನಲ್ಲಿ ನಿಧನರಾಗಿದ್ದಾರೆ. ಜಿಯಾಂಗ್ ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ ಎಂದು ಚೀನಾದ ಸರ್ಕಾರಿ ಸುದ್ದಿ ಸಂಸ್ಥೆ ಶಿನುವಾ ತಿಳಿಸಿದೆ.

ಜಿಯಾಂಗ್, 1993ರಿಂದ 2003ರವರೆಗೆ ಚೀನಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

**ಸಂಕ್ಷಿಪ್ತ ಸುದ್ದಿ**

### 'ಸ್ಟೆಮ್ ಸೂಪರ್‌ಸ್ಟಾರ್': ಭಾರತ ಮೂಲದ ಮೂವರ ಆಯ್ಕೆ

ಮೆಲ್ಬರ್ನ್ (ಪಿಟಿಐ): 'ಆಸ್ಟ್ರೇಲಿಯಾ ವಿಜ್ಞಾನ ಮತ್ತು ತಂತ್ರಜ್ಞಾನ (ಎಸ್‌ಟಿಎ) ಸಂಸ್ಥೆಯು ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಹಾಗೂ ಗಣಿತ ಕ್ಷೇತ್ರಗಳಲ್ಲಿ ಛಾಪು ಮೂಡಿಸಿರುವ ಒಟ್ಟು 60 ಮಹಿಳೆಯರನ್ನು ಆಸ್ಟ್ರೇಲಿಯಾದ 'ಸ್ಟೆಮ್ ಸೂಪರ್‌ಸ್ಟಾರ್'ಗಳನ್ನಾಗಿ ಆಯ್ಕೆ ಮಾಡಿದೆ. ಇದರಲ್ಲಿ ಭಾರತ ಮೂಲದ ಮೂವರು ಇದ್ದಾರೆ' ಎಂದು 'ದಿ ಆಸ್ಟ್ರೇಲಿಯಾ ಟುಡೇ' ಬುಧವಾರ ವರದಿ ಮಾಡಿದೆ.

'ನಾಲ್ಕೂ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರಿಗೆ ಸಮಾಜದಲ್ಲಿ ಮನ್ನಣೆ ಒದಗಿಸುವ ಹಾಗೂ ಲಿಂಗ ತಾರತಮ್ಯ ತೊಡೆದು ಹಾಕುವ ಉದ್ದೇಶದಿಂದ ಎಸ್‌ಟಿಎ ಪ್ರತಿ ವರ್ಷವೂ 60 ಮಂದಿ ಸಾಧಕಿಯರನ್ನು 'ಸ್ಟೆಮ್ ಸೂಪರ್‌ಸ್ಟಾರ್'ಗಳನ್ನಾಗಿ ಆಯ್ಕೆ ಮಾಡುತ್ತದೆ. ಈ ಬಾರಿ ಭಾರತ ಮೂಲದ ನೀಲಿಮಾ ಕಡಿಯಾಳ, ಡಾ.ಅರ್ನ ಬಾಬುರಮಣಿ ಹಾಗೂ ಡಾ.ಇಂದ್ರಾಣಿ ಮುಖರ್ಜಿ ಅವರು ಈ ಗೌರವಕ್ಕೆ ಪಾತ್ರರಾಗಿದ್ದಾರೆ' ಎಂದು ಪತ್ರಿಕೆಯು ವರದಿಯಲ್ಲಿ ತಿಳಿಸಿದೆ.

ನೀಲಿಮಾ ಅವರು ಚಾಲೆಂಜರ್ ಲಿಮಿಟೆಡ್ ಕಂಪನಿಯಲ್ಲಿ ಐಟಿ ಪ್ರೋಗ್ರಾಂ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. ಈ ಕ್ಷೇತ್ರದಲ್ಲಿ 15 ವರ್ಷಕ್ಕೂ ಹೆಚ್ಚಿನ ಸೇವಾ ಅನುಭವ ಹೊಂದಿದ್ದಾರೆ. .

### ಮದರಸಾದಲ್ಲಿ ಸ್ಫೋಟ: 10 ಸಾವು

ಇಸ್ಲಾಮಾಬಾದ್ (ಎಎಫ್‌ಪಿ): ಎಬಕ್ ನಗರದ ಮದರಸಾವೊಂದರಲ್ಲಿ ಬುಧವಾರ ಸ್ಫೋಟ ಸಂಭವಿಸಿದ್ದು, 10 ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ ಎಂದು ತಾಲಿಬಾನ್ ಸರ್ಕಾರ ಹೇಳಿದೆ.

'ದಾಳಿಯ ಹೊಣೆಯನ್ನು ಯಾರೂ ಹೊತ್ತು ಕೊಂಡಿಲ್ಲ' ಎಂದು ಆಂತರಿಕ ಸಚಿವಾಲಯದ ವಕ್ತಾರರೊಬ್ಬರು ತಿಳಿಸಿದ್ದಾರೆ.

# ಪಾಟೀದಾರರ ಓಲೈಕೆಗೆ ‘ಖಾಪ್’ ಸಮೀಕರಣದ ಮೊರೆ

ಅಖಾಡದಲ್ಲೊಂದು ಸುತ್ತು

ಮಂಜುನಾಥ ಹೆಬ್ಬಾರ್

ಗಾಂಧಿನಗರ (ಗುಜರಾತ್): ಗುಜರಾತ್ ವಿಧಾನಸಭಾ ಚುನಾವಣೆಯ ಟಿಕೆಟ್ ಹಂಚಿಕೆಯ ವೇಳೆ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ‘ಕ್ಷತ್ರಿಯ–ದಲಿತ (ಹರಿಜನ)–ಆದಿವಾಸಿ–ಪಾಟೀದಾರ್ (ಪಟೇಲರು)’ ಸಮುದಾಯಗಳನ್ನೊಳಗೊಂಡ ‘ಖಾಪ್’ ಸೂತ್ರದ ಮೊರೆ ಹೋಗಿದ್ದು, ಈ ಜಾತಿ ಸಮೀಕರಣದಿಂದ ಭರಪೂರ ರಾಜಕೀಯ ಲಾಭ ಪಡೆಯುವ ಹವಣಿಕೆಯಲ್ಲಿವೆ.

ಕಾಂಗ್ರೆಸ್‌ನ ಮಾಧವಸಿನ್ಹ ಸೋಲಂಕಿ ಅವರು 1980 ಹಾಗೂ 1985ರ ಚುನಾವಣೆಗಳಲ್ಲಿ ‘ಖಾಮ್’ (ಕ್ಷತ್ರಿಯ–ದಲಿತ (ಹರಿಜನ)–ಆದಿವಾಸಿ–ಮುಸ್ಲಿಂ) ಕೂಟ ಕಟ್ಟಿ ಪಕ್ಷವು 142 ಹಾಗೂ 149 ಕ್ಷೇತ್ರಗಳಲ್ಲಿ ಗೆಲ್ಲುವಂತೆ ಮಾಡಿದ್ದರು. ಬಿಜೆಪಿ ಈ ಸಲ ಸೋಲಂಕಿ ಅವರ ಸೂತ್ರವನ್ನು ಸ್ವಲ್ಪ ಪರಿಷ್ಕರಿಸಿದೆ. ಮುಸ್ಲಿಮರ ಬದಲು ಪಾಟೀದಾರರನ್ನು ಈ ಗುಂಪಿಗೆ ಸೇರಿಸಿಕೊಂಡಿದೆ.

ರಾಜ್ಯದಲ್ಲಿ ಶೇ 9ರಷ್ಟು ಜನಸಂಖ್ಯೆ ಇರುವ ಮುಸ್ಲಿಮರಿಗೆ ಒಂದೂ ಕ್ಷೇತ್ರದಲ್ಲೂ ಕೇಸರಿ ಪಡೆ ಟಿಕೆಟ್ ನೀಡಿಲ್ಲ. 2017ರಲ್ಲಿ ಪಕ್ಷದ ಉತ್ತಮ ಸಾಧನೆಗೆ ಕಾರಣರಾಗಿದ್ದ ಪಟೇಲರನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನಕ್ಕೆ ‘ಕೈ’ ಪಡೆ ಪ್ರಯತ್ನಿಸಿರುವುದು ಟಿಕೆಟ್ ಹಂಚಿಕೆಯಲ್ಲಿ ಕಾಣಬಹುದು. ಪಕ್ಷವು ಆರು ಕ್ಷೇತ್ರಗಳಲ್ಲಿ ಮುಸ್ಲಿಂ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿದೆ. ಕಳೆದ ಸಲ 10 ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಅವಕಾಶ ನೀಡಿತ್ತು.

2017ರ ಚುನಾವಣೆಯಲ್ಲಿ ಕಮಲ ಪಾಳಯವು 34 ಕ್ಷೇತ್ರಗಳಲ್ಲಿ ಪಾಟೀದಾರರಿಗೆ ಟಿಕೆಟ್ ನೀಡಿತ್ತು. ಈ ಸಲ 45ಕ್ಕೆ ಏರಿದೆ. ಕಳೆದ ಚುನಾವಣೆಯ ಒಬಿಸಿ ಸಮುದಾಯದ 39 ಮಂದಿಯನ್ನು ಹುರಿಯಾಳುಗಳನ್ನಾಗಿ ಮಾಡಿದ್ದರೆ, ಈ ಸಲ 59ಕ್ಕೆ ಏರಿದೆ. ಕಾಂಗ್ರೆಸ್ ಸಹ ಸಮೀಕರಣದಲ್ಲಿ ಹಿಂದೆ ಬಿದ್ದಿಲ್ಲ.

**ಟಿಕೆಟ್ ಹಂಚಿಕೆ ಲೆಕ್ಕಾಚಾರ**

| ಜಾತಿ | ಕಾಂಗ್ರೆಸ್ | ಬಿಜೆಪಿ |
|---|---|---|
| ಒಬಿಸಿ | 48 | 59 |
| ಪಾಟೀದಾರ್ | 42 | 45 |
| ಎಸ್‌ಟಿ | 27 | 27 |
| ಕ್ಷತ್ರೀಯ | 26 | 13 |
| ಎಸ್‌ಸಿ | 13 | 13 |
| ಬ್ರಾಹ್ಮಣ | 8 | 14 |
| ಮುಸ್ಲಿಂ | 6 | 0 |
| ಜೈನ | 2 | 4 |

**ಗುಜರಾತ್‌ನ ಜಾತಿ ಲೆಕ್ಕಾಚಾರ (ಶೇ)**

| | |
|---|---|
| 22 | ಒಬಿಸಿ (ಕೋಲಿ ಮತ್ತು ಠಾಕೂರ್) |
| 20 | ಒಬಿಸಿ (ಕೋಲಿ ಮತ್ತು ಠಾಕೂರ್ ಹೊರತುಪಡಿಸಿ) |
| 16 | ಪರಿಶಿಷ್ಟ ಪಂಗಡ (ಎಸ್‌ಟಿ) |
| 15 | ಪಾಟೀದಾರ್ |
| 10 | ಮುಸ್ಲಿಂ |
| 7 | ಪರಿಶಿಷ್ಟ ಜಾತಿ (ಎಸ್‌ಸಿ) |
| 10 | ಇತರೆ |

ಒಬಿಸಿ ಸಮುದಾಯದ 48 ಹಾಗೂ ಪಾಟೀದಾರ್ ಸಮುದಾಯದ 42 ಮಂದಿಯನ್ನು ಕಣಕ್ಕೆ ಇಳಿಸಿದೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು ಕಂಡ ಬೆನ್ನಲ್ಲೇ, ಆಮ್ ಆದ್ಮಿ ಪಕ್ಷ (ಎಎಪಿ) ಸಹ ಜಾತಿ ಸಮೀಕರಣದತ್ತ ಒಲವು ತೋರಿತ್ತು. 2021ರ ಸೂರತ್ ಸ್ಥಳೀಯ ಸಂಸ್ಥೆಯ ಚುನಾವಣೆಯಲ್ಲಿ ಪಾಟೀದಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಣಕ್ಕಿಳಿಸಿ 27 ವಾರ್ಡ್‌ಗಳಲ್ಲಿ ಗೆದ್ದು ಯಶಸ್ಸು ಗಳಿಸಿತ್ತು. ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಹಂಚಿಕೆಯಲ್ಲಿ ಪಟೇಲ್ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ ಹೆಚ್ಚಿನ ಮನ್ನಣೆ ನೀಡಿದೆ. ಒಬಿಸಿ ಸಮುದಾಯಕ್ಕೆ ಸೇರಿದ ಈಸುದಾನ್ ಗಢವಿ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿ ಆ ಸಮುದಾಯವನ್ನು ಸೆಳೆಯುವ ಯತ್ನ ಮಾಡಿದೆ.

ಪಾಟೀದಾರ್ ಸಮುದಾಯವು ಗುಜರಾತ್‌ನಲ್ಲಿ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬಲಾಢ್ಯವಾಗಿದೆ. ರಾಜ್ಯದ ಒಟ್ಟು 6 ಕೋಟಿ ಜನಸಂಖ್ಯೆಯಲ್ಲಿ ಪಟೇಲ್ ಸಮುದಾಯದವರು ಶೇ 14ರಷ್ಟು ಇದ್ದಾರೆ ಎಂದು ಅಂದಾಜಿಸಲಾಗಿದೆ. ರಾಜ್ಯದ 182 ವಿಧಾನಸಭಾ ಕ್ಷೇತ್ರಗಳ ಪೈಕಿ 60ರಿಂದ 65 ಕ್ಷೇತ್ರಗಳಲ್ಲಿ ಪಟೇಲರು ನಿರ್ಣಾಯಕರಾಗುವಷ್ಟು ಸಂಖ್ಯೆಯಲ್ಲಿದ್ದಾರೆ. 1980ರ ದಶಕದವರೆಗೆ ಕಾಂಗ್ರೆಸ್ ಪಕ್ಷದ ಜತೆಗೆ ಈ ಸಮುದಾಯ ಇತ್ತು. ಆದರೆ, ಕಾಂಗ್ರೆಸ್ ಪಕ್ಷವು ‘ಖಾಮ್’ ಸಮೀಕರಣಕ್ಕೆ ಒತ್ತು ನೀಡಿದ ನಂತರ ಈ ಸಮುದಾಯವು ಬಿಜೆಪಿಯತ್ತ ವಾಲಿತು.

ತಮ್ಮ ಸಮುದಾಯಕ್ಕೆ ಇತರ ಹಿಂದುಳಿದ ವರ್ಗಗಳಡಿ ಮೀಸಲಾತಿ ನೀಡಬೇಕು ಎಂದು ಪಾಟೀದಾರರು 2015ರಲ್ಲಿ ಚಳವಳಿ ಆರಂಭಿಸುವ ಮೂಲಕ ಸಮುದಾಯದ ಬಿಜೆಪಿ ನಿಷ್ಠೆಯ ತಳಪಾಯವು ಅಲುಗಾಡಿತು. ಈ ದೀರ್ಘಕಾಲದ ಹೋರಾಟದ ನೇತೃತ್ವ ವಹಿಸಿದ್ದು ಹಾರ್ದಿಕ್ ಪಟೇಲ್. ಈ ಹೋರಾಟದ ಮೂಲಕವೇ ಅವರು ಪ್ರವರ್ಧಮಾನಕ್ಕೆ ಬಂದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಾರ್ದಿಕ್ ಪಟೇಲ್, ಒಬಿಸಿ ಮುಖಂಡ ಅಲ್ಪೇಶ್ ಠಾಕೂರ್ ಹಾಗೂ ದಲಿತ ನಾಯಕ ಜಿಗ್ನೇಶ್ ಮೇವಾನಿ ಅವರು ಕಾಂಗ್ರೆಸ್‌ಗೆ ವೇಗ ಹಾಗೂ ಹುರುಪು ತುಂಬಿದರು.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಪಾಟೀದಾರ್ ಮೀಸಲು ಹೋರಾಟವನ್ನು ಬಹುವಾಗಿ ನೆಚ್ಚಿಕೊಂಡಿತು. ತ್ರಿವಳಿ ನಾಯಕರ ಬಲದ ನೆರವಿನಿಂದ ಕಾಂಗ್ರೆಸ್ ಪಕ್ಷವು ಬಿಜೆಪಿಗೆ ಭಾರಿ ಸ್ಪರ್ಧೆ ಒಡ್ಡಿತು. ಪರಿಣಾಮವಾಗಿ ಬಿಜೆಪಿ ಸೀಟುಗಳ ಸಂಖ್ಯೆ 99ಕ್ಕೆ ಕುಸಿಯಿತು. ಮೇಲ್ಜಾತಿಗಳ ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ನೀಡುವ ತೀರ್ಮಾನದಿಂದಾಗಿ ಪಾಟೀದಾರ್ ಸಮುದಾಯದ ಮತಗಳು ತಮ್ಮ ಪಕ್ಷಕ್ಕೆ ಮರಳಬಹುದು ಎಂಬುದು ಬಿಜೆಪಿಯ ಲೆಕ್ಕಾಚಾರ. ಶೇ 10ರಷ್ಟು ಮೀಸಲಾತಿ ನೀಡುವುದಾಗಿ ಗುಜರಾತ್ ಸರ್ಕಾರ ಈಗಾಗಲೇ ಘೋಷಿಸಿದೆ.

ಈ ವರ್ಷ ಬಿಜೆಪಿಗೆ ಸೇರಿರುವ ಹಾರ್ದಿಕ್ ಪಟೇಲ್, ‘ಕೇಂದ್ರದ ನಿರ್ಧಾರದಿಂದಾಗಿ ಗುಜರಾತ್‌ನ ಪಟೇಲ್ ಸಮುದಾಯದ ಹಲವು ಸಮಸ್ಯೆಗಳು ಪರಿಹಾರ ಆಗಿವೆ. ಹಾಗಾಗಿ, ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯೇ ಗೆಲ್ಲುವಂತೆ ಈ ಸಮುದಾಯ ನೋಡಿಕೊಳ್ಳಲಿದೆ’ ಎಂದು ಹೇಳಿಕೊಂಡಿದ್ದರು.

ಕಳೆದ ವರ್ಷ ಇಡೀ ಸಂಪುಟ ಬದಲಾವಣೆಯ ಸಂದರ್ಭದಲ್ಲಿ, ಪಾಟೀದಾರ್ ಸಮುದಾಯಕ್ಕೆ ಏಳು ಸಚಿವ ಸ್ಥಾನ ನೀಡುವ ಮೂಲಕ, ಸಮುದಾಯವನ್ನು ಸಮಾಧಾನಪಡಿಸಲು ಬಿಜೆಪಿ ಯತ್ನಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇತರೆ ಹಿಂದುಳಿದ ವರ್ಗಗಳ ಆರು ಶಾಸಕರಿಗೆ, ಪರಿಶಿಷ್ಟ ಪಂಗಡದ ಆರು ಜನರಿಗೆ ಮತ್ತು ಪರಿಶಿಷ್ಟ ಜಾತಿಗಳ ಮೂವರಿಗೆ ಸಚಿವ ಸ್ಥಾನ ನೀಡಿ ಈ ಸಮುದಾಯಗಳನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನ ಮಾಡಿತ್ತು. ಅದರ ಮುಂದುವರಿಕೆಯ ಭಾಗವಾಗಿ ಟಿಕೆಟ್ ಹಂಚಿಕೆಯಲ್ಲಿ ‘ಖಾಪ್’ ಸೂತ್ರ ಅನುಸರಿಸಿದೆ.

# ಗುಜರಾತ್: ಮೊದಲ ಹಂತದ ಮತದಾನ ಇಂದು

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭೆಗೆ ಗುರುವಾರ (ಡಿ.1) ಮೊದಲ ಹಂತದ ಮತದಾನ ನಡೆಯಲಿದೆ. ಸೌರಾಷ್ಟ್ರ, ಕಛ್, ರಾಜ್ಯದ ದಕ್ಷಿಣ ಭಾಗ ಒಳಗೊಂಡ 19 ಜಿಲ್ಲೆಗಳ 89 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. 70 ಮಹಿಳೆಯರು ಸೇರಿ ಒಟ್ಟಾರೆ 788 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

14,382 ಮತಗಟ್ಟೆಗಳಲ್ಲಿ ಬೆಳಿಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆವರೆಗೆ ಮತದಾನ ನಡೆಯಲಿದೆ. 2017ರ ಚುನಾವಣೆಯಲ್ಲಿ ಈ 89 ಕ್ಷೇತ್ರಗಳ ಪೈಕಿ 48 ಕ್ಷೇತ್ರಗಳನ್ನು ಆಡಳಿತಾರೂಢ ಬಿಜೆಪಿ ಗೆದ್ದುಕೊಂಡಿತ್ತು. 40 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು.

ಬಿಜೆಪಿ, ಕಾಂಗ್ರೆಸ್, ಎಎಪಿ ಸೇರಿದಂತೆ 36 ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. 339 ಪಕ್ಷೇತರ ಅಭ್ಯರ್ಥಿಗಳೂ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

ಗುರುವಾರ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಎಎಪಿ ಮುಖ್ಯಮಂತ್ರಿ ಅಭ್ಯರ್ಥಿ ಈಸುದಾನ್ ಗಢವಿ, ರಾಜ್ಯ ಘಟಕದ ಅಧ್ಯಕ್ಷ ಗೋಪಾಲ್ ಇಟಾಲಿಯಾ ಅವರು ಸ್ಪರ್ಧಿಸಿರುವ ಕ್ಷೇತ್ರಗಳೂ ಇವೆ. ಕ್ರಿಕೆಟಿಗ ರವೀಂದ್ರ ಜಡೇಜಾ ಅವರ ಪತ್ನಿ ರಿವಾ ಜಡೇಜಾ, ಶಾಸಕರಾದ ಹರ್ಷ ಸಂಘವಿ, ಪೂರ್ಣೇಶ್ ಮೋದಿ, ಪುರುಷೋತ್ತಮ್ ಸೋಳಂಕಿ ಅವರು ಮೊದಲ ಹಂತದ ಚುನಾವಣೆಯಲ್ಲಿ ಸ್ಪರ್ಧಿಸಿರುವ ಪ್ರಮುಖರಾಗಿದ್ದಾರೆ.

ರಾಜ್ಯದ ಒಟ್ಟು 4.91 ಕೋಟಿ ಮತದಾರರ ಪೈಕಿ 2.39 ಕೋಟಿ ಮತದಾರರು ಮೊದಲ ಹಂತದಲ್ಲಿ ಹಕ್ಕು ಚಲಾವಣೆಗೆ ಸಜ್ಜಾಗಿದ್ದಾರೆ. ಇದೇ 5ರಂದು ಎರಡನೇ ಹಂತದ ಮತದಾನ ನಡೆಯಲಿದ್ದು, 8ರಂದು ಮತ ಎಣಿಕೆ ನಡೆಯಲಿದೆ.

ಪ್ರಜಾ ಮತ ಜನತಂತ್ರದ ಹಬ್ಬ 2022

ಮತಗಟ್ಟೆಗಳಿಗೆ ತೆರಳುವ ಮುನ್ನ, ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಚುನಾವಣೆಗೆ ನಿಯುಕ್ತಿಗೊಂಡಿರುವ ಸಿಬ್ಬಂದಿ ಇವಿಎಂ ಪರಿಶೀಲಿಸಿದರು –ಪಿಟಿಐ ಚಿತ್ರ

## ಆಯೋಗಕ್ಕೆ ಕಾಂಗ್ರೆಸ್ ದೂರು

ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಇನ್ನೂ ಮತದಾನ ನಡೆಯಬೇಕಿದೆ. ಆದರೆ ಅದಕ್ಕೂ ಮುನ್ನವೇ ಕೆಲವು ಸುದ್ದಿವಾಹಿನಿಗಳು ಸಮೀಕ್ಷಾ ವರದಿಗಳನ್ನು ಪ್ರಸಾರ ಮಾಡಿವೆ. ಈ ಸಂಬಂಧ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು ನೀಡಿದೆ.

ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ವಿವೇಕ್ ಟಂಖಾ ನೇತೃತ್ವದ ನಿಯೋಗವು ದೆಹಲಿಯಲ್ಲಿರುವ ಆಯೋಗದ ಕಚೇರಿಗೆ ಭೇಟಿ ನೀಡಿ, ದೂರು ಸಲ್ಲಿಸಿದೆ. ‘ಈ ಸಮೀಕ್ಷಾ ವರದಿಗಳನ್ನು ಕೆಲವು ಪಕ್ಷಗಳು ಪ್ರಾಯೋಜಿಸಿವೆ. ಅವುಗಳ ಪ್ರಾಯೋಜಕತ್ವದಲ್ಲಿ ಕೆಲವು ಸುದ್ದಿ ವಾಹಿನಿಗಳು ವರದಿ ಪ್ರಸಾರ ಮಾಡಿವೆ. ಇದು ಮತದಾನದ ಮೇಲೆ ಪ್ರಭಾವ ಬೀರುತ್ತದೆ’ ಎಂದು ಅವರು ದೂರಿನಲ್ಲಿ ವಿವರಿಸಿದ್ದಾರೆ.

ನಮ್ಮ ದೂರನ್ನು ಆಯೋಗವು ಗಂಭೀರವಾಗಿ ಪರಿಗಣಿಸಿದೆ. ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

## ನುಡಿ–ಕಿಡಿ

ಈ ಬಾರಿ ಗುಜರಾತ್‌ನಲ್ಲಿ ಮತದಾನವು ಧರ್ಮ ಮತ್ತು ಜಾತಿಯ ಆಧಾರದಲ್ಲಿ ನಡೆಯುವುದಿಲ್ಲ. ಬದಲಿಗೆ ನಿರುದ್ಯೋಗ, ಬೆಲೆ ಏರಿಕೆ, ಬಡತನ, ಅಭಿವೃದ್ಧಿಯು ಚುನಾವಣೆಯ ವಿಷಯಗಳಾಗಿವೆ

**ಜಿಗ್ನೇಶ್ ಮೇವಾನಿ,** ಗುಜರಾತ್ ಕಾಂಗ್ರೆಸ್ ಉಪಾಧ್ಯಕ್ಷ



ಗುಜರಾತ್ ಚುನಾವಣೆಯಲ್ಲಿ ಬಿಜೆಪಿ ಅಸಾಧಾರಣ ಗೆಲುವನ್ನು ದಾಖಲಿಸಲಿದೆ. ನಮ್ಮ ಪಕ್ಷ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಲ್ಲಿ ಜನರು ವಿಶ್ವಾಸ ಇರಿಸಿದ್ದಾರೆ. ಬಹುಶಃ ಈ ಚುನಾವಣೆಯಲ್ಲಿ ಎಎಪಿ ಖಾತೆ ತೆರೆಯುವುದೇ ಇಲ್ಲ

**ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಮಹಾತ್ಮ ಗಾಂಧಿ ಮತ್ತು ಸರ್ದಾರ್ ಪಟೇಲರು 20ನೇ ಶತಮಾನದಲ್ಲಿ ಗುಜರಾತ್‌ನ ಹೆಮ್ಮೆಯಾಗಿದ್ದರು. 21ನೇ ಶತಮಾನದಲ್ಲಿ ಮೋದಿ ಅವರು ಗುಜರಾತ್‌ನ ಹೆಮ್ಮೆಯಾಗಿದ್ದಾರೆ. ಅಂತಹವರನ್ನು ತೆಗಳುವ ಕಾಂಗ್ರೆಸ್‌ಗೆ ಗುಜರಾತಿಗಳು ತಕ್ಕಪಾಠ ಕಲಿಸಲಿದ್ದಾರೆ

**ರಾಜನಾಥ್ ಸಿಂಗ್,** ಕೇಂದ್ರ ರಕ್ಷಣಾ ಸಚಿವ

## ಪಿಎಫ್‌ಐ ನಿಷೇಧ ಪ್ರಶ್ನಿಸಿದ ಅರ್ಜಿ ವಜಾ

ಒಂದನೇ ಪುಟದಿಂದ...

ಅರ್ಜಿದಾರರ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ್, ‘ಸಂಘಟನೆಯನ್ನು ಕಾನೂನು ಬಾಹಿರ ಎಂದು ಘೋಷಿಸಿರುವುದಕ್ಕೆ ಮತ್ತು ನಿಷೇಧವು ತಕ್ಷಣದಿಂದಲೇ ಅನ್ವಯವಾಗಲಿದೆ ಎಂಬುದಕ್ಕೆ ಆದೇಶದಲ್ಲಿ ಪ್ರತ್ಯೇಕ ಕಾರಣಗಳನ್ನು ನೀಡಿಲ್ಲ. ಪಿಎಫ್‌ಐ ತನ್ನ ವಾದ ಮಂಡಿಸಲು ಅವಕಾಶ ನೀಡದೇ ಏಕಾಏಕಿ ನಿಷೇಧದ ಆದೇಶ ಹೊರಡಿಸಲಾಗಿದೆ. ಇದು ಸಂವಿಧಾನ ವಿರೋಧಿ ಕ್ರಮ. ಆದ್ದರಿಂದ, ಈ ಆದೇಶವನ್ನು ರದ್ದುಗೊಳಿಸಬೇಕು’ ಎಂದು ಕೋರಿದ್ದರು.

‘ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಪಿಎಫ್‌ಐ ಸಂಘಟನೆ ದೇಶವಿರೋಧಿ ಕೃತ್ಯಗಳನ್ನು ನಡೆಸುತ್ತಿದೆ. ಭಯೋತ್ಪಾದಕ ಸಂಘಟನೆಗಳ ಜೊತೆ ಕೈ ಜೋಡಿಸಿ ದೇಶದ ವಿವಿಧೆಡೆ ಹಿಂಸಾತ್ಮಕ ಚಟುವಟಿಕೆಗಳನ್ನು ತೊಡಗಿದೆ. ಇಂತಹ ಕೃತ್ಯಗಳಿಗೆ ಇಂಬು ನೀಡುತ್ತಿದೆ. ಸಂಘಟನೆಯ ಕಾರ್ಯಕರ್ತರು ದೇಶದಲ್ಲಿ ಭಯದ ವಾತಾವರಣ ಸೃಷ್ಟಿ ಮಾಡುತ್ತಿದ್ದಾರೆ’ ಎಂಬ ಅಂಶಗಳನ್ನು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟಿದ್ದರು.

‘ಎಲ್ಲಾ ಆಧಾರಗಳನ್ನು ಸಮಗ್ರವಾಗಿ ಸಂಗ್ರಹಿಸಿದ ಬಳಿಕವೇ ನಿಷೇಧ ಹೇರಲಾಗಿದೆ. ಕಾರಣವಿಲ್ಲದೆ ನಿಷೇಧ ಮಾಡಲಾಗಿದೆ ಎಂಬ ವಾದದಲ್ಲಿ ಕಿಂಚಿತ್ತೂ ಹುರುಳಿಲ್ಲ. ನಿಷೇಧ ಕಾನೂನು ಬಾಹಿರವಾಗಿಯೇನೂ ಇಲ್ಲ. ಆದ್ದರಿಂದ, ಅರ್ಜಿಯನ್ನು ಪರಿಗಣಿಸಬಾರದು’ ಎಂದು ಪ್ರತಿಪಾದಿಸಿದ್ದರು.

ಕೇಂದ್ರ ಸರ್ಕಾರದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಂ.ಬಿ.ನರಗುಂದ ಹಾಗೂ ಡೆಪ್ಯೂಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ತುಷಾರ್ ಮೆಹ್ತಾ ಅವರಿಗೆ ಸಹಕರಿಸಿದ್ದರು.

## ಜಗನ್ ಚಿಕ್ಕಪ್ಪನ ಹತ್ಯೆ: ಕಿರುಕುಳಕ್ಕೆ ಹೆದರಿ ತನಿಖೆ ನಿಲ್ಲಿಸಿದ ಸಿಬಿಐ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ ಅವರ ತಮ್ಮ ಹಾಗೂ ಹಾಲಿ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ಅವರ ಚಿಕ್ಕಪ್ಪ ವೈ.ಎಸ್. ವಿವೇಕಾನಂದ ರೆಡ್ಡಿ ಹತ್ಯೆ ಪ್ರಕರಣದ ಹೆಚ್ಚುವರಿ ತನಿಖೆ ಕೈಗೊಂಡಿದ್ದ ಸಿಬಿಐ, ಕಿರುಕುಳಕ್ಕೆ ಹೆದರಿ ತನಿಖೆ ಸ್ಥಗಿತಗೊಳಿಸಿತ್ತು’ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಈ ಸಂಬಂಧ ವಿವೇಕಾನಂದ ರೆಡ್ಡಿ ಅವರ ಪುತ್ರಿ ಹಾಗೂ ಪತ್ನಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಎಂ.ಎಂ.ಸುಂದರೇಶ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಪ್ರಕರಣದ ವಿಚಾರಣೆಯನ್ನು ಕಡಪಾದಿಂದ ಹೈದರಾಬಾದ್‌ನ ನ್ಯಾಯಾಲಯಕ್ಕೆ ವರ್ಗಾಯಿಸಿದೆ.

‘ಹೈಕೋರ್ಟ್ ಆದೇಶದ ಬೆನ್ನಲ್ಲೇ ಸಿಬಿಐ, ಪ್ರಕರಣದ ತನಿಖೆ ಮುಂದುವರಿಸಿತ್ತು. ಸಿಬಿಐ ಅಧಿಕಾರಿಗಳ ವಿರುದ್ಧ ಆಂಧ್ರ ಪೊಲೀಸರು ದಾಖಲಿಸಿದ್ದ ಎಫ್‌ಐಆರ್‌ಗೆ ಹೈಕೋರ್ಟ್ ತಡೆ ನೀಡಿತ್ತು. ತನಿಖಾಧಿಕಾರಿಗಳ ವಿರುದ್ಧವೇ ಸುಳ್ಳು ಆರೋಪಗಳನ್ನು ಮಾಡಲಾಗಿತ್ತು. ಕ್ಷುಲ್ಲಕ ದೂರುಗಳನ್ನು ದಾಖಲಿಸಲಾಗಿತ್ತು. ಹೀಗಾಗಿ ಸಿಬಿಐ ತನಿಖೆ ನಡೆಸುವುದನ್ನು ನಿಲ್ಲಿಸಿತ್ತು. ಈ ಪ್ರಕರಣದಲ್ಲಿ ಪಾರದರ್ಶಕ ತನಿಖೆ ನಡೆದಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಸಂಬಂಧ ಮೃತರ ಮಗಳು ಸುನೀತಾ ನಾರೆಡ್ಡಿ ಹಾಗೂ ಅವರ ತಾಯಿ ಆತಂಕ ವ್ಯಕ್ತಪಡಿಸಿರುವುದರಲ್ಲೂ ಅರ್ಥವಿದೆ’ ಎಂದು ನ್ಯಾಯಪೀಠ ಹೇಳಿದೆ.

ಬೆದರಿಕೆ ಇದ್ದಿದ್ದರಿಂದ ಪ್ರಕರಣದ ಪ್ರಮುಖ ಸಾಕ್ಷಿಗಳಾಗಿದ್ದ ಶೇಖ್ ದಸ್ತಗಿರಿ ಹಾಗೂ ರಂಗಣ್ಣ ಎಂಬುವರಿಗೆ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು. ಪ್ರಕರಣದ ಮುಖ್ಯ ಸಾಕ್ಷಿಯಾಗಿದ್ದ ಕೆ.ಗಂಗಾಧರ ರೆಡ್ಡಿ ಅವರು ಸ್ವಯಂ ಪ್ರೇರಿತವಾಗಿ ಹೇಳಿಕೆ ನೀಡಲು ಮುಂದೆ ಬಂದಿದ್ದರು. ಹೇಳಿಕೆ ದಾಖಲಿಸುವ ಮುನ್ನವೇ ನಿಗೂಢ ರೀತಿಯಲ್ಲಿ ಮೃತಪಟ್ಟಿದ್ದರು ಎಂಬುದನ್ನು ನ್ಯಾಯಪೀಠ ಗಮನಿಸಿತು.

## ಗುಜರಾತ್: ₹478 ಕೋಟಿ ಮೌಲ್ಯದ ಮಾದಕ ವಸ್ತು ವಶ

ಅಹಮದಾಬಾದ್ (ಪಿಟಿಐ): ಗುಜರಾತ್ ಭಯೋತ್ಪಾದನಾ ನಿಗ್ರಹ ದಳವು (ಎಟಿಎಸ್) ವಡೋದರ ನಗರದ ಹೊರವಲಯದಲ್ಲಿರುವ ಉತ್ಪಾದನಾ ಘಟಕದಲ್ಲಿ ಶೋಧ ನಡೆಸಿ, ₹478.65 ಕೋಟಿ ಮೌಲ್ಯದ ಮೆಫೆಡ್ರೋನ್ ಮಾದಕ ವಸ್ತುವನ್ನು ವಶಕ್ಕೆ ಪಡೆದಿದೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದರು.

‘ಮಂಗಳವಾರ ರಾತ್ರಿ ಇಲ್ಲಿನ ಸಣ್ಣ ಕಾರ್ಖಾನೆ–ಗೋದಾಮಿನ ಮೇಲೆ ದಾಳಿ ನಡೆಸಲಾಗಿತ್ತು. ಈ ವೇಳೆ ಸ್ಥಳದಲ್ಲಿದ್ದ ಐವರನ್ನು ಬಂಧಿಸಲಾಗಿದೆ. ಆರೋಪಿಗಳು ಕಳೆದ 45 ದಿನಗಳಿಂದ ಕಾರ್ಖಾನೆಯಲ್ಲಿ ಮೆಫೆಡ್ರೋನ್ ಮಾದಕವಸ್ತುವನ್ನು ತಯಾರಿಸುತ್ತಿದ್ದರು ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ’ ಎಂದು ಮಾಹಿತಿ ನೀಡಿದರು.

‘ಬಂಧಿತರನ್ನು ಸೌಮಿಲ್ ಪಾಠಕ್, ಶೈಲೇಶ್ ಕಟಾರಿಯಾ, ವಿನೋದ್ ನಿಜಾಮಾ, ಮಹಮ್ಮದ್ ಶಫಿ ದೇವನ್ ಮತ್ತು ಭರತ್ ಚೌದಾ ಎಂದು ಗುರುತಿಸಲಾಗಿದೆ. ಶೋಧ ಕಾರ್ಯಾಚರಣೆ ವೇಳೆ 63.6 ಕೆ.ಜಿ ಮೆಫೆಡ್ರೋನ್ ಮತ್ತು 80 ಕೆ.ಜಿ ಕಚ್ಚಾ ಪದಾರ್ಥಗಳು ಮತ್ತು ಮಾದಕವಸ್ತು ಉತ್ಪಾದನೆಗೆ ಬಳಸುತ್ತಿದ್ದ ತಂತ್ರಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಎಟಿಎಸ್ ಪ್ರಕಟಣೆಯಲ್ಲಿ ತಿಳಿಸಿದೆ.

### ಪಂಜಾಬ್: ಕನಿಷ್ಠ ಕೂಲಿಗೆ ಆಗ್ರಹಿಸಿ ರೈತರಿಂದ ಮುಷ್ಕರ

# ಸಿ.ಎಂ ನಿವಾಸದ ಎದುರು ಬೃಹತ್ ಪ್ರತಿಭಟನೆ

ಚಂಡೀಗಡ: ದಿನಗೂಲಿಯನ್ನು ಕನಿಷ್ಠ ₹700ಗೆ ಏರಿಕೆ ಮಾಡಬೇಕು ಮತ್ತು 5 ಮಾರ್ಲಾ ಭೂಮಿ ಯೋಜನೆಯನ್ನು ಜಾರಿ ಮಾಡಬೇಕು ಎಂದು ಆಗ್ರಹಿಸಿ ರೈತರು ಮತ್ತು ಕಾರ್ಮಿಕ ಸಂಘಟನೆಗಳು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರ ಸಂಗ್ರೂರ್ ನಿವಾಸದ ಎದುರು ಬುಧವಾರ ಬೃಹತ್ ಪ್ರತಿಭಟನೆ ನಡೆಸಿದರು ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಪಟಿಯಾಲಾ ಬೈಪಾಸ್‌ನಲ್ಲಿ ಸೇರಿದ ಪ್ರತಿಭಟನಾಕಾರರು ಮಧ್ಯಾಹ್ನ 3 ಗಂಟೆ ಸುಮಾರಿಗೆ ಮುಖ್ಯಮಂತ್ರಿಗಳ ನಿವಾಸದತ್ತ ಸಾಗಿದರು. ಮುಖ್ಯಮಂತ್ರಿ ಅವರ ನಿವಾಸದ ಸಮೀಪ ಬರುತ್ತಿದ್ದಂತೆಯೇ ಪೊಲೀಸರು ತಡೆದರು. ಈ ವೇಳೆ ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ಸಂಘರ್ಷ ಏರ್ಪಟ್ಟು, ಪ್ರತಿಭಟನಕಾರರನ್ನು ನಿಯಂತ್ರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು.

ಧ್ವಜ ಹಿಡಿದು, ಘೋಷಣೆ ಕೂಗುತ್ತಿರುವ ರೈತರನ್ನು ಪೊಲೀಸರು ಥಳಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಆಮ್ ಆದ್ಮಿ ಪಕ್ಷ, ಪ್ರತಿಭಟನೆಯ ಹಿಂದೆ ಬಿಜೆಪಿ ಕೈವಾಡವಿದೆ ಎಂದು ಆರೋಪಿಸಿದೆ.

ಸದ್ಯ, ಮುಖ್ಯಮಂತ್ರಿ ಮಾನ್ ಗುಜರಾತ್ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಹಮದಾಬಾದ್‌ನಲ್ಲಿ ಪಕ್ಷದ ಪರ ಪ್ರಚಾರ ನಡೆಸುತ್ತಿದ್ದಾರೆ.

**ಬೇಡಿಕೆ ಏನು?:** ಮಹಾತ್ಮ ಗಾಂಧೀಜಿ ಉದ್ಯೋಗ ಖಾತರಿ ಯೋಜನೆ (ಎಂನರೇಗಾ) ಅಡಿಯಲ್ಲಿ ದಿನಗೂಲಿಯನ್ನು ಕನಿಷ್ಠ ₹700ಕ್ಕೆ ಏರಿಕೆ ಮಾಡಬೇಕು ಮತ್ತು 5 ಮಾರ್ಲಾ ಯೋಜನೆ ಜಾರಿ ಮಾಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸುತ್ತಿದ್ದಾರೆ. ಅಷ್ಟೇ ಅಲ್ಲದೆ ಗ್ರಾಮೀಣ ಸಹಕಾರ ಸಮಾಜಗಳಲ್ಲಿ ದಲಿತ ಸಮುದಾಯಕ್ಕೆ ಶೇಕಡ 33ರಷ್ಟು ಪ್ರಾತಿನಿಧ್ಯ ನೀಡಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟಿದ್ದಾರೆ.

**ಸಂಕ್ಷಿಪ್ತ ಸುದ್ದಿ**

## ಜ.19ರಿಂದ ಜೈಪುರ ಸಾಹಿತ್ಯ ಉತ್ಸವ

ನವದೆಹಲಿ (ಪಿಟಿಐ): 16ನೇ ಆವೃತ್ತಿಯ ಪ್ರತಿಷ್ಠಿತ ಜೈಪುರ ಸಾಹಿತ್ಯ ಉತ್ಸವವು 2023ರ ಜನವರಿ 19ರಿಂದ ಪ್ರಾರಂಭವಾಗಲಿದೆ.

‘ಈ ಬಾರಿಯ ಉತ್ಸವದಲ್ಲಿ ಕೊಳಲು ಮಾಂತ್ರಿಕ ಹರಿಪ್ರಸಾದ್ ಚೌರಾಸಿಯಾ, ಕವಿ ಜಾವೆದ್ ಅಖ್ತರ್, ರಾಜಕಾರಣಿ ಹಾಗೂ ಲೇಖಕ ಶಶಿ ತರೂರ್, ಲೇಖಲ ಅಕ್ಷಯ್ ಮುಖುಲ್, ಪುಲಿಟ್ಜರ್ ಪ್ರಶಸ್ತಿ ವಿಜೇತ ಕ್ಯಾರೊಲೊನ್ ಎಲ್ಕಿನ್ಸ್, ಪತ್ರಕರ್ತ ಪಿ.ಸಾಯಿನಾಥ್ ಸೇರಿದಂತೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಪ್ರಸಿದ್ಧರು ಭಾಗವಹಿಸಲಿದ್ದಾರೆ’ ಎಂದು ಆಯೋಜಕರು ಬುಧವಾರ ಮಾಹಿತಿ ನೀಡಿದರು.

## ನವಾಬ್ ಮಲ್ಲಿಕ್ ಜಾಮೀನು ಅರ್ಜಿ ವಜಾ

ಮುಂಬೈ (ಪಿಟಿಐ): ಭೂಗತ ಪಾತಕಿ ದಾವೂದ್ ಇಬ್ರಾಹಿಂ ಮತ್ತು ಆತನ ಸಹಚರರಿಂದ ಆಸ್ತಿ ಖರೀದಿ ಸಂಬಂಧ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಲಾಗಿರುವ ಎನ್‌ಸಿಪಿ ಮುಖಂಡ ನವಾಬ್ ಮಲ್ಲಿಕ್ ಅವರಿಗೆ ಬುಧವಾರ ಇಲ್ಲಿನ ವಿಶೇಷ ನ್ಯಾಯಾಲಯವು ಜಾಮೀನು ನಿರಾಕರಿಸಿದೆ.

ವಿಶೇಷ ನ್ಯಾಯಾಧೀಶ ಆರ್.ಎನ್. ರೋಖಡೆ ಅವರು ಮಲ್ಲಿಕ್ ಅವರ ಜಾಮೀನು ಅರ್ಜಿಯನ್ನು ವಜಾ ಮಾಡಿದರು. ನ್ಯಾಯಾಂಗ ಬಂಧನದಲ್ಲಿರುವ ಮಲ್ಲಿಕ್, ಸದ್ಯ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ಸುಕೇಶ್ ಪ್ರಕರಣ: ಪಿಂಕಿ ಇರಾನಿ ಬಂಧನ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದ ಪ್ರಮುಖ ಆರೋಪಿ ಸುಕೇಶ್ ಚಂದ್ರಶೇಖರ್‌ಗೆ ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಅವರನ್ನು ಪರಿಚಯಿಸಿದ್ದ ಪಿಂಕಿ ಇರಾನಿ ಅವರನ್ನು ದೆಹಲಿ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಮುಂಬೈ ನಿವಾಸಿಯಾಗಿರುವ ಇರಾನಿ ಅವರನ್ನು ಆರ್ಥಿಕ ಅಪರಾಧ ವಿಭಾಗದ ಅಧಿಕಾರಿಗಳು ತನಿಖೆ ನಡೆಸಲಿದ್ದಾರೆ. ಇರಾನಿ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತ ಹಿನ್ನೆಲೆಯಲ್ಲಿ ಆಕೆಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಅಲ್ಲಿ ಮೂರು ದಿನಗಳ ಪೊಲೀಸ ವಶಕ್ಕೆ ನೀಡಲಾಗಿದೆ. ತನಿಖೆ ನಡೆಯುತ್ತಿದೆ ಎಂದು ದೆಹಲಿ ಪೊಲೀಸ್ ವಕ್ತಾರ ಸುಮನ್ ನಲ್ವಾ ತಿಳಿಸಿದ್ದಾರೆ.

## ಬಂಧಿತ ನಾಲ್ವರು ಆಫ್ರಿಕನ್ನರ ಬಳಿ 2 ಲಕ್ಷ ಇಮೇಲ್ ಐಡಿ, 1 ಲಕ್ಷ ಮೊಬೈಲ್ ಸಂಖ್ಯೆ ಪತ್ತೆ

ಮುಂಬೈ (ಪಿಟಿಐ): ಉದ್ಯೋಗ ದಂಧೆ ನಡೆಸುತ್ತಿದ್ದ ಆರೋಪದ ಮೇಲೆ ಪುಣೆಯಲ್ಲಿ ಬಂಧಿಸಲಾದ ನಾಲ್ವರು ಆಫ್ರಿಕನ್ನರ ಬಳಿ 2 ಲಕ್ಷ ಇಮೇಲ್ ಐಡಿ ಮತ್ತು ಒಂದು ಲಕ್ಷಕ್ಕೂ ಹೆಚ್ಚು ದೂರವಾಣಿ ಸಂಖ್ಯೆಗಳ ಡಾಟಾ ನೋಡಿ ಸೈಬರ್ ಪೊಲೀಸರು ಬೆಚ್ಚಿದ್ದಾರೆ.

ಬಂಧಿತರು ಜಾಂಬಿಯಾ, ಉಗಾಂಡಾ, ನಮೀಬಿಯಾ ಮತ್ತು ಘಾನಾದ ಪ್ರಜೆಗಳಾಗಿದ್ದು, ಇಬ್ಬರು ಮಹಿಳೆಯರು ಸೇರಿ ನಾಲ್ವರು ವಿದ್ಯಾರ್ಥಿ ವೀಸಾದ ಮೇಲೆ ಭಾರತಕ್ಕೆ ಬಂದಿದ್ದರು. ಇವರಲ್ಲಿ ಕನಿಷ್ಠ ಮೂವರ ವೀಸಾ ಅವಧಿ ಮುಗಿದಿದೆ. ಬಂಧಿತರು 22–32 ವರ್ಷದೊಳಗಿನವರು ಎಂದು ಬುಧವಾರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಮೆರಿಕದಲ್ಲಿ ಕೆಲಸ ಕೊಡಿಸುವ ನೆಪದಲ್ಲಿ ಏಪ್ರಿಲ್ ಮತ್ತು ಜುಲೈನಲ್ಲಿ ವಂಚಕರು ₹ 26 ಲಕ್ಷ ದೋಚಿದ್ದಾರೆ ಎಂದು ವ್ಯಕ್ತಿಯೊಬ್ಬರು ಮುಂಬೈನ ಬಿಕೆಸಿ ಸೈಬರ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ತನಿಖೆ ಆರಂಭಿಸಿದ ಪೊಲೀಸರಿಗೆ, ಆರೋಪಿಗಳು ಬಳಸಿದ ವೈಫೈ ರೂಟರ್‌ನಿಂದಾಗಿ ಜಾಡು ಹಿಡಿಯಲು ಸಹಕಾರಿಯಾಯಿತು.

ಬಂಧಿತರಿಂದ 2ಲಕ್ಷ ಇಮೇಲ್ ಐಡಿ, 1,04,000 ಜನರ ಮೊಬೈಲ್ ಸಂಖ್ಯೆ, 13 ಮೊಬೈಲ್ ಫೋನ್, 4 ಲ್ಯಾಪ್‌ಟಾಪ್, ವಿವಿಧ ದೇಶಗಳ ಪಾಸ್‌ಪೋರ್ಟ್, 3 ಇಂಟರ್‌ನೆಟ್ ರೂಟರ್, ವಿವಿಧ ಬ್ಯಾಂಕ್‌ಗಳ 17 ಚೆಕ್‌ಬುಕ್, 115 ಸಿಮ್‌ಕಾರ್ಡ್, 40 ನಕಲಿ ರಬ್ಬರ್ ಸ್ಟಾಂಪ್, ಕನಿಷ್ಠ 6 ವಿವಿಧ ಬ್ಯಾಂಕ್‌ಗಳ ಖಾತೆಗಳನ್ನು ವಶಪಡಿಸಿಕೊಂಡಿದ್ದಾರೆ.

## ಕುಲಾಧಿಪತಿಯಾಗಿ ಶಿಕ್ಷಣ ತಜ್ಞರು: ಕರಡು ಮಸೂದೆಗೆ ಒಪ್ಪಿಗೆ

ತಿರುವನಂತಪುರ (ಪಿಟಿಐ): ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರ ಬದಲು ಉತ್ತಮ ಶಿಕ್ಷಣತಜ್ಞರನ್ನು ಕುಲಾಧಿಪತಿಯನ್ನಾಗಿ ನೇಮಿಸುವ ಮಸೂದೆಯನ್ನು ಡಿ.5ರಿಂದ ಪ್ರಾರಂಭವಾಗಲಿರುವ ವಿಧಾನಸಭೆ ಅಧಿವೇಶನದಲ್ಲಿ ಮಂಡಿಸಲು ಕೇರಳ ಸರ್ಕಾರ ಬುಧವಾರ ನಿರ್ಧರಿಸಿದೆ.

ಕುಲಪತಿಗಳ ನೇಮಕ ಕುರಿತು ರಾಜ್ಯದಲ್ಲಾಗುತ್ತಿರುವ ಬೆಳವಣಿಗೆಯ ಹಿನ್ನೆಲೆಯಲ್ಲಿ ಸರ್ಕಾರ ಈ ನಿರ್ಧಾರ ಮಾಡಿದೆ. ಮುಖ್ಯಮಂತ್ರಿ ಪಿಣರಾಯಿ ರಾಜನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಶಿಕ್ಷಣತಜ್ಞರನ್ನು ನೇಮಿಸುವ ಕರಡು ಮಸೂದೆಗೆ ಒಪ್ಪಿಗೆ ದೊರಕಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

# ಟಿಡಿಪಿ ಮಾಜಿ ಶಾಸಕನ ₹22 ಕೋಟಿ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಬಿಎಸ್‌–4 ವಾಹನ ಖರೀದಿಯಲ್ಲಿ ನಡೆದಿದೆ ಎನ್ನಲಾಗಿರುವ ಹಗರಣ ಸಂಬಂಧ ತನಿಖೆ ಕೈಗೊಂಡಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಆಂಧ್ರಪ್ರದೇಶದ ತೆಲುಗು ದೇಶಂ ಪಕ್ಷದ (ಟಿಡಿಪಿ) ಮಾಜಿ ಶಾಸಕ ಜೆ.ಸಿ.ಪ್ರಭಾಕರ ರೆಡ್ಡಿ, ಅವರ ಸಹವರ್ತಿ ಮತ್ತು ಅವರ ಒಡೆತನದ ಕಂಪನಿಗಳಿಗೆ ಸೇರಿದ ₹22 ಕೋಟಿಗೂ ಅಧಿಕ ಮೌಲ್ಯದ ಸ್ವತ್ತುಗಳನ್ನು ಬುಧವಾರ ಮುಟ್ಟುಗೋಲು ಹಾಕಿದೆ.

‘ಈ ಹಗರಣದಲ್ಲಿ ಅಶೋಕ್ ಲೇಲ್ಯಾಂಡ್ ಕಂಪನಿಯ ಪಾತ್ರದ ಕುರಿತು ತನಿಖೆ ಕೈಗೊಳ್ಳಲಾಗಿದೆ’ ಎಂದು ಇ.ಡಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ರೆಡ್ಡಿ ಅಧೀನದ ಜಟಾಧರ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ, ರೆಡ್ಡಿ ಅವರ ಸಹವರ್ತಿ ಸಿ.ಗೋಪಾಲ ರೆಡ್ಡಿ ಹಾಗೂ ಇತರರು ಅಶೋಕ್ ಲೇಲ್ಯಾಂಡ್ ಕಂಪನಿಯಿಂದ 2017ರ ಮಾರ್ಚ್‌ನಲ್ಲಿ ಬಿಎಸ್‌–3 ವಾಹನಗಳನ್ನು ಖರೀದಿಸಿದ್ದರು. ಬಳಿಕ ಅವುಗಳನ್ನು ಬಿಎಸ್‌–4 ವಾಹನಗಳೆಂದು ಅಕ್ರಮವಾಗಿ ನೋಂದಣಿ ಮಾಡಿದ್ದರು. ದರ ಪಟ್ಟಿಯನ್ನೂ ತಿರುಚಿದ್ದರು’ ಎಂದು ಹೇಳಲಾಗಿದೆ.

‘ನಾಗಲ್ಯಾಂಡ್, ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಕೆಲ ವಾಹನಗಳ ನೋಂದಣಿ ಮಾಡಿಸಿರುವ ಮಾಹಿತಿ ತನಿಖೆಯಿಂದ ಬಹಿರಂಗವಾಗಿತ್ತು’ ಎಂದೂ ತಿಳಿಸಿದೆ.

# ‘ಜನರ ಜೀವದೊಂದಿಗೆ ಚೆಲ್ಲಾಟ ಬೇಡ’

ನವದೆಹಲಿ (ಪಿಟಿಐ): ಬಿಹಾರದಲ್ಲಿ ನಕಲಿ ಫಾರ್ಮಾಸಿಸ್ಟ್‌ಗಳ ಹಾವಳಿ ಹೆಚ್ಚಾಗಿರುವುದನ್ನು ಗಮನಿಸಿರುವ ಸುಪ್ರೀಂ ಕೋರ್ಟ್, ‘ರಾಜ್ಯ ಸರ್ಕಾರವಾಗಲೀ ಅಥವಾ ಫಾರ್ಮಸಿ ಕೌನ್ಸಿಲ್ ಆಗಲೀ ಜನರ ಜೀವದೊಂದಿಗೆ ಚೆಲ್ಲಾಟವಾಡುವುದನ್ನು ಸಹಿಸಲಾಗದು’ ಎಂದು ಕಿಡಿಕಾರಿದೆ.

‘ಬಿಹಾರದಲ್ಲಿ ನಕಲಿ ಫಾರ್ಮಾಸಿಸ್ಟ್‌ಗಳು ಆಸ್ಪತ್ರೆಗಳು ಮತ್ತು ಔಷಧಿ ಅಂಗಡಿಗಳನ್ನು ನಡೆಸುತ್ತಿದ್ದಾರೆ’ ಎಂದು ಆರೋಪಿಸಿ ಪಟ್ನಾ ಹೈಕೋರ್ಟ್‌ನಲ್ಲಿ ಇತ್ಯರ್ಥಗೊಂಡಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ನ್ಯಾಯಮೂರ್ತಿಗಳಾದ ಎಂ.ಆರ್. ಷಾ ಮತ್ತು ಎಂ.ಎಂ. ಸುಂದರೇಶ್ ಅವರನ್ನೊಳಗೊಂಡ ನ್ಯಾಯಪೀಠವು ಮರು ವಿಚಾರಣೆಗೆ ಕೈಗೆತ್ತಿಕೊಂಡಿದೆ.

‘ನೋಂದಾಯಿತವಲ್ಲದ ಫಾರ್ಮಾಸಿಸ್ಟ್‌ನಿಂದ ಅಥವಾ ನಕಲಿ ಫಾರ್ಮಾಸಿಸ್ಟ್‌ನಿಂದ ಆಸ್ಪತ್ರೆಗಳು ಅಥವಾ ಔಷಧಾಲಯಗಳನ್ನು ನಡೆಸುವುದು ಅಂತಿಮವಾಗಿ ನಾಗರಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಬಿಹಾರದ ನಾಗರಿಕರ ಆರೋಗ್ಯ ಮತ್ತು ಜೀವನದೊಂದಿಗೆ ಚೆಲ್ಲಾಟವಾಡಲು ರಾಜ್ಯ ಸರ್ಕಾರಕ್ಕಾಗಲೀ ಅಥವಾ ಫಾರ್ಮಸಿ ಕೌನ್ಸಿಲ್‌ಗಾಗಲೀ ಅನುಮತಿ ನೀಡಲಾಗುವುದಿಲ್ಲ’ ಎಂದು ಪೀಠವು ಕಿಡಿಕಾರಿದೆ.

ಬಿಹಾರ ರಾಜ್ಯ ಫಾರ್ಮಸಿ ಕೌನ್ಸಿಲ್ ಬಗ್ಗೆ ಗಂಭೀರವಾದ ಆರೋಪಗಳನ್ನು ಮಾಡಿದ್ದರೂ ರಾಜ್ಯ ಸರ್ಕಾರವು ಯಾವುದೇ ಕ್ರಮವನ್ನು ಕೈಗೊಳ್ಳದಿರುವುದನ್ನು ಗಮನಿಸಿದ ನ್ಯಾಯಾಲಯವು, ಪಟ್ನಾ ಹೈಕೋರ್ಟಿನ ತೀರ್ಪಿಗೆ ಅಸಮ್ಮತಿ ವ್ಯಕ್ತಪಡಿಸಿ, ‘ಈ ಬಗ್ಗೆ ಫಾರ್ಮಸಿ ಕೌನ್ಸಿಲ್‌ಗೆ ವಿವರವಾದ ವರದಿ ಸಲ್ಲಿಸುವಂತೆ ಹೈಕೋರ್ಟ್ ನಿರ್ದೇಶನ ನೀಡಬೇಕಿತ್ತು’ ಎಂದೂ ಹೇಳಿದೆ.

ಇದಕ್ಕೆ ಸಂಬಂಧಿಸಿದ ಪಿಐಎಲ್ ಅನ್ನು ಪಟ್ನಾ ಹೈಕೋರ್ಟ್‌ಗೆ ವರ್ಗಾಯಿಸಿರುವ ಸುಪ್ರೀಂ ಕೋರ್ಟ್, ‘ರಾಜ್ಯ ಸರ್ಕಾರ ಮತ್ತು ಫಾರ್ಮಸಿ ಕೌನ್ಸಿಲ್‌ನಿಂದ ವಿವರವಾದ ವರದಿಯನ್ನು ಕೇಳಿ, ನಾಲ್ಕು ವಾರಗಳಲ್ಲಿ ಪ್ರಕರಣವನ್ನು ಇತ್ಯರ್ಥಗೊಳಿಸಬೇಕು’ ಎಂದೂ ನಿರ್ದೇಶನ ನೀಡಿದೆ.

ಮಾರ್ಕಸ್ ರ್‍ಯಾಶ್‌ಫೋರ್ಡ್ ಮಿಂಚು: ಟೂರ್ನಿಯಿಂದ ಹೊರಬಿದ್ದ ಇರಾನ್, ವೇಲ್ಸ್ ತಂಡಗಳು

# 16ರ ಘಟ್ಟಕ್ಕೆ ಇಂಗ್ಲೆಂಡ್, ಅಮೆರಿಕ

**ಅಲ್ ರಯಾನ್, ಕತಾರ್ (ಎಪಿ/ಎಎಫ್‌ಪಿ):** ಇಂಗ್ಲೆಂಡ್ ಹಾಗೂ ಅಮೆರಿಕ ತಂಡಗಳು ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಎಂಟರಘಟ್ಟಕ್ಕೆ ಲಗ್ಗೆಯಿಟ್ಟವು.

ಇಲ್ಲಿಯ ಅಹಮದ್ ಬಿನ್ ಅಲಿ ಕ್ರೀಡಾಂಗಣದಲ್ಲಿ ಮಂಗಳವಾರ ತಡರಾತ್ರಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಮಾರ್ಕಸ್ ರ್‍ಯಾಶ್‌ಫೋರ್ಡ್ ಗಳಿಸಿದ ಎರಡು ಗೋಲುಗಳ ಬಲದಿಂದ ಇಂಗ್ಲೆಂಡ್ ತಂಡವು 3–0ಯಿಂದ ವೇಲ್ಸ್ ತಂಡವನ್ನು ಪರಾಭವಗೊಳಿಸಿತು.

ಇಲ್ಲಿ ಗೋಲು ಗಳಿಸುವುದರೊಂದಿಗೆ ರ್‍ಯಾಶ್‌ಫೋರ್ಡ್ ಈ ಬಾರಿಯ ಟೂರ್ನಿಯಲ್ಲಿ ಅತಿ ಹೆಚ್ಚು (3) ಗೋಲು ಗಳಿಸಿದವರ ಪಟ್ಟಿಯಲ್ಲಿ ಒಬ್ಬರಾದರು.

ಇಂಗ್ಲೆಂಡ್ ತಂಡಕ್ಕಾಗಿ ಫಿಲ್ ಫೊಡೆನ್ ಮತ್ತೊಂದು ಗೋಲು ದಾಖಲಿಸಿದರು.

2020ರ ಯೂರೊ ಕಪ್ ಫೈನಲ್ ನಲ್ಲಿ ಇಟಲಿ ತಂಡದ ಎದುರು ಪೆನಾಲ್ಟಿ ಅವಕಾಶದಲ್ಲಿ ಗೋಲು ಗಳಿಸಲು ಸಾಧ್ಯವಾಗದಿದ್ದಕ್ಕೆ ಕಪ್ಪು ಆಟಗಾರರಾದ ರ್‍ಯಾಶ್‌ಫೋರ್ಡ್ ಮತ್ತು ಬುಕಾಯೊ ಸಾಕಾ ಅವರು ಭಾರಿ ಟೀಕೆಗಳನ್ನು ಎದುರಿಸಿದ್ದರು. ಅವರನ್ನು ಜನಾಂಗೀಯವಾಗಿ ನಿಂದಿಸಲಾಗಿತ್ತು. ಆ ಘಟನೆಯನ್ನು ಮರೆಸುವ ಆಟವನ್ನು ರ್‍ಯಾಶ್‌ಫೋರ್ಡ್ ಇಲ್ಲಿ ಆಡಿದರು.

ಈ ಪಂದ್ಯದ 50ನೇ ನಿಮಿಷದಲ್ಲಿ ದೊರೆತ ಫ್ರೀಕಿಕ್ ಅವಕಾಶದಲ್ಲಿ ರ್‍ಯಾಶ್‌ಫೋರ್ಡ್ ಚೆಂಡನ್ನು ಗುರಿ ಸೇರಿಸಿದರು. ಇದಾದ ಒಂದು ನಿಮಿಷದಲ್ಲೇ ಫೊಡೆನ್ ಕಾಲ್ಚಳಕ ತೋರಿದರು. 68ನೇ ನಿಮಿಷದಲ್ಲಿ ರ್‍ಯಾಶ್‌ಫೋರ್ಡ್ ಮತ್ತೊಂದು ಯಶಸ್ಸು ಸಾಧಿಸಿದರು.

ಈ ಗೆಲುವಿನೊಂದಿಗೆ ಇಂಗ್ಲೆಂಡ್ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿತು. ಭಾನುವಾರ ನಡೆಯುವ ಪ್ರೀಕ್ವಾರ್ಟರ್ ಹಣಾಹಣಿಯಲ್ಲಿ ಸೆನೆಗಲ್ ತಂಡವನ್ನು ಎದುರಿಸಲಿದೆ.

ಬಿ ಗುಂಪಿನಲ್ಲಿ ವೇಲ್ಸ್ ಕೊನೆಯ ಸ್ಥಾನಕ್ಕಿಳಿದು ವಿಶ್ವಕಪ್‌ನಿಂದ ಹೊರಬಿದ್ದಿತು. ಆ ತಂಡದ ನಾಯಕ ಗೆರೆತ್ ಬೇಲ್ ಅವರಿಗೆ ಇದು ಕೊನೆಯ ಪಂದ್ಯವಾಗುವ ಸಾಧ್ಯತೆಯಿದೆ.

**ಜನಾಂಗೀಯ ತಾರತಮ್ಯ; ಹೋರಾಟಕ್ಕೆ ಬೆಂಬಲ:** ಜನಾಂಗೀಯ ತಾರತಮ್ಯ ವಿರೋಧಿ ಹೋರಾಟಕ್ಕೆ ಬೆಂಬಲ ಸೂಚಿಸಲು ಇಂಗ್ಲೆಂಡ್ ಮತ್ತು ವೇಲ್ಸ್ ತಂಡದ ಆಟಗಾರರು ಪಂದ್ಯಕ್ಕೂ ಮೊದಲು ಮೊಣಕಾಲೂರಿ ಬೆಂಬಲ ಸೂಚಿಸಿದರು.

ಇಂಗ್ಲೆಂಡ್ ಕೋಚ್ ಗೆರೆತ್ ಸೌತ್‌ಗೇಟ್ ತಮ್ಮ ಆಟಗಾರರಿಗೆ ಈ ಮೊದಲೇ ಈ ಕುರಿತು ಸೂಚಿಸಿದ್ದರು. ಬಿ ಗುಂಪಿನ ಮೂರೂ ಪಂದ್ಯಗಳಲ್ಲಿ ಇಂಗ್ಲೆಂಡ್ ಆಟಗಾರರು ಮೊಣಕಾಲೂರಿ ನಿಂತು ಹೋರಾಟಕ್ಕೆ ಬೆಂಬಲ ಸೂಚಿಸಿದ್ದರು. ವೇಲ್ಸ್ ಆಟಗಾರರು ಮಂಗಳವಾರ ಈ ಕ್ರಮ ಅನುಸರಿಸಿದರು.

**ಬ್ಯಾನರ್‌ಗಳಿಗೆ ಅನುಮತಿ:** ಇರಾನ್‌ನಲ್ಲಿ ನಡೆಯುತ್ತಿರುವ ಮಹಿಳೆಯರ ಪ್ರತಿಭಟನೆಯನ್ನು ಬೆಂಬಲಿಸಿ ಪ್ರದರ್ಶಿಸುವ ಬ್ಯಾನರ್ ಮತ್ತಿತರ ವಸ್ತುಗಳ ಪ್ರದರ್ಶನಕ್ಕೆ ಫಿಫಾ ಅನುಮತಿ ನೀಡಿದೆ. ಇಂತಹ ವಸ್ತುಗಳನ್ನು ಕ್ರೀಡಾಂಗಣಕ್ಕೆ ತರುವುದನ್ನು ಈ ಮೊದಲು ನಿಷೇಧಿ ಸಲಾಗಿತ್ತು. ಇರಾನ್ ಮತ್ತು ವೇಲ್ಸ್ ತಂಡಗಳು ವಿಶ್ವಕಪ್ ಟೂರ್ನಿಯಿಂದ ಹೊರಬಿದ್ದ ಬಳಿಕ ಫಿಫಾ ಈ ಅನುಮತಿ ನೀಡಿದೆ.

### ಗೋಲು ವಿವರ

ಇಂಗ್ಲೆಂಡ್– 3
ಮಾರ್ಕಸ್ ರ್‍ಯಾಶ್‌ಫೋರ್ಡ್ (50, 58ನೇ ನಿಮಿಷ)
ಫಿಲ್ ಫೊಡೆನ್ (51ನೇ ನಿ.)

ವೇಲ್ಸ್– 0

ಮಾರ್ಕಸ್ ರ್‍ಯಾಶ್‌ಫೋರ್ಡ್ ಆಟದ ಪರಿ– ಎಎಫ್‌ಪಿ ಚಿತ್ರ

**ಗುಂಪು 'ಬಿ' ಪಾಯಿಂಟ್ ಪಟ್ಟಿ**

| ತಂಡ | ಪಂದ್ಯ | ಗೆಲುವು | ಡ್ರಾ | ಸೋಲು | ಗೋಲು ಅಂತರ | ಪಾಯಿಂಟ್ |
|---|---|---|---|---|---|---|
| ಇಂಗ್ಲೆಂಡ್ | 3 | 2 | 1 | 0 | 7 | 7 |
| ಅಮೆರಿಕ | 3 | 1 | 2 | 1 | 1 | 5 |
| ಇರಾನ್ | 3 | 1 | 0 | 2 | -3 | 3 |
| ವೇಲ್ಸ್ | 3 | 0 | 1 | 2 | -5 | 1 |

ಇರಾನ್‌ನ ರಮಿನ್ ರೆಜಾಯಿನ್ (ಎಡ) ಮತ್ತು ಅಮೆರಿಕದ ಕ್ರಿಸ್ಟಿಯನ್ ಪುಲಿಸಿಚ್ ನಡುವೆ ಚೆಂಡಿಗಾಗಿ ಪೈಪೋಟಿ– ಎಎಫ್‌ಪಿ ಚಿತ್ರ

## ಪುಲಿಸಿಚ್ ಗೋಲು; ಇರಾನ್ ತಂಡಕ್ಕೆ ಸೋಲು

**ದೋಹಾ:** ಕ್ರಿಸ್ಟಿಯನ್ ಪುಲಿಸಿಚ್ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಅಮೆರಿಕ ತಂಡವು ಇರಾನ್ ತಂಡವನ್ನು 1–0ಯಿಂದ ಮಣಿಸಿ ಪ್ರೀಕ್ವಾರ್ಟರ್ ತಲುಪಿತು.

ಎರಡೂ ದೇಶಗಳ ಮಧ್ಯದ ರಾಜಕೀಯ ವೈರತ್ವದ ಕಾರಣ ಗಮನಸೆಳೆದಿದ್ದ ಪಂದ್ಯದಲ್ಲಿ ಅಮೆರಿಕ ಮೇಲುಗೈ ಸಾಧಿಸಿತು.

ಅಮೆರಿಕ ತಂಡಕ್ಕೆ 'ಮಾಡು ಇಲ್ಲವೇ ಮಡಿ' ಎಂಬಂತಿದ್ದ ಬಿ ಗುಂಪಿನ ಈ ಹಣಾಹಣಿಯಲ್ಲಿ ಪುಲಿಸಿಚ್ 38ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ಪಂದ್ಯದಿಂದ ಗಾಯಗೊಂಡಿದ್ದ ಪುಲಿಸಿಚ್ ಮೊದಲಾರ್ಧದ ಬಳಿಕ ಕ್ರೀಡಾಂಗಣ ತೊರೆದರು.

ಶನಿವಾರ ನಡೆಯುವ 16ರ ಘಟ್ಟದ ಪಂದ್ಯದಲ್ಲಿ ಅಮೆರಿಕ ತಂಡವು ನೆದರ್ಲೆಂಡ್ಸ್ ತಂಡಕ್ಕೆ ಮುಖಾಮುಖಿಯಾಗಲಿದೆ.

ತನ್ನ ದೇಶದ ಧ್ವಜವನ್ನು ಮಾರ್ಪಡಿಸಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ ಕಾರಣಕ್ಕೆ ಅಮೆರಿಕ ಫುಟ್‌ಬಾಲ್ ತಂಡವನ್ನು ನಿಷೇಧಿಸಬೇಕೆಂದು ಇರಾನ್ ಫುಟ್‌ಬಾಲ್ ಫೆಡರೇಷನ್ ಫಿಫಾಗೆ ಮನವಿ ಮಾಡಿತ್ತು. ಹೀಗಾಗಿ ಅಲ್ ತುಮಾಮಾ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಬಿಗುವಿನ ವಾತಾವರಣವಿದ್ದರೂ ಆಟಗಾರರು ಶಾಂತವಾಗಿ ಆಡಿದರು.

ಈ ಗೆಲುವಿನೊಂದಿಗೆ ಅಮೆರಿಕ 1998ರ ಟೂರ್ನಿಯಲ್ಲಿ ಅನುಭವಿಸಿದ ಸೋಲಿಗೆ ಮುಯ್ಯಿ ತೀರಿಸಿಕೊಂಡಿತು. ಸೋಲಿನಿಂದಿಗೆ ಇರಾನ್ ಟೂರ್ನಿಯಿಂದ ಹೊರಬಿದ್ದಿತು.

### ಗೋಲು ವಿವರ

ಅಮೆರಿಕ– 1
ಕ್ರಿಸ್ಟಿಯನ್ ಪುಲಿಸಿಚ್ (38ನೇ ನಿಮಿಷ)

ಇರಾನ್– 0

# ಫ್ರಾನ್ಸ್‌ಗೆ ಟುನೀಷಿಯಾ ಆಘಾತ

## 'ಹಾಲಿ ಚಾಂಪಿಯನ್'ಗೆ ಸೋಲುಣಿಸಿ ನಿರ್ಗಮಿಸಿದ ತಂಡ

**ಅಕ್ ರಯಾನ್ (ರಾಯಿಟರ್ಸ್):** ಫ್ರೆಂಚ್ ಮೂಲದ ವಹಾಬಿ ಖಾಜ್ರಿ ಬುಧವಾರ ಎಜುಕೇಷನ್ ಸಿಟಿ ಕ್ರೀಡಾಂಗಣದಲ್ಲಿ ಗಳಿಸಿದ ಏಕೈಕ ಗೋಲಿನಿಂದಾಗಿ ಟುನೀಷಿಯಾ ತಂಡವು 'ಹಾಲಿ ಚಾಂಪಿಯನ್' ಫ್ರಾನ್ಸ್‌ಗೆ ಸೋಲಿನ ಆಘಾತ ನೀಡಿತು.

ಆದರೆ ಈ ಅಮೋಘ ಜಯ ಗಳಿಸಿದ ನಂತರವೂ ಟುನೀಷಿಯಾ ತಂಡಕ್ಕೆ ನಾಕೌಟ್ ಪ್ರವೇಶಿಸಲು ಸಾಧ್ಯವಾಗಲಿಲ್ಲ. ಡಿ ಗುಂಪಿನ ಮೊದಲೆರಡು ಪಂದ್ಯಗಳಲ್ಲಿ ಗೆದ್ದಿದ್ದ ಫ್ರಾನ್ಸ್ ಪಡೆಯು ಈಗಾಗಲೇ 16ರ ಘಟ್ಟ ಪ್ರವೇಶಿಸಿದೆ.

ಪಂದ್ಯದ 58ನೇ ನಿಮಿಷದಲ್ಲಿ ವಹಾಬಿ ಅವರು ಗಳಿಸಿದ ಗೋಲು ಅಮೋಘವಾಗಿತ್ತು. ವಹಾಬಿ ಅವರು ಫ್ರಾನ್ಸ್‌ನಲ್ಲಿ ಜನಿಸಿದವರು. ಸದ್ಯ ಟುನೀಷಿಯಾ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ.

ಇಡೀ ಪಂದ್ಯದಲ್ಲಿ ಟುನೀಷಿಯಾದ ರಕ್ಷಣಾ ಆಟಗಾರರ ಪಡೆಯು ಉತ್ತಮವಾಗಿ ಆಡಿತು. ಅದರಿಂದಾಗಿ ಫ್ರಾನ್ಸ್ ಆಟಗಾರರಿಗೆ ಒಂದೂ ಗೋಲು ಗಳಿಸಲು ಸಾಧ್ಯವಾಗಲಿಲ್ಲ.

ಟುನೀಷಿಯಾದ ವಹಾಬಿ ಖಾಜ್ರಿ ಸಂಭ್ರಮ –ಎಎಫ್‌ಪಿ ಚಿತ್ರ

## 16ರ ಹಂತಕ್ಕೆ ಆಸ್ಟ್ರೇಲಿಯಾ

**ಅಲ್ ವಾಕ್ರಾ(ರಾಯಿಟರ್ಸ್):** ಆಸ್ಟ್ರೇಲಿಯಾ ತಂಡವು 16 ವರ್ಷಗಳ ನಂತರ ಫಿಫಾ ವಿಶ್ವಕಪ್ ಟೂರ್ನಿಯ 16ರ ಘಟ್ಟವನ್ನು ಪ್ರವೇಶಿಸಿತು.

ಬುಧವಾರ ಅಲ್ ಜನಾಬ್ ಕ್ರೀಡಾಂಗಣದಲ್ಲಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ 1–0ಯಿಂದ ಡೆನ್ಮಾರ್ಕ್ ತಂಡವನ್ನು ಸೋಲಿಸಿತು. ಇದರೊಂದಿಗೆ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು ನಾಕೌಟ್‌ಗೆ ರಹದಾರಿ ಪಡೆಯಿತು. ಆರಂಭದಿಂದಲೂ ಉಭಯ ಆಟಗಾರರು ಜಿದ್ದಾಜಿದ್ದಿನ ಹೋರಾಟ ನಡೆಸಿದರು. ಆದರೆ 60ನೇ ನಿಮಿಷದಲ್ಲಿ ಆಸ್ಟ್ರೇಲಿಯಾದ ಮ್ಯಾಥ್ಯೂ ಲಾಕಿ ತೋರಿದ ಕಾಲ್ಚಳಕ ಸಫಲವಾಯಿತು.

ಆಸ್ಟ್ರೇಲಿಯಾದ ಮ್ಯಾಥ್ಯೂ ಲಾಕಿ

# ಬೆಲ್ಜಿಯಂ– ಕ್ರೊವೇಷ್ಯಾ ಸೆಣಸಾಟ ಇಂದು

**ದೋಹಾ (ಎಎಫ್‌ಪಿ):** ಗೆಲುವಿನ ಒತ್ತಡದಲ್ಲಿರುವ ಬೆಲ್ಜಿಯಂ ತಂಡವು ಗುರುವಾರ ಎಫ್ ಗುಂಪಿನ ಹಣಾಹಣಿಯಲ್ಲಿ ಕ್ರೊವೇಷ್ಯಾ ಸವಾಲು ಎದುರಿಸಲಿದೆ.

ವಿಶ್ವ ರ್‍ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿರುವ ಬೆಲ್ಜಿಯಂಗೆ ಅಹಮದ್ ಬಿನ್ ಅಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯವು 16ರ ಘಟ್ಟ ತಲುಪಲು ನಿರ್ಣಾಯಕ ಎನಿಸಿದೆ.

ಕ್ರೊವೇಷ್ಯಾ ತಂಡವು, ಈ ಪಂದ್ಯದಲ್ಲಿ ಕೇವಲ ಡ್ರಾ ಸಾಧಿಸಿದರೂ ನಾಕೌಟ್ ಖಚಿತಪಡಿಸಿಕೊಳ್ಳುತ್ತದೆ.

**ಜರ್ಮನಿಗೆ ಕೋಸ್ಟರಿಕಾ ಸವಾಲು:** ಇ ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ಗುರುವಾರ ಜರ್ಮನಿ ತಂಡವು ಕೋಸ್ಟರಿಕಾಗೆ ಮುಖಾಮುಖಿ ಯಾಗಲಿದೆ. ಇಲ್ಲಿ ಗೆದ್ದರೆ ಮಾತ್ರ ಜರ್ಮನಿ ತಂಡಕ್ಕೆ 16ರ ಘಟ್ಟ ಪ್ರವೇಶಿಸುವ ಅವಕಾಶವಿದೆ.

### ಇಂದಿನ ಪಂದ್ಯ

| | | |
|---|---|---|
| Vs | ಕ್ರೊವೇಷ್ಯಾ – ಬೆಲ್ಜಿಯಂ | ರಾತ್ರಿ 8.30 |
| Vs | ಕೆನಡಾ – ಮೊರೊಕ್ಕೊ | ರಾತ್ರಿ 8.30 |
| Vs | ಜಪಾನ್ – ಸ್ಪೇನ್ | ತಡರಾತ್ರಿ 12.30 |
| Vs | ಕೋಸ್ಟರಿಕಾ – ಜರ್ಮನಿ | ತಡರಾತ್ರಿ 12.30 |

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನಿಮಾ ಆ್ಯಪ್

### ಮಹಿಳಾ ರೆಫರಿಗಳು

ಸ್ಟೆಫಾನಿ ಫ್ರಾಪರ್ಟ್, ನ್ಯೂಜಾ ಬ್ಯಾಕ್ ಮತ್ತು ಕರೆನ್ ದಿಯಾಜ್ ಅವರು ಕೋಸ್ಟರಿಕಾ– ಜರ್ಮನಿ ಪಂದ್ಯದಲ್ಲಿ ರೆಫರಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ. ಪುರುಷರ ವಿಶ್ವಕಪ್‌ನಲ್ಲಿ ಮೊದಲ ಬಾರಿಗೆ ರೆಫರಿಗಳ ತಂಡದ ಎಲ್ಲ ಮೂರೂ ಸ್ಥಾನಗಳಲ್ಲಿ ಮಹಿಳೆಯರು ಕಾರ್ಯನಿರ್ವಹಿಸುವರು ಎಂದು ಫಿಫಾ ತಿಳಿಸಿದೆ.

# ಉನದ್ಕತ್ ದಾಳಿಗೆ ಕರ್ನಾಟಕ ಚಿತ್

## ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ಫೈನಲ್‌ಗೆ ಸೌರಾಷ್ಟ್ರ–ಮಹಾರಾಷ್ಟ್ರ

**ಅಹಮದಾಬಾದ್ (ಪಿಟಿಐ):** ದೇಶಿ ಏಕದಿನ ಕ್ರಿಕೆಟ್ ಟ್ರೋಫಿಯನ್ನು ಜಯಿಸುವ ಕರ್ನಾಟಕದ ಕನಸಿಗೆ ಸೌರಾಷ್ಟ್ರದ ಎಡಗೈ ಮಧ್ಯಮವೇಗಿ ಜೈದೇವ್ ಉನದ್ಕತ್ ತಣ್ಣೀರು ಸುರಿದರು.

ಬುಧವಾರ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೌರಾಷ್ಟ್ರ ತಂಡವು 5 ವಿಕೆಟ್‌ಗಳಿಂದ ಗೆದ್ದಿತು. ಲೀಗ್ ಹಂತದಲ್ಲಿ ಮಿಂಚಿದ್ದ ಬ್ಯಾಟರ್‌ಗಳನ್ನು ಕಟ್ಟಿಹಾಕಿದ ಸೌರಾಷ್ಟ್ರ ಮೇಲುಗೈ ಸಾಧಿಸಿತು.

ಆರಂಭಿಕ ಬ್ಯಾಟರ್ ಆರ್. ಸಮರ್ಥ್ (88; 135ಎ, 4X4, 6X1) ಅವರೊಬ್ಬರೇ ತಮ್ಮ ಮೇಲಿನ ಭರವಸೆ ಉಳಿಸಿಕೊಂಡರು. ತಂಡವು 49.1 ಓವರ್‌ಗಳಲ್ಲಿ 171 ರನ್ ಗಳಿಸಿತು. ಈ ಸಾಧಾರಣ ಗುರಿಯನ್ನು ಸೌರಾಷ್ಟ್ರ ತಂಡವು 36.2 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಸಾಧಿಸಿತು.

ಜೈ ಗೋಹಿಲ್ (61; 82ಎ) ಮತ್ತು ಪ್ರೇರಕ್ ಮಂಕಡ್ (35; 32ಎ) ಅವರು ಕರ್ನಾಟಕದ ಬೌಲರ್‌ಗಳ ಪ್ರಯತ್ನಕ್ಕೆ ಅಡ್ಡಿಯಾದರು. ಕೃಷ್ಣಪ್ಪ ಗೌತಮ್ ಎರಡು, ವಿದ್ವತ್ ಕಾವೇರಪ್ಪ, ಕೌಶಿಕ್ ಹಾಗೂ ಶ್ರೇಯಸ್ ತಲಾ ಒಂದು ವಿಕೆಟ್ ಗಳಿಸಿದರು.

ಗುಂಪು ಹಂತದಲ್ಲಿ ಮಿಂಚಿದ್ದ ನಿಕಿನ ಜೋಸ್, ನಾಯಕ ಮಯಂಕ್ ಅಗರವಾಲ್, ಅನುಭವಿ ಮನೀಷ್ ಪಾಂಡೆ, ಭರವಸೆಯ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರ ಬ್ಯಾಟಿಂಗ್ ವೈಫಲ್ಯವೇ ತಂಡದ ಸೋಲಿಗೆ ಕಾರಣವಾಯಿತು.

**ಋತುರಾಜ್ ಅಬ್ಬರ:** ಇನ್ನೊಂದು ಸೆಮಿಫೈನಲ್‌ನಲ್ಲಿ ಋತುರಾಜ್ ಗಾಯಕವಾಡ್ ಹಾಗೂ ಅಂಕಿತ್ ಬಾವ್ನೆ ಅವರ ಶತಕಗಳ ಬಲದಿಂದ ಮಹಾರಾಷ್ಟ್ರ ತಂಡವು ಅಸ್ಸಾಂ ವಿರುದ್ಧ 12 ರನ್‌ಗಳಿಂದ ಗೆದ್ದಿತು.

ಕಳೆದ ಪಂದ್ಯದಲ್ಲಿ ಒಂದೇ ಓವರ್ ನಲ್ಲಿ ಏಳು ಸಿಕ್ಸರ್ ಸಿಡಿಸಿದ್ದ ಋತುರಾಜ್ ಅಸ್ಸಾಂ ಎದುರೂ ಚೆಂದದ ಶತಕ ದಾಖಲಿಸಿದರು. ಮಧ್ಯಮ ಕ್ರಮಾಂಕದ ಆಟಗಾರ ಅಂಕಿತ್ ಕೂಡ ಶತಕ ಬಾರಿಸಿದರು. 350 ರನ್‌ಗಳ ಗುರಿ ಬೆನ್ನಟ್ಟಿದ ಅಸ್ಸಾಂ ದಿಟ್ಟ ಹೋರಾಟ ಮಾಡಿತು. ಸ್ವರೂಪಂ ಪುರಕಾಯಸ್ತ (95) 5 ರನ್‌ಗಳಿಂದ ಶತಕ ತಪ್ಪಿಸಿ ಕೊಂಡರು.

ಶುಕ್ರವಾರ ನಡೆಯಲಿರುವ ಫೈನಲ್ ನಲ್ಲಿ ಸೌರಾಷ್ಟ್ರ ಮತ್ತು ಮಹಾರಾಷ್ಟ್ರ ತಂಡಗಳು ಮುಖಾಮುಖಿಯಾಗಲಿವೆ.

**ಸಂಕ್ಷಿಪ್ತ ಸ್ಕೋರು:** ಕರ್ನಾಟಕ: 49.1 ಓವರ್‌ಗಳಲ್ಲಿ 171 (ಆರ್. ಸಮರ್ಥ್ 88, ನಿಕಿನ್ ಜೋಸ್ 12, ಮನೋಜ್ ಬಾಂಡಗೆ 22, ರೋನಿತ್ ಮೋರೆ 16, ಜೈದೇವ್ ಉನದ್ಕತ್ 26ಕ್ಕೆ4, ಪ್ರೇರಕ್ ಮಂಕಡ್ 34ಕ್ಕೆ2) ಸೌರಾಷ್ಟ್ರ: 36.2 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 172 (ಜೈ ಗೋಹಿಲ್ 61, ಸಮರ್ಥ್ ವ್ಯಾಸ್ 33, ಪ್ರೇರಕ್ ಮಂಕಡ್ 36, ಅರ್ಪಿತ್ ವಸವದಾ ಔಟಾಗದೆ 25, ಕೆ. ಗೌತಮ್ 50ಕ್ಕೆ2) ಫಲಿತಾಂಶ: ಸೌರಾಷ್ಟ್ರ ತಂಡಕ್ಕೆ 5 ವಿಕೆಟ್‌ಗಳ ಜಯ.

ಮಹಾರಾಷ್ಟ್ರ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 350 (ಋತುರಾಜ್ ಗಾಯಕವಾಡ್ 168, ಬಚಾವ್ 41, ಅಂಕಿತ್ ಬಾವ್ನೆ 110, ಮುಕ್ತಾರ್ ಹುಸೇನ್ 42ಕ್ಕೆ3) ಅಸ್ಸಾಂ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 338 (ರಿಷವ್ ದಾಸ್ 53, ಸಿಬಶಂಕರ್ ರಾಯ್ 78, ಸ್ವರೂಪಂ ಪುರಕಾಯಸ್ತ 95, ಮನೋಜ್ ಇಂಗಳೆ 66ಕ್ಕೆ2, ರಾಜ್ಯವರ್ಧನ್ ಹಂಗರಗೇಕರ್ 65ಕ್ಕೆ4) ಫಲಿತಾಂಶ: ಮಹಾರಾಷ್ಟ್ರ ತಂಡಕ್ಕೆ 12 ರನ್‌ಗಳ ಜಯ.

ಜೈದೇವ್ ಉನದ್ಕತ್

## ಪ್ರೀಕ್ವಾರ್ಟರ್‌ಗೆ ಉನ್ನತಿ, ಅನ್ಮೋಲ್, ಧ್ರುವ

**ನವದೆಹಲಿ (ಪಿಟಿಐ):** ಭಾರತದ ಉನ್ನತಿ ಹೂಡಾ, ಧ್ರುವ ನೇಗಿ ಮತ್ತು ಅನ್ಮೋಲ್ ಖರ್ಬ್ ಅವರು ಏಷ್ಯಾ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪ್ರೀಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಥಾಯ್ಲೆಂಡ್‌ನ ನೊಂತಬುರಿಯಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಉನ್ನತಿ 21-7, 21-11ರಿಂದ ಇಂಡೊನೇಷ್ಯಾದ ದಿಯಾ ನೂರ್ ಫದಿಲ್ಲಾ ಅವರನ್ನು ಸೋಲಿಸಿದರು.

ಅನ್ಮೋಲ್ ಅವರು 21-12, 21-19ರಿಂದ ಥಾಯ್ಲೆಂಡ್‌ನ ರತ್ನಾಚ ಸೊಂಪೊಚ್ ಅವರನ್ನು ಮಣಿಸಿದರು.

ಪುರುಷರ ವಿಭಾಗದಲ್ಲಿ ಧ್ರುವ್ 21-14, 17-21, 21-15ರಿಂದ ಪಾನ್ಯ ಪುತ್ತಿಪ್ರೈ-ಸಾಕುಲ್ ಎದುರು ಗೆದ್ದರು.

ಭಾರತ ಎದುರಿನ 3ನೇ ಏಕದಿನ ಪಂದ್ಯ ಮಳೆಯಿಂದ ರದ್ದು

# ನ್ಯೂಜಿಲೆಂಡ್‌ಗೆ ಸರಣಿ ಜಯ

**ಕ್ರೈಸ್ಟ್‌ಚರ್ಚ್ (ಪಿಟಿಐ):** ನ್ಯೂಜಿಲೆಂಡ್ ಎದುರಿನ ಏಕದಿನ ಕ್ರಿಕೆಟ್ ಸರಣಿಯನ್ನು ಸಮಬಲ ಮಾಡಿಕೊಳ್ಳುವ ಭಾರತದ ಆಸೆಯು ಮಳೆಯಲ್ಲಿ ಕೊಚ್ಚಿಹೋಯಿತು. ಆತಿಥೇಯ ತಂಡವು 1–0ಯಿಂದ ಸರಣಿ ಜಯಿಸಿತು.

ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಗೆದ್ದಿತ್ತು. ಎರಡನೇ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು. ಮೂರನೇ ಪಂದ್ಯದಲ್ಲಿ ಟಾಸ್ ಗೆದ್ದ ಕಿವೀಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಶ್ರೇಯಸ್ ಅಯ್ಯರ್ (49; 59ಎ, 4X8) ಮತ್ತು ವಾಷಿಂಗ್ಟನ್ ಸುಂದರ್ (51; 64ಎ, 4X5, 6X1) ಅವರ ಆಟದಿಂದ 47.3 ಓವರ್‌ಗಳಲ್ಲಿ 219 ರನ್ ಗಳಿಸಿತು.

ಈ ಸಾಧಾರಣ ಮೊತ್ತವನ್ನು ಬೆನ್ನಟ್ಟಿದ ಕಿವೀಸ್ ತಂಡಕ್ಕೆ ಫಿನ್ ಅಲೆನ್ (57; 54ಎ, 4X8, 6X1) ಮತ್ತು ಡೇವೊನ್ ಕಾನ್ವೆ (38; 51ಎ) ಉತ್ತಮ ಆರಂಭ ನೀಡಿದರು. 18 ಓವರ್‌ಗಳಲ್ಲಿ 1 ವಿಕೆಟ್‌ಗೆ 104 ರನ್ ಗಳಿಸಿತು.

ಈ ಸಂದರ್ಭದಲ್ಲಿ ಮಳೆ ಸುರಿಯಲು ಆರಂಭವಾಯಿತು. ನಿಲ್ಲದ ಕಾರಣ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು.

**ಬಾಂಗ್ಲಾ ಸರಣಿ ಮಹತ್ವದ್ದು:** ಮುಂಬರುವ ಏಕದಿನ ವಿಶ್ವಕಪ್ ಟೂರ್ನಿಯ ಸಿದ್ಧತೆಗಾಗಿ ಈ ತಿಂಗಳು ಬಾಂಗ್ಲಾದಲ್ಲಿ ನಡೆಯಲಿರುವ ಏಕದಿನ ಸರಣಿಯು ಮಹತ್ವದ್ದಾಗಿದೆ ಎಂದು ನಾಯಕ ಶಿಖರ್ ಧವನ್ ಹೇಳಿದ್ದಾರೆ.

'ಬಾಂಗ್ಲಾ ಸರಣಿಗೆ ಭಾರತ ತಂಡದಲ್ಲಿ ಪ್ರಮುಖ ಆಟಗಾರರು ಮರಳಲಿದ್ದಾರೆ. ಅಲ್ಲದೇ ಏಷ್ಯಾದಲ್ಲಿ ನಡೆಯುತ್ತಿರುವ ಟೂರ್ನಿ ಇದಾಗಿರುವುದು ಕೂಡ ಮುಖ್ಯವಾದದ್ದು. ಅಲ್ಲಿಯ ಪಿಚ್‌ಗಳಿಗೆ ಹೊಂದಿಕೊಳ್ಳಲು ಇದು ನೆರವಾಗಲಿದೆ' ಎಂದರು.

**ಸಂಕ್ಷಿಪ್ತ ಸ್ಕೋರು:** ಭಾರತ: 47.3 ಓವರ್‌ಗಳಲ್ಲಿ 219 (ವಾಷಿಂಗ್ಟನ್ ಸುಂದರ್ 51, ಶ್ರೇಯಸ್ ಅಯ್ಯರ್ 49, ಆ್ಯಡಂ ಮಿಲ್ನೆ 57ಕ್ಕೆ3, ಡೆರಿಲ್ ಮಿಚೆಲ್ 25ಕ್ಕೆ3) ನ್ಯೂಜಿಲೆಂಡ್: 18 ಓವರ್‌ಗಳಲ್ಲಿ 1 ವಿಕೆಟ್‌ಗೆ 104 (ಫಿನ್ ಅಲೆನ್ 57, ಉಮ್ರಾನ್ ಮಲಿಕ್ 31ಕ್ಕೆ1) ಮಳೆಯಿಂದಾಗಿ ಪಂದ್ಯ ಸ್ಥಗಿತ. ನ್ಯೂಜಿಲೆಂಡ್‌ಗೆ 1–0ಯಿಂದ ಸರಣಿ ಜಯ.

ಭಾರತ ತಂಡದ ಆಟಗಾರ ವಾಷಿಂಗ್ಟನ್ ಸುಂದರ್ –ಎಪಿ/ಪಿಟಿಐ ಚಿತ್ರ

## ಹಾಕಿ ಟೆಸ್ಟ್: ಭಾರತಕ್ಕೆ ಜಯ

**ಅಡಿಲೇಡ್ (ಪಿಟಿಐ):** ಭಾರತ ಹಾಕಿ ತಂಡವು ಆಸ್ಟ್ರೇಲಿಯಾಕ್ಕೆ ಆಘಾತ ನೀಡಿತು. ಬುಧವಾರ ಇಲ್ಲಿ ನಡೆದ ಮೂರನೇ ಹಾಕಿ ಟೆಸ್ಟ್‌ನಲ್ಲಿ 4–3ರಿಂದ ಹರ್ಮನ್‌ಪ್ರೀತ್ ಸಿಂಗ್ ಬಳಗ ಗೆದ್ದಿತು. ಇದರೊಂದಿಗೆ 13 ಪಂದ್ಯಗಳ ಬಳಿಕ ಮೊದಲ ಜಯ ಸಂಪಾದಿಸಿತು. 5 ಪಂದ್ಯಗಳ ಸರಣಿಯ ಮೊದಲ ಎರಡು ಪಂದ್ಯಗಳಲ್ಲಿ ಆಸ್ಟ್ರೇಲಿಯಾ ಗೆದ್ದಿತ್ತು.

ಈ ಪಂದ್ಯದಲ್ಲಿ ಭಾರತ ಪರ ಹರ್ಮನ್‌ಪ್ರೀತ್ (12ನೇ ನಿಮಿಷ), ಅಭಿಷೇಕ್ (47ನೇ ನಿ.), ಶಂಷೇರ್ (57ನೇ ನಿ.) ಮತ್ತು ಆಕಾಶದೀಪ್ ಸಿಂಗ್ (60ನೇ ನಿ.) ಗೋಲು ದಾಖಲಿಸಿದರು.

ಆಸ್ಟ್ರೇಲಿಯಾ ಪರ ಜಾಕ್ ವೆಲ್ಶ್ (25ನೇ ನಿ.), ಆ್ಯರನ್ ಜಲೆವ್‌ಸ್ಕಿ (32ನೇ ನಿ.) ಮತ್ತು ನೇಥನ್ ಎಪ ಮರ್ಸ್ (59ನೇ ನಿ.) ಗೋಲು ಹೊಡೆದರು.

## ಕೊಕ್ಕೊ: ಬೆಂಗಳೂರಿಗೆ ಪ್ರಶಸ್ತಿ

**ದಾವಣಗೆರೆ:** ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಬುಧವಾರ ನಡೆದ ರಾಜ್ಯಮಟ್ಟದ ಕೊಕ್ಕೊ ಟೂರ್ನಿಯ 14 ಮತ್ತು 17 ವರ್ಷದೊಳಗಿನ ಬಾಲಕರ ವಿಭಾಗ ದಲ್ಲಿ ಬೆಂಗಳೂರು ವಿಭಾಗ ಪ್ರಶಸ್ತಿ ಗಳಿಸಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಹಯೋಗದಲ್ಲಿ ನಡೆದ ಟೂರ್ನಿಯ 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಬೆಳಗಾವಿ ವಿಭಾಗ ಪ್ರಶಸ್ತಿ ಪಡೆಯಿತು. ಬೆಂಗಳೂರು ವಿಭಾಗ ದ್ವಿತೀಯ, ಕಲಬುರಗಿ ತೃತೀಯ ಸ್ಥಾನ ಪಡೆದವು.

17 ವರ್ಷದೊಳಗಿನ ಬಾಲಕರಲ್ಲಿ ಮೈಸೂರು ವಿಭಾಗ ದ್ವಿತೀಯ, ಕಲಬುರಗಿ ತೃತೀಯ ಸ್ಥಾನ ಪಡೆದುಕೊಂಡವು. 14 ವರ್ಷದೊಳಗಿನ ಬಾಲಕರಲ್ಲಿ ಬೆಳಗಾವಿ ದ್ವಿತೀಯ, ಮೈಸೂರು 3ನೇ ಸ್ಥಾನ ಪಡೆಯಿತು. ಬೆಂಗಳೂರಿನ ಹುಲಿಗೆಪ್ಪ ಉದಯೋನ್ಮುಖ ಆಟಗಾರ ಗೌರವಕ್ಕೆ ಪಾತ್ರರಾದರು.

**ಅತ್ಯುತ್ತಮ ಆಟಗಾರ/ಆಟಗಾರ್ತಿ ಫಲಿತಾಂಶಗಳು:** 17 ವರ್ಷದೊಳಗಿನ ಬಾಲಕರು: ಅತ್ಯುತ್ತಮ ಚೇಸರ್– ಆಕಾಶ್ (ಮೈಸೂರು), ಡಿಫೆಂಡರ್– ನಿಖಿಲ್ (ಬೆಂಗಳೂರು), ಆಲ್‌ರೌಂಡರ್– ಮಹಮದ್ ಐಮನ್ (ಬೆಂಗಳೂರು). 14 ವರ್ಷದೊಳಗಿನ ಬಾಲಕರು: ಅತ್ಯುತ್ತಮ ಚೇಸರ್– ಕೆ. ಬಸವರಾಜ (ಕಲಬುರಗಿ), ಡಿಫೆಂಡರ್– ಯಶವಂತ್ (ಬೆಂಗಳೂರು ), ಆಲ್ ರೌಂಡರ್–ದೇವರಾಜ್ (ಬೆಂಗಳೂರು). 14 ವರ್ಷದೊಳಗಿನ ಬಾಲಕಿಯರು: ಅತ್ಯುತ್ತಮ ಚೇಸರ್– ಲಾವಣ್ಯ (ಬೆಂಗಳೂರು), ಡಿಫೆಂಡರ್– ಗೌತಮಿ (ಬೆಳಗಾವಿ),ಆಲ್ ರೌಂಡರ್–ಮಮತಾ (ಬೆಳಗಾವಿ).

## ಟೆಸ್ಟ್ ಇಂದಿನಿಂದ: ಇಂಗ್ಲೆಂಡ್ ಆಟಗಾರರು ಅಸ್ವಸ್ಥ

**ರಾವಲ್ಪಿಂಡಿ (ಎಪಿ):** ನಾಯಕ ಬೆನ್ ಸ್ಟೋಕ್ಸ್ ಸೇರಿದಂತೆ ಇಂಗ್ಲೆಂಡ್ ಕ್ರಿಕೆಟ್ ತಂಡದ ಐವರು ಆಟಗಾರರು ಅಸ್ವಸ್ಥರಾಗಿದ್ದಾರೆ. ಗುರುವಾರ ಇಲ್ಲಿ ಆರಂಭವಾಗಲಿರುವ ಪಾಕಿಸ್ತಾನ ಎದುರಿನ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಅವರು ಆಡುವ ಕುರಿತು ಇನ್ನೂ ಖಚಿತವಾಗಿಲ್ಲ.

ಇಂಗ್ಲೆಂಡ್ ತಂಡದ ಹ್ಯಾರಿ ಬ್ರೂಕ್, ಜ್ಯಾಕ್ ಕ್ರಾಲಿ, ಕೀಟನ್ ಜೆನಿಂಗ್ಸ್, ಒಲಿ ಪೋಪ್ ಮತ್ತು ಜೋ ರೂಟ್ ಮಾತ್ರ ಬುಧವಾರ ಅಭ್ಯಾಸಕ್ಕೆ ಹಾಜರಾದರು. ಉಳಿದ ಆಟಗಾರರು ಹೋಟೆಲ್‌ನ ತಮ್ಮ ಕೋಣೆಗಳಲ್ಲಿ ವಿಶ್ರಾಂತಿ ಪಡೆದರು.

ತಂಡದ ವಕ್ತಾರರು ಆಟಗಾರರಿಗೆ ಆಗಿರುವ ಆರೋಗ್ಯ ಸಮಸ್ಯೆ ಕುರಿತು ವಿವರಗಳನ್ನು ನೀಡಿಲ್ಲ' ಎಂದಿದ್ದಾರೆ.

# ಕಬಡ್ಡಿ: ಬೆಂಗಳೂರು ಬುಲ್ಸ್‌ಗೆ ನಿರಾಶೆ

**ಹೈದರಾಬಾದ್:** ಬೆಂಗಳೂರು ಬುಲ್ಸ್ ತಂಡವು ಬುಧವಾರ ಪ್ರೊಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ಎದುರು ಪರಾಭವಗೊಂಡಿತು.

ಗಚಿಬೌಳಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 25–45ರಿಂದ ಪ್ಯಾಂಥರ್ಸ್‌ಗೆ ಶರಣಾಯಿತು. ಪ್ಯಾಂಥರ್ಸ್ ತಂಡದ ಅರ್ಜುನ್ ದೇಶವಾಲ್ ರೇಡಿಂಗ್‌ನಲ್ಲಿ 13 ಅಂಕಗಳನ್ನು ಗಳಿಸಿದರು. ಅವರೊಂದಿಗೆ ವಿ. ಅಜಿತ್ (6) ಹಾಗೂ ಲಕ್ಕಿ ಶರ್ಮಾ (6) ಕೂಡ ಮಿಂಚಿದರು.

ಮೊದಲಾರ್ಧದಲ್ಲಿಯೇ ಪ್ಯಾಂಥರ್ಸ್ ತಂಡವು 25–10ರ ದೊಡ್ಡ ಅಂತರದ ಮುನ್ನಡೆ ಸಾಧಿಸಿತು. ವಿರಾಮದ ನಂತರವೂ ಮುನ್ನಡೆ ಕಾಯ್ದುಕೊಂಡಿತು.

ಬೆಂಗಳೂರು ತಂಡದ ರೇಡರ್ ಭರತ್ (10) ಉತ್ತಮವಾಗಿ ಆಡಿದರು.

ಪಂದ್ಯ ಟೈ: ದಬಂಗ್ ಡೆಲ್ಲಿ ಹಾಗೂ ತಮಿಳ್ ತಲೈವಾಸ್ ತಂಡಗಳ ನಡುವಣ ನಡೆದ ಇನ್ನೊಂದು ಪಂದ್ಯವು 37–37ರಿಂದ ಟೈ ಆಯಿತು.

ಡೆಲ್ಲಿ ತಂಡದ ನಾಯಕ ನವೀನ್ ಕುಮಾರ್ (15) ಮತ್ತು ತಲೈವಾಸ್ ತಂಡದ ನರೆಂದರ್ (14) ಮಿಂಚಿದರು.

ಪಂದ್ಯದ ಪ್ರಥಮಾರ್ಧದಲ್ಲಿ ತಲೈವಾಸ್ ತಂಡವು 20–15ರಿಂದ ಡೆಲ್ಲಿ ವಿರುದ್ಧ ಮುನ್ನಡೆಯಲ್ಲಿತ್ತು.

ವಿರಾಮದ ನಂತರ ತಿರುಗೇಟು ನೀಡಿದ ಡೆಲ್ಲಿ ದಿಟ್ಟ ಆಟವಾಡಿತು. ಇದರಿಂದಾಗಿ ಉಭಯ ತಂಡಗಳು ಸಮಬಲ ಸಾಧಿಸಿದವು.

**ಪಾಯಿಂಟ್ಸ್ ಪಟ್ಟಿ (ಅಗ್ರ ಆರು ತಂಡಗಳು)**

| ತಂಡ | ಪಂದ್ಯ | ಜಯ | ಸೋಲು | ಟೈ | ಪಾಯಿಂಟ್ |
|---|---|---|---|---|---|
| ಜೈಪುರ | 19 | 13 | 6 | 0 | 69 |
| ಪುಣೇರಿ | 19 | 12 | 5 | 2 | 69 |
| ಬೆಂಗಳೂರು | 19 | 11 | 7 | 1 | 63 |
| ಯುಪಿ | 18 | 10 | 6 | 2 | 60 |
| ತಲೈವಾಸ್ | 19 | 8 | 7 | 4 | 56 |
| ಡೆಲ್ಲಿ | 19 | 9 | 9 | 1 | 54 |

**ಸಂಕ್ಷಿಪ್ತ ಸುದ್ದಿ**

## ಫುಟ್‌ಬಾಲ್ ದಿಗ್ಗಜ ಪೆಲೆ ಆಸ್ಪತ್ರೆಗೆ ದಾಖಲು

**ಸಾವೊ ಪಾಲೊ (ಎಎಫ್‌ಪಿ):** ಫುಟ್‌ಬಾಲ್ ದಿಗ್ಗಜ ಬ್ರೆಜಿಲ್‌ನ ಪೆಲೆ ಅವರು ಬುಧವಾರ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕರುಳಿನ ಕ್ಯಾನ್ಸರ್‌ಗೆ ಪಡೆಯುತ್ತಿರುವ ಚಿಕಿತ್ಸೆಯ ಮರುಪರಿಶೀಲನೆಗಾಗಿ ಅವರು ದಾಖಲಾಗಿದ್ದಾರೆ ಎಂದು ವೈದ್ಯರು ಹೇಳಿದ್ದಾರೆ.

82 ವರ್ಷದ ಪೆಲೆ ಅವರಿಗೆ ಕಳೆದ ವರ್ಷ ಕ್ಯಾನ್ಸರ್ ಇರುವುದು ದೃಢಪಟ್ಟಿತ್ತು. ಅವರ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

## ಹಾಕಿ ಆಟಗಾರ ರಾಜೇಂದ್ರ ನಿಧನ

**ಬೆಂಗಳೂರು:** ರಾಜ್ಯದ ಮಾಜಿ ಹಾಕಿ ಆಟಗಾರ ವಿ.ಆರ್. ರಾಜೇಂದ್ರ ಬುಧವಾರ ಹೃದಯಾಘಾತದಿಂದ ನಿಧನರಾದರು.

ಬಿಇಎಲ್ ಸ್ಪೋರ್ಟ್ಸ್ ತಂಡವನ್ನು ಎರಡು ದಶಕಗಳ ಕಾಲ ಅವರು ಪ್ರತಿನಿಧಿಸಿದ್ದರು. ಹಾಕಿ ಆಟಗಾರರಾದ ವಿ.ಆರ್. ಯೋಗೇಂದ್ರ ಮತ್ತು ವಿ.ಆರ್. ಪ್ರಕಾಶ್ ಅವರ ಸಹೋದರ ರಾಜೇಂದ್ರ ಅವರು, ರಾಜ್ಯ ಮಹಿಳಾ ತಂಡದ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದರು.

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಟೇಬಲ್ ಟೆನಿಸ್ ಆಟಗಾರ ಅಚಂತ ಶರತ್ ಕಮಲ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ (ಎಡದಿಂದ) ಕರ್ನಾಟಕದ ಸುಮಾ ಶಿರೂರ್ (ಪ್ಯಾರಾ ಶೂಟಿಂಗ್, ದ್ರೋಣಾಚಾರ್ಯ), ಬಿ.ಸಿ. ಸುರೇಶ್ (ಕಬಡ್ಡಿ ಕೋಚ್, ಧ್ಯಾನಚಂದ್ ಜೀವಮಾನ ಸಾಧನೆ ಗೌರವ), ಅಶ್ವಿನಿ ಅಕ್ಕುಂಜಿ (ಅಥ್ಲೆಟಿಕ್ಸ್, ಧ್ಯಾನಚಂದ್), ಲಕ್ಷ್ಯ ಸೇನ್ (ಬ್ಯಾಡ್ಮಿಂಟನ್, ಅರ್ಜುನ), ಆರ್. ಪ್ರಗ್ನಾನಂದ (ಚೆಸ್, ಅರ್ಜುನ), ನಿಖತ್ ಜರೀನ್ (ಬಾಕ್ಸಿಂಗ್, ಅರ್ಜುನ), ಅವಿನಾಶ್ ಸಬ್ಲೆ (ಅಥ್ಲೆಟಿಕ್ಸ್, ಅರ್ಜುನ) ಪ್ರಶಸ್ತಿ ಸ್ವೀಕರಿಸಿದರು– ಪಿಟಿಐ ಮತ್ತು ಟ್ವಿಟರ್ ಚಿತ್ರಗಳು